

೧೦೦ ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

ವಿಶೇಷಾಂಕ

ಕನ್ನಡ ಸಾಹಿತ್ಯ ಪತ್ರಿಕೆಗಳು


ಜಯಂತಿ
JAYANTI
ಸಂಕಲನ
ಸಿದ್ಧಲಿಂಗ ಪಟ್ಟಣಶೆಟ್ಟಿ
ಶೂದ್ರ
ಎ. ಕೆ. ರಾಮಾನುಜನ್ ವಿಶೇಷ ಸಂಚಿಕೆ
ಗಾಂಧಿ ಬಜಾರ
ಸೆಪ್ಟೆಂಬರ್ 1993
ಸಾಹಿತ್ಯ ಸಂಚಿಕೆ
ಅ ಭಿ ನ ವ
ಆಲೋಕ
ಅನ್ವೇಷಣೆ
ಅಂಕಣ
ದೇಶ ಕಾಲ
ರುಜುವಾತು

ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

೧೦೦ ನೇ ಸಂಚಿಕೆ

ವಿಶೇಷಾಂಕ

ಬೆಳ್ಳಿಹಬ್ಬ



ಸಂಚಯ ಮೊದಲ ಸಂಚಿಕೆ

ಸಂಪಾದಕ :
ಡಿ.ವಿ. ಪ್ರಹ್ಲಾದ್

ಸಂಪರ್ಕ ವಿಳಾಸ
ನಂ. ೧೦೦, ೨ನೇ ಮುಖ್ಯರಸ್ತೆ,
೬ನೇ ಬ್ಲಾಕ್, ೩ನೇ ಹಂತ, ೩ನೇ ಘಟ್ಟ,
ಬನಶಂಕರಿ, ಬೆಂಗಳೂರು - ೫೬೦ ೦೮೫
ಫೋನ್‌ನಂ.:೦೮೦-೨೬೭೯೧೯೨೫
ಮೊಬೈಲ್: 98440 63514
email:
sanchaya.sahityapatrike@gmail.com

● ಮುಖಪುಟ- ಪುಟವಿನ್ಯಾಸ: ಎಂ.ಆರ್. ಗುರುಪ್ರಸಾದ್

ಚಂದಾವಿವರ | ● ವಾರ್ಷಿಕ ಚಂದಾ : ರೂ. ೨೫೦/- ● ಎರಡು ವರ್ಷಕ್ಕೆ : ರೂ. ೫೦೦/-


ಚೆಕ್/ಡಿ.ಡಿ. ಮೂಲಕ ಚಂದಾ ಕಳಿಸುವವರು 'ಸಂಚಯ', ಬೆಂಗಳೂರು ಎಂಬ ಹೆಸರಿಗೆ ಕಳುಹಿಸಿ ಅಥವಾ **ಕೆನರಾಬ್ಯಾಂಕ್, ಬೆಂಗಳೂರಿನ ಗಿರಿನಗರ ಶಾಖೆ ಉಳಿತಾಯ ಖಾತೆ ಸಂ.: 1821101004682ಗೆ** **ಐಎಫ್‌ಎಸ್‌ಸಿ ಕೋಡ್**: CNRB 0001821 - ಜಮಾ ಮಾಡಬಹುದು.

ವಿಶೇಷಾಂಕದಲ್ಲಿ...



ಈ ಸಂಚಿಕೆ....

ಎ.ಆರ್. ಕೃಷ್ಣಶಾಸ್ತ್ರಿ
ಟಿ.ಎಸ್. ವೆಂಕಣ್ಣಯ್ಯ
ಜಿ.ಪಿ. ರಾಜರತ್ನಂ
ಜಿ. ಶ್ರೀನಿವಾಸರಾಜು
ಅವರ
ನೆನಪುಗಳಿಗೆ



ಹೊಳೆದದ್ದು ತಾರೆ
ಉಳಿದದ್ದು ಆಕಾಶ!

ಪ್ರಿಯ ಓದುಗರೆ,

ಇದು ಸಂಚಯದ ನೂರನೆ ಸಂಚಿಕೆ. ಈ ಕಿರುಪತ್ರಿಕೆ ತನ್ನ ಇಪ್ಪತ್ತೈದು ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ನಮ್ಮ ಭಾಷೆಯಲ್ಲಿ ಪ್ರಕಟಗೊಂಡು ಅದರ ಕ್ರಿಯಾಶೀಲತೆಗೆ ಇಂಬುಕೊಟ್ಟ ಕಿರುಪತ್ರಿಕೆಗಳ ಪರಂಪರೆಗೆ ಇದು ನಾವು ಸಲ್ಲಿಸುತ್ತಿರುವ ಕಿರುಗೌರವ. ಈ ಮೂಲಕ ಸಾಹಿತ್ಯ ಪತ್ರಿಕೆಗಳು ರೂಪುಗೊಂಡ ಇತಿಹಾಸ ಹಾಗೂ ಅವುಗಳು ಸಾಗಿಬಂದ ದಾರಿ ದಾಖಲಿಸುವ ಪ್ರಯತ್ನ. ವಿಷಯವಂತೂ ಅತ್ಯಂತ ವಿಸ್ತಾರವಾದದ್ದು, ಹತ್ತಿರ ಹತ್ತಿರ ನೂರೈವತ್ತು ವರ್ಷಗಳಷ್ಟು ವಿಸ್ತಾರವಾದ ಕಾಲಮಾನದ್ದು. ಸಮಗ್ರವಾಗಿ ಇದನ್ನು ಒಂದು ಮಿತಿಯುಳ್ಳ ಸಂಚಿಕೆಯ ವ್ಯಾಪ್ತಿಯಲ್ಲಿ ಕಟ್ಟಿಕೊಡಲು ಕಷ್ಟ. ಇವು ಕೇವಲ ಪ್ರಾತಿನಿಧಿಕ ಬರಹಗಳು. ೧೮೭೭ರಲ್ಲಿ ಶುರುವಿಟ್ಟ 'ವಾಗ್ಭೂಷಣ' ಪತ್ರಿಕೆಯೇ ಕನ್ನಡದ ಮೊದಲ ಸಾಹಿತ್ಯ ಪತ್ರಿಕೆ ಎಂದು ಗುರುತಿಸಿಕೊಳ್ಳುವುದಾದರೆ, ಈ ತನಕದ ಸಣ್ಣ ಪತ್ರಿಕೆಯ ಪ್ರವಾಹದಲ್ಲಿ ಅನೇಕ ತೊರೆಗಳು ಬಂದು ಸೇರಿವೆ. ಕವಲುಗಳೂ ಒಡೆದಿವೆ. ಗಾಂಧಿಯುಗದ ಕಿರುಪತ್ರಿಕೆಗಳು Inclusive ಆದ ಧೋರಣೆ ಹೊಂದಿತ್ತು. ಎಲ್ಲರನ್ನೂ ಒಳಗೊಳ್ಳುವ ಹೊಸದಾಗಿ ರೂಪಿಸಿ ಕೊಳ್ಳುತ್ತಾ ಕಟ್ಟುವ ಕ್ರಿಯೆ ಮುಖ್ಯವಾಗಿತ್ತು. ಅದರ ಪ್ರತಿನಿಧಿಯಾಗಿ 'ಪ್ರಬುದ್ಧ ಕರ್ನಾಟಕ'ದ ಹುಟ್ಟು ಬೆಳವಣಿಗೆ ಗಮನಿಸಬಹುದು. ನಂತರದ್ದು Exclusive ಯುಗ. ಅಲ್ಲಿ ಇಂಗ್ಲಿಷ್ ಸಾಹಿತ್ಯ ಜಗತ್ತು ನಮ್ಮ ಕಿರುಪತ್ರಿಕೆಗಳ ಮಾದರಿ ರೂಪಿಸಿತು. ಆಗ ಕೃತಿ ಕೇಂದ್ರಿತ ಸಾಕ್ಷಿಯಂಥ ಪತ್ರಿಕೆ, ವಿಷಯ ಕೇಂದ್ರಿತ ಮನ್ವಂತರದಂಥಾ ಪ್ರಯೋಗ ಕಾಣಬರುತ್ತದೆ. ಅದರ ನಂತರದ ಎಪ್ಪತ್ತರ ದಶಕ ಸಮಾಜ ಕೇಂದ್ರಿತ. ಕಿರುಪತ್ರಿಕೆಗಳ ವಾಗ್ವಾದದ ಸುಗ್ಗಿ ಕಾಲ ಅದು. ಅದೇ ದಶಕದಲ್ಲಿ ಸಮಾಜ ಕೇಂದ್ರಿತವಾದ ಮಹಿಳಾ ಆಶಯಗಳುಳ್ಳ ದಲಿತ ಲೋಕದ ಧ್ವನಿಗಳಾದ ಪತ್ರಿಕೆಗಳು ಹುಟ್ಟಿಬಂದವು. ಸಮುದಾಯ ವಾರ್ತಾಪತ್ರ, ಪಂಚಮ, ಅಚಲ ಇಂಥಾ ಕಿರುಪತ್ರಿಕೆಗಳ ಧಾರೆ ಕವಲೊಡೆಯಿತು. ಹೀಗೆ ಒಟ್ಟಾರೆಯಾಗಿ ಕೆಲವು ಲಕ್ಷಣಗಳನ್ನ ಗುರುತಿಸಿ ಹೇಳಬಹುದಾದರೂ ಈ ಮಾತಿಗೆ ಭಿನ್ನವಾದ ಪ್ರಯೋಗಗಳೂ ನಡೆದಿವೆ. ಮಹಿಳಾ ಪತ್ರಿಕೆಗಳ ಧಾರೆಯಲ್ಲಿ ನಂಜನಗೂಡು ತಿರುಮಲಾಂಬಾ ಅವರ 'ಸಾಧಿತ', ಕಲ್ಯಾಣಮ್ಮನವರ 'ಸರಸ್ವತಿ' ಮುಂತಾದವುಗಳಿಂದ ಈಗಿನ ನಮ್ಮ 'ಮಾನಸ'ದ ತನಕದ ಪರಂಪರೆ ಗುರುತಿಸಬಹುದಾಗಿದೆ. ರಂಗಭೂಮಿ ಕುರಿತು ರಂಗಭೂಮಿ ಪತ್ರಿಕೆಯಿಂದ ಮೊದಲುಗೊಂಡು ಸೂತ್ರಧಾರ,

ಸಮುದಾಯ ವಾರ್ತಾಪತ್ರ, ಮುಕ್ತ ಮೊದಲಾದ ರಂಗಭೂಮಿಗೆ ಸಂಬಂಧಿಸಿದ ಕಿರುಪತ್ರಿಕೆಗಳದ್ದು ಒಂದು ಧಾರೆ. ಇನ್ನು ಚಿತ್ರಕಲೆಯ ಬಗೆಗೆ ಅ.ನ.ಸುಬ್ಬರಾಯರ 'ಕಲಾ'ದ ಪ್ರಯತ್ನದಿಂದ ಆರಂಭಿಸಿ ಕಲಾವಿಕಾಸ, ಕ್ಯಾನ್ವಾಸ್, ಮುಂತಾದ ಪತ್ರಿಕೆಗಳು ಮತ್ತೊಂದು ಧಾರೆಯನ್ನು ರೂಪಿಸಿದವು. ಒಟ್ಟು ಕನ್ನಡ ಸಂಸ್ಕೃತಿಗೆ ಇವುಗಳ ಕೊಡುಗೆ ದೊಡ್ಡದು. ಇವುಗಳೆಲ್ಲದರ ಬಗ್ಗೆ ಬರಹಗಳನ್ನು ಬರೆಸುವ ನಮ್ಮ ಪ್ರಯತ್ನ ಸಾಧ್ಯವಾಗಿಲ್ಲ. ಅದು ನಮ್ಮ ಮಿತಿ ಎಂದು ವಿನಮ್ರವಾಗಿ ಒಪ್ಪಿಕೊಳ್ಳುವೆ.

ಸದ್ಯದಲ್ಲಿ ಸಂಚಯದ ಜೊತೆಗೆ ಹೆಜ್ಜೆ ಹಾಕುತ್ತಿರುವ ಹಿರಿಯಣ್ಣ ಸಂಕ್ರಮಣ, ಇಪ್ಪತ್ತೈದು ದಾಟಿರುವ ಗಾಂಧಿಬಜಾರ್, ನೀನಾಸಂನ ಮುಖಪತ್ರ 'ಮಾತುಕತೆ', ಅರುಹು ಕುರುಹು, ಹೊಸದಾಗಿ ಷುರುವಾಗಿರುವ 'ಗತಿಸ್ಥಿತಿ' ಮತ್ತು 'ಚಿಂತನ ಬಯಲು', ಸಾಮಾಜಿಕ ಎಚ್ಚರದ ಪಂಚಮದ ಸ್ಥಾನ ತುಂಬಿರುವ ಹತ್ತರ ಸಂವಾದ, ಇವೆಲ್ಲವೂ ವರ್ತಮಾನದಲ್ಲಿ ತಮ್ಮ ಮಿತಿಗಳೊಳಗೆ ಸಾಧ್ಯವಾದ ಕೆಲಸವನ್ನು ಕ್ರಿಯಾಶೀಲವಾಗಿ ನಿರ್ವಹಿಸುತ್ತಿವೆ.

ಇನ್ನು ಸಂಚಯದ ಈ ಮೈಲಿಗಲ್ಲಿನಲ್ಲಿ ನಿಂತು ಕೆಲವರನ್ನ ಕೃತಜ್ಞತೆಯಿಂದ ಸ್ಮರಿಸಿಕೊಳ್ಳಬೇಕಿದೆ. ಚಿ.ಶ್ರೀನಿವಾಸರಾಜು ನನ್ನ ಪಾಲಿನ ರಾಜು ಮೇಷ್ಟ್ರು ಅವರು ಒದಗಿಸಿದ ನೈತಿಕ ಬೆಂಬಲ ದೊಡ್ಡದು. ಇಂಥದ್ದೊಂದು ಸಂಭ್ರಮದ ಗಳಿಗೆಯಲ್ಲಿ ಅವರಿಲ್ಲದ ಖಾಲಿತನ ಚುಚ್ಚುತ್ತಿದೆ. ನೀ.ಕಸ್ತೂರಿ ನಮ್ಮ ಚಟುವಟಿಕೆಗಳಿಗೆ ಗಾಂಧಿ ಸಾಹಿತ್ಯ ಸಂಘದಲ್ಲಿ ಜಾಗ ಕೊಟ್ಟು ಬೆನ್ನುತಟ್ಟಿ ಪ್ರೋತ್ಸಾಹಿಸಿದರು. ನನ್ನ ಜೊತೆ ಪತ್ರಿಕೆಯ ಸಂಪಾದನೆಯಲ್ಲಿ ನೆರವು ನೀಡಿದವರು ರವಿಕುಮಾರ ಕಾಶಿ, ನ.ರವಿಕುಮಾರ, ಅಶೋಕ ಕುಮಾರ ರಂಜೆರೆ, ಎನ್.ಎಸ್. ಶ್ರೀಧರ ಮೂರ್ತಿ, ಚಂಪಕ ಇವರ ಜೊತೆಗೆ ಒಂದು ದೊಡ್ಡ ಗೆಳೆಯರ ಬಳಗ. ಇನ್ನು ಲೇಖಕರು ಚಂದಾದಾರರ ನೆರವು ಬಲು ದೊಡ್ಡದು. ಅವರ ಋಣಭಾರಿುತ ನಿಜಕ್ಕೂ ದೊಡ್ಡದು. ಇವರುಗಳ ನೆರವಿಲ್ಲದೆ ಸಂಚಯ ಈಗಿರುವಷ್ಟು ಸುಂದರವಾಗಿ, ಸತ್ವಯುತವಾಗಿ ಬರಲಾಗುತ್ತಿರಲಿಲ್ಲ.

ಈ ಪತ್ರಿಕೆಯನ್ನು ವಿನ್ಯಾಸದ ಮೂಲಕ ಚಂದಗೊಳಿಸುವಲ್ಲಿ ಈಚಿನ ಕೆಲವು ವರ್ಷಗಳಿಂದ ಜೊತೆಗೆ ದುಡಿದ ಎಂ.ಆರ್. ಗುರುಪ್ರಸಾದ್, ಇದನ್ನು ಚೆಂದಾಗಿ ಮುದ್ರಿಸುತ್ತಿರುವ ಇಳಾದ ಗುರುಮೂರ್ತಿ, ಅವರ ಜೊತೆ ಸಹಕರಿಸುತ್ತಿರುವ ಮಳಲಿ ಗೌಡರು, ಇಳಾದ ಪ್ರತಿಯೊಬ್ಬ ಸಿಬ್ಬಂದಿಗಳೂ ಈಗ ನನ್ನ ಗೆಳೆಯರು. ಅಷ್ಟು ವರ್ಷದ ಸುದೀರ್ಘ ಸಂಬಂಧ ಇದು.

ಎದುರು ಸಿಕ್ಕಾಗ ಬೆನ್ನುತಟ್ಟಿ ನಿಮ್ಮ ಪತ್ರಿಕೆ ಚೆನ್ನಾಗಿ ಬರುತ್ತಿದೆ ಅಂತ ಹುರಿದುಂಬಿಸುವ ಅನೇಕ ಹಿರಿಯರು, ಚಂದಾ ಬಾಕಿ ಇಲ್ಲದಿದ್ದರೂ ಕೈಗೆ ನೋಟು ತುರುಕಿ ನನ್ನ ಬಾಕಿ ಎಂದ ಅಸಂಖ್ಯ ಸಾಹಿತ್ಯ ಪ್ರೇಮಿಗಳು. ಇವರೆಲ್ಲರ ಪ್ರೀತಿ ವಿಶ್ವಾಸ ದೊಡ್ಡದು. ಈ ಸಂಚಿಕೆಯನ್ನು ಎಂದಿನಂತೆ ಸುಂದರವಾಗಿ ರೂಪಿಸಿಕೊಟ್ಟ ಗುರುಪ್ರಸಾದ್ ಮತ್ತು ಮುದ್ರಿಸಿದ ಗುರುಮೂರ್ತಿ ಅಕ್ಷರ ಜೋಡಿಸಿದ ರಾಧಿಕಾ ಇವರಿಗೆ ಮತ್ತೊಮ್ಮೆ ಶರಣು.


ಮತ್ತೆ ಮುಂದಿನ ಸಂಚಿಕೆಗೆ

ನಿಮ್ಮ

ಸಂಪಾದಕ

ಹೊಸಮಾದರಿ ಹಾಕಿಕೊಟ್ಟ ಅಲ್ಪಾಯುಷಿಗಳು

ಡಾ. ನಿರಂಜನ ವಾನಳ್ಳಿ



ಆರಂಭಕಾಲದ ಕನ್ನಡ ಸಾಹಿತ್ಯ ಪತ್ರಿಕೆಗಳು

ಕನ್ನಡ ಸಾಹಿತ್ಯವೆಂಬ ಮುತ್ತಜ್ಜಿಗೆ ಸಾಹಿತ್ಯ ಪತ್ರಿಕೆಗಳು ಮರಿಮಗುವಿನ ಹಾಗೆ. ಅಂದರೆ ಮುತ್ತಜ್ಜಿಗೆ ಎಷ್ಟು ವರ್ಷವಾಗಿದೆಯೋ-ಅವಳಿಗೆ ಹೋಲಿಸಿದರೆ ಮಗು ಇದೀಗ ಹುಟ್ಟಿ ಇನ್ನೂ ಅಂಬೆಗಾಲಿಡುತ್ತಿದೆ!

ಕನ್ನಡ ಪತ್ರಿಕೋದ್ಯಮಕ್ಕೆ ಇದೀಗ ೧೭೦ ವರ್ಷಗಳಷ್ಟೇ ಇತಿಹಾಸ. ಈವರೆಗೆ ದಾಖಲುಗೊಂಡ ಇತಿಹಾಸದ ಪ್ರಕಾರ ೧೮೪೩ರಲ್ಲಿ ಮಂಗಳೂರಿನಲ್ಲಿ ಆರಂಭಗೊಂಡ 'ಮಂಗಳೂರ ಸಮಾಚಾರ'ವೇ ಮೊದಲ ಪತ್ರಿಕೆ. ಪ್ರೊ. ನಾಡಿಗ ಕೃಷ್ಣಮೂರ್ತಿಯವರು ೧೮೧೨ರಲ್ಲೇ ಬಳ್ಳಾರಿಯಲ್ಲಿ ಕನ್ನಡದ ಮೊದಲ ಪತ್ರಿಕೆಯ ಉದಯವಾಯ್ತೆಂದು ಘಂಟಾಘೋಷವಾಗಿ ಹೇಳಿದ್ದರಿಂದ ಎಲ್ಲರೂ ಹಾಗೆಂದು ಭಾವಿಸಿದ್ದರು. ಆದರೆ ಶ್ರೀನಿವಾಸ ಹಾವನೂರರು ಇಂಗ್ಲೆಂಡಿನಲ್ಲಿದ್ದ ಮಂಗಳೂರ ಸಮಾಚಾರದ ಸಂಚಿಕೆಗಳನ್ನು ಪರಾಮರ್ಶಿಸಿ ಇದುವೇ ಒಂದು ವರ್ಷದ ಬಳಿಕ ಬಳ್ಳಾರಿಗೆ ಹೋದುದೆಂದು ಸಾಧಿಸಿ ತೋರಿಸಿದರು. ಅಲ್ಲಿನ 'ಕಂನಡ ಸಮಾಚಾರ' ಬೇರೆಯದಲ್ಲ ಎಂಬುದು ದೃಢಪಟ್ಟಿತು. ಹೀಗೆ ನಿರ್ಧಾರಗೊಂಡ ಕನ್ನಡ ಪತ್ರಿಕೋದ್ಯಮದಲ್ಲಿ ಸಾಹಿತ್ಯ ಪತ್ರಿಕೆಗಳದು ಒಂದು ಕವಲು. ಈಗ ಸದೃಢವಾಗಿ ಬೆಳೆದ ಕವಲು ಎಂತಲೇ ಹೇಳಬಹುದು. ಕನ್ನಡ ಪತ್ರಿಕೋದ್ಯಮಕ್ಕೆ ಆರಂಭಕಾಲದಲ್ಲಿ ಸ್ಪಷ್ಟವಾದ ಎರಡು ಘಟ್ಟಗಳಿರುವುದನ್ನು ಶ್ರೀನಿವಾಸ ಹಾವನೂರ ಅವರು ತಮ್ಮ 'ಹೊಸಗನ್ನಡದ ಅರುಣೋದಯ' ಪುಸ್ತಕದಲ್ಲಿ ಗುರುತಿಸುತ್ತಾರೆ. ೧೮೪೩ರಿಂದ ೧೮೮೨ರವರೆಗಿನದು ಮೊದಲ ಘಟ್ಟ. ಅದು ಪತ್ರಿಕೋದ್ಯಮ ಮೆಲ್ಲನೆ ತಲೆಯೆತ್ತುತ್ತಿದ್ದ ಕಾಲ. ಅಕಾಲದ

ಪತ್ರಿಕೆಗಳಿಗೆ ಜನರಿಗೆ ಸುದ್ದಿಯನ್ನು ಕೊಡುವುದು, ಜ್ಞಾನವನ್ನು ಹೆಚ್ಚಿಸುವುದು ಇವೇ ಮುಖ್ಯ ಉದ್ದೇಶವಾಗಿದ್ದಿತು. ಪ್ರಕಟಣೆಯೇ ದೊಡ್ಡ ಸಾಧನೆಯಾಗಿತ್ತು. ೧೮೮೦ರ ದಶಕದಲ್ಲಿ ಆರಂಭಗೊಳ್ಳುವ ಎರಡನೇ ಘಟ್ಟ ೧೯೨೦ರ ದಶಕದಲ್ಲಿ ಗಾಂಧೀಯುಗ ಆರಂಭಗೊಳ್ಳುವವರೆಗೂ ಮುಂದುವರೆಯುತ್ತದೆ ಎನ್ನಬಹುದು. ಈ ಅವಧಿಯಲ್ಲಿ ಪತ್ರಿಕೋದ್ಯಮವು ಅಂಬೆಗಾಲಿಂದ ಕಾಲೂರಿ ನಡೆಯುವ ಹಂತ ತಲುಪಿತು. ಪತ್ರಿಕೆಗಳನ್ನು ಪ್ರಕಟಿಸುವುದು ಪರಂಪರೆಯಾಗಿ ಮುಂದುವರೆಯಿತು. ಪತ್ರಿಕೆಗಳ ಕೆಲಸ ವರ್ತಮಾನವನ್ನು ಸಂಗ್ರಹಿಸಿ ಪ್ರಕಟಿಸುವುದು, ಜನರ ತಿಳುವಳಿಕೆಯ ಮಟ್ಟ ಹೆಚ್ಚಿಸುವುದಷ್ಟೇ ಅಲ್ಲದೇ ಸಾಹಿತ್ಯದ ಸಂಸ್ಕಾರ ನೀಡುವುದೂ ಆಗಿದೆ ಎಂಬ ಭಾವನೆ ಬೆಳೆದು ಉಚ್ಚ ಮಟ್ಟದ ಸಾಹಿತ್ಯ ಪತ್ರಿಕೆಗಳು ಈ ಅವಧಿಯಲ್ಲಿ ಪ್ರಕಟಗೊಳ್ಳುವುದನ್ನು ಕಾಣುತ್ತೇವೆ.

ಹತ್ತೊಂಬತ್ತನೇ ಶತಮಾನದಲ್ಲಿ ಪ್ರಕಟಗೊಂಡ ಕನ್ನಡ ಪತ್ರಿಕೆಗಳನ್ನೆಲ್ಲ ಜಾಲಾಡಿದರು ಸಾಹಿತ್ಯಕ್ಕೆ ಮೀಸಲೆಂದು ಘೋಷಿಸಿಕೊಂಡ ಪತ್ರಿಕೆ ಕಾಣುವುದಿಲ್ಲ. ಹಾಗೆ ಘೋಷಿಸಿಕೊಳ್ಳುವ ಸಂಪ್ರದಾಯ ೨೦ನೇ ಶತಮಾನದ್ದೆಂದು ತೋರುತ್ತದೆ. ಹಾಗೆ ಘೊಷಿಸಿಕೊಳ್ಳದಿದ್ದರೂ ಸಾಹಿತ್ಯಕ್ಕೆ ಹೆಚ್ಚು ಒತ್ತುಕೊಟ್ಟ ಪತ್ರಿಕೆಗಳು ಅನೇಕ ಇವೆ. ೧೮೪೯ರಲ್ಲಿ ಮಂಗಳೂರಿನಲ್ಲಿ 'ಸಚಿತ್ರ ಕನ್ನಡ ಸಾಹಿತ್ಯ ಪತ್ರಿಕೆ' ಎಂಬ ಶೀರ್ಷಿಕೆಯಡಿಯಲ್ಲಿ ಒಂದು ಪತ್ರಿಕೆ ಪ್ರಕಟಗೊಂಡರೂ ಅದು ಸಾಹಿತ್ಯಕ ಪತ್ರಿಕೆಯಾಗಿರಲಿಲ್ಲ. ೧೦-೧೨ ಪೂರ್ಣಪುಟಗಳಲ್ಲಿ ಬೈಬಲ್ಲಿಗೆ ಸಂಬಂಧಿಸಿದ ಲೇಖನಗಳಿದ್ದು ಈ ಪತ್ರಿಕೆಯಲ್ಲಿ ಸಾಮಾನ್ಯ ಆಸಕ್ತಿಯ ಪತ್ರಿಕೆಯಲ್ಲಿ ಪ್ರಕಟಗೊಳ್ಳುವ ಎಲ್ಲ ಸಂಗತಿಗಳೂ ಇದ್ದವು. ಅದೇ ವೇಳೆಗೆ 'ಕರ್ಣಾಟಕ ವಾಗ್ವಿದಾಯಿನಿ' ಎಂಬ ಇನ್ನೊಂದು ಪತ್ರಿಕೆಯೂ ಪ್ರಕಟಗೊಂಡಿತ್ತು. ಇದು ಕೂಡಾ ಸೃಷ್ಟ್ಯಾತ್ಮಕ ಸಾಹಿತ್ಯ ಪತ್ರಿಕೆಯಾಗಿರಲಿಲ್ಲ. ಆ ಕಾಲದಲ್ಲಿ ಪ್ರಕಟಗೊಂಡ 'ಕರ್ಣಾಟಕ ಭಾಷಾ ಸೇವಕ', 'ಕರ್ಣಾಟಕ ಕಾವ್ಯ ಮಂಜರಿ', ಕರ್ಣಾಟಕ ಗ್ರಂಥಮಾಲ, ಕಾವ್ಯ ಕಲ್ಪದ್ರುಮ- ಇವುಗಳೂ ಕೂಡ ಪೂರ್ಣ ಪ್ರಮಾಣದ ನಿಯತಕಾಲಿಕಗಳಾಗಿರಲಿಲ್ಲ. ಇವುಗಳಲ್ಲಿ ಸಾಹಿತ್ಯ ಹೂರಣವೇ ಇದ್ದವು. ಆದರೆ ನಿಯತಕಾಲಿಕತೆ ಇರಲಿಲ್ಲ. 'ಕರ್ಣಾಟಕ ಭಾಷಾ ಸೇವಕ ೧೮೯೧ರಲ್ಲಿ ವಿಜಾಪುರದಿಂದ ಪ್ರಕಟಗೊಂಡ ಪತ್ರಿಕೆ. ವಿಜಾಪುರ ಹೈಸ್ಕೂಲಿನ ಶಿಕ್ಷಕರಾದ ಶೇಷಗಿರಿರಾವ್ ಕೊಣ್ಣೂರ, ಹಣಮಂತ ರಾವ್ ಸಗರ ಹಾಗೂ ಕೃಷ್ಣರಾವ ಹುನಗುಂದ ಎಂಬವರು ಭಾಷಾ ಸೇವಕಕ್ಕಾಗಿ ದುಡಿದವರು. ಪ್ರಾಚೀನ ಕಾವ್ಯಗಳನ್ನು ಸರಳಗನ್ನಡದಲ್ಲಿ ಓದುಗರಿಗೆ ನೀಡುವ ಅಭಿಲಾಷೆ ಸಂಪಾದಕರದಾಗಿತ್ತು. ಮೂವರೂ ತಲಾ ಒಂದೊಂದು ಪ್ರಾಚೀನ ಕೃತಿಗಳನ್ನು ಕನ್ನಡೀಕರಿಸಿ ಭಾಷಾ ಸೇವಕದಲ್ಲಿ ಪ್ರಕಟಿಸಿದರು. 'ಕರ್ಣಾಟಕ ಕಾವ್ಯಮಂಜರಿ' ಪ್ರಾಚೀನ ಕಾವ್ಯಗಳ ಪ್ರಕಟಣೆಗೆ ಮೀಸಲಾದ ಪತ್ರಿಕೆ. ಎಂ ವಿ ರಾಮಾನುಜಯ್ಯಂಗಾರ್ ಹಾಗೂ ಎಸ್ ಜಿ ನರಸಿಂಹಾಚಾರ್ ಅವರು ಕಾವ್ಯ ಮಂಜರಿಗಾಗಿ ದುಡಿದವರು. ''ನಾನಾವಿಧ ಪ್ರಾಚೀನ ಕಾವ್ಯನಾಟಕಚ್ಛಂದೋಲಂಕಾರ ವ್ಯಾಕರಣ ನಿಘಂಟು ವೈದ್ಯ....ಸೂಪ ಶಿಲ್ಪ, ಗ್ರಂಥಸಂಗ್ರಹ ಮಾಸಪತ್ರಿಕೆ'' ಎಂಬುದಾಗಿ ಅಭಿದಾನವನ್ನು ಕರ್ಣಾಟಕ ಕಾವ್ಯ ಮಂಜರಿಗೆ ನೀಡಲಾಗಿತ್ತು. ಮಂಜರಿಯಲ್ಲಿ ಒಂದೊಂದು ಪ್ರಾಚೀನ ಕಾವ್ಯಗಳು ಇಡಿಯಾಗಿ ಪ್ರಕಟಗೊಳ್ಳುತ್ತಿದ್ದವು. ಹಾಗೂ ಮೈಸೂರು, ಮದ್ರಾಸ್ ಮುಂಬಯಿ ಸೀಮೆಗಳಲ್ಲಿಯ ಮೇಲ್ದರ್ಜೆಯ ಕನ್ನಡ ಪರೀಕ್ಷೆಗಳಿಗೆ ಪಠ್ಯಗಳಾಗುತ್ತಿದ್ದವೆಂದು ಹೇಳಲಾಗಿದೆ. ೧೮೯೨ರಿಂದ ಆರುವರ್ಷ ಸತತವಾಗಿ ಪ್ರಕಟಗೊಂಡ ಈ ಮಾಲೆಯು ತಡೆದು ನಿಂತಿತು. ಮತ್ತೆ ಎರಡು ವರ್ಷಗಳ ಬಳಿಕ 'ಕರ್ಣಾಟಕ ಕಾವ್ಯ ಕಲಾ ನಿಧಿ' ಎಂಬ ಹೆಸರಿನಲ್ಲಿ ಆರಂಭವಾಗಿ ಕಾಲು ಶತಮಾನ ಮುಂದುವರಿಯಿತು. ಇಡಿಯಾದ ಕಾವ್ಯ ಪ್ರಕಟಿಸುವ ಮಾಲೆಗಳಾಗಿ ಈ ಸಂಚಿಕೆಗಳು ಪ್ರಕಟಗೊಂಡು ಪತ್ರಿಕೆಗಳ ಸಾಲಿನಿಂದ ದೂರ ಉಳಿದವು. 'ಕರ್ಣಾಟಕ ಗ್ರಂಥಮಾಲ' ಎಂಬುದು ಮೈಸೂರು ಗ್ರ್ಯಾಜ್ಯುಯೇಟ್ಸ್ ಅಸೋಸಿಯೇಶನ್ನಿನ ಕೊಡುಗೆ. ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆ ದೃಷ್ಟಿಯಿಂದ ಮಹತ್ತರವಾದುದು. ಇಂಗ್ಲಿಷ್ ಬಂಗಾಲಿ ಸಂಸ್ಕೃತ ಗ್ರಂಥಗಳನ್ನು ಅನುವಾದಿಸಿ ಈ ಗ್ರಂಥಮಾಲೆಯಲ್ಲಿ ಇಡಿಯಾಗಿ ಕೊಡಲಾಗುತ್ತಿತ್ತು. 'ಕಾವ್ಯ ಕಲ್ಪ ದ್ರುಮ' ಎಂಬುದು ಕೊಮ್ಮಂದೂರು ಶ್ರೀನಿವಾಸ ಅಯ್ಯಂಗಾರ ಅವರು ಸ್ಥಾಪಿಸಿದ ದ್ವಿಭಾಷಾ ಪತ್ರಿಕೆ.

ಕನ್ನಡ ಮತ್ತು ಸಂಸ್ಕೃತದಲ್ಲಿ ಪ್ರಕಟಗೊಳ್ಳುತ್ತಿತ್ತು. ಆಗಿನ ಕಾಲದ ಇತರ ಪತ್ರಿಕೆಗಳಿಗೆ ಹೋಲಿಸಿದರೆ ಸಾಹಿತ್ಯಕ್ಕೆ ಹತ್ತಿರವೆಂಬಂತೆ ಕಾಣುವ ಈ ಪತ್ರಿಕೆಗಳು ನಿಜ ಅರ್ಥದಲ್ಲಿ ನಿಯತಕಾಲಿಕೆಗಳಾಗಿರಲಿಲ್ಲ. ಇಡಿಯಾದ ಕಾವ್ಯಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸುತ್ತಿದ್ದವು. ಮುಂದೆ ಬರುವ ಕನ್ನಡ ಸಾಹಿತ್ಯ ಪತ್ರಿಕೆಗಳಿಗೆ ಭೂಮಿಕೆ ಸಿದ್ಧಪಡಿಸಿಕೊಟ್ಟ ಪತ್ರಿಕೆಗಳೆಂದು ಅವುಗಳನ್ನು ಗುರುತಿಸಬಹುದು.

ಹೀಗೆ ಕನ್ನಡ ಸಾಹಿತ್ಯಕ್ಕೆ ಒತ್ತುಕೊಡುವ ಹಾಗೂ ಪೂರ್ಣವಾಗಿ ಸಾಹಿತ್ಯ ವಿಷಯಗಳಿಂದಲೇ ತುಂಬಿಕೊಳ್ಳುವ ಪರಿಪೂರ್ಣ ನಿಯತಕಾಲಿಕವೊಂದು ಪ್ರಕಟಗೊಂಡುದು ೧೮೯೬ರಲ್ಲಿ. ಅದು 'ವಾಗ್ಭೂಷಣ'ದ ಮೂಲಕ. ೧೮೯೦ರಲ್ಲಿ ಧಾರವಾಡದಲ್ಲಿ ಸ್ಥಾಪನೆಗೊಂಡ ಕರ್ನಾಟಕ ವಿದ್ಯಾವರ್ಧಕ ಸಂಘ, ನಾಡು-ನುಡಿಯ ಸೇವೆಯನ್ನು ಉದ್ದೇಶವಾಗಿಟ್ಟುಕೊಂಡು ಹುಟ್ಟಿದ ಸಂಸ್ಥೆ. ವಿದ್ಯಾವರ್ಧಕ ಸಂಘದ ಉದ್ದೇಶಗಳಲ್ಲಿ 'ಸಂಘದ ಉದ್ದೇಶಗಳಿಗೆ ಸಹಕಾರಿಯಾಗಲು ನಿಯತಕಾಲಿಕವೊಂದನ್ನು ಪ್ರಕಟಿಸುವುದೂ ಒಂದು' ಎನ್ನಲಾಗಿದೆ. ಈ ಸಂಘದ ಸ್ಥಾಪನೆಯ ವಿಚಾರ ಮೊದಲು ಹೊಳೆದದ್ದು ರಾ.ಹ. ದೇಶಪಾಂಡೆಯವರಿಗೆ- ೧೮೮೭ರಲ್ಲಿ. ಎರಡು ವರ್ಷ ಸತತವಾಗಿ ಭಿಕ್ಷಾಪಾತ್ರೆ ಹಿಡಿದು ಸಂಘಕ್ಕಾಗಿ ನಿಧಿ ಸಂಗ್ರಹ ಮಾಡಿದರು. ಶಾಮರಾಯ ಕಾಯ್ಕಿಣಿ ಸಂಘದ ಮೊದಲ ಅಧ್ಯಕ್ಷರಾದರೆ ರಾ ಹ ದೇಶಪಾಂಡೆ ಯವರು ಸ್ಥಾಪಕ ಕಾರ್ಯದರ್ಶಿಗಳು. ಕನ್ನಡಕ್ಕಾಗಿ ದುಡಿದ ಪಾಶ್ಚಾತ್ಯ ಮಹನೀಯರುಗಳನ್ನೂ ಸೇರಿಸಿ ಕನ್ನಡಿಗರೂ ಆಂಗ್ಲರು ಎಲ್ಲರೂ ವಿದ್ಯಾವರ್ಧಕ ಸಂಘದ ಸದಸ್ಯರಾಗಿದ್ದರು. ಮೂಲತಃ ಕರ್ನಾಟಕ ಸಂಘದ ಮುಖವಾಣಿಯಾದ 'ವಾಗ್ಭೂಷಣ' ಪತ್ರಿಕೆಗೆ ಕರ್ನಾಟಕ ಹಾಗೂ ಮೈಸೂರು ಸೀಮೆಯ ಗ್ರಂಥಸ್ಥ ಭಾಷೆಯನ್ನು ಒಗ್ಗೂಡಿಸುವ ಉದ್ದೇಶವಿತ್ತು. ಹಳಗನ್ನಡ ಗ್ರಂಥ ಪರಿಶೋಧನೆ, ಪರಿಷ್ಕರಣೆ ಹಾಗೂ ಹೊಸಗನ್ನಡ ಸಾಹಿತ್ಯ ನಿರ್ಮಾತೃಗಳಿಗೆ ಈ ಪತ್ರಿಕೆ ಕೊಟ್ಟ ಪ್ರೋತ್ಸಾಹ ಕಡಿಮೆಯಲ್ಲ.

ಕರ್ನಾಟಕ ಗ್ರಂಥಮಾಲೆಯಂತೆ ಹೊಸಲೇಖಕರನ್ನು ಬೆಳಕಿಗೆ ತರುವ ವಿಷಯದಲ್ಲೂ 'ವಾಗ್ಭೂಷಣ' ವಿಶೇಷ ಪ್ರಯತ್ನ ಮಾಡಿದೆ. ವಾಗ್ಭೂಷಣದ ಮೂಲಕ ಆಗ ಹೊರಬಂದ ಅನೇಕ ಕೃತಿಗಳು ಪ್ರಗತಿಪರ ದೃಷ್ಟಿಯನ್ನಿಟ್ಟು ಸ್ವತಂತ್ರ ವಿಚಾರಧಾರೆಯಿಂದ ಬರೆದವುಗಳಾಗಿದ್ದವು ಎಂದು ಶ್ರೀನಿವಾಸ ಹಾವನೂರ ಅಭಿಪ್ರಾಯಪಡುತ್ತಾರೆ. ಆರ್ಥಿಕ ಸಂಕಷ್ಟಗಳಿಂದಾಗಿ 'ವಾಗ್ಭೂಷಣ' ೧೯೧೦ರ ನಂತರ ನಿಂತುಹೋಯಿತು. ಮತ್ತೆ ೧೯೩೮ರಲ್ಲಿ ಪುನರಾರಂಭಗೊಂಡು ೧೯೭೩ರ ವರೆಗೂ ನಡೆದು ನಿಂತಿತು. ಭಾಷಾ ಬೇಧವಿಲ್ಲದೇ ಕನ್ನಡ, ಸಂಸ್ಕೃತ, ಇಂಗ್ಲಿಷ್, ಹಿಂದಿ ಎಲ್ಲ ಭಾಷೆಗಳ ಸಾಹಿತ್ಯದ ಪರಿಚಯವನ್ನೂ 'ವಾಗ್ಭೂಷಣ' ಮಾಡಿಕೊಡುತ್ತಿತ್ತು. ''ವಾಗ್ಭೂಷಣ ಒಳ್ಳೆಯ ಸಾಹಿತ್ಯ ಪತ್ರಿಕೆಯಾಗಿತ್ತೆಂದು ಅದರ ಹಳೆಯ ಸಂಚಿಕೆಗಳ ಪರಿಶೀಲನೆಯಿಂದ ತಿಳಿಯುತ್ತದೆ'' ಎಂಬುದಾಗಿ ಹಿರಿಯ ವಿದ್ವಾಂಸ ವೆಂಕಟಾಚಲ ಶಾಸ್ತ್ರಿಗಳು ಅಭಿಪ್ರಾಯ ಪಟ್ಟಿದ್ದಾರೆ. ವಾಗ್ಭೂಷಣದ ಪ್ರಕಾಶಕರ ಒಂದು ಝಲಕ್ ನೋಡಿ: '' ಅಖಿಲ ಕರ್ನಾಟಕದಲ್ಲಿ ಸುಪ್ರಸಿದ್ಧವಾದ ಮಾಸಪತ್ರಿಕೆ. ಚಿಕ್ಕ ಚರಿತ್ರೆಗಳು, ಚೊಕ್ಕಟವಾದ ಲೇಖನಗಳೂ, ಕನ್ನಡದ ಹೆಚ್ಚಳಕ್ಕಾಗಿ ಬರೆದ ಬರಹಗಳು ಇದರಲ್ಲಿ ಮಿನುಗುವವು. ಮಿಕ್ಕ ಸಿಕ್ಕ ಸಿಕ್ಕ ಲೇಖನಗಳಿಗೆ ಇಲ್ಲಿ ಸ್ಥಳ ಸಿಕ್ಕುವುದಿಲ್ಲ.... ಕನ್ನಡದಲ್ಲಿ ಆದರ ಬುದ್ಧಿಯುಳ್ಳವರಿಗೆಲ್ಲ ಆದರಣೀಯವಾಗಿರುವುದು''.

೧೯೭೩ರಲ್ಲಿ ವಾಗ್ಭೂಷಣದ ಸಂಪಾದಕ ಮಂಡಳಿ ಹೀಗಿತ್ತು: ■ ಅಧ್ಯಕ್ಷರು : ಪಾಟೀಲ ಪುಟ್ಟಪ್ಪ ■ ಕಾರ್ಯಾಧ್ಯಕ್ಷರು: ಸ ಸ ಮಾಳವಾಡ ■ ಮುಖ್ಯ ಸಂಪಾದಕರು: ಎನ್ಕೆ ಕುಲಕರ್ಣಿ, ಕೆ ಎಸ್ ದೇಶಪಾಂಡೆ. ೧೯೭೩ರಲ್ಲಿ ಕೊನೆಯ ಬಾರಿಗೆ ಪ್ರಕಟಗೊಂಡ ವಾಗ್ಭೂಷಣವು ಸಂಪಾದಕೀಯದಲ್ಲಿ ಹೀಗೆ ಹೇಳಿಕೊಂಡಿದೆ: ''೨೦೦ ಪುಟಗಳಿಗೂ ಮಿಕ್ಕಿದ ಈ ವಿಶೇಷ ಸಂಚಿಕೆ ಸುಮಾರು ಮೂರು ದಶಕಗಳ ನಂತರ ಮತ್ತೆ ಕನ್ನಡ ವಾಚಕರ ಕೈಸೇರುತ್ತಿದೆ. ಇನ್ನು ಮುಂದೆಯೂ ವಾಗ್ಭೂಷಣ ನಿಯತಕಾಲಿಕವಾಗಿ ಅಲ್ಲದಿದ್ದರೂ

ವರ್ಷಕ್ಕೊಮ್ಮೆಯಾದರೂ ಬೆಳಕಿಗೆ ಬಂದು ಕನ್ನಡದ ಬಾವುಟವನ್ನು ಎತ್ತಿಹಿಡಿಯಬೇಕೆಂಬುದು ನಮ್ಮ ಅಭಿಲಾಷೆ''. ಆದರೆ ವಾಗ್ಭೂಷಣದ ಅಭಿಲಾಷೆ ಕನಸಾಗಿಯೇ ಉಳಿದುಹೋದುದು ಕನ್ನಡಿಗರ ದುರ್ದೈವ ಎನ್ನಬೇಕಿದೆ.

ಕನ್ನಡದ ಆರಂಭಕಾಲದ ಸಾಹಿತ್ಯ ಪತ್ರಿಕೆಗಳ ಪೈಕಿ ಗುಣಮಟ್ಟದ ಸಾಹಿತ್ಯ ಪತ್ರಿಕೆಯಾಗಿ ಹೆಸರು ಮಾಡಿದ್ದು 'ಸುವಾಸಿನಿ'. 'ವಿದ್ಯಾವರ್ಧನ, ತತ್ವಶಾಸ್ತ್ರ ಕಲಾಕೌಶಲ ಈ ವಿಷಯವನ್ನು ವರ್ಣಿಸುವಂಥಾ ಮಾಸಿಕ ಪಹಿ' ಎಂಬ ಘೋಷವಾಕ್ಯವನ್ನು ಹೊತ್ತ ಸುವಾಸಿನಿ ಪತ್ರಿಕೆ ೧೯೦೦ರ ಜುಲೈ ಒಂದರಂದು ಆರಂಭವಾಯಿತು. ಬೋಳಾರು ವಿಠಲರಾಯರು ಈ ಪತ್ರಿಕೆಯ ವ್ಯವಸ್ಥಾಪಕರು. ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಬೆನಗಲ್ ರಾಮರಾಯರು ಸುವಾಸಿನಿಯ ಸಂಪಾದಕರು. ಮಂಗಳೂರಿನ ಬಾಸೆಲ್ ಮಿಷನ್ ಟ್ರಸ್ಟಿನಲ್ಲಿ ಮುದ್ರಣಗೊಳ್ಳುತ್ತಿತ್ತು. ಸಂಪಾದಕರು ಮೊದಲ ಸಂಚಿಕೆಯ 'ಸ್ಫುಟವಿಷಯ' ಎಂಬ ಸಂಪಾದಕೀಯ ನುಡಿಯಲ್ಲಿ ಹೀಗೆ ಬರೆಯುತ್ತಾರೆ: ''ನಿಮ್ಮ ಮನಸ್ಸನ್ನು ಹೇಗೆ ರಂಜಿಸುವೆನೆಂದು ಕೇಳುವಿರೋ, ನನ್ನ ಚತುರೋಕ್ತಿಗಳಿಂದ ಸರ್ವರನ್ನು ನಗಿಸುವೆನು. ಲೇಖನಗಳಿಂದಲೂ ಉಪನ್ಯಾಸಗಳಿಂದಲೂ ಲೋಕದ ಜ್ಞಾನವನ್ನು ವರ್ಧಿಸುವೆನು. ಕಥೆಗಳಿಂದ ನೀತಿಯನ್ನು ಉಪದೇಶಿಸುವೆನು. ನಿಮಗೆ ಬೇಸರ ಬಾರದಂತೆ ಬೇರೆ ಬೇರೆ ವಿಚಿತ್ರ ವಿಷಯಗಳನ್ನು ಹೇಳುವೆನು''

ಕ್ರೌನ್ ಕ್ವಾರ್ಟೊ ಆಕಾರದಲ್ಲಿ ೧೬ಪುಟಗಳಿಂದ ಮೈದುಂಬಿ ಬರುತ್ತಿದ್ದ ಸುವಾಸಿನಿ ಪತ್ರಿಕೆಯಲ್ಲಿ ಚಿಕ್ಕ ಕಥೆಗಳು, ಕವನಗಳು, ಚಾರಿತ್ರಿಕ ವಿಷಯಗಳು, ಕಾದಂಬರಿಗಳು ಪ್ರಬಂಧಗಳು ಪ್ರಕಟವಾಗುತ್ತಿದ್ದವು. ಹಾಸ್ಯಾರ್ಣವ ಎಂಬ ಶೀರ್ಷಿಕೆಯಡಿ ಸಂಪಾದಕರೇ ಮೇಲ್ಮಟ್ಟದ ಹಾಸ್ಯವನ್ನು ಬರೆಯುತ್ತಿದ್ದರು. 'ನೂತನ ರೀತಿಯನ್ನು ಅನುಸರಿಸಿ ಬರೆದ ಚಿಕ್ಕ ಕಲ್ಪನಾ ಕಥೆಗಳಿಗೂ, ಸ್ತ್ರೀಯರು ಬರೆದು ಕಳುಹಿಸಿದ ಲೇಖನಗಳಿಗೂ ಎಲ್ಲವುಗಳಿಗಿಂತ ಮುಂದಾಗಿ ಸ್ಥಳ ಕೊಡುವೆವು' ಎಂದು ಸಂಪಾದಕರು ಸಾರಿದ್ದಾರೆ. ಸುವಾಸಿನಿಯ ಸಂಪಾದಕರಾಗಿದ್ದ ಬೆನಗಲ್ ರಾಮರಾಯರು ೨೦ನೇ ಶತಮಾನದಲ್ಲಿ ಕನ್ನಡವನ್ನು ಕಟ್ಟಿದ ಆದ್ಯರಲ್ಲಿ ಒಬ್ಬರು. ಸಂಶೋಧಕ ಹಾ. ತಿ. ಕೃಷ್ಣೇಗೌಡರು ಗುರುತಿಸುವ ಹಾಗೆ ಕನ್ನಡದ ಸಣ್ಣ ಕಥೆ ಎಂಬ ಸಾಹಿತ್ಯ ಪ್ರಕಾರ ಉಗಮಿಸಿದ್ದು ಸುವಾಸಿನಿಯಲ್ಲಿ. ಕನ್ನಡದ ಸಣ್ಣ ಕಥೆಗಳ ಜನಕನೆಂದು ಕರೆಸಿಕೊಳ್ಳುವ ಪಂಜೆ ಮಂಗೇಶರಾಯರು, ಪತ್ರಿಕೆಯಲ್ಲಿ ರಾಮಪ ಎಂಬ ಹೆಸರಿನಲ್ಲಿ'' ನನ್ನ ಚಿಕ್ಕ ತಾಯಿ'' ನನ್ನ ಚಿಕ್ಕ ತಂದೆ, ನನ್ನ ಹೆಂಡತಿ, ನನ್ನ ಚಿಕ್ಕ ತಂದೆಯವರ ಉಯಿಲು, ಚಂಡಿಕಾ ರಹಸ್ಯ, ಸಮಾಜ, ಮೊದಲಾದ ಚಿಕ್ಕ ಕಥೆಗಳನ್ನೂ ಕಬ್ಬಿಣದ ಬುದ್ಧಿವಾದ, ಪರೀಕ್ಷೆಯಲ್ಲಿ ಪರಾಜಿತನಾದ ವಿದ್ಯಾರ್ಥಿಯ ಪ್ರಲಾಪ... ಮುಂತಾದ ಸರಳ ಸುಂದರ ಕವಿತೆಗಳನ್ನೂ ಸುವಾಸಿನಿಯಲ್ಲಿ ಪ್ರಕಟಿಸಿದ್ದಾರೆ. ಬೆನಗಲ್ ರಾಮರಾಯರ ರಮಾಮಾಧವ, ಬಿ ವೆಂಕಟಾಚಾರ್ಯರ ಉನ್ಮಾದಿನಿ ಕಾದಂಬರಿಗಳು ಈ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿವೆ. ಹೊಸಗನ್ನಡದ ಆದ್ಯ ಪ್ರಬಂಧಗಳೆಂದು ಕರೆಯಬಹುದಾದ, ಎಂಎನ್ ಶ್ರೀನಿವಾಸ ರಾಯರ ' ಮೋಡ ಮೋಳೆಯುವ ಚಿತ್ತು' ಮುಂತಾದ ಲಲಿತ ಪ್ರಬಂಧಗಳೂ ಸುವಾಸಿನಿಯಲ್ಲಿ ಪ್ರಕಟಗೊಂಡಿವೆ. ಈ ಕಾರಣಗಳಿಗಾಗಿ ಸುವಾಸಿನಿ ಕನ್ನಡ ಸಾಹಿತ್ಯ ಪತ್ರಿಕೆಗಳ ಪೈಕಿ ವಿಶಿಷ್ಟ ಮಾತ್ರವಲ್ಲ, ಕನ್ನಡ ಸಾಹಿತ್ಯ ಚರಿತ್ರೆಗೂ ಮಹತ್ವದ ಕೊಡುಗೆ ನೀಡಿದೆ ಎನ್ನಬಹುದು.

ಜುಲೈ ೧೯೦೦ರಲ್ಲಿ ಪ್ರಕಟಣೆ ಆರಂಭಿಸಿದ ಸುವಾಸಿನಿ ಆರ್ಥಿಕ ಅಡಚಣೆಗಳ ಕಾರಣದಿಂದ ೧೯೦೧ರ ಮೇ ತಿಂಗಳ ತರುವಾಯ ನಿಂತುಹೋಯಿತು. ಪುನಃ ೧೦-೧೧ ತಿಂಗಳ ಬಳಿಕ ಮರುಹುಟ್ಟು ಪಡೆಯಿತು. ಮತ್ತೆ ಜುಲೈ ೧೯೦೩ರಿಂದ ಅಸ್ತಂಗತವಾಯಿತು. ಆದರೆ ೨೨ ವರ್ಷಗಳ ತರುವಾಯ ನಂಬಲಾಗದ ರೀತಿಯಲ್ಲಿ ೧೯೨೫ರ ಅಕ್ಟೋಬರ್ ತಿಂಗಳಲ್ಲಿ ಸುವಾಸಿನಿ ಮರುಹುಟ್ಟು ಪಡೆಯಿತು! ಆಗಲೂ ಬೋಳಾರು

ವಿಠಲರಾಯರೇ ಪ್ರಕಾಶಕರಾಗಿದ್ದರು. ಬೆನಗಲ್ ರಾಮರಾಯರ ಬದಲಿಗೆ 'ಶ್ರೀಕೃಷ್ಣ ಸೂಕ್ತಿ' ಪತ್ರಿಕೆಯ ಖ್ಯಾತಿಯ ಕಡೇಕಾರು ರಾಜಗೋಪಾಲರಾಯರು ಸಂಪಾದಕರೆಂದು ಹೆಸರಿಸಲಾಗಿತ್ತು. ಮತ್ತೆ ಮೂರುವರ್ಷ ಬದುಕಿದ ಸುವಾಸಿನಿಗೆ ಆಗ ಪ್ರತಿಸ್ಪರ್ಧಿ ಪತ್ರಿಕೆಗಳಿದ್ದವು. ಆದರೂ ಮೂರು ವರ್ಷ ಮತ್ತೆ ಪ್ರಕಟಗೊಂಡು ಶಾಶ್ವತವಾಗಿ ನಿಂತು ಹೋಯಿತು.

'ಸುವಾಸಿನಿ' ತೋರಿಸಿಕೊಟ್ಟ ಮಾರ್ಗದಲ್ಲಿ ಹೆಜ್ಜೆಹಾಕಿದ ಇನ್ನೂ ಅನೇಕ ಪತ್ರಿಕೆಗಳು ೨೦ನೇ ಶತಮಾನದ ಮೊದಲ ದಶಕದಲ್ಲಿ ಸಿಗುತ್ತವೆ. 'ಕನ್ನಡ ನುಡಿಗನ್ನಡಿ','ಸದ್ಬೋಧ ಚಂದ್ರಿಕೆ','ವಿಕಟ ಪ್ರತಾಪ', 'ಶ್ರೀಕೃಷ್ಣ ಸೂಕ್ತಿ', ಅವಕಾಶ ತೋಷಿಣಿ – ಇವುಗಳನ್ನು ಈ ಸಾಲಿಗೆ ಸೇರಿಸಬಹುದು.

'ಕನ್ನಡ ನುಡಿಗನ್ನಡಿ'– ಮದ್ರಾಸಿನಿಂದ ೧೯೦೩ರ ಡಿಸೆಂಬರಿನಲ್ಲಿ ಆರಂಭಗೊಂಡು ಐದು ತಿಂಗಳು ನಡೆದು ನಿಂತಿತು. ಮತ್ತೆ ೧೯೦೬ರಲ್ಲಿ ಆರಂಭವಾಗಿ ೧೯೦೭ರ ಡಿಸೆಂಬರಿನಲ್ಲಿ ಅಂತ್ಯ ಕಂಡಿತು. ಇದು ಮದ್ರಾಸು ಪ್ರಾಂತ್ಯದಿಂದ ಪ್ರಕಟವಾದ ಮೊದಲ ಕನ್ನಡ ಪತ್ರಿಕೆಯೂ ಹೌದು. ಸಿದ್ಧಾಂತಿ ಶಿವಶಂಕರ ಶಾಸ್ತ್ರಿಯವರು ಆರಂಭದಲ್ಲಿ ಈ ಪತ್ರಿಕೆಯ ಸಂಪಾದಕರಾಗಿದ್ದರು. ಅನಂತರ ಎಚ್ ಚನ್ನಕೇಶವ ಅಯ್ಯಂಗಾರ್ ೧೯೦೬ರ ನವೆಂಬರಿನಲ್ಲಿ 'ನುಡಿಗನ್ನಡಿ'ಯ ಸಂಪಾದಕರಾದರು. ಜುಲೈ ೧೯೦೭ನೇ ಸಂಚಿಕೆಯಿಂದ ಎಂ ಎ ಶ್ರೀನಿವಾಸ ಅಯ್ಯಂಗಾರ್ ನುಡಿಗನ್ನಡಿಯ ಸಾರಥ್ಯ ವಹಿಸಿಕೊಂಡರು. ನುಡಿಗನ್ನಡಿ ಪತ್ರಿಕೆಗೆ ಮದ್ರಾಸಿನ ಪ್ರಸಿದ್ಧ ವ್ಯಾಪಾರಿಗಳಾದ ತುಲಸೀ ರಾಮದಾಸ್ ಪ್ರಕಾಶಕರಾಗಿದ್ದರು. ವಿಶೇಷವೆಂದರೆ ತಿಂಗಳಿಗೆ ನಾಲ್ಕು ಸಾವಿರದಿಂದ ಏಳು ಸಾವಿರ ಪ್ರತಿಗಳವರೆಗೂ ಮುದ್ರಿಸಿ ಹಂಚಿದ ಸಾಧನೆ ನುಡಿಗನ್ನಡಿಯದು. ಆ ಕಾಲದಲ್ಲಿ ಕನ್ನಡದ ಯಾವುದೇ ಪತ್ರಿಕೆ ಒಂದು ಸಾವಿರ ಪ್ರತಿಗಳನ್ನು ಅಚ್ಚು ಹಾಕಿಸುವುದೂ ಕಷ್ಟದ ಕೆಲಸವೇ ಆಗಿತ್ತು– ಅದೂ ಮದ್ರಾಸಿನಲ್ಲಿ ಎಂಬುದನ್ನು ಮರೆಯಬಾರದು. ಕನ್ನಡ ನುಡಿಗನ್ನಡಿ ಅಕ್ಷರಶಃ ಸಾಹಿತ್ಯ ಪತ್ರಿಕೆಯಲ್ಲದಿರಬಹುದು, ಆದರೆ ಪತ್ರಿಕೆಯ ಮುಖಪುಟದಲ್ಲಿ 'ಸಾಹಿತ್ಯ, ರಾಜಕೀಯ, ಸಮಾಜಶಾಸ್ತ್ರ ವಿಜ್ಞಾನ, ಕಲೆ ಮತ್ತು ಧರ್ಮಕ್ಕೆ ಮೀಸಲಾದ ಮಾಸಿಕ'ವೆಂದು ಇಂಗ್ಲಿಷ್‌ನ ಘೋಷವಾಕ್ಯವಿರುತ್ತಿತ್ತು. ಕನ್ನಡ ಸಾಹಿತ್ಯ ಪತ್ರಿಕೆಗಳು ಆರಂಭದಲ್ಲಿ ಹೇಗಿದ್ದವು ಎಂಬುದಕ್ಕೆ ನುಡಿಗನ್ನಡಿ ಮಾದರಿಯಾಗಿದೆ.

ಸದ್ಬೋಧ ಚಂದ್ರಿಕೆ: ಗದಗ ಸಮೀಪದ ಅಗಡಿ ಆನಂದವನದಿಂದ ಪ್ರಕಟಗೊಂಡು ಇಂದಿಗೂ ಆಶ್ರಮದ ಆಶ್ರಯದಲ್ಲಿ ಮುಂದುವರಿದಿರುವ ಪತ್ರಿಕೆ ಸದ್ಬೋಧ ಚಂದ್ರಿಕೆ. ಈ ಪತ್ರಿಕೆಯ ಚರಿತ್ರೆ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಅವಿಭಾಜ್ಯ ಅಂಗ. ಕನ್ನಡಿಗರಲ್ಲಿ ವಾಚನಾಭಿರುಚಿಯನ್ನು ಬೆಳೆಸಬೇಕೆಂಬ ಮಹತ್ವಾಕಾಂಕ್ಷೆಯಿಂದ ಸೌಮ್ಯ ನಾಮ ಸಂವತ್ಸರದ ಚೈತ್ರ ಬಹುಳ ಪಂಚಮಿಯಂದು(೧೯೦೯) ಆನಂದ ವನದ ಶೇಷಾಚಲ ಸ್ವಾಮಿಗಳ ಜನ್ಮ ದಿನೋತ್ಸವದಂದು 'ಸದ್ಬೋಧ ಚಂದ್ರಿಕೆ'ಯ ಪ್ರಥಮ ಸಂಚಿಕೆಯ ಬಿಡುಗಡೆ ಆಗಿತ್ತು. ವಾಯ್ ಜಿ ಕುಲಕರ್ಣಿಯವರು ಸಂಪಾದಕರಾಗಿದ್ದರು. ಗಳಗನಾಥರು ಎಂದು ಕನ್ನಡ ಸಾಹಿತ್ಯದಲ್ಲಿ ಖ್ಯಾತನಾಮರಾಗಿರುವ ವೆಂಕಟೇಶ ತಿರಕೋ ಕುಲಕರ್ಣಿಯವರು ಚಂದ್ರಿಕೆಯ ಆಧಾರ ಸ್ತಂಭವಾಗಿದ್ದರೂ ಅವರು ಸರ್ಕಾರೀ ಶಾಲೆಯ ಶಿಕ್ಷಕರಾಗಿದ್ದುದರಿಂದ ಅವರ ಹೆಸರು ಹಾಕಿರಲಿಲ್ಲ. ಗಳಗನಾಥರ ಐತಿಹಾಸಿಕ ಕಾದಂಬರಿಗಳು ಧಾರಾವಾಹಿಗಳಾಗಿ ಪ್ರಕಟವಾದುದರಿಂದ ಸದ್ಬೋಧಚಂದ್ರಿಕೆ ಆಗಿನ ಕಾಲದಲ್ಲಿ ವಾಖಲೆಯ ಚಂದಾದರರನ್ನು ಹೊಂದಿತ್ತು. ನವೋದಯ ಕಾಲದ ಹಿರಿಯ ಬರಹಗಾರರು ಸದ್ಬೋಧ ಚಂದ್ರಿಕೆಯಿಂದ ಪ್ರಭಾವಿತರಾಗಿದ್ದರು. ಒಂದು ಕಾಲದಲ್ಲಿ ಕನ್ನಡ ಸಾಹಿತ್ಯದ ಮೇರು ಪತ್ರಿಕೆಯಾಗಿದ್ದ ಸದ್ಬೋಧ ಚಂದ್ರಿಕೆ ಇಂದಿಗೂ ಪ್ರಕಟಣೆಯಲ್ಲಿರುವುದು ಹೆಮ್ಮೆಯ ಸಂಗತಿ. ಆದರೆ ಅದು ಇಂದಿಗೆ ಆನಂದವನದ ಮುಖವಾಣಿಯಷ್ಟೇ ಆಗಿ ಉಳಿದಿದೆ ಎನ್ನಬೇಕು.

ವಿಕಟ ಪ್ರತಾಪ: ಕನ್ನಡದಲ್ಲಿ ಬಂದ ಹಾಸ್ಯ ಪತ್ರಿಕೆಗಳ ಸಾಲಿನಲ್ಲಿ ಮೊದಲಿನದು ವಿಕಟಪ್ರತಾಪ.

ವಿಕಟ ಪ್ರತಾಪ ಆರಂಭಗೊಂಡಿದ್ದು ೧೯೦೫ರಲ್ಲಿ. ಬೆಂಗಳೂರಿನಿಂದ. ಚನ್ನಕೇಶವ ಅಯ್ಯಂಗಾರ್ ಸಂಪಾದಕರು ಮತ್ತು ಬಿ ಬಸಪ್ಪ ಶೆಟ್ಟಿ ಪ್ರಕಾಶಕರು. ಮೈಸೂರು ಸರ್ಕಾರವು ಪತ್ರಿಕೆಯ ಬರಹಕ್ಕೆ ಸಂಬಂಧಿಸಿದಂತೆ ನೋಟೀಸು ನೀಡಿದ್ದರಿಂದ ಪತ್ರಿಕೆಯನ್ನು ಬೆಂಗಳೂರಿನಿಂದ ಕುಪ್ಪಂ ಗೆ ವರ್ಗಾಯಿಸಲಾಯಿತು ಎನ್ನುವುದು ಕೂಡ ಚಾರಿತ್ರಿಕವಾಗಿ ಮುಖ್ಯವಾದುದು. ಅಲ್ಲಿ ಪಿ ಎಂ ಚಕ್ರಪಾಣಯ್ಯನವರ ಸಂಪಾದಕತ್ವದಲ್ಲಿ ಆರು ತಿಂಗಳು ಮುನ್ನಡೆಯಿತು.

ಶ್ರೀಕೃಷ್ಣಸೂಕ್ತಿ: ಶ್ರೀಕೃಷ್ಣಸೂಕ್ತಿಯು ೧೯೦೬ರ ಜನವರಿಯಲ್ಲಿ ಜನ್ಮತಳೆಯಿತು. ಮರದ ಕೆಳಗೆ ಹಸುವೊಂದಕ್ಕೆ ಒರಗಿ ಕೊಳಲು ನುಡಿಸುತ್ತಿರುವ ಕೃಷ್ಣನ ಚಿತ್ರ ಮುಖಪುಟದಲ್ಲಿ ಮಿಂಚುತ್ತಿತ್ತು. ಈ ಚಿತ್ರಕದ ಕೆಳಗೆ 'ಎ ಹೈ ಕ್ಲಾಸ್ ಮಂಥ್ಲಿ ಇನ್ ಕೆನರೀಸ್' ಎಂಬ ಘೋಷವಾಕ್ಯವಿತ್ತು. ಇದರ ಸಂಪಾದಕರು ಕೆರೋಡಿ ಸುಬ್ಬರಾಯರು. ಆಧುನಿಕ ಸಾಹಿತ್ಯಕ್ಕೆ ಸುಬ್ಬರಾಯರ ಕೊಡುಗೆಯೂ ಮಹತ್ವಪೂರ್ಣ. ಸೂಕ್ತಿಯು ಆರಂಭದಲ್ಲಿ ಧಾರ್ಮಿಕ ಪತ್ರಿಕೆಯಂತೆಯೇ ಇದ್ದರೂ ನಂತರ ಅದು ಅಪ್ಪಟ ಸಾಹಿತ್ಯ ಪತ್ರಿಕೆಯಾಗಿ ಸುಧಾರಿಸಿತು. ಆಕಾಲದ ಪ್ರಸಿದ್ಧ ಲೇಖಕರುಗಳು ಸೂಕ್ತಿಯಲ್ಲಿ ಬರೆಯುತ್ತಿದ್ದರು ಹಾಗು ತಪ್ಪದೇ ಓದುತ್ತಿದ್ದರು. ಅಂದು ರಾಜಕೀಯವಾಗಿ ಹರಿದು ಹಂಚಿಹೋಗಿದ್ದ ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಒಂದುಗೂಡಿಸುವಲ್ಲಿ ಶ್ರೀಕೃಷ್ಣಸೂಕ್ತಿಯ ಪಾತ್ರ ದೊಡ್ಡದು.

ಅವಕಾಶತೋಷಿಣಿ: ಕನ್ನಡ ಸಾಹಿತ್ಯಕ್ಕೆ ಬಂಗಾಳಿ ಸಾಹಿತ್ಯವನ್ನು ಪರಿಚಯಿಸಿದ ಹೆಗ್ಗಳಿಕೆಯ ಪತ್ರಿಕೆ 'ಅವಕಾಶತೋಷಿಣಿ'. ಬಿ ವೆಂಕಟಾಚಾರ್ಯರು ಸಂಪಾದಕರು. ೧೯೦೬-೦೭ರ ನಡುವೆ ಒಂದಾದ ಮೇಲೊಂದರಂತೆ ಬಂಗಾಳಿ ಕಾದಂಬರಿಗಳು ಕನ್ನಡಕ್ಕೆ ಅನುವಾದಗೊಂಡು ಈ ಪತ್ರಿಕೆಯಲ್ಲಿ ಪ್ರಕಟವಾದವು.

ಇಪ್ಪತ್ತನೇ ಶತಮಾನದ ಎರಡನೇ ದಶಕ, ರಾಜಕೀಯವಾಗಿ ಹಾಗೂ ಸಾಮಾಜಿಕವಾಗಿ ಮುಖ್ಯವಾಗಿರುವಂತೆ ಕನ್ನಡದಲ್ಲಿ ಸಾಹಿತ್ಯ ಪತ್ರಿಕೆಗಳ ದೃಷ್ಟಿಯಿಂದಲೂ ಮುಖ್ಯ ಘಟ್ಟ. **ವಿಕಟವಿನೋದಿನಿ(೧೯೧೧-೧೯೬೪), ಸಚಿತ್ರ ಭಾರತ(೧೯೧೩-೧೬), ಕಾದಂಬರೀ ಸಂಗ್ರಹ(೧೯೧೩-೧೪), ಕವಿತಾ(೧೯೧೯), ಪ್ರಭಾತ(೧೯೧೮-೧೯೨೦), ಕನ್ನಡ ಕೋಗಿಲೆ(೧೯೧೬-೧೯೨೦), ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ(೧೯೧೬-), ಪ್ರಬುದ್ಧ ಕರ್ನಾಟಕ(೧೯೧೮-)** ಇವು ಈ ಕಾಲದಲ್ಲಿ ಪ್ರಕಟಣೆ ಆರಂಭಿಸಿದ ಪ್ರಮುಖ ಸಾಹಿತ್ಯ ಪತ್ರಿಕೆಗಳು. ವಿಕಟ ವಿನೋದಿನಿಗೆ ಕನ್ನಡ ಸಾಹಿತ್ಯದಲ್ಲಿ ಹಾಸ್ಯವನ್ನು ಬೆಳೆಸಿದ ಸ್ಥಾನವಿದೆ. ಪ್ರಭಾತಕ್ಕೆ ಕವನಗಳಿಗಾಗಿಯೇ ಮೀಸಲಾದ ಪತ್ರಿಕೆಯಾಗಿ ಪ್ರಕಟಗೊಂಡು, ವರಕವಿ ಬೇಂದ್ರೆಯವರನ್ನು ಕೊಟ್ಟ ಹೆಗ್ಗಳಿಕೆಯಿದೆ. 'ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ' ಕನ್ನಡದ ಅಗ್ರಮಾನ್ಯ ಕನ್ನಡ ಸಂಸ್ಥೆಯ ಮುಖವಾಣಿಯಾಗಿಯೂ ಕನ್ನಡವನ್ನು ಕಟ್ಟಿದ ಹೆಗ್ಗಳಿಕೆಯಿದೆ. ಪ್ರಬುದ್ಧ ಕರ್ನಾಟಕ ಮೈಸೂರು ವಿಶ್ವವಿದ್ಯಾನಿಲಯದ ವಿದ್ವತ್ ಪತ್ರಿಕೆಯಾಗಿ ಕನ್ನಡ ಸಾಹಿತ್ಯದ ಜೊತೆ ಅವಿನಾಭಾವ ಸಂಬಂಧ ಇರಿಸಿಕೊಂಡು ಬೆಳೆದಿದೆ. ಸಾಹಿತ್ಯ ಪರಿಷತ್ ಪತ್ರಿಕೆ ಹಾಗೂ ಪ್ರಬುದ್ಧ ಕರ್ನಾಟಕ ಪತ್ರಿಕೆಗಳು ಆಧುನಿಕ ಕನ್ನಡ ಸಾಹಿತ್ಯದ ಭಾಗಗಳೇ ಆಗಿದ್ದು ಪ್ರತ್ಯೇಕ ಅಧ್ಯಯನಗಳನ್ನು ಬಯಸುತ್ತವೆ.


ಒಟ್ಟಾರೆಯಾಗಿ ಆರಂಭಕಾಲದ ಕನ್ನಡ ಸಾಹಿತ್ಯ ಪತ್ರಿಕೆಗಳನ್ನು ಗಮನಿಸಿ ಬಹುತೇಕ ಪತ್ರಿಕೆಗಳ ಬಗ್ಗೆ ಹೇಳಬಹುದಾದ ಮಾತುಗಳೆಂದರೆ: ಅವು ಅಲ್ಪಾಯುಷಿಗಳಾಗಿದ್ದವು, ಅಲ್ಪ ಚಂದಾದಾರರನ್ನು ಹೊಂದಿದ್ದವು. ಆದರೆ ಇಂದು ಲಕ್ಷಾಂತರ ಚಂದಾದಾರರನ್ನು ಹೊಂದಿರುವ ಪತ್ರಿಕೆಗಳಿಗಿಂತ ಪರಿಣಾಮಕಾರಿಯಾಗಿದ್ದವು. ಅವು ಹೊಸಗನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ಕೊಟ್ಟವು. ಆದ್ದರಿಂದ ಅವುಗಳಿಗೆ ನಾವು ಕೃತಜ್ಞರಾಗಿರಬೇಕು.

ನಂ ೩೧, ಕೃಷ್ಣಮೂರ್ತಿ ಬಡಾವಣೆ ತೊಣಚಿಕೊಪ್ಪಲು, ಮೈಸೂರು-೯, ಮೊಬೈಲ್ ೯೪೪೮೯೪೩೨೧೧

ಪ್ರಬುದ್ಧ ಕರ್ಣಾಟಕ

ಹುಟ್ಟು ಮತ್ತು ಬೆಳವಣಿಗೆ

ಎ.ಆರ್. ಕೃಷ್ಣಶಾಸ್ತ್ರಿ


ಪ್ರಬುದ್ಧ
ಕರ್ಣಾಟಕ

ಅಹಂ ಕರೋಮಿತಿ ವೃಥಾಭಿಮಾನಃ

-ಅಧ್ಯಾತ್ಮ ರಾಮಾಯಣ

‘ಪ್ರಬುದ್ಧ ಕರ್ಣಾಟಕ’ವು ಹುಟ್ಟಿದ್ದು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಆಶ್ರಯದಲ್ಲಿ ಮತ್ತು ಅದರ ಅಂಗವಾಗಿ; ಆದ್ದರಿಂದ ಆ ಕರ್ಣಾಟಕ ಸಂಘ ಹುಟ್ಟಿದ ಸಂದರ್ಭವನ್ನು ಇಲ್ಲಿ ಸಂಗ್ರಹವಾಗಿ ತಿಳಿಸುವುದು ಅವಶ್ಯಕ. ನಾನು ವಿದ್ಯಾರ್ಥಿಯಾಗಿದ್ದಾಗ ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಇದ್ದದ್ದು ಎರಡು ಸಂಘಗಳು- (೧) ೧೯೦೪ರಲ್ಲಿ ಹುಟ್ಟಿ ಥಾಮಸ್ ಡೆನ್ಹಂ ಅವರ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದ ಚರಿತ್ರಸಂಘ. (೨) ಸುಮಾರು ೧೯೧೩ರಲ್ಲಿ ಶ್ರೀ.ಬಿ.ಎಂ. ಶ್ರೀಕಂಠಯ್ಯನವರಿಂದ ಸ್ಥಾಪಿತವಾದ ಇಂಗ್ಲಿಷ್ ಸಾಹಿತ್ಯಸಂಘ, ಕನ್ನಡಕ್ಕೆ ಯಾವ ಸಂಘವೂ ಇರಲಿಲ್ಲ, ೧೯೧೫ರಲ್ಲಿ ನಾನು ಬೆಂಗಳೂರಿಗೆ ವೇ. ಗರಣಿ ಕೃಷ್ಣಾಚಾರ್ಯರಿಗೆ ಬದಲಾಗಿ ಕನ್ನಡ ಉಪಾಧ್ಯಾಯನಾಗಿ ಹೋದಾಗ ಅಲ್ಲಿಯೂ ಕನ್ನಡಕ್ಕೆ ಯಾವ ಸಂಘವೂ ಇರಲಿಲ್ಲ, ಒಂದು ಸಂಘವನ್ನು ಸ್ಥಾಪಿಸಬೇಕೆಂಬ ಯೋಚನೆಯೂ ಹೋದ ಕೂಡಲೇ ಬರಲಿಲ್ಲ. ಕನ್ನಡ ‘ಮುನುಷಿ’ ಎಂದು ವಿದ್ಯಾರ್ಥಿಗಳ ಅನಾದರಣೆ, ತಿರಸ್ಕಾರ, ಹಾಸ್ಯಗಳಿಗೆ ಗುರಿಯಾಗದಂತೆ, ಅವರಿಗೆ ಉಪಯೋಗವಾಗುವ ರೀತಿಯಲ್ಲಿ ಪಾಠ

ಹೇಳಿ ಕನ್ನಡಕ್ಕೂ ಅದರ ಉಪಾಧ್ಯಾಯನಿಗೂ ಒಂದು ಗೌರವವನ್ನು ಸಂಪಾದಿಸಿಕೊಳ್ಳುವುದಕ್ಕೆ ಕೆಲವು ಕಾಲ ಹಿಡಿಯಿತು. ಕನ್ನಡದಲ್ಲಿಯೂ ಕಲಿಯುವುದು ಇದೆ, ಇಂಗ್ಲಿಷಿನಂತೆಯೇ ಕಲಿಯುವುದು ಇದೆ, ಎಂದು ತೋರಿಸಿ ಕನ್ನಡದ ಸ್ಥಿತಿಯನ್ನು ಬಂಗಾಳಿ ಮರಾಠಿಗಳ ಸ್ಥಿತಿಯೊಡನೆ ಹೋಲಿಸಿ ಕನ್ನಡದಲ್ಲಿ ಒಂದು ಅಭಿಮಾನ ಹುಟ್ಟಿಸಿ ವಿದ್ಯಾರ್ಥಿಗಳ ಸಹಾನುಭೂತಿ ಸ್ನೇಹ ಗೌರವಗಳನ್ನು ಗಳಿಸಲು ಒಂದೆರಡು ವರ್ಷ ಬೇಕಾಯಿತು. ಅಂದಿನ ಸ್ಥಿತಿಯನ್ನು ಪ್ರಬುದ್ಧ ಕರ್ನಾಟಕದ ಮೊಟ್ಟಮೊದಲ ಸಂಚಿಕೆಯ ಮೊದಲನೆಯ ಲೇಖನದ ಈ ವಾಕ್ಯಗಳಲ್ಲಿ ಸೂಚಿಸಿದೆ :-

> ''ಬೆಳಗಾಯಿತು. ಕೂಡಲೆ ಮಲಗಿದ್ದವರೆಲ್ಲರೂ ಎದ್ದು ಅವರವರ ಕೆಲಸಗಳಿಗೆ ಹೊರಟರು. ಮನೆಯಲ್ಲಿ ಎಲ್ಲಿ ನೋಡಿದರೂ ಗದ್ದಲ; ಆದರೂ ಇನ್ನೂ ಕೆಲವು ಹುಡುಗರು ಮಲಗಿ ನಿದ್ದೆ ಹೋಗುತ್ತಿದ್ದರು. ಅದನ್ನು ನೋಡಿ ಅವರ ತಾಯಿಯು 'ಇನ್ನೂ ಏಳುವುದಿಲ್ಲವೇನ್ರೋ! ಓದುವ ಹುಡುಗರು ಇಷ್ಟು ಹೊತ್ತು ಮಲಗಿದರೆ ಹ್ಯಾಗೆ!' ಎಂದು ಗದರಿಸಿದಳು.
>
> ಕೂಡಲೆ ಹುಡುಗರು ಎದ್ದು ಸರಸರನೆ ಕೈಯಲ್ಲಿ ಒಂದೊಂದು ಕನ್ನಡ ಪುಸ್ತಕವನ್ನು ಹಿಡಿದು ಕುಳಿತುಕೊಂಡರು. ಸ್ವಲ್ಪ ಹೊತ್ತಿನ ಮೇಲೆ ಅವರ ಉಪಾಧ್ಯಾಯರು ಬಂದು ನೋಡುತ್ತಾರೆ! ಕೆಲವು ಹುಡುಗರು ಇನ್ನೂ ತೂಕಡಿಸುತ್ತಿದ್ದಾರೆ! ಕೆಲವರು ಪುಸ್ತಕವನ್ನು ತಲೆಕೆಳಗಾಗಿ ಹಿಡಿದುಕೊಂಡಿದ್ದಾರೆ! ಒಬ್ಬನಾದರೂ ಮುಖ ತೊಳೆದಿಲ್ಲ! ಉಪಾಧ್ಯಾಯರು ಅವರೆಲ್ಲರನ್ನೂ ಮೊದಲು ಚೊಕ್ಕಟವಾಗಿ ಕೈಕಾಲು ಮುಖಗಳನ್ನು ತೊಳೆದುಕೊಂಡು ಬರುವಂತೆ ಹೇಳಿದರು. ಬಳಿಕ ಎಲ್ಲರಲ್ಲಿಯೂ ಲವಲವಿಕೆ ಹುಟ್ಟಿತು.
>
> ಹುಡುಗರು ಬುದ್ಧಿವಂತರು. ಆದರೂ ಮೈಬಗ್ಗಿ ಕೆಲಸ ಮಾಡುತ್ತಿರಲಿಲ್ಲ. ಆದ್ದರಿಂದ ಇವರ ಕೈಯಲ್ಲಿ ಕೆಲಸ ಮಾಡಿಸುವುದಕ್ಕೆ ಪಾಪ ಆ ಉಪಾಧ್ಯಾಯರು ಸ್ವಲ್ಪ ಕಷ್ಟಪಡಬೇಕಾಯಿತು. ಕೊನೆಗೆ ಹುಡುಗರು ಅವರ ದಾರಿಗೆ ಬಂದು ಚೆನ್ನಾಗಿ ವ್ಯಾಸಂಗ ಮಾಡುತ್ತ ಯೋಗ್ಯರೆನಿಸಿಕೊಂಡರು. ಉಪಾಧ್ಯಾಯನಿಗೂ ಸಂತೋಷವಾಗಿ ಕಾಳಿದಾಸನ ಕುಮಾರಸಂಭವದ 'ಕ್ಲೇಶಃ ಫಲೇನ ಹಿ ಪುನರ್ನವತಾಂ ವಿಧತ್ತೇ' (ತಕ್ಕ ಫಲವುಂಟಾದರೆ ಪಟ್ಟ ಕಷ್ಟಗಳೆಲ್ಲ ಮರೆತು ಹೋಗಿ ಹೊಸ ಉತ್ಸಾಹ ಉಂಟಾಗುತ್ತದೆ ಎಂಬ ತಾತ್ಪರ್ಯವುಳ್ಳ) ಶ್ಲೋಕವು ಜ್ಞಾಪಕಕ್ಕೆ ಬಂತು.''

ಆಗ ಮೈಸೂರು ವಿಶ್ವವಿದ್ಯಾಲಯವು ಹುಟ್ಟಿದ ಹೊಸದು. ಹುಡುಗರು ಅದರ ಪರೀಕ್ಷೆಗಳಿಗೆ ಕೂರುವ ಕಾಲ ಇನ್ನು ಬಂದಿರಲಿಲ್ಲ. ಮದರಾಸ್ ವಿಶ್ವವಿದ್ಯಾನಿಲಯದ ಇಂಟರ್‌ಮಿಡಿಯೆಟ್ ಪರೀಕ್ಷೆಗೆ ಕನ್ನಡದ ಪ್ರಬಂಧ ಪತ್ರಿಕೆಯಲ್ಲಿ ಇಂಗ್ಲಿಷ್ ಪಠ್ಯಪುಸ್ತಕದ ಮೇಲೆ ಒಂದು ಪ್ರಶ್ನೆ ಬರುತ್ತಿತ್ತು. ಅದನ್ನು ಅದುವರೆಗೆ ಇಂಗ್ಲಿಷಿನ ಉಪಾಧ್ಯಾಯರು ತೆಗೆದುಕೊಳ್ಳುತ್ತಿರಲಿಲ್ಲ. ಕನ್ನಡದ ಉಪಾಧ್ಯಾಯರಿಗೆ ಸಾಧ್ಯವಿರಲಿಲ್ಲ. ಎರಡನ್ನೂ ಬಲ್ಲ ನಾನು ಅದನ್ನು ಇಂಗ್ಲಿಷ್ ಉಪಾಧ್ಯಾಯನಂತೆ ವಿದ್ಯಾರ್ಥಿಯಂತೆ ವ್ಯಾಸಂಗ ಮಾಡಿ, ಅದರ ಸಾರಾಂಶವನ್ನು ಬರೆದುಕೊಟ್ಟು ಕನ್ನಡದಲ್ಲಿ ಪ್ರಬಂಧವನ್ನು ಬರೆದು ಓದಿ ಹೇಳಿದೆ. ಪರೀಕ್ಷೆಗೆ ಉಪಯುಕ್ತವಾಗಿದ್ದುದರಿಂದ ಅದನ್ನು ಹುಡುಗರು ಎಲ್ಲರೂ ಅಪೇಕ್ಷಿಸಿದರು. ಈ ಮಧ್ಯೆ ಕೆಲವು ವಿದ್ಯಾರ್ಥಿಗಳು ಅತ್ಯುತ್ತಮವಾದ ಪ್ರಬಂಧಗಳನ್ನು ಬರೆದಿದ್ದರು. ಶ್ರೀಮಾನ್ ಸಿ.ಕೆ.ವೆಂಕಟರಾಮಯ್ಯನವರು ನಳಚರಿತ್ರೆಯ ಮೇಲಣ ಒಂದು ಪ್ರಶ್ನೆಗೆ ಒಂದು ಅಭ್ಯಾಸ ಪುಸ್ತಕದ ತುಂಬ ಬರೆದಿದ್ದರು. ಹುಡುಗರು ಅಭ್ಯಾಸ ಪ್ರಬಂಧವನ್ನು ಬರೆಯುವುದಕ್ಕೆ ಕಳ್ಳ ತಪ್ಪಿಸಿಕೊಳ್ಳುವಾಗ, ಬರೆದರೂ ಒಂದೆರಡು ಪುಟಗಳನ್ನು ಶಾಟಕ್ಕೆ ತಪ್ಪೋ ನೆಪ್ಪೋ ಬರೆದು ಹಾಕುವಾಗ ಈ ವಿದ್ಯಾರ್ಥಿ ನಿರರ್ಗಳವಾಗಿ ಒಂದು ತಪ್ಪಿಲ್ಲದಂತೆ ಮುತ್ತಿನಂಥ ಬಿಡಿಬಿಡಿಯಾದ

ಅಕ್ಷರವಲ್ಲಿ ಅನಾಯಾಸವಾಗಿ ಒಂದು ಪುಸ್ತಕ ಬರೆದುಬಿಟ್ಟಿದ್ದನು. ಇದರಂತೆ ಶ್ರೀ ಎಸ್.ವಿ. ರಂಗಣ್ಣನವರು, ಎನ್. ನೀಲಕಂಠಪ್ಪನವರು ಮುಂತಾದ ಮೇಧಾವಿಗಳಾದ ವಿದ್ಯಾರ್ಥಿಗಳು ತಮ್ಮ ಬರವಣಿಗೆಯಲ್ಲಿ ಒಂದೊಂದು ವಿಧವಾದ ಅಪೂರ್ವ ಸಾಮರ್ಥ್ಯವನ್ನು ವ್ಯಕ್ತಪಡಿಸಿದ್ದರು. ಇವರ ಬರವಣಿಗೆಯೆಲ್ಲಾ ವ್ಯರ್ಥವಾಗಿ ಹೋಗಿಬಿಡುವುದಲ್ಲಾ ಎಂದು ನನಗೆ ಒಂದು ಬಗೆಯ ಕೊರಗಾಗಿತ್ತು. ಆಗ ನಾನು ಇವೆಲ್ಲವನ್ನೂ ಒಂದು ಪ್ರಕಟನೆಯಾಗಿ ಅಚ್ಚು ಮಾಡಿಸಬಹುದೆಂದೂ, ವಿದ್ಯಾರ್ಥಿಗಳು ಮೆಚ್ಚವಹಿಸುವುದಾದರೆ ನಾನು ಈ ಕೆಲಸವನ್ನು ಕೈಕೊಳ್ಳುವೆನೆಂದೂ ಹೇಳಿದೆ. ಅದಕ್ಕೆ ಬಹುಮಂದಿ ಉತ್ಸಾಹಶಾಲಿಗಳಾಗಿ ಮುಂದೆ ಬಂದರು. ಅದರ ಜೊತೆಯಲ್ಲಿಯೇ ಸಂಘದ ಯೋಚನೆಯೂ ಹುಟ್ಟಿತು. ವಿದ್ಯಾರ್ಥಿಗಳು ಕೊಡುವ ಹಣವನ್ನು ಸಂಘದ ಚಂದಾ ಎಂದು ಭಾವಿಸಿ ಪತ್ರಿಕೆಯನ್ನು ಉಚಿತವಾಗಿ ಕೊಡಬಹುದು ಎಂದೆ. ಅದಕ್ಕೂ ವಿದ್ಯಾರ್ಥಿಗಳು ಒಪ್ಪಿದರು. ಇಷ್ಟು ಹೊತ್ತಿಗೆ ಶ್ರೀಮಾನ್ ಎಚ್. ಸುಬ್ಬಾಜೋಯಿಸ್, ಎಲ್. ನಾರಾಯಣರಾವ್, ಸಿ.ಎನ್. ಶ್ರೀನಿವಾಸಯ್ಯಂಗಾರ್, ಬಿ.ಎಸ್.ಮಾಧವರಾವ್, ಪಿ.ಕೃಷ್ಣರಾವ್, ಎಂ.ಸಿದ್ದಲಿಂಗಯ್ಯ ಮುಂತಾದ ಹಲವು ಅಭಿಮಾನಶಾಲಿಗಳಾದ ವಿದ್ಯಾರ್ಥಿಗಳು ನನ್ನ ಸುತ್ತ ಮುತ್ತಿಕೊಂಡು ನಾನು ಹೇಳಿದ್ದನ್ನು ನಡೆಸುವುದಕ್ಕೆ ಸಿದ್ಧರಾದರು''. ಮೊದಲು ಸಂಘದ ಏರ್ಪಾಡು. ಈಗ 'ಕರ್ಣಾಟಕ ಸಂಘ'ವೆಂಬುದು ಸುಪರಿಚಿತವಾದ ಹೆಸರು ಆಗ ಈ ಸಂಸ್ಥೆಗೆ ಏನು ಹೆಸರು ಇಡಬೇಕೆಂದೇ ನಾನು ಬಹುದಿನ ಯೋಚಿಸಿದೆ-ಸಾಹಿತ್ಯ ಸಮಾಜವೇ, ಕನ್ನಡ ಸಮಾಜವೇ, ಕರ್ಣಾಟಕ ಸಮಾಜವೇ, ಇತ್ಯಾದಿ. ಆಗ್ಗೆ ಇಂಗ್ಲಿಷಿನಲ್ಲಿ ರೂಢಿಯಾಗಿದ್ದ 'ಸೊಸೈಟಿ' ಎಂಬ ಪದಕ್ಕೆ ಸಮಾನ ಪದವಾಗಿ 'ಸಮಾಜ'ವೇ ಮುಂದೆ ಬರುತ್ತಿತ್ತು. ಆದರೆ ಏಕೋ ಅದರಲ್ಲಿ ಸತ್ವವಿಲ್ಲವೆಂಬ ಭಾಸವಾಗಿ ಕೊನೆಗೆ ಬಾಯಿತುಂಬ ಬರುವ, ಗಂಭೀರವಾಗಿ ಕೇಳುವ. 'ಕರ್ಣಾಟಕ ಸಂಘ' ಎಂಬುದನ್ನು ನಿಷ್ಕರ್ಷೆ ಮಾಡಿಯಾಯಿತು. ಈಗ ನಾನು ಬಿಟ್ಟರೂ ನನ್ನ ಕಂಬಳಿ ಬಿಡುವಂತಿರಲಿಲ್ಲ. ಸಂಘವು ಆರಂಭವಾಗಲೇಬೇಕಾಯಿತು. (ಆಗಸ್ಟ್ ೧೯೧೮) ಆಗ ಶ್ರೀಮಾನ್ ಬಿ.ವೆಂಕಟನಾರಾಣಪ್ಪನವರು ಕಾಲೇಜಿನಲ್ಲಿ ಭೌತಶಾಸ್ತ್ರದ ಅಧ್ಯಾಪಕರಾಗಿದ್ದರು. ೧೯೧೫ರಲ್ಲಿ ಆರಂಭವಾಗಿದ್ದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕೆಲಸ ಮಾಡಿ ಗೌರವವನ್ನು ಗಳಿಸಿದ್ದ ವ್ಯಕ್ತಿಗಳಾಗಿದ್ದರು. ಈ 'ಜ್ಞಾನವೃದ್ಧರೂ ವಯೋವೃದ್ಧರೂ' ಆದ ಮಹನೀಯರು ನಮ್ಮ ಸಂಘದ ಮೊದಲನೆಯ ಅಧ್ಯಕ್ಷರಾಗಬೇಕೆಂದು ನಾನು ಸೂಚಿಸಿದೆ. ನಾನೇ ಅಧ್ಯಕ್ಷನಾಗಬೇಕೆಂದು ಸೂಚನೆ ಬಂತು; ಆದರೆ ನಾನು ದೊಡ್ಡವರನ್ನು ಮುಂದಿಟ್ಟುಕೊಂಡು ಕೆಲಸ ಮಾಡಬೇಕೆಂದೂ, ''ಕೆಲಸ ಮಾಡುವುದಕ್ಕೆ ಹಿಂದೇನು ಮುಂದೇನು?'' ಎಂದೂ, ನಾನು ಉಪಾಧ್ಯಕ್ಷನಾಗಿರುತ್ತೇನೆಂದೂ ಹೇಳಿ ಎಲ್ಲರನ್ನೂ ಒಪ್ಪಿಸಿದೆ; ಜೊತೆಗೆ ಕಾರ್ಯದರ್ಶಿ ಮಾತ್ರ ವಿದ್ಯಾರ್ಥಿಯೇ ಆಗಿರಬೇಕೆಂದೂ ಸಂಘವು ವಿದ್ಯಾರ್ಥಿಗಳಿಗೆ ಒಂದು ಶಿಕ್ಷಣ ಕ್ಷೇತ್ರವಾಗಬೇಕೆಂದೂ ಖಂಡಿತವಾಗಿ ಹೇಳಿದೆ. ಅದಕ್ಕೂ ಒಪ್ಪಿಗೆ ದೊರೆಯಿತು. ಹೀಗೆ ಮೊದಲನೆಯ ಕಾರ್ಯದರ್ಶಿಗಳಾಗಿ ನಿಯಮಿತರಾದ-ಚುನಾಯಿತರಲ್ಲ-ಶ್ರೀಮಾನ್ ಡಿ.ಗುರುರಾಯರು ಈಗಲೂ ನನ್ನಂತೆ ಉಪಾಧ್ಯಾಯರಾಗಿರುತ್ತ ಮೇಲೆ ನಾನು ಬರೆದಿರುವುದರ ಸತ್ಯತೆಯನ್ನು ಸಮರ್ಥಿಸಲು ಸಿದ್ಧರಾಗಿರುತ್ತಾರೆ. ರಾವ್‌ಬಹದ್ದೂರ್ ರಾ.ನರಸಿಂಹಾಚಾರ್ಯರು ಮೊದಲನೆಯ ವರ್ಷದ ಆರಂಭ ಭಾಷಣ ಮಾಡಿದರು. ಇಂಥ ಹಿರಿಯರಾದ ವಿದ್ವಾಂಸರೂ ಮೇಧಾವಿಗಳಾದ ಉತ್ಸಾಹಿ ತರುಣರೂ ಸೇರಿದರೆ ಆಗದ ಕೆಲಸವೂ ಒಂದು ಉಂಟೆ? ಅದು ಆಗದೆ ಇರುತ್ತದೆಯೋ? – ''**ಅಹಂ ಕರೋತಿ ವೃಥಾಭಿಮಾನಃ!**''

ಹೆಸರು

ನಾನು ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದಾಗ ನನ್ನ ಸ್ನೇಹಿತರೊಬ್ಬರು ಕೊಟ್ಟ ಸ್ವಾಮಿ ವಿವೇಕಾನಂದರ ''ಕೊಲಂಬೋದಿಂದ ಆಲ್ಮೋರಾವರೆಗೆ'' ಎಂಬ ಇಂಗ್ಲಿಷ್ ಉಪನ್ಯಾಸ ಗ್ರಂಥವನ್ನು ಓದಿ, ವಿವೇಕಾನಂದರಲ್ಲಿ ನನಗೆ ಒಂದು ಗೌರವ ಬಂದಿತ್ತು. ಒಂದೆರಡು ವರ್ಷಗಳಲ್ಲಿ ಸ್ವಾಮಿ ಅಭೇದಾನಂದರು ಮೈಸೂರು ಟವನ್ ಹಾಲಿನಲ್ಲಿ ಕಿಕ್ಕಿರಿದ ಜನಸಂದಣಿಯ ಮಧ್ಯದಲ್ಲಿ ಹರಿಸಿದ ವಾಗ್ಝರಿಯನ್ನು ಕೇಳಿ ಆ ಗೌರವವು ಭಕ್ತಿಯಾಗಿ ಪರಿಣಮಿಸಿತ್ತು. ೧೯೧೫ರಲ್ಲಿ ಬೆಂಗಳೂರಿಗೆ ಬರುವ ಹೊತ್ತಿಗೆ ರಾಮಕೃಷ್ಣ ಮಠವನ್ನು ಕಂಡೇನೇ ಎಂಬ ತವಕ ಹುಟ್ಟಿತ್ತು. ಅಷ್ಟು ಹೊತ್ತಿಗೆ ಶ್ರೀಮಾನ್ ವೆಂಕಣ್ಣಯ್ಯನವರೂ ಬೆಂಗಳೂರಿಗೆ ಬಂದು ನಾವಿಬ್ಬರೂ ಶ್ರೀ ರಾಮಕೃಷ್ಣ ಮಠಕ್ಕೆ ಹೋಗಿ ಬರಲು ಮೊದಲು ಮಾಡಿದೆವು. ಆಗ ಆ ಮಠದ ಅಧ್ಯಕ್ಷರಾಗಿದ್ದ ಶ್ರೀ ನಿರ್ಮಲಾನಂದ ಸ್ವಾಮಿಗಳು ಶ್ರೀರಾಮಕೃಷ್ಣ ಪರಮಹಂಸರ ಮೇಲೆ ನಾವು ಕನ್ನಡದಲ್ಲಿ ಒಂದು ಚಿಕ್ಕ ಪುಸ್ತಕವನ್ನು ಬರೆಯಬೇಕೆಂದು ಸೂಚಿಸಿ ಅದಕ್ಕೆ ಬೇಕಾದ ಸಾಹಿತ್ಯವನ್ನೂ ಅದೇ ಮಠದಲ್ಲಿದ್ದ ಸ್ವಾಮಿ ವಿದೇಹಾನಂದರ ಸಹಾಯವನ್ನೂ ಒದಗಿಸಿಕೊಟ್ಟರು. ನಾವು ಆ ಕೆಲಸದಲ್ಲಿ ತೊಡಗಿದ್ದಾಗ ನಮಗೆ ಪರಸ್ಪರ ಗೌರವ ವಿಶ್ವಾಸಗಳು ಬೆಳೆದು, ಸ್ವಾಮಿಗಳು ಒಂದು ದಿನ ''ನೀವು ಧಾರ್ಮಿಕ ವಿಚಾರಗಳನ್ನು ನಿಮ್ಮ ಜನಕ್ಕೆ ತಿಳಿಸಲು ಪ್ರಬುದ್ಧ ಕರ್ಣಾಟಕವೆಂಬ ಒಂದು ಪತ್ರಿಕೆಯನ್ನು ಏಕೆ ಹೊರಡಿಸಬಾರದು? ಪ್ರಬುದ್ಧ ಭಾರತವು ಇಂಗ್ಲಿಷಿನಲ್ಲಿದೆ. ಆದರೆ ಆಯಾ ಪ್ರಾಂತದವರು ಆಯಾ ದೇಶಭಾಷೆಯಲ್ಲಿ ಬರೆಯದೆ ಹೋದರೆ ಅದು ಹೆಚ್ಚು ಜನಕ್ಕೆ ತಿಳಿಯುವುದಿಲ್ಲ. ಈಗಾಗಲೇ 'ಪ್ರಬುದ್ಧ ಕೇರಳಂ' ಎಂಬ ಪತ್ರಿಕೆ ಹೊರಟು ನಡೆಯುತ್ತಿದೆ. ಮೈಸೂರು ಕೇರಳಕ್ಕಿಂತ ದೊಡ್ಡದು.'' ಎಂದಿದ್ದರು. ಅಂಥ ಪತ್ರಿಕೆ ಹೊರಡಿಸುವುದು ನಮ್ಮಿಂದ ಆಗದ್ದರಿಂದ ಆ ಮಾತು ಅಲ್ಲಿಗೆ ನಿಂತುಹೋಗಿತ್ತು. ಆದರೆ 'ಪ್ರಬುದ್ಧ ಕರ್ಣಾಟಕ' ಎಂಬ ಹೆಸರು ಮಾತ್ರ ಮರೆತುಹೋಗಲಿಲ್ಲ; ಮನಸ್ಸಿನಲ್ಲಿ ತಾಡಿತವಾಗುತ್ತಲೇ ಇತ್ತು. ೧೯೧೮ರಲ್ಲಿ ಕರ್ಣಾಟಕ ಸಂಘದ ಅಂಗವಾಗಿ ಒಂದು ಪತ್ರಿಕೆಯನ್ನು ಹೊರಡಿಸಬೇಕೆಂದು ನಿರ್ಧಾರವಾದಾಗ ಅದು ವಿದ್ಯಾರ್ಥಿಗಳು ನಡೆಸುವ ಪತ್ರಿಕೆಯಾದ್ದರಿಂದ 'ವಿದ್ಯಾರ್ಥಿ' ಎಂದು ಹೆಸರಿರಲೆಂದು ನಾನು ಸೂಚಿಸಿದೆ; ಅದಕ್ಕೆ ಎಲ್ಲರೂ ಒಪ್ಪಿದರು. ಆದರೆ ಅಷ್ಟು ಹೊತ್ತಿಗೆ ಮಂಗಳೂರು ಪ್ರಾಂತದಲ್ಲಿ 'ವಿದ್ಯಾರ್ಥಿ' ಎಂಬ ಹೆಸರಿನ ಪತ್ರಿಕೆಯೊಂದು ಆಗಲೇ ನಡೆಯುತ್ತಿತ್ತೆಂದು ತಿಳಿದುಬಂದದ್ದರಿಂದ ಬೇರೆ ಹೆಸರನ್ನು ಯೋಚಿಸಲು ತೊಡಗಿದೆ; ಆಗ ಮೊಟ್ಟಮೊದಲು ತೋರಿದ್ದು 'ಪ್ರಬುದ್ಧ ಕರ್ಣಾಟಕ.' ಅದನ್ನು ರಾಮಕೃಷ್ಣ ಮಠದಿಂದ ಹೊರಡಬಹುದಾದ ಧಾರ್ಮಿಕ ಪತ್ರಿಕೆಗೆ ಉಪಯೋಗಿಸದೆ, ಸೆಂಟ್ರಲ್ ಕಾಲೇಜಿನಿಂದ ಹೊರಡುವ ಸಾಹಿತ್ಯ ಪತ್ರಿಕೆಗೆ ಉಪಯೋಗಿಸಿಕೊಳ್ಳಬಹುದೇ ಎಂದು ಮೊದಲು ಸ್ವಲ್ಪ ಶಂಕೆಯುಂಟಾದರೂ, ಅದು ಹೆಚ್ಚು ಹೊತ್ತು ಇರಲಿಲ್ಲ; ಬೇರೆ ಹೆಸರೂ ಸೂಚಿತವಾಗಲಿಲ್ಲ; ಹೊಳೆಯಲಿಲ್ಲ; ಆದ್ದರಿಂದ ಅದೇ ನಿಂತಿತು. ಕನ್ನಡ ನಾಡು ಎಚ್ಚತ್ತಿದೆ, ಯುವಕ ವಿದ್ಯಾರ್ಥಿಗಳ ಮನಸ್ಸು ವಿಕಸಿತವಾಗುತ್ತಿದೆ ಎಂಬ ಭಾವನೆ ಇದ್ದದ್ದರಿಂದ ಆಮೇಲೆ ಅದೇ ಸರಿ ಎನ್ನಿಸಿತು. ನಮ್ಮ ಪತ್ರಿಕೆಯ ಮುಖಪತ್ರದ ಮೇಲೆ ಇಂದಿಗೂ ಇರುವ ಚಿತ್ರವೂ ಶ್ರೀ ರಾಮಕೃಷ್ಣ ಮಠದಿಂದಲೇ ಪ್ರೇರಿತವಾದದ್ದು; ಅವರ ಸಾಹಿತ್ಯದ ಪ್ರತೀಕವಾಗಿ, ರಾಜಯೋಗ ಜ್ಞಾನಯೋಗ ಕರ್ಮಯೋಗ ಭಕ್ತಿಯೋಗಗಳನ್ನು ಸೂಚಿಸುವ ಮುದ್ರೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಕನ್ನಡ ನಾಡಿನ ಸೂರ್ಯದೇವನ ಸನ್ನಿಧಿಯಲ್ಲಿ ಆಗಲೇ ಅರಳಿರುವ ಮತ್ತು ಇಂದು ಮೊಗ್ಗಾಗಿ ಮುಂದೆ ಅರಳಬೇಕಾಗಿರುವ ಹೃತ್ಕಮಲಗಳನ್ನು ಸೂಚಿಸಿ, ಒಂದು ಚಿತ್ರವನ್ನು ಬರೆದು ವಿದ್ಯಾರ್ಥಿಗಳಿಗೆ ತೋರಿಸಿದೆ. ಅದು ಸರ್ವಾನುಮತದಿಂದ ಒಪ್ಪಿಗೆಯನ್ನು ಪಡೆಯಿತು; ಸಂಘದ ಅಧ್ಯಕ್ಷರಾದ ಶ್ರೀಮಾನ್ ವೆಂಕಟನಾರಾಣಪ್ಪನವರೂ ಒಪ್ಪಿ, ಅದನ್ನು ಒಬ್ಬ ನಕ್ಷೆಗಾರನ ಕೈಯಿಂದ ಬರೆಸಿ ತಂದುಕೊಟ್ಟರು. ಅದು ಪಡಿಯಚ್ಚಾಗಿ ಇಂದಿಗೂ ಉಪಯೋಗದಲ್ಲಿದೆ.'' ಸೂರ್ಯನು ಉದಯಿಸುತ್ತಿದ್ದಾನೆ, ಕಮಲಗಳು ಅರಳುತ್ತಿವೆ.

ಲೇಖನಗಳು

ಪ್ರಬುದ್ಧ ಕರ್ಣಾಟಕವು ಹುಟ್ಟಿದಾಗ ಅದು ಸಾಹಿತ್ಯ ಪತ್ರಿಕೆಯಾಗಿರಬೇಕೆಂದೂ ಮುಖ್ಯವಾಗಿ ವಿಮರ್ಶಾತ್ಮಕವಾಗಿರಬೇಕೆಂದೂ ನಿರ್ಧಾರವಾಗಿತ್ತು. ಇದನ್ನು ಮೊದಲನೆಯ ಸಂಚಿಕೆಯ ಆರಂಭ ಲೇಖನದಿಂದ ತೆಗೆದ ಮುಂದಿನ ವಾಕ್ಯಗಳು ತೋರಿಸುತ್ತವೆ :-

''ಸಾಹಿತ್ಯವು ಜನಗಳಿಗೆ ಬೇಕಿಲ್ಲವೆಂದು ನಾವು ನಂಬಲಾರೆವು; ಇದರಲ್ಲಿ ಅವರಿಗೆ ಇರುವ ಆಸಕ್ತಿಯಿಂದಲೇ ಉತ್ತಮವಾದ ಸಾಹಿತ್ಯಕ್ಕೆ ಶಾಶ್ವತವಾಗಿ ನಿಲ್ಲುವ ಸಾಮರ್ಥ್ಯ ಬಂದಿದೆ... ನಮ್ಮ ಮುಖ್ಯ ಕೆಲಸವೆಂದರೆ ಕಾವ್ಯಸೃಷ್ಟಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಡುವುದು ...ಸಾಹಿತ್ಯವನ್ನೆಲ್ಲ ತುಲನಪೂರ್ವಕವಾಗಿ ವಿಮರ್ಶೆ ಮಾಡಿ, ನಮ್ಮ ಕವಿಗಳಲ್ಲಿರುವ ಗುಣದೋಷಗಳೇನು, ಸತ್ಕಾವ್ಯದ ಲಕ್ಷಣಗಳೇನು ಎಂಬುದನ್ನು ನಿಷ್ಪಕ್ಷಪಾತ ಬುದ್ಧಿಯಿಂದ ವಿಚಾರ ಮಾಡಿ... ಒಟ್ಟಿನಲ್ಲಿ ಯಾವುದರಿಂದ ನಮ್ಮ ದೇಶವು ಉತ್ಸಾಹಗೊಂಡು ಜೀವಕಳೆಯಿಂದ ತುಂಬಬಹುದೋ ಯಾವುದರಿಂದ ಗ್ರಂಥಗಳ ರಸಾಸ್ವಾದನೆ ಮಾಡಿ ಆನಂದವನ್ನು ಪಡೆಯಬಹುದೋ, ಯಾವುದರಿಂದ ಕನ್ನಡ ಕಾವ್ಯಮಾಲೆಯು ಶ್ರೇಷ್ಠವಾದ ರೀತಿಯಲ್ಲಿ ಬೆಳೆಯಬಹುದೆಂದು ನಮಗೆ ದೃಢವಾದ ನಂಬಿಕೆಯಿದೆಯೋ ಅಂಥ ವಿಷಯಗಳನ್ನೇ ಕನ್ನಡಿಗರಿಗೆ ಕಾಣಿಕೆಯಾಗಿ ತಂದು ಒಪ್ಪಿಸುವ ಕೆಲಸವನ್ನು 'ಪ್ರಬುದ್ಧ ಕರ್ಣಾಟಕ'ಕ್ಕೆ ಒಪ್ಪಿಸಿದ್ದೇವೆ.''

ಈ ಲೇಖನಗಳು ಮುಖ್ಯವಾಗಿ ಮೂರು ಬಗೆಯವಾಗಿರಬೇಕೆಂದೂ, ಹಾಗಾದರೆ ಕಾಲಕಾಲಕ್ಕೆ ಸರಿಯಾಗಿ ಸಾಮಗ್ರಿ ಒದಗುವುದೆಂದೂ ನಾನು ನಿರ್ಧರಿಸಿದೆ; (೧) ನಾನು ಗ್ರಂಥಗಳನ್ನು ಪಾಠ ಹೇಳಿ ಮುಗಿಸಿದ ಮೇಲೆ ಮಾಡುವ ವಿಮರ್ಶಾತ್ಮಕ ಉಪನ್ಯಾಸಗಳು. (೨) ನನ್ನ ವಿದ್ಯಾರ್ಥಿಗಳು ಬರೆಯುವ ಉತ್ತಮವಾದ ಪ್ರಬಂಧಗಳು-ಅವಶ್ಯಕವಿದ್ದರೆ ಬದಲಾವಣೆ ವಿಸ್ತರಣೆಗಳೊಡನೆ. (೩) ವಿದ್ವಾಂಸರನ್ನು ಕರೆಸಿ ಸಂಘದಲ್ಲಿ ಮಾಡಿಸುವ ಆರಂಭೋಪಸಂಹಾರಾದಿ ಭಾಷಣಗಳು. ನಾನು ಇಂಟರ್‌ಮೀಡಿಯೆಟ್ ಮತ್ತು ಬಿ.ಎ. ತರಗತಿಗಳಲ್ಲಿದ್ದಾಗ ಕನ್ನಡ ಪ್ರಬಂಧ, ಕನ್ನಡ ಸಾಹಿತ್ಯ, ಇಂಗ್ಲಿಷ್ ಸಾಹಿತ್ಯಗಳಲ್ಲಿ ನನಗೆ ಆಚಾರ್ಯರಾಗಿದ್ದ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರು ನಾನು ವಿದ್ಯಾರ್ಥಿಯಾಗಿ ಬರೆಯುತ್ತಿದ್ದ ಲೇಖನಗಳನ್ನೂ ಅವುಗಳ ಭಾವಗಳನ್ನೂ ಒಪ್ಪಿ, ಹೊಗಳಿ, ಕೈತುಂಬ ಅಂಕಗಳನ್ನು ಕೊಟ್ಟು ನನ್ನನ್ನು ಪ್ರೋತ್ಸಾಹಿಸಿದ್ದರಿಂದ ನನಗೆ ಒಂದು ಧೈರ್ಯ ಬಂದುಬಿಟ್ಟಿತ್ತು. ನಾನು ಏನಾದರೂ ಬರೆಯಬಲ್ಲೆನೆಂದೂ ಅದು ಅವಿವೇಕವಾಗಿರುವುದಿಲ್ಲವೆಂದೂ, ಹತ್ತು ಜನ ಒಪ್ಪುವಂತಿರಬಹುದೆಂದೂ ನಂಬಿಕೆ ಬಂದಿತ್ತು. ನನಗೆ ಜ್ಞಾಪಕವಿರುವ ಮಟ್ಟಿಗೆ, ಪ್ರಬುದ್ಧ ಕರ್ಣಾಟಕದಲ್ಲಿ ನಾನು ಬರೆದ ಲೇಖನದ ವಿಚಾರವಾಗಿ ಮೊಟ್ಟಮೊದಲನೆಯ ಮೆಚ್ಚುಗೆಯ ಮಾತು ಬಂದದ್ದು-ಬರೆದು ಬಂದದ್ದು- ಶ್ರೀಮಾನ್ ಶ್ರೀಕಂಠಯ್ಯನವರಿಂದಲೇ. ತರುಣ ಸಂಪಾದಕನಾಗಿದ್ದಾಗ ಸಾವಿರ ರೂಪಾಯಿ ಸಂಬಳ ಕೊಟ್ಟಿದ್ದರೂ ಇಷ್ಟು ಧೈರ್ಯ ಪ್ರೋತ್ಸಾಹಗಳು ನನಗೆ ಬರುತ್ತಿರಲಿಲ್ಲ. ಹೀಗೆ ಮೊದಲನೆಯ ಸಂಚಿಕೆಯಲ್ಲಿ ಕಂಡುಬರುವ ನನ್ನ ಅಗ್ರಲೇಖನ, ನನ್ನ ವಿದ್ಯಾರ್ಥಿಗಳಾಗಿದ್ದ ಶ್ರೀಮಾನ್ ಎಸ್.ವಿ. ರಂಗಣ್ಣ, ಎನ್.ನೀಲಕಂಠಪ್ಪ ಮತ್ತು ಸಿ.ಕೆ. ವೆಂಕಟರಾಮಯ್ಯನವರ 'ಕನ್ನಡ ಸಾಹಿತ್ಯದ ಗುಣದೋಷಗಳು', 'ರವಿ ಕಾಣದುದನ್ನು ಕವಿ ಕಂಡ' ಎಂಬ ಪ್ರಬಂಧಗಳು, 'ಸಂಯುಕ್ತಾಪಹರಣ'ದ ಒಂದು ಭಾಗ, ನಾನು 'ಪೂರ್ಣಕಲಾ' ಕಾದಂಬರಿಯ ಮೇಲೆ ಬರೆದ ವಿಮರ್ಶೆ ಮತ್ತು 'ವಸ್ತುಕೋಶ' (ಸಂಪಾದಕೀಯ). 'ಕಾದಂಬರಿ' ಭಾಗವನ್ನು ಆರಂಭಿಸಿ, ಅದರಲ್ಲಿ 'ಸಂಯುಕ್ತಾಪಹರಣ'ವನ್ನು ಪ್ರಕಟಿಸಲು ಮೊದಲುಮಾಡುವುದರ ಉದ್ದೇಶ ಇದು- ಅದುವರೆಗೆ ಪ್ರಕಟವಾದ ಕನ್ನಡ ಕಾದಂಬರಿಗಳು 'ಕರ್ಣಾಟಕ ಗ್ರಂಥಮಾಲೆ'ಯಲ್ಲಿ ಬಂದು ಆ ಪತ್ರಿಕೆ ನಿಂತುಹೋದ ಪ್ರಾಯವಾಗಿತ್ತು. ಕಥೆ ಎಲ್ಲಾ ಕಾಲದಲ್ಲೂ ಎಲ್ಲರಿಗೂ ಪ್ರಿಯವಾದದ್ದು. (ಅದು ಇದ್ದರೆ ಪುಟ ತುಂಬುದಕ್ಕೂ

ಅನುಕೂಲ!) ಎಲ್ಲಕ್ಕೂ ಮೇಲಾಗಿ ಒಬ್ಬ ಕಾಲೇಜು ವಿದ್ಯಾರ್ಥಿ ಒಂದು ಸ್ವತಂತ್ರ ಕಾದಂಬರಿಯನ್ನು ಚೆನ್ನಾಗಿ ಬರೆದಿರುವಾಗ ಅದನ್ನು ಪ್ರಕಾಶಕ್ಕೆ ತರುವುದು ನಮ್ಮ ಕರ್ತವ್ಯ''.

ಪತ್ರಿಕೆಗಳಿಗೆ ಲೇಖನಗಳನ್ನು ಒದಗಿಸಿಕೊಳ್ಳುವುದು ಬಹು ಕಷ್ಟ; ಆ ಕಷ್ಟವನ್ನು ಬಲ್ಲವರೇ ಬಲ್ಲರು. ಮದುವೆ ಮಾಡಿನೋಡು, ಮನೆ ಕಟ್ಟಿ ನೋಡು ಎಂಬ ಗಾದೆಗೆ ಪತ್ರಿಕೆ ನಡೆಸಿ ನೋಡು ಎಂದು ಮೂರನೆಯ ವಾಕ್ಯವೊಂದನ್ನು ಸೇರಿಸಬೇಕೆಂದು ತೋರುತ್ತದೆ; ಆದ್ದರಿಂದ ನಾನು ಇಂಥ ಒಂದು ಪತ್ರಿಕೆಯನ್ನು ಆರಂಭಿಸಬೇಕೆಂದಿದ್ದೇನೆ ಎಂದು ಶ್ರೀಮಾನ್ ಮಾಸ್ತಿ ವೆಂಕಟೇಶಯ್ಯಂಗಾರ್ಯರೊಡನೆ ಪ್ರಸ್ತಾಪಿಸಿದಾಗ, ಅದರ ಕಷ್ಟ ನಿಷ್ಠುರಗಳನ್ನು ಬಲ್ಲ ಅವರು, ''ಸ್ವಲ್ಪ ನಿಧಾನ ಯೋಚಿಸಿ ಮಾಡುವುದು ಒಳ್ಳೆಯದು'' ಎಂದರು. ಆದರೆ ಅಷ್ಟು ಹೊತ್ತಿಗಾಗಲೇ ನಾನು ಹಿಮ್ಮೆಟ್ಟಲಾರದಷ್ಟು ಮುಂದುವರಿದಿದ್ದೆ. ಅವರಿಗೂ ಸೆಂಟ್ರಲ್ ಕಾಲೇಜಿನಲ್ಲಿ ಆದುವರೆಗೆ ಸಿದ್ಧವಾಗಿದ್ದ ಪಾಕದ ಪರಿಚಯವಿರಲಿಲ್ಲ. ಅಂತು ಪತ್ರಿಕೆಯೇನೋ ಹೊರಟು ಬಿಟ್ಟಿತು. ಮೈಸೂರಿಗೆ ಅದರ ಮೊದಲನೆಯ ಸಂಚಿಕೆಯನ್ನು ತಂದು ನನ್ನ ಗುರುಗಳೂ ಆಗ ಕಾಲೇಜಿನ ಮುಖ್ಯೋಪಾಧ್ಯಾಯರೂ ಆಗಿದ್ದ ಶ್ರೀಮಾನ್ ಎನ್.ಎಸ್. ಸುಬ್ಬರಾಯರಿಗೆ ಅದರ ಒಂದು ಪ್ರತಿಯನ್ನು ಕೊಟ್ಟು ಅವರ ಆಶೀರ್ವಾದ ಬೇಡಿದೆ. ಅವರು ತಟ್ಟನೆ ''ಏನು ಕೃಷ್ಣಶಾಸ್ತ್ರಿ! ಸಾಹಿತ್ಯ ಪರಿಷತ್ತಿನ ಕೈಯಲ್ಲಿ ಒಂದು ಒಳ್ಳೆಯ ಪತ್ರಿಕೆಯನ್ನು ನಡೆಸುವುದಕ್ಕಾಗಿಲ್ಲ. ನಿನ್ನ ಕೈಯಲ್ಲಾಗುತ್ತದೆಯೇ?'' ಎಂದರು. ನನಗೆ ನಿರುತ್ಸಾಹವೇನೋ ಆಯಿತು. ಆದರೆ ಅದನ್ನು ತೋರ್ಪಡಿಸಿಕೊಳ್ಳದೆ ''ಏನೋ ಸ್ವಾಮಿ! ಆರಂಭ ಮಾಡಿಬಿಟ್ಟಿದ್ದೇನೆ, ನನ್ನ ಕೈಲಾದ ಮಟ್ಟಿಗೆ ಚೆನ್ನಾಗಿ ನಡೆಸಿಕೊಂಡು ಹೋಗಬೇಕೆಂದಿದ್ದೇನೆ'' ಎಂದು ವಿನಯದಿಂದ ಉತ್ತರ ಕೊಟ್ಟೆ. ಇದಕ್ಕೆಲ್ಲಾ ಹಿಂದೆ ಇದ್ದದ್ದು ಒಂದು ಒರಟು ಧೈರ್ಯ-ನನ್ನ ವಿದ್ಯಾರ್ಥಿಗಳು ನನಗೆ ನೆರವಾಗುವರು; ಮೊದಲಿನಿಂದ ಕೊನೆಯವರೆಗೆ ನಲವತ್ತು ಪುಟದಷ್ಟನ್ನು ಬರೆದು ಮುಗಿಸಿ, ಚಂದಾದಾರರನ್ನು ಸಂಪಾದಿಸಿ ಅದರ ಖರ್ಚನ್ನು ಎಬ್ಬಿಸುವುದು ಸಾಧ್ಯ ಎಂಬ ಧೈರ್ಯ, ನಿರ್ವಂಚನೆಯಿಂದ ಮಾಡಿದ ಒಳ್ಳೆಯ ಕೆಲಸಕ್ಕೆ ಬೆಂಬಲ ದೊರೆತೇ ದೊರಕುವುದೆಂಬ ಧೈರ್ಯ. ಅದನ್ನು ಮೊದಲನೆಯ ಲೇಖನದ ಕೊನೆಯಲ್ಲಿ ಕಂಡುಬರುವ ಈ ವಾಕ್ಯಗಳಲ್ಲಿ ನೋಡಬಹುದು :-

''ನಮ್ಮಲ್ಲಿ ಬೆಳ್ಳಿಯಿಲ್ಲ, ಬಂಗಾರವಿಲ್ಲ; ಆದರೆ ಯಾವುದು ಇದೆಯೋ ಅದನ್ನು ನಿರ್ವಂಚನೆಯಿಂದಾಗಿ ಕೊಡುತ್ತೇವೆ. ನಾವು ಮಾಡತಕ್ಕ ಕೆಲಸವನ್ನು ನಾವು ದೃಢದಿಂದಲೂ ನಿರ್ವಂಚನೆಯಿಂದಲೂ ಮಾಡಿದರೆ ಸರಸ್ವತಿಯೂ ಲಕ್ಷ್ಮಿಯೂ ತಾವಾಗಿ ಸಹಾಯಕ್ಕೆ ಬಂದು ನಿಲ್ಲುವರೆಂದು ನಮಗೆ ಧೈರ್ಯವಿದೆ.''

ಇಂದಿಗೂ 'ಪ್ರಬುದ್ಧ ಕರ್ಣಾಟಕ'ಕ್ಕೆ ಬೆಳ್ಳಿ ಇಲ್ಲ, ಬಂಗಾರವಿಲ್ಲ. ಅದರ ಲೇಖಕರಿಗೆ ಇದು ಇಷ್ಟು ದಿನವಾದರೂ ಒಂದು ಬಿಡಿಗಾಸನ್ನೂ ಸಂಭಾವನೆಯನ್ನಾಗಿ ಕೊಟ್ಟಿಲ್ಲ. ಸಂಭಾವನೆಯನ್ನು ಕೊಟ್ಟು ನೋಡೋಣವೆಂಬ ಸಲಹೆ ಒಂದೆರಡು ಸಲ ಬಂದಿತ್ತು; ಇದರಿಂದ ಪರಿಸ್ಥಿತಿ ಉತ್ತಮವಾಗದೆ ಬೇಡವಾದ ಲೇಖನಗಳೂ ಬಂದು ತುಂಬಿಕೊಂಡು ಅನಾವಶ್ಯಕವಾದ ವೈಮನಸ್ಯಗಳು ಉಂಟಾಗುವುದೇ ಸಂಭವವಾಗಿದ್ದದ್ದರಿಂದ ಆ ಯೋಚನೆಯನ್ನು ಬಿಟ್ಟಿದ್ದಾಯಿತು. ನಾವು ಕೊಟ್ಟರೆ ತಾನೇ ಅವರಿಗೆ ಎಷ್ಟು ಕೊಟ್ಟೇವು? ಅಭಿಮಾನದಿಂದ ಬರೆಯುವವರು ದುಡ್ಡಿಗೆ ಬರೆದಾರೆ? ಅದರಿಂದ ಅವರ ಹೊಟ್ಟೆ ತುಂಬೀತೇ? ನಮ್ಮ ದೇಶದಲ್ಲಿ ಆ ಕಾಲ ಎಂದಿಗೆ ಬಂದೀತೋ! ಪ್ರಬುದ್ಧ ಕರ್ಣಾಟಕಕ್ಕೆ ಲೇಖನಗಳನ್ನು ಬರೆದುಕೊಟ್ಟ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರು, ಮಾಸ್ತಿ ವೆಂಕಟೇಶಯ್ಯಂಗಾರ್ಯರು, ಡಿ.ವಿ.ಗುಂಡಪ್ಪನವರು ಇಂಥವರು ಅಭಿಮಾನದಿಂದ ಬರೆದಿರುವ ಲೇಖನಗಳನ್ನೂ ಕೊಟ್ಟಿರುವ ಗ್ರಂಥಗಳನ್ನೂ ಎಷ್ಟು ದುಡ್ಡು ಕೊಟ್ಟರೆ ತಾನೇ ಬರೆದುಕೊಡುತ್ತಿದ್ದರು? ದುಡ್ಡಿಗೆ ದೊರಕುವುದು 'ಬಜಾರಿ ಮಾಲು!' ಈ ಅಭಿಮಾನಕ್ಕೆ ಸರಿದೂಗುತ್ತಿದ್ದ ಮತ್ತೊಂದು ಶಕ್ತಿ ಎಂದರೆ ಶ್ರೀಮಾನ್ ವೆಂಕಣ್ಣಯ್ಯನವರ ಸ್ನೇಹ ಮತ್ತು ಕಾರ್ಯಸಾಧನ

ಶಕ್ತಿ. ಅವರು ಒಂದೊಂದು ಲೇಖನಕ್ಕೆ, ಅವಶ್ಯಕತೆ ಬಿದ್ದರೆ, ತಿಂಗಳುಗಟ್ಟಲೆ ಒಬ್ಬೊಬ್ಬರನ್ನು ವ್ಯವಸಾಯ ಮಾಡಿ, ಅವರಲ್ಲಿ ಕಾಫಿ ಕುಡಿದು, ತಿಂಡಿ ತಿಂದು, ನಕ್ಷತ್ರಿಕನಂತೆ ಬೆನ್ನು ಹತ್ತಿ ಆದರ ಅವನಂತೆ ಕಾಡಿಸದೆ, ಭಗೀರಥನಂತೆ ಹಟತೊಟ್ಟು ಮೆಚ್ಚಿಸಿ ಗಂಗೆಯನ್ನು ಸಾಧಿಸುತ್ತಿದ್ದರು. ಈ ಸಂದರ್ಭದಲ್ಲಿ ವಿನೋದಕರವಾದ ಒಂದು ಸಣ್ಣ ಅಂಶ ಜ್ಞಾಪಕಕ್ಕೆ ಬರುತ್ತವೆ. ಶ್ರೀಮಾನ್ ಮಾಸ್ತಿ ವೆಂಕಟೇಶಯ್ಯಂಗಾರ್ಯರು ತಮ್ಮ 'ರಂಗಪ್ಪನ ಮದುವೆ'ಯನ್ನು 'ಮಧುರವಾಣಿ' ಪತ್ರಿಕೆಯಲ್ಲಿ ಅಚ್ಚು ಹಾಕಿಸಿದ್ದರು. ಅದರ ಸಂಪಾದಕರಾದ ಶ್ರೀಮಾನ್ ಹನುಮದಾಸರು ನನಗೂ ತುಂಬ ಬೇಕಾದವರು. ಆದ್ದರಿಂದ ಅವರ ಮಧುರವಾಣಿ ನನಗೆ ಬರುತ್ತಿತ್ತು; ನಾನು ಮೈಸೂರಿಗೆ ವರ್ಗವಾಗಿ ಬಂದ ಕೂಡಲೇ 'ರಂಗಪ್ಪನ ಮದುವೆ'ಯನ್ನು ಓದಿ ಅದರಲ್ಲಿದ್ದ ಅಪೂರ್ವವಾದ ನವೀನತೆಯನ್ನು ನೋಡಿ, ಕುತೂಹಲವನ್ನು ತಡೆಯಲಾರದೆ ಅದರ ಲೇಖಕರು ಯಾರೆಂದು ಹೋಗಿ ಕೇಳಿದೆ. ಅವರು ''ಇದು ಗುಟ್ಟು; ಯಾರಿಗೂ ಹೇಳುವುದಿಲ್ಲವೆಂದು ಮಾತು ಕೊಟ್ಟಿದ್ದೇನೆ; ಆದರೆ ನಿಮಗೆ ಹೇಳಿಬಿಡುತ್ತೇನೆ; ಅದರಲ್ಲಿ ಬಾಧಕವಿಲ್ಲ; ನೀವು ಯಾರಿಗೂ ಹೇಳಬೇಡಿ! ಎಂದು ಗುಟ್ಟನ್ನು ಬಿಟ್ಟುಕೊಟ್ಟರು. ನಾನು ಯಾವ ಗುಟ್ಟನ್ನೂ ವೆಂಕಣ್ಣಯ್ಯನವರಿಂದ ಮುಚ್ಚಿಟ್ಟುಕೊಳ್ಳುತ್ತಿರಲಿಲ್ಲ; ಅಲ್ಲದೆ ಪತ್ರಿಕೆಯ ಯೋಗಕ್ಷೇಮ ಇಬ್ಬರದೂ ಆಗಿತ್ತು; ಆದ್ದರಿಂದ ಅವರಿಗೆ ಈ ವಿಷಯ ತಿಳಿಸಿ, ಹೇಗಾದರೂ ಮಾಡಿ ವೆಂಕಟೇಶಯ್ಯಂಗಾರ್ಯರಿಂದ ಒಂದು ಕಥೆ ಸಂಪಾದಿಸಬೇಕೆಂದು ಹೇಳಿದೆ. ವೆಂಕಣ್ಣಯ್ಯನವರಿಗೂ ವೆಂಕಟೇಶಯ್ಯಂಗಾರ್ಯರಿಗೂ ಆಗತಾನೇ ಪರಿಚಯವಾಗಿತ್ತೋ ಇನ್ನೂ ಇಲ್ಲವೋ! ನನಗೆ ಹಳೆ ಪರಿಚಯವಾಗಿದ್ದರೂ ಗುಟ್ಟು ರಟ್ಟು ಮಾಡಿದ ಅಪರಾಧಕ್ಕೆ ಹನುಮದಾಸರನ್ನು ಗುರಿ ಮಾಡುತ್ತಿದ್ದದ್ದರಿಂದ ನಾನು ಪ್ರವೇಶಿಸದೆ ವೆಂಕಣ್ಣಯ್ಯನವರನ್ನು ಮುಂದೆ ಬಿಟ್ಟೆ; ಅವರು, ಆಗ ಪ್ರಾಯಶಃ ಚಿಕ್ಕಮಗಳೂರಿನಲ್ಲಿ ಸಬ್‌ಡಿವಿಷನ್ ಆಫೀಸರಾಗಿದ್ದ ವೆಂಕಟೇಶಯ್ಯಂಗಾರ್ಯರಿಗೆ ಒಂದು ಕಥೆ ಬರೆದುಕೊಡಬೇಕೆಂದು ಬರೆದರು; ಅದು ತಮಗೆ ಆಗದ ಕೆಲಸವೆಂದು ಉತ್ತರ ಬಂದುಬಿಟ್ಟಿತು. ಆದರೂ ಅದು ವೆಂಕಟೇಶಯ್ಯಂಗಾರ್ಯರಿಗೆ ತಪ್ಪಲಿಲ್ಲ; ವೆಂಕಣ್ಣಯ್ಯನವರು ಅವರನ್ನು ಬಿಡಲಿಲ್ಲ, ಅವರಿಂದ ಮುಂದೆ 'ಬಾದಷಹನ ದಂಡನೆ' ಬಂತು (III-೪) ಸಾಹಿತ್ಯೋಪನ್ಯಾಸಗಳು ನಡೆದುವು. ಅವರು ಸಂಘದಲ್ಲಿ ಸೇರಿಹೋದರು. ಪ್ರಾಯಶಃ 'ತಾವರೆ' ಒಂದು ಹೊರತು ಶ್ರೀಮಾನ್ ವೆಂಕಟೇಶಯ್ಯಂಗಾರ್ಯರು ಪ್ರಬುದ್ಧ ಕರ್ಣಾಟಕಕ್ಕೆ ಬರೆದಿರುವ ಲೇಖನಗಳೆಲ್ಲಾ ವೆಂಕಣ್ಣಯ್ಯನವರ ಪ್ರಯತ್ನದಿಂದಲೇ ಸಂಪಾದಿಸಿ ಬಂದುವು! ಇಂಥ ಜನ, ಇಂಥ ಲೇಖನ, ದುಡ್ಡಿಗೆ ದೊರೆತೀತೇ?

> **''ಬೆಲೆಯಿಂದಕ್ಕುಮೆ ಕೃತಿ ಗಾ**
> **ವಿಲ ಭುವನದ ಭಾಗ್ಯದಿಂದಮಕ್ಕುಂ ನೋಳ್ಪಂ।**
> **ಬೆಲೆಗೊಟ್ಟು ತಾರ ಮಧುವಂ**
> **ಮಲಯಾನಿಲಂ ಮನೋಜನಂ ಕೌಮುದಿಯಂ॥''** **-ನೇಮಿಚಂದ್ರ**

(ಇಂಗ್ಲಿಷ್ ಗೀತೆಗಳು) ಗದಾಯುದ್ಧ ನಾಟಕ, ಅಶ್ವತ್ಥಾಮನ್, ಪಾರಸಿಕರು, (ವಸಂತ ಕುಸುಮಾಂಜಲಿ, ನಿವೇದನ), ಉಮರನ ಒಸಗೆ (ತಾವರೆ) ಸುಬ್ಬಣ್ಣ, ಮೈಸೂರು ದೇಶದ ವಾಸ್ತುಶಿಲ್ಪ, ಕೆಲವು ಕನ್ನಡ ಕವಿಗಳ ಜೀವನ ಕಾಲವಿಚಾರ, ನಾಗರಿಕ ಮುಂತಾದ ಗ್ರಂಥಗಳೆಲ್ಲಾ ಹೀಗೆಯೇ ಬಂದು ಪ್ರಬುದ್ಧ ಕರ್ಣಾಟಕವನ್ನು ಪುಷ್ಟಿಗೊಳಿಸಿ, ಕರ್ಣಾಟಕ ಸಂಘದ ಭಂಡಾರವನ್ನು ಬೆಳೆಸಿದುವು. ಬರವಣಿಗೆ ಬರೆಯಬಲ್ಲ ಕೀರ್ತಿಕಾಮಿಗಳಾದ ಕೆಲವರು, ಕನ್ನಡದಲ್ಲಿ ಏಕೆ ಬರೆಯಬೇಕು. ಬರೆದರೆ ಯಾರು ನೋಡುತ್ತಾರೆ, ನಮಗೆ ಏನು ಬರುತ್ತದೆ? ಎಂದು ಇಂದಿಗೂ ಮೂಗು ಮುರಿಯುತ್ತಾರೆ. ಇದು ''ನಮ್ಮ ಬಡ ತಾಯಿತಂದೆಗಳ, ಮಕ್ಕಳು ಮರಿಗಳ ಹೊಟ್ಟೆ ತುಂಬಿಸುವುದರಲ್ಲೇ ನಮ್ಮ ಐಶ್ವರ್ಯವನ್ನು ಕಳೆದರೆ ನಮಗೆ ಬಿರುದು

ಬಾವಲಿಗಳು ಬರುವುದು ಹೇಗೆ?'' ಎಂದು ಕೇಳಿದಂತಾಗುತ್ತದೆ. ಅಂಥವರ ಮಾತು ಬೇಡ.'' ಬಂಗಾಳಿ, ಮರಾಠಿ ಮುಂತಾದ ಭಾಷೆಗಳು ಇಂಥವರಿಂದಲ್ಲ ಮುಂದೆ ಬಂದಿರುವುದು.

ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘವು, ಕೇವಲ ಆ ಕಾಲೇಜಿನ ವಿದ್ಯಾರ್ಥಿಗಳದೇ ಎಂಬ ಭಾವನೆ ಮೊದಲಿನಿಂದಲೂ ಬರಲಿಲ್ಲ. ಇದಕ್ಕೆ ಬಹಳ ಮಟ್ಟಿಗೆ ವೆಂಕಣ್ಣಯ್ಯನವರ ಸ್ನೇಹಪೂರ್ಣವಾದ, ಉದಾರವಾದ ನೀತಿಯೇ ಕಾರಣ; ಮುಂದಕ್ಕೂ ಈ ಸಂಪ್ರದಾಯವೇ ನಡೆದುಕೊಂಡು ಬಂತು; ಸಂಘದ ಉಪನ್ಯಾಸ ಉತ್ಸವಗಳೆಂದರೆ ಬೆಂಗಳೂರಿನ ಮಹಾಜನ ಪ್ರಮುಖರನೇಕರಿಗೆ ಆಹ್ವಾನ ಹೋಗುತ್ತಿತ್ತು; ಅವರೂ ಅವುಗಳಲ್ಲಿ ಭಾಗಿಗಳಾಗುತ್ತಿದ್ದರು. ಹೀಗೆ ಪ್ರಬುದ್ಧ ಕರ್ನಾಟಕವೂ ಬಹುಬೇಗ ಮೈಸೂರಿನ ಮಹಾಜನಗಳದ್ದಾಯಿತು; ಅನಂತರ ಕರ್ನಾಟಕದ ಮಹಾಜನಗಳದ್ದಾಯಿತು. ಈಗ ಅದಕ್ಕೆ ಎಲ್ಲಾ ಕಡೆಯಿಂದಲೂ ಲೇಖನಗಳು ಬರುತ್ತಿವೆ; ವಿದ್ಯಾರ್ಥಿಗಳ ಲೇಖನಗಳಿಗಿಂತ ವಿದ್ವಾಂಸರ ಲೇಖನಗಳೇ ಹೆಚ್ಚಾಗಿ ಪ್ರಕಟವಾಗುತ್ತಿವೆ.

ಮೊದಲಿನ ಎರಡು ವರ್ಷ 'ನಾನು ಮತ್ತು ಕಣ್ಣಿನ ಬೊಂಬೆ' ಎಂಬಂತೆ ಪತ್ರಿಕೆಯಲ್ಲಿ ನನ್ನ ಮತ್ತು ಶಿಷ್ಯರ ಲೇಖನಗಳೇ ಬಂದುವು; ಬರಿಯ ಗದ್ಯ ಲೇಖನಗಳೇ ಬಂದುವು. ಆಮೇಲೆ ಪದ್ಯ ಬಂತು; ಪ್ರಚಲಿತ ರಾಜಕೀಯ ವಿಚಾರ ಒಂದು ಹೊರತು ಮಿಕ್ಕ ವಿಷಯಗಳ ಮೇಲಣ ಲೇಖನಗಳೆಲ್ಲವೂ ಬಂದುವು.

ಪ್ರಬುದ್ಧ ಕರ್ನಾಟಕದ ಲೇಖನಗಳು ಪುಡಿಪುಡಿಯಾಗಿಬಾರದೆಂದೂ, ಸಾರವತ್ತಾಗಿ ನಾಲ್ಕು ಕಾಲ ನಿಲ್ಲುವಂತಿರಬೇಕೆಂದೂ, ಸಾಧ್ಯವಾದರೆ ಕೆಲವು ಸಂಚಿಕೆಗಳಲ್ಲಿ ಬಂದ ಲೇಖನಗಳನ್ನು ಸೇರಿಸಿ ಅಚ್ಚುಕಟ್ಟಾದ ಒಂದು ಪುಸ್ತಕ ಮಾಡುವಂತಿರಬೇಕೆಂದೂ ನಿರ್ಧರಿಸಿದ್ದೆವು. ಕರ್ನಾಟಕ ಸಂಘವು ಪ್ರಕಟಿಸಿದ ಅನೇಕ ಗ್ರಂಥಗಳು ಇಂಥವು. ಇವಲ್ಲದೆ, ಆಗಾಗ್ಗೆ ಸಂಘವು ಉಳಿತಾಯದ ಹಣದಿಂದ ಸ್ವತಂತ್ರ ಗ್ರಂಥಗಳನ್ನು ಪ್ರಕಟಿಸಿ ಅವನ್ನು ಪ್ರಬುದ್ಧ ಕರ್ನಾಟಕದ ಚಂದಾದಾರರಿಗೆ ಉಚಿತವಾಗಿ ಹಂಚಿತು.

ಪತ್ರಿಕೆ ಆರಂಭವಾದಾಗ ಅದರಲ್ಲಿ ಚಿತ್ರಗಳನ್ನು ಹಾಕುವ ಯೋಜನೆಯಿರಲಿಲ್ಲ. ಆ ಭಾಗ ಹುಟ್ಟಿದ್ದು ಮೈಸೂರು ಶಾಸನದ ಇಲಾಖೆಯಲ್ಲಿ ಶಿಲ್ಪವಿದ್ಯಾಸಹಾಯಕರಾಗಿ ಈಗ ವಿಶ್ರಾಂತವಾಗಿರುವ ನನ್ನ ಮಿತ್ರರು ಶ್ರೀಮಾನ್ ಬಿ.ವೆಂಕೋಬರಾವ್, ಬಿ.ಎ. ಅವರ 'ವಾಸ್ತುಶಿಲ್ಪ'ದಿಂದ. ಅನಂತರ ಅದು ಶಾಖೋಪಶಾಖೆಗಳಾಗಿ ಬೆಳೆಯಿತು.

ಈ ವಿಭಾಗವನ್ನು ಮುಗಿಸುವುದಕ್ಕಿಂತ ಮುಂಚೆ, ಸಂಪಾದಕನಾಗಿ ನಾನು ಲೇಖನಗಳನ್ನು ಆರಿಸಿಕೊಳ್ಳುವುದರಲ್ಲಿಯೂ ಅವುಗಳಿಗೆ ರೂಪುಗೊಡುವುದರಲ್ಲಿಯೂ ನಿಷ್ಠುರವಾಗಿ ವ್ಯವಹರಿಸಿದ ಬಗ್ಗೆ ಒಂದು ಮಾತು ಬರೆಯುವುದು ಅವಶ್ಯಕ. ಈ ನಿಷ್ಠುರತೆಗಾಗಿ ನಾನು ಎಷ್ಟೋ ದುರ್ಜನನಾಗಿದ್ದೇನೆ; ದೂರಿಗೆ ಒಳಗಾಗಿದ್ದೇನೆ; ಆದರೆ ಎಂದೂ, ಇಂದಿಗೂ ಕೂಡ, ಪಶ್ಚಾತ್ತಾಪ ಪಟ್ಟಿಲ್ಲ. ಹುರುಳಿಲ್ಲದ ಲೇಖನಗಳನ್ನು ತಿರಸ್ಕರಿಸಿ ಹಿಂದಕ್ಕೆ ಕಳುಹಿಸುವ ಅಪ್ರಿಯವಾದ ಕೆಲಸವನ್ನು ನಾನು ನಿರ್ದಾಕ್ಷಿಣ್ಯವಾಗಿ ಮಾಡಿದ್ದೇನೆ. ''ಕಾವ್ಯಗಳನ್ನು ನಮ್ಮದು ತಮ್ಮದೆಂಬ ಒಂದು ಸುಳ್ಳು ಅಭಿಮಾನವನ್ನಾಗಲಿ, ಕನ್ನಡ ಕಾಡುಭಾಷೆ ಎಂಬ ಒಂದು ಕೀಳು ಬುದ್ಧಿಯನ್ನಾಗಲಿ ಇಟ್ಟುಕೊಳ್ಳದೆ, ನಿರ್ದಾಕ್ಷಿಣ್ಯವಾಗಿಯೂ ನಿಷ್ಪಕ್ಷಪಾತವಾಗಿಯೂ ವಿಚಾರ ಮಾಡಿ. ದೋಷಗಳನ್ನು ಕಿತ್ತು ಒಗೆದು ಗುಣಗಳನ್ನು ಗ್ರಹಿಸಿ, ಒಂದು ಕಡೆ ವಿಮರ್ಶೆಯನ್ನೂ ಮತ್ತೊಂದು ಕಡೆ ರಚನೆಯನ್ನೂ ಮಾಡಬೇಕೆಂಬುದು ನಮ್ಮ ಉದ್ದೇಶ.'' (ಸಂಚಿಕೆ೭, ಪುಟ೪) ಹಳೆಯದಕ್ಕೂ ಅದೇ ಸೂತ್ರ, ಹೊಸದಕ್ಕೂ ಅದೇ ಸೂತ್ರ. ಸಾಹಿತ್ಯದ ಮಟ್ಟ ಏರಬೇಕು. ಅಭಿರುಚಿಯ ಗುಣ ಉತ್ತಮಗೊಳ್ಳಬೇಕು. ಪತ್ರಿಕೆಗೆ ಗೌರವ ಬರಬೇಕು– ಇದು ನನ್ನ ಉದ್ದೇಶ. ಆದ್ದರಿಂದ ಹುಡುಗರ ಮಾತು ಹಾಗಿರಲಿ ದೊಡ್ಡವರಿಂದ ಬಂದ ಲೇಖನಗಳನ್ನೂ ಎಷ್ಟೋ ಸಾರಿ ಹಿಂತಿರುಗಿಸಿ, ತಿದ್ದಿ, ತಿದ್ದುಹೋಗಿ, ಬೈಗಳನ್ನು ತಿಂದಿದ್ದೇನೆ. ಇವರ ವಿವೇಕವನ್ನು ಒಪ್ಪಿದ ಒಬ್ಬ ಹಿರಿಯ ಮಿತ್ರರು (ನಾನು ಅವರಿಗೆ ಮಾಡಿದ ಈ ವಿಧವಾದ ತೇಜೋವಧೆಗಾಗಿ) ಇಂದಿಗೂ ನನ್ನನ್ನು ಪ್ರಶಂಸಿಸುತ್ತಿದ್ದಾರೆ. ಒಂದು ಸಾರಿ, ಮೊದಲನೆಯ ಪುಟದಲ್ಲಿ ಹಾಕುತ್ತಿದ್ದ 'ಪ್ರಾರ್ಥನೆ'ಯು

ಪದ್ಯ ಬೇಕಾಯಿತು. ಅವರನ್ನು ಕೇಳಿಕೊಂಡೆ. ನನಗೆ ಇಲ್ಲವೆನ್ನಲಾರದೆ, ಇದ್ದಷ್ಟು ಕಾವಿನಲ್ಲೇ-ಪ್ರಾಯಶಃ ಇಲ್ಲದ ಸ್ಫೂರ್ತಿಯನ್ನು ಒದಗಿಸಿಕೊಂಡು-ಒಂದು ಪದ್ಯ ಬರೆದುಕೊಟ್ಟರು. ಅದು ಎಂದಿನಂತೆ ಸರಳವಾಗಿ ಬರಲಿಲ್ಲ. ಅದನ್ನು ಅವರೇ ಅರಿತು ಕೆಲವು ಮಾತುಗಳಿಗೆ ಅಡಿಟಿಪ್ಪಣಿಯಲ್ಲಿ ಅರ್ಥ ಬರೆದಿದ್ದರು. ನನಗೆ ಅದು ಒಪ್ಪಿಗೆಯಾಗದೆ, ಪದ್ಯವನ್ನು ತೆಗೆದುಕೊಂಡು ಹೋಗಿ ಹಿಂತಿರುಗಿ ಕೊಟ್ಟು, ''ಏನು ಸ್ವಾಮಿ, ನಿಮ್ಮಂಥವರೂ ಟೀಕೆ ಟಿಪ್ಪಣಿಗಳಿಂದ ಅರ್ಥ ಮಾಡಿಕೊಳ್ಳಬೇಕಾದ ಪದ್ಯವನ್ನು ಬರೆದುಬಿಟ್ಟರೆ ಗತಿ!'' ಎಂದೆ. ಆ ಕ್ಷಣದಲ್ಲಿ ಅವರಿಗೆ ಸ್ವಲ್ಪ-ಪ್ರಾಯಶಃ ತುಂಬ ಅಸಮಾಧಾನವಾಯಿತು. ಆದರೆ ಒಂದೆರಡು ದಿನ ಬಿಟ್ಟು ಕೊಂಡು ಬಂದು, ಅವರು, ನಾನು ಮಾಡಿದ್ದೇ ಸರಿ ಎಂದರು. ಈಚೆಗೂ ಎಷ್ಟೋ ಸಲ ಅದೇ ಮಾತನ್ನೇ ಹೇಳಿದ್ದಾರೆ. ಹೆತ್ತವರಿಗೆ ಅವರ ಮಕ್ಕಳು ಹೇಗಿದ್ದರೂ ಮುದ್ದು. ಆದರೆ ಸೃಷ್ಟಿಯಲ್ಲಿ ಕಳಪೆಗಳೂ ಜಳ್ಳುಗಳೂ ತೂರಿಹೋಗುತ್ತವೆ. ರಂಗಕ್ಕೆ ಬರಬೇಕಾದರೆ-ಯುದ್ಧರಂಗವಾಗಲಿ, ನಾಟಕರಂಗವಾಗಲಿ-ನಿಷ್ಠುರವಾದ ಆಯ್ಕೆ ನಡೆಯುತ್ತದೆ. ಆದ್ದರಿಂದ ನಾನು ಲೇಖನಗಳನ್ನು ಆಯ್ದು ಆಯ್ದು ಹಾಕುತ್ತಿದ್ದೆ. 'ಪ್ರಥಮ ಪ್ರಯತ್ನ' ವಿದ್ಯಾರ್ಥಿಯ ಅಭ್ಯಾಸ ಎಂಬ ಮಾತುಗಳಿಗೆ ಕಿವಿಗೊಡುತ್ತಿರಲಿಲ್ಲ. ಇಂಥವರಲ್ಲಿ ಯಾರಲ್ಲಾದರೂ ಯೋಗ್ಯತೆ ಇದೆ ಎಂದು ತೋರಿದರೆ, ಅವರನ್ನು ಒಂದಕ್ಕೆ ಬದಲಾಗಿ ನಾಲ್ಕು ಲೇಖನಗಳನ್ನು-ಇರುವವುಗಳಲ್ಲಿ ಉತ್ತಮವಾದವುಗಳನ್ನು-ಕಳುಹಿಸಿಕೊಡಿ ಎಂದು ಪ್ರಾರ್ಥಿಸುತ್ತಿದ್ದೆ. ಬಂದವುಗಳಲ್ಲಿ ಉತ್ತಮವಾದದ್ದನ್ನು ಆರಿಸಿಕೊಂಡು ಪ್ರಕಟಿಸುತ್ತಿದ್ದೆ. ನನ್ನ ವಿಮರ್ಶಬುದ್ಧಿ ಅಷ್ಟು ಉತ್ತಮವಲ್ಲದಿರಬಹುದು, ಅಭಿರುಚಿ ಉದಾರವಲ್ಲದಿರಬಹುದು. ಆದರೆ ಜವಾಬುದಾರಿ ನನ್ನದಾಗಿತ್ತು; ಮತ್ತು ಅನೇಕವೇಳೆ ಇತರರ ವಿಮರ್ಶೆ ವಿವೇಚನೆಗಳು ನನ್ನವಕ್ಕಿಂತ ಉತ್ತಮವಾಗಿದ್ದುವೆನ್ನಿಸುತ್ತಿರಲಿಲ್ಲ. ಒಟ್ಟಿನ ಮೇಲೆ ಲೇಖಕರು ಯಾರೂ, ನನ್ನ ಉಳಿಯ ಏಟುಗಳಿಂದ, ಕತ್ತರಿಯ ಪ್ರಯೋಗಗಳಿಂದ ತಮ್ಮ ಲೇಖನಗಳು ವಿರೂಪಗೊಂಡುವು ಎಂದು ಇದುವರಿಗೂ ಆಕ್ಷೇಪಿಸಿಲ್ಲ. ಯಾವ ಯಾವ ಲೇಖನಗಳು ಎಷ್ಟೆಷ್ಟು ಪೆಟ್ಟು ತಿಂದವು, ಎಷ್ಟೆಷ್ಟು ನೊಂದುವು ಎಂಬುದು ನನಗೆ ಮಾತ್ರ ಗೊತ್ತು. (ಅಂಥ ಕೆಲವು ಹಸ್ತಪ್ರತಿಗಳನ್ನು ಕರ್ಣಾಟಕ ಸಂಘದಲ್ಲಿ ಮಾದರಿಗಾಗಿ ಇಟ್ಟಿದ್ದೆ. ಪತ್ರಿಕಾ ಪ್ರಪಂಚಕ್ಕೆ ಸಂಬಂಧ ಪಟ್ಟಂತೆ ಒಂದು ವಿಚಿತ್ರ ಸಂಗ್ರಹ ಶಾಲೆಯನ್ನು ಏರ್ಪಡಿಸುವುದಾದರೆ ಅವನ್ನು ಅಲ್ಲಿಡಬಹುದು!) ಕಾಲಕ್ರಮದಲ್ಲಿ ತರುಣ ಲೇಖಕರು ಪ್ರಬುದ್ಧ ಕರ್ಣಾಟಕದಲ್ಲಿ ತಮ್ಮ ಲೇಖನವನ್ನು ಪ್ರಕಾಶಪಡಿಸಬೇಕೆಂದು ಅಪೇಕ್ಷಿಸುವುದೂ, ಅದರ ಸಂಪಾದಕರು ಹಾಕುತ್ತಾರೋ ಇಲ್ಲವೋ ಎಂದು ಶಂಕಿಸುವುದೂ ಹಾಕಿದರೆ ಹೆಮ್ಮೆ ಪಡುವುದೂ ಸಾಮಾನ್ಯವಾಯಿತು; ಮತ್ತು ಉಚ್ಚ ತರಗತಿಯ ಲೇಖನಗಳೇ ಅಭ್ಯಾಸವಾಗಿ, ಪ್ರಬುದ್ಧ ಕರ್ಣಾಟಕದ 'ದೊಡ್ಡಸ್ತಿಕೆ'ಯನ್ನು ದೂರುತ್ತಿದ್ದ ಜನರೇ, ಅದು ಕೀಳು ಮಟ್ಟಕ್ಕೆ ಇಳಿದರೆ ಸಪ್ಪೆಯಾಯಿತೆಂದು ಆಕ್ಷೇಪಿಸುವಂತಾದರು. ಈಗ ಇಪ್ಪತ್ತೈದು ವರ್ಷಗಳಿಂದ ಹೊಸಗನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಎಷ್ಟೋ ಉತ್ತಮವಾದ ವ್ಯವಸಾಯ ನಡೆದಿದೆ. ಪ್ರಬುದ್ಧ ಕರ್ಣಾಟಕವು, ಅದು ನಡೆಯುವಂತೆ ಸ್ವಲ್ಪವಾದರೂ ಸಾಧನವಾಗಿ ಕಾಡು ಕಡಿದು ಭೂಮಿಯನ್ನು ಉತ್ತು, ನೆಲ ಹದಮಾಡಿ, ಬೇಲಿ ಹಾಕಿ, ಅಷ್ಟೋ ಇಷ್ಟೋ ನೀರು ಬೀಜ ಗೊಬ್ಬರಗಳನ್ನು ಒದಗಿಸಿಕೊಟ್ಟಿದೆ, ಎಂದು ನಾನು ನಂಬಿದ್ದೇನೆ. ಆದರೆ ಬರಿಯ ನೆಲ ನೇಗಿಲುಗಳಿಂದ ಆಗುವುದು ಏನು? ಫಲ ತೆಗೆಯಲು 'ನೇಗಿಲ ಯೋಗಿ'ಗಳು ಬೇಕು. ಅವರನ್ನು ಆರಿಸಿ ಕಳುಹಿಸಿಕೊಡುವುದು ಭಗವಂತನ ದಯೆ, ನಾಡಿನ ಪುಣ್ಯ!

ಸಂಚಿಕೆಗಳ ಸಂಖ್ಯೆ-ಗಾತ್ರ

'ಪ್ರಬುದ್ಧ ಕರ್ಣಾಟಕ'ವು ಹೆಸರಿಗೆ ತಕ್ಕಂತೆ ವಿಚಿತ್ರ ರೀತಿಯಲ್ಲಿ, ಒಂದು ಹೊಸ ಬೆಳಕಿನಲ್ಲಿ ಕೆಲಸ ಮಾಡಬೇಕೆಂದು ನಿರ್ಧರಿಸಿತ್ತು. ವಿದ್ಯಾರ್ಥಿಗಳ ಪತ್ರಿಕೆ, ಅದರ ದೃಷ್ಟಿ ಹೊಸದು ಎನ್ನುವುದಿರಲಿ, ಅದು ಬರುವ ಕಾಲ ನಿಯಮ ಕೂಡ ಹೊಸ ರೀತಿಯದಾಗಿತ್ತು. ಯುಗಾದಿಯ ಹಬ್ಬ, ವಿನಾಯಕನ

ಹಬ್ಬ, ದೀಪಾವಳಿಯ ಹಬ್ಬ, ವರ್ಷದ ಈ ಮೂರು ದೊಡ್ಡ ಹಬ್ಬಗಳಲ್ಲಿ ಅದು ಬರಬೇಕೆಂದು ಮೊದಲು ನಿಶ್ಚಿತವಾಗಿತ್ತು. ಮೂರನೆಯ ವರ್ಷದಿಂದ ಸಂಪುಟಕ್ಕೆ ನಾಲ್ಕು ಸಂಚಿಕೆಗಳಾಗಿ, ವರ್ಷವು ವಿನಾಯಕನ ಸಂಚಿಕೆಯಿಂದ ಆರಂಭವಾಗಿ, ಈಗಿನಂತೆ ದೀಪಾವಳಿ ಸಂಕ್ರಾಂತಿ ಕಾಮನ ಹಬ್ಬಗಳಲ್ಲಿ ಬಂದರೂ ಹಬ್ಬಗಳ ಹೆಸರು ತಪ್ಪಲಿಲ್ಲ. ಮಧ್ಯೆ ಒಂದೆರಡು ಸಲ ಈ ಪತ್ರಿಕೆಯನ್ನು ಮಾಸಪತ್ರಿಕೆಯಾಗಿ ಮಾಡಬೇಕೆಂದೂ ನಾಲ್ಕು ಸಂಚಿಕೆಗಳೇ ಬಂದರೂ ಅವು ಇಂಗ್ಲಿಷ್ ತಿಂಗಳುಗಳನ್ನು ಅನುಸರಿಸಿ ಮೂರು ತಿಂಗಳಿಗೊಂದು ಸಾರಿ ಬರಬೇಕೆಂದೂ ಮುಂತಾದ ಸಲಹೆಗಳು ಬರುತ್ತಿದ್ದವು. ಹಬ್ಬಗಳ ಹೆಸರುಳ್ಳ ಈ ನವೀನತೆ ಹೋಗಬಾರದೆಂದೂ, ಮೂರು ಮೂರು ತಿಂಗಳಿಗೊಂದು ಸಾರಿಯಂತೆಯೇ ಬರಬೇಕೆಂದರೆ ಬೇಸಗೆಯ ರಜದಲ್ಲಿ ವಿದ್ಯಾರ್ಥಿಗಳ ಸಹಕಾರ ದೊರೆಯದೆ ಹೋಗುವುದೆಂದೂ, ಹೀಗೆಯೇ ಇದ್ದರೆ ಸಂಪಾದಕನಿಗೆ ಸ್ವಲ್ಪ ಉಸಿರಾಡುವುದಕ್ಕೆ ಅವಕಾಶವಾಗುವುದೆಂದೂ, ಆದ್ದರಿಂದ ಸುಮಾರು ಎಂಟು ತಿಂಗಳಲ್ಲಿ ನಾಲ್ಕು ಸಂಚಿಕೆಗಳು ಬರುವುದೇ ಉತ್ತಮವೆಂದೂ ನಿರ್ಧಾರವಾಯಿತು. ಈಗಲೂ ಹಾಗೆಯೇ ಇದೆ. ಮಾಸಪತ್ರಿಕೆಯಾಗಿ ಮಾಡಲು ಇದ್ದ ಮುಖ್ಯ ಅಡಚಣೆ-ಸಾಮಗ್ರಿಗಳನ್ನು ಕಾಲಕಾಲಕ್ಕೆ ಒದಗಿಸಿಕೊಂಡು, ಪತ್ರಿಕೆಗಳನ್ನು ಸಕಾಲಕ್ಕೆ ಹೊರಡಿಸುವುದು. ಅದಕ್ಕೆ ತಕ್ಕ ಸಿಬ್ಬಂದಿ ಎಂದೂ ಇರಲಿಲ್ಲ. ಎಷ್ಟು ಸ್ವಲ್ಪ ಪುಟಗಳನ್ನು ಕೊಟ್ಟರೂ ಉಪಯುಕ್ತವಾದ ಲೇಖನಗಳೂ ವಿಭಾಗಗಳೂ ಪೂರ್ಣವಾಗಿದ್ದು ಹನ್ನೆರಡು ಸಂಚಿಕೆಗಳನ್ನು ಕೊಡಬೇಕೆಂದರೆ ಸುಮಾರು ೧,೦೦೦ ಪುಟಗಳಾಗಬೇಕು. ಅದಕ್ಕೆ ಬೇಕಾಗುವ ದುಡ್ಡನ್ನು ನಾವು ತೆರುವ ಹಾಗಿರಲಿಲ್ಲ, ಜನ ಕೊಡುವ ಹಾಗಿರಲಿಲ್ಲ. ಆದ್ದರಿಂದ ಸಾಲಕ್ಕೆ ಸಿಕ್ಕದೆ ಬಹು ಎಚ್ಚರಿಕೆಯಿಂದ ಪತ್ರಿಕೆಯನ್ನು ಬೆಳಸಿಕೊಂಡು ಬಂದದ್ದಾಯಿತು; ಕ್ರಾಂತಿಗಿಂತ ವಿಕಾಸದಲ್ಲಿ ನನಗೆ ಹೆಚ್ಚು ನಂಬಿಕೆ; ಈ ಮಾತನ್ನೇ ನಾನು ವೆಂಕಣ್ಣಯ್ಯನವರಿಗೆ ಹೇಳಿ, ಹನ್ನೆರಡು ಸಂಚಿಕೆಗಳನ್ನು ಮಾಡಿದರೆ ಮಿಕ್ಕ ಕೆಲಸಗಳುಳ್ಳ ಸಂಪಾದಕನಿಗೆ ತುಂಬ ಕಷ್ಟವಾಗುವುದೆಂದು ವಿವರಿಸಿದೆ; ಆಮೇಲೆ ಅವರು ಅದನ್ನು ಒಪ್ಪಲಿಲ್ಲ. ಹೀಗೆ ಗಾಳಿ ಬಂದಾಗ ತೂರಿಕೊಂಡು ಸಾಮಗ್ರಿ ಒದಗಿದಾಗ ಹೆಚ್ಚು ಪುಟಗಳನ್ನು ಕೊಟ್ಟು, ಅನುಬಂಧಗಳನ್ನು ಸೇರಿಸಿ, ಗ್ರಂಥಗಳನ್ನು ಉಚಿತವಾಗಿ ಹಂಚಿ ಪ್ರಬುದ್ಧ ಕರ್ಣಾಟಕವನ್ನು ಒಂದು ಮರಕ್ಕಿಂತ ಮೆಳೆಯ ಹಾಗೆ ಬೆಳೆಸಿಕೊಂಡು ಬಂದದ್ದಾಯಿತು.

ಆದಾಯ-ವೆಚ್ಚ

ಪ್ರಬುದ್ಧ ಕರ್ಣಾಟಕವು ಕರ್ಣಾಟಕ ಸಂಘದ ಆಶ್ರಯದಲ್ಲಿ ನಡೆದಷ್ಟು ದಿವಸವೂ ಹಾಸಿಗೆ ಇದ್ದಷ್ಟೇ ಕಾಲು ಚಾಚಿಕೊಂಡೇ ಬೆಳೆದು ಬಂತು. ಆದರೆ ಅದು, ಹೀಗೆಯೇ ಮುಂದೂ, ಅದರ ಖರ್ಚನ್ನೂ ಅದು ಹುಟ್ಟಿಸಿಕೊಂಡೇ ಜೀವಿಸಬೇಕೆಂಬ ನೀತಿಯನ್ನು ವಿಶ್ವವಿದ್ಯಾನಿಲಯವು ಅನುಸರಿಸಿದ್ದರೆ ಪ್ರಬುದ್ಧ ಕರ್ಣಾಟಕವು ಇಂದು ಈ ಬೆಳವಣಿಗೆಯ ರೂಪದಲ್ಲಿರುತ್ತಿರಲಿಲ್ಲ. ಇವೊತ್ತಿಗೂ, ಒಬ್ಬ ಗುಮಾಸ್ತರಿಗೆ ತುಟ್ಟಿ ಭತ್ಯೆ ಸೇರಿ ೨೫ ರೂಪಾಯಿ ಸಂಬಳ, ಒಬ್ಬ ಆಳಿಗೆ ೧೧ ರೂಪಾಯಿ ಸಂಬಳ, ಇಷ್ಟು ಹೊರತು ಪ್ರಬುದ್ಧ ಕರ್ಣಾಟಕದ ಕೆಲಸಕ್ಕೆ ಯಾರೂ ಒಂದು ಕಾಸನ್ನು ಸಂಬಳವಾಗಿಯಾಗಲಿ ಸಂಭಾವನೆಯಾಗಿಯಾಗಲಿ ಪಡೆಯುತ್ತಿಲ್ಲ. ಆದರೂ ಪ್ರಬುದ್ಧ ಕರ್ಣಾಟಕವು ಒಟ್ಟಿನ ಮೇಲೆ ವಿಶ್ವವಿದ್ಯಾನಿಲಯಕ್ಕೆ ಈಚಿನ ವರ್ಷಗಳಲ್ಲಿ ಒಂದು ಖರ್ಚಿನ ಬಾಬೇ ಆಗಿದೆ.

ಕನ್ನಡ ಬೇಡದವರು ವಿಶ್ವವಿದ್ಯಾನಿಲಯಕ್ಕೆ ಈ ಅಲ್ಪ ಖರ್ಚು ತಾನೇ ಏಕೆ ಎಂದು ಕೇಳಿರುವುದೂ, ಬೇಕಾದವರು 'ಇಂಗ್ಲಿಷ್ ಪತ್ರಿಕೆಯ ಪಾಡೇನು? ಅದರ ಸಂಪಾದನೆ ಏನು? ವೆಚ್ಚವೇನು? ಉಪಯುಕ್ತತೆ ಏನು? ಚಂದಾದಾರರ ಸಂಖ್ಯೆಯೆಷ್ಟು?' ಎಂದು ಪ್ರತಿಪ್ರಶ್ನೆ ಹಾಕಿರುವುದೂ ಸ್ವಾಭಾವಿಕ. ಆದರೆ ಕನ್ನಡಿಗರು, ಅದರಲ್ಲಿಯೂ ವಿಶ್ವವಿದ್ಯಾನಿಲಯದ ಸುಮಾರು ೪,೦೦೦ ಕನ್ನಡ ವಿದ್ಯಾರ್ಥಿಗಳು ಇದನ್ನು ಕುರಿತು

ಯೋಚಿಸಬೇಕು. ವಿದ್ಯಾರ್ಥಿಗಳ ಸಾಹಸದಿಂದ ಆರಂಭವಾಗಿ ತಕ್ಕಮಟ್ಟಿಗೆ ಒಳ್ಳೆಯ ಕೆಲಸ ಮಾಡಿ, ತಮಗೆ ಶಿಕ್ಷಣಕ್ಷೇತ್ರವಾಗಿ, ಜನಕ್ಕೆ ಉಪಯುಕ್ತ ವಸ್ತುವಾಗಿ ೨೫ ವರ್ಷ ಉಳಿದು ಬೆಳೆದಿರುವ ಈ ಪತ್ರಿಕೆ ಇನ್ನೂ ಉಳಿದು ಬೆಳೆಯಬೇಕೇ ಬೇಡವೇ? ವಿದ್ಯಾರ್ಥಿಗಳಿಗೆ ಕಡಿಮೆ ದರದಲ್ಲಿ ಕೊಟ್ಟರೂ ಇದಕ್ಕೆ ಒಂದುನೂರು ವಿದ್ಯಾರ್ಥಿಗಳೂ ಚಂದಾದಾರರಿಲ್ಲವೆಂದು ಬಹು ವ್ಯಥೆಯಿಂದ ಇಲ್ಲಿ ಹೇಳಬೇಕಾಗಿದೆ.

ವ್ಯಾಪಾರದ ಪ್ರಕಟನೆಗಳು

ಸಾಧಾರಣವಾಗಿ ಪತ್ರಿಕೆಗಳಿಗೆ ಹಣಕಾಸಿನ ಬೆಂಬಲ ಚಂದಾಹಣಕ್ಕಿಂತಲೂ ವ್ಯಾಪಾರದ ಪ್ರಕಟನೆಗಳಿಂದಲೇ ಹೆಚ್ಚು. ಆದರೆ ಪ್ರಕಟನೆಗಳು ಬರುವುದು ಪತ್ರಿಕೆಯ ಸಂಚಿಕೆಗಳು ಹೊರಬೀಳುವ ಅಂತರ, ಅವರ ಸಂಖ್ಯೆ, ದರದ ಮಟ್ಟ ಇವುಗಳ ಮೇಲೆ ಹೋಗುತ್ತದೆ. ಆದ್ದರಿಂದ ವರ್ಷಕ್ಕೆ ನಾಲ್ಕು ಸಂಚಿಕೆಗಳು ಮಾತ್ರ ಹೊರಡುತ್ತ ಒಂದು ಸಾವಿರ ಚಂದಾದಾರರೂ ಇಲ್ಲದ ಪ್ರಬುದ್ಧ ಕರ್ಣಾಟಕಕ್ಕೆ ಪ್ರಕಟನೆಗಳು ತಾವಾಗಿ ಬರುತ್ತಿರಲಿಲ್ಲ; ಬಂದವುಗಳು ಸಂಕೋಚ ತರುವಂತೆ ಇರುತ್ತಿದ್ದದ್ದರಿಂದಲೋ, ಬಹು ಕಡಿಮೆ ದರಗಳನ್ನು ಕೊಡುವುದಕ್ಕೆ ಇಚ್ಛಿಸುತ್ತಿದ್ದದ್ದರಿಂದಲೋ ನಾವೂ ಒಪ್ಪುತ್ತಿರಲಿಲ್ಲ. ಇಲ್ಲ, ವ್ರತ ನಡೆಯಬೇಕು, ಇಲ್ಲ ಸುಖ ದೊರೆಯಬೇಕು ಎಂಬುದು ನಮ್ಮ ಆಶಯ. ಒಂದು ಸಾರಿ, ಕನ್ನಡದ ಅಭಿಮಾನಿಗಳೆಂದೂ ಇಂದಿಗೂ ಪ್ರಖ್ಯಾತರಾಗಿರುವ ಶ್ರೀಮಾನ್ ಎಸ್.ಜಿ.ಶಾಸ್ತ್ರಿಗಳನ್ನು ನಾನು ಹೋಗಿ ಕೇಳಿದೆ. ಮೂರು ಅಂಕಿಗಳಿಗೆ ಕಡಿಮೆಯಾದ ಹಣವನ್ನು ಕೊಟ್ಟರೆ ಅವರ ಪ್ರಕಟನೆ ಬೇಡವೆಂದೂ ಹೇಳಿದೆ. ಅವರೂ ಇದಕ್ಕೆ ಒಪ್ಪಿ ನಾಲ್ಕು ಸಂಚಿಕೆಗಳಿಗೆ ಒಟ್ಟು ೧೦೦ ರೂಪಾಯಿಗಳನ್ನು ಕೊಡುವುದಾಗಿ ಹೇಳಿದರು. ಮೈಸೂರು ಶ್ರೀಗಂಧದ ಸಾಬೂನಿನ ಪ್ರಕಟನೆ ರಕ್ಷಾಪತ್ರದ ನಾಲ್ಕನೆಯ ಸಂಚಿಕೆ ಬರುವ ಹೊತ್ತಿಗೆ ಪ್ರಬುದ್ಧ ಕರ್ಣಾಟಕವು ವಿಶ್ವವಿದ್ಯಾನಿಲಯದ ಪತ್ರಿಕೆಯಾದ್ದರಿಂದ ಕೆರೆಯ ನೀರನ್ನು ಕೆರೆಗೆ ಚೆಲ್ಲಿದಂತೆ ಸರ್ಕಾರದ ದುಡ್ಡನ್ನು ಸರ್ಕಾರಕ್ಕೇ ಕೊಡುವುದರಲ್ಲಿ ಅರ್ಥವಿಲ್ಲವೆಂದು ಅವರು ಅದನ್ನು ನಿಲ್ಲಿಸಿದರು; ನಾವು ಒತ್ತಾಯ ಪಡಿಸಲಿಲ್ಲ. ಕೆಲವು ವರ್ಷಗಳು ವಿನಿಮಯವಾಗಿ ಪತ್ರಿಕೆಗಳ ಪ್ರಕಟನೆಗಳು ಬಂದುವು. ಇವು ದಿನ ದಿನಕ್ಕೆ ಹೆಚ್ಚಾದ್ದರಿಂದಲೂ, ಶ್ರಮಕ್ಕೆ ತಕ್ಕ ಪ್ರಯೋಜನವೇನೂ ಕಂಡುಬಾರದ್ದರಿಂದಲೂ ಸ್ವಲ್ಪ ಕಾಲದ ಮೇಲೆ ಅವನ್ನು ನಿಲ್ಲಿಸಲಾಯಿತು.

ಸಂಪಾದಕತ್ವ

ಪತ್ರಿಕೆಯು ಆರಂಭವಾದಂದಿನಿಂದ ಹದಿಮೂರು ವರ್ಷ ನಾನೇ ಸಂಪಾದಕನಾಗಿದ್ದೆ. ಆದರೆ ಮೊದಲು ಒಂದೆರಡು ಸಂಪುಟಗಳಲ್ಲಿ ಹೊರತು ನನ್ನ ಹೆಸರು ಸಂಪಾದಕನೆಂದು ಎಲ್ಲಿಯೂ ಕಂಡು ಬರುವುದಿಲ್ಲ. ನಾನು ಸಂಪಾದಕನೆಂದು ಮ್ಯಾಜಿಸ್ಟ್ರೇಟರ ಮುಂದೆ ಹೇಳಿಕೆ ಕೊಟ್ಟಿದ್ದರೂ, ಸಂಪಾದಕರ ಮತ್ತು ಪ್ರಕಾಶಕರ ಹೆಸರನ್ನು ಹಾಕಿಯೇ ಹಾಕಬೇಕೆಂಬ ನಿರ್ಬಂಧವಿಲ್ಲದ್ದರಿಂದಲೂ ನನ್ನ ಹೆಸರಿಗಿಂತಲೂ ಸಂಘದ ಹೆಸರು ಮುಂದಕ್ಕೆ ಬರಬೇಕೆಂದು ನನ್ನ ಉದ್ದೇಶವಾಗಿದ್ದದ್ದರಿಂದಲೂ, ಲೇಖನದಲ್ಲಿ ತಿರುಳಿದ್ದರೆ ಅದರಿಂದ ಪತ್ರಿಕೆಗೆ ಹೆಸರು ಬರುತ್ತದೆಯೇ ಹೊರತು ಸಂಪಾದಕನ ಹೆಸರು ಅಧಿಕಾರ ಶ್ರೀಮಂತಿಕೆಗಳಿಂದಲ್ಲವೆಂಬ ದೃಢವಿಶ್ವಾಸವಿದ್ದದ್ದರಿಂದಲೂ ನನ್ನ ಹೆಸರನ್ನು ನಾನು ಪ್ರಕಟಿಸುತ್ತಿರಲಿಲ್ಲ. ಹೆಸರಿಲ್ಲದೆ ಅಥವಾ ಬೇರೆ ಬೇರೆ ಹೆಸರಿನಿಂದ, ನಾನು ಪ್ರಬುದ್ಧ ಕರ್ಣಾಟಕಕ್ಕೆ ಎಷ್ಟೋ ಸಣ್ಣ ದೊಡ್ಡ ಲೇಖನಗಳನ್ನು ಬರೆದಿದ್ದೇನೆ; ಆದರೆ ಜವಾಬುದಾರಿ ಹೊರಬೇಕಾದಾಗ ನನ್ನ ಹೆಸರನ್ನು ಹಾಕುವುದಕ್ಕೆ ಎಂದೂ ಹಿಂತೆಗೆದಿಲ್ಲ.

ಪ್ರಬುದ್ಧ ಕರ್ಣಾಟಕವು ಹೊರಟಾಗ ಸುಮಾರು ಒಂದುನೂರು ವಿದ್ಯಾರ್ಥಿಗಳಿಂದ ತಲಾ ಒಂದೊಂದು ರೂಪಾಯಿನಂತೆ ಚಂದಾ ಮುಂಗಡವಾಗಿ ತೆಗೆದುಕೊಂಡು ಪತ್ರಿಕೆಯನ್ನು ಅಚ್ಚಿಗೆ ಕೊಟ್ಟಾಯಿತು; ಆಗ ನನಗೆ ಮೈಸೂರು ಓರಿಯಂಟಲ್ ಲೈಬ್ರರಿಗೆ ವರ್ಗವಾಯಿತು; ಶ್ರೀಮಾನ್ ವೆಂಕಣ್ಣಯ್ಯನವರು ಬೆಂಗಳೂರು ಗೌ. ಹೈಸ್ಕೂಲಿನಿಂದ ಸೆಂಟ್ರಲ್ ಕಾಲೇಜಿಗೆ ನನ್ನ ಸ್ಥಾನಕ್ಕೆ ವರ್ಗವಾಗಿ ಬಂದರು; ಆಗ ಅವರು, ನಾನೇ ಸಂಪಾದಕನಾಗಿದ್ದುಕೊಂಡು ಮೈಸೂರಿನಿಂದಲೇ ಪತ್ರಿಕೆಯನ್ನು ಅಚ್ಚು ಮಾಡಿಸಿ ಕಳುಹಿಸಬೇಕೆಂದೂ ತಾವು ಅದರ ಆಡಳಿತವನ್ನೂ ಸಂಘದ ಕಾರ್ಯಗಳನ್ನೂ ನೋಡಿಕೊಳ್ಳುವರೆಂದೂ ಖಂಡಿತವಾಗಿ ಹೇಳಿಬಿಟ್ಟರು. ನನ್ನ ವಿದ್ಯಾರ್ಥಿಗಳಿಂದ ಮುಂಗಡವಾಗಿ ಚಂದಾ ಹಣ ತೆಗೆದುಕೊಂಡು ಒಂದು ಸಂಚಿಕೆಯನ್ನು ಮಾತ್ರ ಕೊಟ್ಟಿದ್ದರಿಂದ ಮಿಕ್ಕ ಎರಡು ಸಂಚಿಕೆಗಳನ್ನು ನಾನು ಎಲ್ಲಿದ್ದರೂ ಪ್ರಕಟಿಸಿ ಕಳುಹಿಸುವೆನೆಂದೂ ಮುಂದಿನ ವರ್ಷದ ವಿಚಾರವನ್ನು ನಿಧಾನವಾಗಿ ಯೋಚಿಸಬಹುದೆಂದೂ ಹೇಳಿ ಮೂರು ತಿಂಗಳಿನ ಪ್ರಬುದ್ಧ ಕರ್ಣಾಟಕವನ್ನು ಮೈಸೂರಿಗೆ ಎತ್ತಿಕೊಂಡು ಬಂದೆ. ಮೊದಲನೆಯ ಸಂಚಿಕೆ, ಆಗತಾನೇ ಸ್ಥಾಪಿತವಾಗಿದ್ದ ಬೆಂಗಳೂರು ಪ್ರೆಸ್ಸಿನಲ್ಲಿ ಅಚ್ಚಾಯಿತು. (೧೯೧೯); ಎರಡನೆಯ ಸಂಚಿಕೆಯಿಂದ ೩೦ನೆಯ ಸಂಚಿಕೆಯವರೆಗೆ ಮೈಸೂರಿನಲ್ಲಿ ಕ್ರೌನ್ ಪ್ರೆಸ್ಸಿನಲ್ಲಿ ಅಚ್ಚಾಗುತ್ತಿತ್ತು.

ಮೊದಲು ಕೆಲವು ವರ್ಷ ಪತ್ರಿಕೆ ನಡೆಯಲು ಮೈಸೂರಿನಲ್ಲಿ ನಾನೂ ಬೆಂಗಳೂರಿನಲ್ಲಿ ವೆಂಕಣ್ಣಯ್ಯನವರೂ ತುಂಬ ಶ್ರಮ ಪಡಬೇಕಾಯಿತು. ಸಂಚಿಕೆಗಳನ್ನು ಮನೆಮನೆಗೆ ತೆಗೆದುಕೊಂಡು ಹೋಗಿ ಕೊಟ್ಟು ವರ್ಷವೆಲ್ಲಾ ಕಾದು ಕೊನೆಗೆ ಚಂದಾ ಕೇಳಿ, ಆಗ ಬಾ ಈಗ ಬಾ ಎನ್ನಿಸಿಕೊಂಡು. ಮಾರವಾರಿ ನಕ್ಷತ್ರಿಕ ಎನ್ನಿಸಿಕೊಂಡು ದುಡ್ಡು ಸಂಪಾದನೆ ಮಾಡಿಯಾಯಿತು. ಉತ್ಸಾಹಕ್ಕೆ ತಕ್ಕಷ್ಟು ಅನುಭವವಿರಲಿಲ್ಲ; ಅಭಿಮಾನವೇನೋ ಬೇಕಾದಷ್ಟಿತ್ತು. ಈ ಅಭಿಮಾನದಿಂದಲೇ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳು ನಮ್ಮ ಜೊತೆಗೂ ದುಡಿದು, ದುಡ್ಡು ತಂದು ಕೊಟ್ಟು, ಪತ್ರಿಕೆಯನ್ನು ಬದುಕಿಸಿದರು. ಆಗ್ಗೆ ಕನ್ನಡದ ಅಭಿಮಾನ ಇನ್ನೂ ಹೊಸದು; ಬೇರೆ ಪ್ರಬಲ ಭಾಷೆಗಳೊಡನೆ ಅದಕ್ಕೆ ಪೈಪೋಟಿ ಇರಲಿಲ್ಲ. ರಾಜಕೀಯ ಚಳವಳಿ ಇರಲಿಲ್ಲ. ಜನರೂ ಇದೊಂದು ವಿದ್ಯಾರ್ಥಿಗಳ ಕೆಲಸ ಎಂದು ಮೆಚ್ಚಿಗೆಯಿಂದಲೂ ಸಂತೋಷದಿಂದಲೂ ಪ್ರೋತ್ಸಾಹಿಸುತ್ತಿದ್ದರು. ಹೀಗೆ ಸಂಘವೂ ಪತ್ರಿಕೆಯೂ ದಿನದಿನಕ್ಕೆ ಪ್ರವರ್ಧಮಾನವಾಗುತ್ತ ಬಂದುವು.

ಎಂಟು ವರ್ಷಗಳ ನಂತರ ವೆಂಕಣ್ಣಯ್ಯನವರು ಕನ್ನಡದ ಪ್ರೊಫೆಸರಾಗಿ ಮೈಸೂರಿಗೆ ವರ್ಗವಾದರು. ೧೯೨೭ರಲ್ಲಿ ಮತ್ತೆ ನಾನು ಸೆಂಟ್ರಲ್ ಕಾಲೇಜಿಗೆ ಹೋದೆ, ಪ್ರಬುದ್ಧ ಕರ್ಣಾಟಕವೂ ಬೆನ್ನುಹತ್ತಿತ್ತು. ಆದರೆ ಈಗ ಅದು ತನ್ನ ಮನೆಗೆ ತಾನು ಬಂದಂತಾಯಿತು. ಸಂಘದ ಆಡಳಿತ, ಪತ್ರಿಕೆಯ ಸಂಪಾದಕತ್ವ, ಎರಡೂ ನನ್ನ ಹೆಗಲಿಗೇ ಬಂದುವು; ಅವನ್ನು ಯಥಾಶಕ್ತಿಯಾಗಿ ನಿರ್ವಹಿಸಿ ಬೆಳೆಸಿದ್ದಾಯಿತು. ಪತ್ರಿಕೆ ಸಕಾಲಕ್ಕೆ ಹೊರಡಬೇಕೆಂದು, ಸ್ವಂತವಾಗಿ ಅಚ್ಚುಕೂಟಗಳಿಗೆ ಅಲೆದು ಅಲೆದು ಅವಶ್ಯಕವಿದ್ದರೆ ಒಂದೊಂದು ಸಂಚಿಕೆಯನ್ನು ಎರಡು ಅಥವಾ ಮೂರು ಅಚ್ಚುಕೂಟಗಳಲ್ಲಿ ಅಚ್ಚು ಮಾಡಿಸಿ ಮಿಕ್ಕ ಕೆಲಸವನ್ನು ಬದಿಗಿಟ್ಟು ದೇಹವನ್ನು ತೇಯ್ದಾಯಿತು. ಆದರೆ ಇಷ್ಟು ವರ್ಷವಾದರೂ, ಪತ್ರಿಕೆಯನ್ನು ಎಷ್ಟು ಪುಷ್ಟಿಗೊಳಿಸಿ, ಸುಂದರಗೊಳಿಸಿದರೂ ಅದರ ಚಂದಾದಾರರೂ ಸುಮಾರು ೭೦೦ ಅಥವಾ ೮೦೦ಕ್ಕೆ ಹೆಚ್ಚಲಿಲ್ಲ. ಪತ್ರಿಕೆಯನ್ನು ಆದಷ್ಟು ಅಗ್ಗವಾದ ಅಚ್ಚುಕೂಟದಲ್ಲಿ ಅಚ್ಚು ಮಾಡಿಸುತ್ತಿತ್ತು. (ಅದ್ದರಿಂದ ತುಂಬ ಬುದ್ಧಿಶ್ರಮಗಳನ್ನು ವಹಿಸಬೇಕಾಗುತ್ತಿತ್ತು.); ಇದರಿಂದಲೂ, ತಿಂಗಳಿಗೆ ನಾಲ್ಕು ರೂಪಾಯಿ ಸಂಬಳದ ಮೇಲೆ ಒಪ್ಪತ್ತು ಕೆಲಸ ಮಾಡುವ–ಆದರೆ ಅಷ್ಟೇನೂ ಪ್ರಾಮಾಣಿಕನಾಗಲಿ ಉಪಯುಕ್ತನಾಗಲಿ ಅಲ್ಲದ–ಒಬ್ಬ ಆಳು ಹೊರತು ಮತ್ತಾವ ಸಿಬ್ಬಂದಿಯೂ ಇಲ್ಲದೆ ಕೆಲಸ ಮಾಡುತ್ತಿದ್ದದ್ದರಿಂದಲೂ, ಕೆಲಕೆಲವು ವರ್ಷ ವಿಶ್ವವಿದ್ಯಾನಿಲಯದ ಮತ್ತು ವಿದ್ಯಾ ಇಲಾಖೆಯ ಸಹಾಯ ಒದಗುತ್ತಿದ್ದದ್ದರಿಂದಲೂ ಚಂದಾದಾರರಲ್ಲಿ ಪೋಷಕರೆಂಬ ಒಂದು ವರ್ಗವಿದ್ದು

ಅವರು ಮೂರು ರೂಪಾಯಿ-ಎಂದರೆ ಒಂದುವರೆಯಷ್ಟು ಚಂದಾವನ್ನು ಕೊಡುತ್ತಿದ್ದದ್ದರಿಂದಲೂ, ವೇತನ ಪಡೆಯುತ್ತಿದ್ದ ವಿದ್ಯಾರ್ಥಿಗಳು ಅಲ್ಪ ಸ್ವಲ್ಪ ಸಹಾಯ ಮಾಡುತ್ತಿದ್ದದ್ದರಿಂದಲೂ, ಬೆಂಗಳೂರಿನ ವಿಶ್ವವಿದ್ಯಾನಿಲಯ ಸಂಘವು ನಮ್ಮ ವಿನಿಮಯ ಪತ್ರಿಕೆಗಳನ್ನೆಲ್ಲಾ ತೆಗೆದುಕೊಂಡು ಅವಕ್ಕೆ ಒಟ್ಟು ವರ್ಷಕ್ಕೆ ೫೦ ರೂಪಾಯಿ ಕೊಡುತ್ತಿದ್ದದ್ದರಿಂದಲೂ, ಹಾಗೂ ಹೀಗೂ ಪತ್ರಿಕೆಯು ಸಾಲ ಮಾಡದೆ ಜೀವಿಸಿಕೊಂಡಿತ್ತು. ಪುಟಗಳನ್ನು ಹೆಚ್ಚು ಮಾಡಿದ್ದರಿಂದ ಅಂಚೆ ವೆಚ್ಚ ಹೆಚ್ಚಾಯಿತು. (೧೯೩೦-೩೧ನೆಯ ವರ್ಷದಲ್ಲಿ ಸಂಘದ ಅಂಚೆ ವೆಚ್ಚ ರೂ.೫೨೩) ಚಂದಾ ಹೆಚ್ಚು ಮಾಡಿದ್ದರೆ, ಚಂದಾದಾರರು ಇನ್ನೂ ಕಡಿಮೆಯಾಗುತ್ತಿದ್ದರೇ ಹೊರತು ಉತ್ಪತ್ತಿ ಹೆಚ್ಚಾಗುತ್ತಿರಲಿಲ್ಲ. ಆದಷ್ಟು ಸುಲಭ ಬೆಲೆಯಲ್ಲಿ ಉತ್ತಮವಾದ ವಸ್ತುವನ್ನು ಕೊಟ್ಟು ಜನಕ್ಕೆ ಓದಿನಲ್ಲಿ ಅಭಿರುಚಿಯನ್ನುಂಟು ಮಾಡಬೇಕೆಂಬ ನಮ್ಮ ಉದ್ದೇಶಕ್ಕೂ ಭಂಗ ಬರುತ್ತಿತ್ತು. ಆದ್ದರಿಂದ, ನಮ್ಮ ಜನದಲ್ಲಿ ಇಂಥ ವಸ್ತುವನ್ನು ಉಪಯೋಗಿಸಿಕೊಳ್ಳುವವರ ಪ್ರಮಾಣವೇ ಇಷ್ಟು; ಅಗ್ಗವಾಗಿ ಕೊಟ್ಟರೂ ಇಷ್ಟೇ, ಜಿಟ್ಟಿ ಕೊಟ್ಟರೂ ಇಷ್ಟೆ ಎಂದು ಒಂದು ವಿಧವಾದ ಸಮಾಧಾನವನ್ನು ತಂದುಕೊಂಡೆ. ಆದರೂ ಮನಸ್ಸಿಗೆ ನಿರುತ್ಸಾಹವೇನೋ ತುಂಬ ಇತ್ತು. ಇನ್ನೊಂದು ವರ್ಷ ಆದಷ್ಟು ಚೆನ್ನಾಗಿ ನಡಸಿ, ಸಾಕಾದಷ್ಟು ಪ್ರೋತ್ಸಾಹ ದೊರೆಯದ್ದರಿಂದ ಇದನು ನಿಲ್ಲಿಸಿದ್ದೇನೆಂದು ಪ್ರಕಟಿಸಿ ಕೈಬಿಡೋಣವೆಂದುಕೊಂಡಿದ್ದೆ. ಆದರೂ ಅಭಿಮಾನ ಹೋಗಿರಲಿಲ್ಲ; ಪತ್ರಿಕೆಯು ಆಯುಸ್ಸು ಇನ್ನೂ ತುಂಬ ಇತ್ತು! ಆದ್ದರಿಂದ ಒಂದು ದಿನ, ಆಗ ತಾನೆ ಸಂಘದ ಅಧ್ಯಕ್ಷರಾಗಿದ್ದ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರಲ್ಲಿ ಪತ್ರಿಕೆಯ ಪ್ರಸ್ತಾಪವನ್ನೆತ್ತಿ, ಇದನ್ನು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿ ಸರ್ಕಾರದ ಪತ್ರಿಕೆಯಾಗಿ ಮಾಡಿದರೆ ಅಂಚೆವೆಚ್ಚ ಉಳಿಯುವುದು; ಅದನ್ನು ಪತ್ರಿಕೆಯ ಖರ್ಚಿಗೆ ಹಾಕಿಕೊಳ್ಳಬಹುದು ಎಂದು ಸೂಚಿಸಿದೆ. ಅವರು ಇನ್ನು ಮೇಲೆ ಮೈಸೂರು ಬೆಂಗಳೂರುಗಳ ಸಂಘಗಳೆರಡೂ ಇದರ ಜವಾಬ್ದಾರಿ ವಹಿಸಿಕೊಂಡು, ಸಹಕರಿಸಿ, ನಡೆಸಬೇಕೆಂದು ಸಲಹೆ ಕೊಟ್ಟು, ನನ್ನನ್ನೂ ಮೈಸೂರಿನ ಸಂಘದ ಮುಖ್ಯಾಧಿಕಾರಿಗಳಾಗಿದ್ದ ವೆಂಕಣ್ಣಯ್ಯನವರನ್ನೂ ಕೂರಿಸಿಕೊಂಡು ಒಂದು ಕಾಗದ ಬರೆಸಿ ಆಗ ಸ್ಥಾನಪತಿಗಳಾಗಿದ್ದ ಡಾ.ಮೆಟ್ಕಾಫರ ಮುಂದಿಟ್ಟರು. ಸರ್ಕಾರದವರು ಹೊಸ ಕೆಲಸಗಳಲ್ಲಿ ತಟ್ಟನೆ ಕೈ ಹಾಕುವುದಿಲ್ಲ. ಅವು ಅಷ್ಟೇನೂ ಇಷ್ಟವಲ್ಲದ, ಮತ್ತು ಹೊರೆ ಎಂಬ ಭಾವವುಳ್ಳ, ಜನರಾರಾದರೂ ಹತ್ತಿರವಿದ್ದರಂತೂ ಹೇಳಬೇಕಾಗಿಲ್ಲ. ಹೀಗಾಗಿ ಅವರು ಸಂಘದ ವಿಚಾರವಾಗಿಯೂ ಪತ್ರಿಕೆಯ ವಿಚಾರವಾಗಿಯೂ ನಾನಾ ಪ್ರಶ್ನೆಗಳನ್ನು ಕೇಳಿ, ಅಂಕಿ ಅಂಶಗಳನ್ನು ತರಿಸಿಕೊಂಡು ಕೊನೆಗೆ ಅದನ್ನು ವಿಶ್ವವಿದ್ಯಾನಿಲಯವು ನಡಸುವುದೆಂದು ತೀರ್ಮಾನಿಸಿದರು. (೧೯೩೨). ಹೀಗೆ ಪ್ರಬುದ್ಧ ಕರ್ಣಾಟಕವು ೧೪ನೆಯ ಸಂಪುಟದಿಂದ ವಿಶ್ವವಿದ್ಯಾನಿಲಯದ ಪೋಷಣೆಯಲ್ಲಿ ಬೆಳೆಯುವಂತಾಯಿತು. ಆದರೆ ಸಂಘಕ್ಕೆ ಅದುವರೆಗೆ ಕೊಡುತ್ತಿದ್ದ ವರ್ಷಾಶನವಾದ ೨೦೦ ರೂಪಾಯಿಯು ನಿಂತು ಹೋಯಿತು. ''ಅದನ್ನು ಕೊಡುತ್ತಿದ್ದುದು ಪ್ರಬುದ್ಧ ಕರ್ಣಾಟಕವನ್ನು ನಡಸುತ್ತಿದ್ದಕ್ಕೆ; ಪ್ರಬುದ್ಧ ಕರ್ಣಾಟಕವನ್ನು ವಿಶ್ವವಿದ್ಯಾನಿಲಯವು ಕೈಗೆ ತೆಗೆದುಕೊಂಡದ್ದರಿಂದ ಅದು ಬೇಕಿಲ್ಲ'' ಎಂದು ಅಧಿಕಾರಿಗಳು ತೀರ್ಮಾನಿಸಿದರು! (ಮುಡಿಯುತ್ತಿದ್ದ ಮಗನನ್ನು ದತ್ತು ಕೊಟ್ಟಂತಾಯಿತು!) ಇತ್ತಲಾಗಿ ಪ್ರಬುದ್ಧ ಕರ್ಣಾಟಕವೂ ತನ್ನ ಕಾಲು ಮೇಲೆ ತಾನು ನಿಂತು ತನ್ನ ಅನ್ನವನ್ನು ತಾನು ಗಳಿಸಿಕೊಂಡು ಜೀವಿಸಬೇಕೆಂದು ಅಪ್ಪಣೆ ಮಾಡಿದರು. ಸರ್ಕಾರದ ಇಲಾಖೆಗೆ ಸೇರಿದ್ದರಿಂದ ನಾನಾ ನಿಯಮಗಳಿಗೆ ಬದ್ಧರಾಗಿ, ಹತ್ತಾರು ಜನಗಳಿಗೆ ಉತ್ತರವಿತ್ತು, ಸ್ವತಂತ್ರವಾಗಿ ಯಾವ ಪ್ರಯೋಗಗಳನ್ನೂ ಮಾಡಲಾರದೆ, ಕೊಲ್ಲಲಾರದೆ, ಕಾಪಾಡಲಾರದೆ, ಕೆಲವು ಕಾಲ ಪತ್ರಿಕೆಯನ್ನು ಒಂದು ನಿರ್ಬಂಧದಲ್ಲಿ ನಡಸಿಕೊಂಡು ಬರಬೇಕಾಯಿತು; ಇದರ ಪೂರ್ಣ ಅನುಭವ ಬಂದದ್ದು ಕೆಲವು ವರ್ಷಗಳ ಮೇಲೆ.

ವಿಶ್ವವಿದ್ಯಾನಿಲಯವು ೧೯೩೨ರಲ್ಲಿ ಪತ್ರಿಕೆಯನ್ನು ತನ್ನ ಆಡಳಿತಕ್ಕೆ ತೆಗೆದುಕೊಂಡಾಗ ಅದು ಕನ್ನಡ ಗ್ರಂಥಪ್ರಕಾಶನ ಸಮಿತಿಯ ಮೇಲ್ವಿಚಾರಣೆಯಲ್ಲಿ ನಡೆಯಬೇಕೆಂದೂ, ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ

ನವರು ಮುಖ್ಯ ಸಂಪಾದಕರು, ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರೀ ಇವರು ಸಂಪಾದಕರು. ಶ್ರೀಮಾನ್ ತೀ.ನಂ. ಶ್ರೀಕಂಠಯ್ಯ, ಕೆ.ವಿ. ಪುಟ್ಟಪ್ಪ, ವಿ. ಸೀತಾರಾಮಯ್ಯ ಇವರು ಸಂಪಾದಕ ಸಮಿತಿಯ ಇತರ ಸದಸ್ಯರು ಎಂದೂ ನಿಯಮಿಸಿತ್ತು. ಸಂಪಾದಕ ಸಮಿತಿಯಲ್ಲಿ ಎಷ್ಟು ಜನವೇ ಇರಲಿ, ಅದರ ಅಧ್ಯಕ್ಷರು ಯಾರೇ ಆಗಿರಲಿ, ಪತ್ರಿಕೆಯ ಜವಾಬ್ದಾರಿ ಸಂಪಾದಕನದು; ಅದಕ್ಕೆ ಸಂಪಾದಕನು ತನ್ನ ದೇಹವನ್ನು, ಜೀವವನ್ನು, ತೆಯ್ಯಬೇಕು. ಇಲ್ಲದಿದ್ದರೆ ಅದು ಸೊರಗಿ ಹೋಗುವುದು. ಇದು ನನ್ನ ಕಟುವಾದ ಅನುಭವ. ಆದರೆ ಶ್ರೀಮಾನ್ ವೆಂಕಣ್ಣಯ್ಯನವರ ಮಾತು ಬೇರೆ; ವೆಂಕಣ್ಣಯ್ಯನವರೆಂದರೆ ಬೆಲ್ಲದ ಉಂಡೆ! ಅವರಿಗೆ ಗೊದ್ದಗಳೂ ಇರುವೆಗಳೂ ಸದಾ ಮುತ್ತಿಕೊಂಡಿರುತ್ತಿದ್ದುವು. ಅವರೂ ಆ ಪಿಪೀಲಿಕಾ ಪಂಕ್ತಿಗಳಿಂದ ಬೇಕಾದಷ್ಟು ಕೆಲಸ ಮಾಡಿಸುತ್ತಿದ್ದರು; ಅವೂ ಸಂತೋಷವಾಗಿಯೇ ಮಾಡುತ್ತಿದ್ದುವು; ಇದು ಅವರ ಜಾತಕದ ಸ್ವರೂಪ. ಇದನ್ನು ನಾನು ಒಂದು ಸಾರಿ ಅವರು ಶಂಕರಪುರದಲ್ಲಿ ವಾಸ ಮಾಡುತ್ತಿದ್ದಾಗ ಅವರ ಮನೆಗೆ ಹೋಗಿ ನೋಡಿದೆ. ಅದು ಪ್ರಬುದ್ಧ ಕರ್ಣಾಟಕದ ಕಚೇರಿಯಾಗಿಬಿಟ್ಟಿತ್ತು; ಅದಕ್ಕೆ ಸ್ವಲ್ಪ ದಿನಗಳ ಹಿಂದೆ ನಾನು ಮೈಸೂರಿನಿಂದ ಒಂದು ಸಂಚಿಕೆಯನ್ನು ಅಚ್ಚು ಮಾಡಿಸಿ ಕಳುಹಿಸಿದ್ದೆ; ಅದನ್ನು ಕಾಗದದಲ್ಲಿ ಸುತ್ತುವವರು ಎಷ್ಟು ಜನ, ಸ್ಟಾಂಪು ಅಂಟಿಸುವವರು ಎಷ್ಟು ಜನ, ಬರೆದುಕೊಳ್ಳುವವರು ಎಷ್ಟು ಜನ, ಜೋಡಿಸುವವರು ಎಷ್ಟು ಜನ! ಅಷ್ಟು ಜನ ಅವಶ್ಯಕವೋ ಅಲ್ಲವೋ ಅಂತೂ ಆ ಮನೆ ಒಂದು ಇರುವೆಯ ಗೂಡಿನಂತಿತ್ತು. ಇಂಥವರ ಕೈಗೆ ಸಂಪಾದಕತ್ವದ ಮುಖ್ಯ ಜವಾಬ್ದಾರಿ ಬಂದಾಗ ಕೆಲಸವು ಸುಸೂತ್ರವಾಗಿ ಸರಿಯಾಗಿ, ನಡೆಯಬೇಕಾಗಿತ್ತು. ಆದರೆ ಬರವಣಿಗೆಯ ಕೆಲಸ, ಓಡಾಟದ ಕೆಲಸ, ಕೂಡಲೆ ತಡವಿಲ್ಲದೆ ಮಾಡಬೇಕಾದ ಕೆಲಸ ಒದಗಿದರೆ, ಅದರಲ್ಲಿಯೂ ಅಷ್ಟೇನೂ ದೇಹದಾರ್ಢ್ಯವಿಲ್ಲದೆ, ವಾಹನ ಸೌಕರ್ಯಗಳಿಲ್ಲದೆ, ಹಟವಾದಿಯಲ್ಲದೆ, ಪ್ರತಿಯೊಂದಕ್ಕೂ ಪರಾವಲಂಬನೆ ಅಭ್ಯಾಸವಾಗಿ ಹೋಗಿರತಕ್ಕವರಿಗೆ ಒದಗಿದರೆ ಕೆಲಸ ಸುಖಕರವಲ್ಲ. ಆದ್ದರಿಂದ ವೆಂಕಣ್ಣಯ್ಯನವರು ಸ್ವಲ್ಪ ಕಿರುಕುಳ ಪಡುತ್ತಿದ್ದದ್ದನ್ನು ನಾನು ನೋಡುತ್ತಿದ್ದೆ, ಕೇಳುತ್ತಿದ್ದೆ. ಆದರೆ, ಅವರ ಸುತ್ತ ಉತ್ಸಾಹಿಗಳೂ, ಸಮರ್ಥರೂ ಆದ ತರುಣರು ಸಹಾಯಕ್ಕೆ ಇದ್ದರೆಂಬ ಧೈರ್ಯದಿಂದಲೂ, ಸಂಸ್ಕೃತ ನಾಟಕವನ್ನು ಬರೆಯುವ ಕೆಲಸ ವಹಿಸಿಕೊಂಡಿದ್ದದ್ದರಿಂದಲೂ, ಪತ್ರಿಕೆಯ ಕೆಲಸವನ್ನು ಒಂದೇ ಸಮನಾಗಿ ಹದಿಮೂರು ವರ್ಷ ನಡಸಿ ತಲೆ ಚಿಟ್ಟು ಹಿಡಿದು ಹೋಗಿದ್ದದ್ದರಿಂದಲೂ, ಮಾನವ ಸಹಜವಾದ ಸೋಮಾರಿತನದಿಂದಲೂ ಈ ಕಾಲದಲ್ಲಿ ನಾನು ಸಹಸಂಪಾದಕನಾಗಿ ಅವರಿಗೆ ಎಷ್ಟು ಸಹಕಾರ ಕೊಡಬೇಕಾಗಿತ್ತೋ ಅಷ್ಟನ್ನು ಕೊಡಲಿಲ್ಲ. ಸಂಚಿಕೆಗಳು ಆಗ ಸಕಾಲಕ್ಕೆ ಬರುತ್ತಿರಲಿಲ್ಲವೆಂಬ ಗೊಣಗಾಟ ಕೇಳಿಬರುತ್ತಿತ್ತು; ಆದರೆ ೧೯ನೆಯ ಸಂಪುಟದಲ್ಲಿ ೨ ಸಂಚಿಕೆಗಳು ವಿನಾ ಮಿಕ್ಕ ಯಾವುವೂ ಜೋಡಿ ಸಂಚಿಕೆಯಾಗಿ, ತಿಂಗಳುಗಟ್ಟಲೆ ತಡವಾಗಿ ಬರಲಿಲ್ಲ.

ದೇವರು ಆ ಕಾಲದಲ್ಲಿ ನನಗೆ ಸ್ವಲ್ಪ ಬಿಡುವು ಕೊಟ್ಟು ಬೇರೆ ಕೆಲಸ ಮಾಡಿಸಿದ; ಆದರೆ ಆ ಬಿಡುವು ಇದ್ದದ್ದು ಕೆಲವು ವರ್ಷ ಮಾತ್ರ; 'ಸಂಸ್ಕೃತ ನಾಟಕ' ಬರೆದು ಮುಗಿಯುವವರೆಗೆ. ಈ ಮಧ್ಯೆ ಪರಿಷತ್ಪತ್ರಿಕೆಯ ಸಂಪಾದಕತ್ವ ಒದಗಿತು; ಅದನ್ನು ಉತ್ತಮಗೊಳಿಸಬೇಕೆಂಬ ಆದರ್ಶವಾದಿಗಳ ಮಧ್ಯದಲ್ಲಿ ಮುಡಿಯಬೇಕಾಯಿತು; ಇಷ್ಟು ಹೊತ್ತಿಗೆ ಶ್ರೀಮಾನ್ ವೆಂಕಣ್ಣಯ್ಯನವರು ಅನಿರೀಕ್ಷಿತರಾಗಿ ೨೪-೧೨-೧೯೩೯ರಲ್ಲಿ ಸ್ವರ್ಗಸ್ಥರಾಗಲು ನನ್ನ ಮಗುವನ್ನು ನಾನು ನೋಡಿಕೊಳ್ಳಬೇಕಾಯಿತು. ಬಳ್ಳಿಗೆ ಕಾಯಿ ಹೊರೆಯೇ? ಆಗಲಿ-ಎಂದು ಅದನ್ನು ಕೈಕೊಂಡೆ. ಶ್ರೀಮಾನ್ ವೆಂಕಣ್ಣಯ್ಯನವರು ದಿವಂಗತರಾದಾಗ ಅವರಿಗೆ ೫೨ ವರ್ಷ ವಯಸ್ಸು; ಅವರು ತಮ್ಮ ಅಧಿಕಾರಾವಧಿ ಮುಗಿಯುವವರೆಗಾದರೂ ಆಯುಸ್ಸು ಹಾಕಿಕೊಂಡು ಬದುಕಿದ್ದಿದ್ದರೆ ನನಗೆ ಇನ್ನಷ್ಟು ದಿನ ಧಾರಾಳವಾಗಿ ಉಸಿರಾಡುತ್ತ ಓಡಾಡಿಕೊಂಡಿರುವುದಕ್ಕೆ ಅವಕಾಶ ಸಿಕ್ಕುತ್ತಿತ್ತು. ಆದರೆ ಭಗವಂತನಿಗೆ ಅದು ಇಷ್ಟವಿರಲಿಲ್ಲ!

ನಾನು ಮೈಸೂರಿಗೆ ಪ್ರೊಫೆಸರಾಗಿ ಮತ್ತು ಪತ್ರಿಕೆಯ ಸಂಪಾದಕನಾಗಿ ವರ್ಗಪಟ್ಟು ಬಂದಕೂಡಲೆ ಆಗ ಸ್ಥಾನಪತಿಗಳಾಗಿದ್ದ ಶ್ರೀಮಾನ್ ಎನ್.ಎಸ್. ಸುಬ್ಬರಾಯರು ನನ್ನನ್ನು ಕರೆದು ''ಕೃಷ್ಣಶಾಸ್ತ್ರಿ ಪ್ರಬುದ್ಧ ಕರ್ಣಾಟಕದ ಸಂಪಾದಕನಾಗಿ ಈಗ ನೀನು ಮೂರು ಕೆಲಸ ಮಾಡಬೇಕು-೧. ಪತ್ರಿಕೆಯನ್ನು ಕಾಲಕಾಲಕ್ಕೆ ತಡವಿಲ್ಲದೆ ಹೊರಡಿಸುವುದು. ೨. ಅದರಲ್ಲಿ ಸಾಹಿತ್ಯ ಮಾತ್ರವಲ್ಲದೆ ಶಾಸ್ತ್ರವಿಚಾರಗಳನ್ನೂ ಪ್ರಕಟಿಸುವುದು. ೩. ಮೈಸೂರಿನಿಂದ ಹೊರಗೆ ಇರುವ ಕರ್ಣಾಟಕರ ಸಹಾಯ ಸಹಾನುಭೂತಿಗಳನ್ನೂ ಹೆಚ್ಚು ಹೆಚ್ಚಾಗಿ ಪಡೆಯುವುದು ಇವಿಷ್ಟನ್ನು ಮನಸ್ಸಿನಲ್ಲಿಟ್ಟುಕೊಂಡು ಪತ್ರಿಕೆಯನ್ನು ಉತ್ತಮಗೊಳಿಸು, ಉತ್ತಮೋತ್ತಮವಾದದ್ದನ್ನಾಗಿ ಮಾಡು; ಅದಕ್ಕೆ ಬೇಕಾದ ದ್ರವ್ಯವನ್ನು ಒದಗಿಸುವುದು ನನ್ನ ಭಾರ!'' ಎಂದರು. ಕೈಬಿಡಬೇಕೆಂದಿದ್ದ ಪತ್ರಿಕೆಯನ್ನು ವಿಶ್ವವಿದ್ಯಾನಿಲಯದ ಕೊರಳಿಗೆ ಕಟ್ಟಿ ಅದು ನರಳುತ್ತಿದ್ದರೂ ನೋಡುತ್ತ ನಿರ್ಮಮತೆಯನ್ನು ಅಭ್ಯಾಸ ಮಾಡುತ್ತಿದ್ದ ನನಗೆ ಈ ಪ್ರಲೋಭನ ಒದಗಿತ್ತು. ''ಈ ನವೆಯುತ್ತಿರುವ ನಂದಾದೀಪಕ್ಕೆ ಎಣ್ಣೆ ಕೊಡುತ್ತಾರಂತೆ ನೋಡೋಣ; ಬತ್ತಿ ಸರಿಮಾಡಿ ದೀಪ ದೊಡ್ಡದು ಮಾಡೋಣ!'' ಹೆಚ್ಚು ಬೆಳಕು ಬಂದರೆ ಬರಲಿ; ಮೈ ಮಸಿಯಾದರೆ, ಕೈ ಜಿಡ್ಡಾದರೆ ಚಿಂತೆಯಿಲ್ಲ'' ಎಂದು ಮತ್ತೆ ದೀಪದ ಮುಂದೆ ಕುಳಿತೆ. ಆ ಪೂಜಾಫಲವೇ ೨೧ರಿಂದ ೨೪ ವರ್ಷ ಪೂರ್ತಿಯ ನಾಲ್ಕು ಸಂಪುಟಗಳು. ಇವುಗಳಲ್ಲಿ ಶ್ರೀಮಾನ್ ಸುಬ್ಬರಾಯರ ಆಜ್ಞೆಯನ್ನು, ಶ್ರಮವಾದರೂ, ಶಕ್ತಿಮೀರಿ ಪರಿಪಾಲಿಸಿದ್ದೇನೆ. ಆ ಶ್ರಮ ಸಾರ್ಥಕವೆಂದು ತಿಳಿದಿದ್ದೇನೆ.

ನಾನು ೧೯೩೯ರಲ್ಲಿ ಮೈಸೂರಿಗೆ ಬಂದು ಸಂಪಾದಕತ್ವವನ್ನು ವಹಿಸಿಕೊಂಡ ಮೇಲೆ ೧೭ ಸಂಚಿಕೆಗಳನ್ನು ಪ್ರಕಟಿಸಿದೆ. ಇವೆಲ್ಲವೂ ಸಕಾಲಕ್ಕೆ ಬಂದುವೆಂದು ನನಗೆ ಒಂದು ಸಂತೋಷವೂ ಸಮಾಧಾನವೂ ಇವೆ. ಇದಕ್ಕೆ ನಾನು ಪಟ್ಟ ಶ್ರಮವೆಷ್ಟು ಕಾರಣವೋ ಅಷ್ಟೇ ವೆಸ್ಲಿ ಪ್ರೆಸ್ಸಿನ ಅಧಿಕಾರಿಗಳಿಗೂ ಅದರಲ್ಲಿಯೂ ಮಿ. ಟಾಂಕಿನ್‌ಸನ್ ಅವರಿಗೂ ನನ್ನ ವಿಶೇಷ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಅವರ ಕೆಲಸದಲ್ಲಿ ಏನೂ ಕೊರತೆ ಇರಲಿಲ್ಲ. ಅವರೊಡನೆ ಕೆಲಸ ಮಾಡುವುದೇ ಒಂದು ಸಂತೋಷ. ೧೯೪೨ರಲ್ಲಿ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರು ಅಧಿಕಾರದಿಂದ ವಿಶ್ರಾಂತರಾದರು. ಆದ್ದರಿಂದ ಕನ್ನಡ ಗ್ರಂಥ ಪ್ರಕಾಶನ ಸಮಿತಿಯ ಅಧ್ಯಕ್ಷತೆಯು ನನ್ನ ಪಾಲಿಗೆ ಬಂತು. ಇದು ಒಂದೇ ಪೂರ್ತಿ ಹೊತ್ತು ಕೆಲಸ ಮಾಡುವ ಒಬ್ಬ ದಕ್ಷನಿಗೆ ತಕ್ಕ ಕೆಲಸ; ಆದರೂ ಶ್ರೀಮಾನ್ ಶ್ರೀಕಂಠಯ್ಯನವರು ಇದನ್ನು ತಮ್ಮ ಹಲವು ಕೆಲಸಗಳ ಜೊತೆಗೆ ನಿರ್ವಹಿಸಿದರು; ಅವರು ಹಾಗೆ ದುಡಿಯದಿದ್ದರೆ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಗ್ರಂಥ ಪ್ರಕಾಶನ ಸಮಿತಿಯ ಯೋಜನೆ ಏರ್ಪಟ್ಟು ಇಷ್ಟು ಉತ್ತಮವಾದ ಗ್ರಂಥಗಳು ಪ್ರಕಾಶಕ್ಕೆ ಬರುತ್ತಿರಲಿಲ್ಲ. ಅದು ಹೇಗಾದರೂ ಇರಲಿ; ಶ್ರೀಮಾನ್ ವೆಂಕಣ್ಣಯ್ಯನವರು ಜೀವಂತರಾಗಿದ್ದು ಶ್ರೀಮಾನ್ ಶ್ರೀಕಂಠಯ್ಯನವರು ಅಧಿಕಾರದಲ್ಲಿದ್ದಾಗ ವಿಶ್ವವಿದ್ಯಾನಿಲಯ ಮತ್ತು ವಿದ್ಯಾ ಇಲಾಖೆ ಇವುಗಳಿಗೆ ಸಂಬಂಧಪಟ್ಟ ಹಲವು ಕನ್ನಡದ ಕೆಲಸಗಳನ್ನು ನಾವು ಮೂರು ಜನವೂ ಹಂಚಿಕೊಂಡು ಮಾಡುತ್ತಿದ್ದೆವು; ಆದರೆ ಈಗ ಅದೆಲ್ಲವೂ ನನ್ನ ಮೇಲೆ ಬಿತ್ತು; ಅದಷ್ಟೂ ದೊಡ್ಡ ಹೊರೆಯಾದ್ದರಿಂದ ವಿಶ್ವವಿದ್ಯಾನಿಲಯದ ಕೆಲಸವನ್ನು ಮುಖ್ಯವಾಗಿ ಇಟ್ಟುಕೊಂಡು ಮಿಕ್ಕದ್ದನ್ನು ಬಿಡಬೇಕಾಗಿ ಬಂತು; ಅದರಲ್ಲಿಯೂ ಗ್ರಂಥಪ್ರಕಾಶನ ಸಮಿತಿಯ ಅಧ್ಯಕ್ಷತೆ ಬಂದ ಮೇಲೆ, ಅದರ ಜೊತೆಗೆ ಪ್ರಬುದ್ಧ ಕರ್ಣಾಟಕವನ್ನು ಮತ್ತಾರಿಗಾದರೂ ವಹಿಸಿಕೊಡಬೇಕೆಂದೂ ೭-೧೦-೧೯೪೨ರಿಂದ ವಿಶ್ವವಿದ್ಯಾನಿಲಯದ ಅಧಿಕಾರಿಗಳೊಡನೆ ಪತ್ರ ವ್ಯವಹಾರ ನಡೆಸುತ್ತಿದ್ದೆ; ಅದು ಒಂದು ರೂಪಕ್ಕೆ ಬಂದು ತೀರ್ಮಾನವಾಗುವ ತನಕ ಎರಡು ಕೆಲಸಗಳನ್ನೂ ಮಿಕ್ಕ ಕಾರ್ಯಗಳ ಜೊತೆಗೆ ನಾನೇ ನಡೆಸುತ್ತಿದ್ದೆ; ಕೊನೆಗೆ(೨೩-೭-೧೯೪೩) ವಿಶ್ವವಿದ್ಯಾನಿಲಯವು ಮಹಾರಾಜರವರ ಕಾಲೇಜಿನಲ್ಲಿ ಕನ್ನಡದ ಅಸಿಸ್ಟಂಟ್ ಪ್ರೊಫೆಸರಾಗಿರುವವರು ಪ್ರಬುದ್ಧ ಕರ್ಣಾಟಕದ ಸಂಪಾದಕರಾಗಿರಬೇಕೆಂದು ಅಪ್ಪಣೆ ಮಾಡಿತು. ಕನ್ನಡ

ಅಸಿಸ್ಟೆಂಟ್ ಪ್ರೊಫೆಸರಾಗಿ ಬಡ್ತಿಯಾಗಿ ಆಗ ತಾನೇ ಬೆಂಗಳೂರಿನಿಂದ ವರ್ಗಪಟ್ಟು ಬಂದಿದ್ದ ಶ್ರೀಮಾನ್ ವಿ. ಸೀತಾರಾಮಯ್ಯ, ಎಂ.ಎ. ಅವರು ಅದನ್ನು ವಹಿಸಿಕೊಳ್ಳಬೇಕಾಯಿತು; ಅವರ ಸಂಪಾದಕತ್ವದಲ್ಲಿ ೨೫ನೆಯ ಸಂಪುಟವು ಹಿಂದಿನಂತೆಯೇ ನಡೆದು ಬಂತು.


ಇಪ್ಪತ್ತೈದನೆಯ ವರ್ಷದಲ್ಲಿ ಸಂಪಾದಕ ಮಂಡಲಿ ಈ ರೀತಿ ಇತ್ತು- ಶ್ರೀಮಾನರಾದ ೧. ಎ.ಆರ್. ಕೃಷ್ಣಶಾಸ್ತ್ರೀ, ಎಂ.ಎ. (ಅಧ್ಯಕ್ಷರು), ೨. ವಿ. ಸೀತಾರಾಮಯ್ಯ, ಎಂ.ಎ. (ಸಂಪಾದಕರು), ೩. ಡಿ.ಎಲ್. ನರಸಿಂಹಾಚಾರ್, ಎಂ.ಎ. ೪. ಟಿ.ಎನ್. ಶ್ರೀಕಂಠಯ್ಯ, ಎಂ.ಎ. ೫. ಕೆ.ವಿ. ಪುಟ್ಟಪ್ಪ, ಎಂ.ಎ. ೬. ಎ.ಎನ್. ನರಸಿಂಹಯ್ಯ ಎಂ.ಎ., ಪಿ.ಹೆಚ್.ಡಿ. ೭. ಜಿ. ಹನುಮಂತರಾವ್, ಎಂ.ಎ. (ಕಾರ್ಯದರ್ಶಿಗಳು). ನನ್ನ ಸಂಪಾದಕತ್ವದ ಮತ್ತು ಅಧ್ಯಕ್ಷತೆಯ ಅವಧಿಯಲ್ಲಿ ನನಗೆ ನೆರವಾದ ನನ್ನ ಮಿತ್ರರೆಲ್ಲರಿಗೂ ಈ ಮೂಲಕ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಈಗ ಪ್ರಬುದ್ಧ ಕರ್ನಾಟಕವು ೨೬ನೆಯ ವರ್ಷವನ್ನೂ ದಾಟಿದೆ. ಆದರೆ ಈ ಸಂಪುಟದ ಪ್ರಸ್ತಾಪವನ್ನು ಪ್ರಬುದ್ಧ ಕರ್ನಾಟಕದ ಚಿನ್ನದ ಸಂಚಿಕೆಗೆ ಬರೆಯುವ ಪುಣ್ಯವಂತರ ಪಾಲಿಗೆ ಬಿಟ್ಟು ನನ್ನ ಈ ಲೇಖನವನ್ನು ಇಲ್ಲಿಗೆ ಮುಗಿಸುತ್ತೇನೆ.

ಕೃಪೆ: 'ಪ್ರಬುದ್ಧ ಕರ್ನಾಟಕ' ಪತ್ರಿಕೆಯ ಬೆಳ್ಳಿಹಬ್ಬದ ಸಂಚಿಕೆ – ೧೯೪೫

ಜೀವನ
ಕನ್ನಡ ಜನತೆಯ ಜೀವನ ಸೇವಕ

ಮಾಸ್ತಿ ವೆಂಕಟೇಶ ಅಯ್ಯಂಗಾರ್



ಜೀವನ ಪತ್ರಿಕೆಯ ಕಥೆ

ಕಾವ್ಯಾರಾಮ ಎಂಬ ಒಂದು ಸೇವಾ ಸಂಸ್ಥೆ; ಅದೇ ಹೆಸರಿನ ಒಂದು ಮಾಸಪತ್ರಿಕೆ : ನನ್ನ ಜೀವನದ ಅತ್ಯಂತ ಸುಭಿಕ್ಷ ಕಾಲದಲ್ಲಿ ನಾನು ಇವನ್ನು ಒಂದು ಕನಸಾಗಿ ಕಂಡೆನು. ಇದು ಈಗ್ಗೆ ಮೂವತ್ತು ವರ್ಷದ ಹಿಂದಿನ ಮಾತು. ಅದು ನಾನು ಒಂದು ಅಧಿಕಾರದಲ್ಲಿ ಇದ್ದ ದಿನ. ಕೆಲವು ವರ್ಷಗಳಲ್ಲಿ ಅಧಿಕಾರದಿಂದ ವಿಶ್ರಾಂತಿ ಪಡೆದು ಈ ಕೆಲಸಗಳನ್ನು ಹಿಡಿಯಬೇಕು ಎನ್ನುವುದು ಕನಸು.

ಸುಮಾರು ಆ ಸಮಯಕ್ಕೆ ಸೋದರ ಬೇಂದ್ರೆಯವರು ಬೇರೆ ಯಾವ ಕೆಲಸವೂ ಇಲ್ಲದೆ ಬಿಡುವಾಗಿದ್ದುದರಿಂದ ಮಾಸಪತ್ರಿಕೆಯ ಕೆಲಸ ಒಡನೆಯೇ ಏಕೆ ಆರಂಭಿಸಬಾರದು ಎಂದು ಗೆಳೆಯರು ಯೋಚನೆ ಮಾಡಿದರು. ಕನ್ನಡದಲ್ಲಿ ಮೇಲುಮಟ್ಟದ ಒಂದು ಪತ್ರಿಕೆಯನ್ನು ನಡೆಸಲು ಈ ಗೆಳೆಯರು ಸಮರ್ಥರು. ಆದರೂ ಜನ ಇನ್ನೂ ಎಚ್ಚೆತ್ತಿಲ್ಲ, ಪತ್ರಿಕೆಯು ನಡೆಯುವುದು ಕಷ್ಟವಾದೀತು, ಎಂದು ಹಿಂಜರಿವೂ ಉಂಟು. ವಿಷಯವನ್ನು ಸ್ವಲ್ಪ ಚರ್ಚಿಸಿ ಒಂದು ಪತ್ರಿಕೆಯನ್ನು ಹೊರಡಿಸುವುದು ಎಂದು ಎಲ್ಲರೂ ನಿರ್ಣಯಿಸಿದರು.

ಕಾವ್ಯಾರಾಮದ ಮಾತನ್ನು ಮುಂದಕ್ಕೆ ಬಿಟ್ಟು ಪತ್ರಿಕೆಯನ್ನು ಜೀವನ ಎಂದು ಕರೆಯುವುದೆಂದು ನಿಶ್ಚಯವಾಯಿತು. ಜೀವನದಲ್ಲಿ ಕಾವ್ಯಾರಾಮಕ್ಕೆ ಮೀಸಲಾದ ಒಂದು ವಿಭಾಗ ಇರಬಹುದು.

ಈ ನಿಶ್ಚಯದ ಪ್ರಕಾರ ಜೀವನ ಪತ್ರಿಕೆ ೧೯೩೯ರ ನವೆಂಬರ್ ತಿಂಗಳಲ್ಲಿ ಆರಂಭವಾಯಿತು.

ಅದು ಎರಡನೆಯ ಲೋಕ ಸಂಗ್ರಾಮ ನಡೆಯುತ್ತಿದ್ದ ಕಾಲ. ಹೊರಗಿನ ಜನ ನಮ್ಮನ್ನು ಆಳುತ್ತಾ ನಮ್ಮನ್ನು ತಮ್ಮ ಕಾಲಡಿಯಲ್ಲಿ ಅಡಗಿಸಿ ನಿಲ್ಲಿಸಲು ನೋಡುತ್ತಿದ್ದ ಕಾಲ. ಜನಾಂಗದ ಜೀವನ ಎಲ್ಲ ಮುಖದಲ್ಲೂ ಹೊಸರೀತಿ ಕಷ್ಟವನ್ನು ಕಂಡು ಸವಿಯುತ್ತಿದ್ದ ಕಾಲ. ಹೀಗಿದ್ದು ಜೀವನ ಪತ್ರಿಕೆ ಶ್ರೀ ಬೇಂದ್ರೆ, ಗೋಕಾಕ್, ಮುಗಳಿ ಇವರ ಸಂಪಾದಕತ್ವದಲ್ಲಿ ಮೂರು ವರ್ಷ ಬಹು ಚೆನ್ನಾಗಿ ನಡೆಯಿತು. ದಿಟವಾಗಿ ಅಂದು ನಡೆದಷ್ಟು ಚೆನ್ನ ಮರಳಿ ಈಚೆಗೆ ಎಂದೂ ನಡೆದಿಲ್ಲ. ಆ ಗಾತ್ರ, ಆ ಲೇಖನ, ವೈವಿಧ್ಯ, ಆ ಉತ್ಸಾಹ, ಆ ಮೂರು ವರ್ಷ ಪತ್ರಿಕೆಯ ಸ್ವರ್ಣಯುಗದ ಲಕ್ಷಣ ಆದವು. ಆದರೆ ಯುದ್ಧ ಮುಂದರಿದು ಕಾಗದ ದೊರೆಯುವುದೇ ಕಷ್ಟವಾಗಿ ಪತ್ರಿಕೆಯನ್ನು ನಾಲ್ಕನೆಯ ವರ್ಷ ಒಂದು ತ್ರೈಮಾಸಿಕವನ್ನಾಗಿ ಮಾರ್ಪಡಿಸ ಬೇಕಾಯಿತು. ಆ ವರ್ಷ ಮುಗಿಯುವ ವೇಳೆಗೆ ಪತ್ರಿಕೆಯನ್ನು ನಡೆಸುವುದು ದುಸ್ತರ ಎಂದೇ ಕಂಡಿತು. ಕಾಗದದ ಕಷ್ಟದ ಜೊತೆಗೆ ಅದರ ವರಮಾನ ಅದರ ವೆಚ್ಚಕ್ಕೆ ಸಾಲದು ಎನ್ನುವುದು ಸ್ಪಷ್ಟವಾಯಿತು. ಗೆಳೆಯರು ಪತ್ರಿಕೆಯನ್ನು ನಿಲ್ಲಿಸುವುದೇ ಎಂದು ಯೋಚಿಸಬೇಕಾಯಿತು.

ಈ ವೇಳೆಗೆ ನಾನು ನನ್ನ ಅಧಿಕಾರದಿಂದ, ನಿರೀಕ್ಷೆಗೆ ಸ್ವಲ್ಪ ಮುಂದಾಗಿ, ವಿಶ್ರಾಂತಿ ಪಡೆದಿದ್ದೆನು. ಕಾವ್ಯಾರಾಮ ಸೇವಾ ಸಂಸ್ಥೆಯನ್ನು ನಿರ್ಮಿಸುವ ಯೋಚನೆಯನ್ನು ಬಿಟ್ಟಿದ್ದೆನು. ಇದರ ಕಾರಣ ನಿರೀಕ್ಷೆಗೆ ಮುಂದಾಗಿ ಅಧಿಕಾರದಿಂದ ಬಿಡುಗಡೆ ಪಡೆದಿದ್ದದ್ದು, ಅದರ ಪರಿಣಾಮವಾಗಿ ನನ್ನ ಕೈಯಲ್ಲಿ ನಾನು ನಿರೀಕ್ಷಿಸಿದಷ್ಟು ಹೆಚ್ಚಿನ ಹಣ ಇಲ್ಲದೆ ಹೋಗಿದ್ದದ್ದು. ಸೇವಾ ಸಂಸ್ಥೆಯನ್ನು ನಿರ್ಮಿಸುವುದು ಅಸಾಧ್ಯವಾಗಿದ್ದರೂ ಮಾಸ ಪತ್ರಿಕೆಯನ್ನು ನಡೆಸುವುದು ಸಾಧ್ಯ ಎನ್ನುವಂತಿತ್ತು. ಜೀವನ ಏನು. ಕಾವ್ಯಾರಾಮ ಏನು? ಜೀವನ ಪತ್ರಿಕೆಯನ್ನೇ ನಡೆಸಿದರೆ ಆಯಿತು ಎಂದು ಯೋಚನೆ ಮೂಡಿತು; ಗೆಳೆಯರು ಇದನ್ನು ಅನುಮೋದಿಸಿದರು. ಐದನೆಯ ವರ್ಷದಿಂದ ಅದು ನನ್ನ ಸಂಪಾದಕತ್ವದಲ್ಲಿ ಬೆಂಗಳೂರಿಂದ ಹೊರಡುವುದು ಎಂದು ಏರ್ಪಾಡಾಯಿತು.

೨

ಯುದ್ಧದ ಕಾಲ ಆದದ್ದರಿಂದ ಈ ಪತ್ರಿಕೆಯನ್ನು ಹೊರಡಿಸಲು ಸರ್ಕಾರದ ಅಪ್ಪಣೆಯನ್ನು ಪಡೆಯಬೇಕಾಗಿತ್ತು. ಪತ್ರಿಕೆ ನಡೆಸುವೆವೆನ್ನುವವರ ಪೂರ್ವಾಪರ ಏನು ಎಂದು ಸರ್ಕಾರಗಳು ಬಹಳ ಯೋಚನೆ ಮಾಡುತ್ತಿದ್ದುವು. ಇದಕ್ಕಾಗಿ ಒಂದಷ್ಟು ವಿಚಾರಣೆ ನಡೆಯಬೇಕು. ಈ ವಿಚಾರಣೆ ಯೋಚನೆಯಲ್ಲಿ ಐದಾರು ತಿಂಗಳು ಕಳೆದವು. ಪತ್ರಿಕೆಯನ್ನು ನಡೆಸಲು ಅಪ್ಪಣೆ ಕೊಡಬಹುದು ಎಂದು ಆಯಿತು.

ಪತ್ರಿಕೆ ನಡೆಸಬಹುದು ಎಂದರೆ ಅದಕ್ಕೆ ಬೇಕಾದ ಕಾಗದವನ್ನು ಎಲ್ಲಿಂದ ತರುವುದು? ಆ ಮುನ್ನ ಕಾಗದದ ನಿಯಂತ್ರಣದ ಆಜ್ಞೆ ಹೊರಟಿತ್ತು. "ಪತ್ರಿಕೆ ಹೊರಡಿಸಲು ಅಪ್ಪಣೆ ಕೊಡುತ್ತೇವೆ. ಆದರೆ ನಿಮಗೆ ಬೇಕಾದ ಕಾಗದವನ್ನು ನೀವೇ ಒದಗಿಸಿಕೊಳ್ಳಬೇಕು. ಸರಕಾರ ಒದಗಿಸುವುದೆಂದು ನಿರೀಕ್ಷಿಸಕೂಡದು." ಎಂದು ನನಗೆ ಒಂದು ಪತ್ರ ಬಂದಿತು. ನಾನು, "ಕಾಗದ ಒದಗಿಸಿಕೊಳ್ಳುವುದು ಎಂದರೆ ದೊರೆತರೆ ಕೊಳ್ಳುವುದು ಎಂದಷ್ಟೇ ಅಲ್ಲವೆ? ದೊರೆತರೆ ಪತ್ರಿಕೆ ನಡೆಸುತ್ತೇನೆ; ದೊರೆಯದಿದ್ದರೆ ಪತ್ರಿಕೆ ನಿಲ್ಲುತ್ತದೆ. ಕಾಗದವನ್ನು ದೊರಕಿಸಿ ಎಂದು ನಾನು ಒತ್ತಾಯ ಪಡಿಸುವುದಿಲ್ಲ." ಎಂದು ಉತ್ತರ ಬರೆದೆನು. ಆಮೇಲೆ ಪತ್ರಿಕೆಯನ್ನು ನಡೆಸಲು ಅಪ್ಪಣೆ ಬಂದಿತು.

ಹೊಸದಾಗಿ ಸಂಪಾದಕರಾಗುವವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಎದುರಲ್ಲಿ ಓಗೆಂದು ಹೇಳಿಕೆಯನ್ನು ಕೊಟ್ಟು ಸಿಂಧು ಮಾಡಿಸುವುದು ಅವಶ್ಯಕವಾಗಿದ್ದಿತು. ಆ ದಿವಸವಲ್ಲಿ ಬೆಂಗಳೂರು ಜಿಲ್ಲೆಯಲ್ಲಿ ಶ್ರೀ ಇಸ್ಮಾಯಿಲ್ ಷರೀಫ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿದ್ದರು. ''ನಿಮ್ಮೆದುರು ನಾನು ಹೇಳಿಕೆ ಕೊಡಬೇಕಾಗಿದೆ. ಕಚೇರಿಯಲ್ಲಿ ಯಾವಾಗ ಇರುತ್ತೀರಿ, ದಯವಿಟ್ಟು ತಿಳಿಸಿ.'' ಎಂದು ಅವರನ್ನು ಟೆಲಿಫೋನಿನಲ್ಲಿ ಕೇಳಿದನು. ಈ ಮಹನೀಯರು ನನ್ನ ಅಧಿಕಾರದ ದಿನಗಳಲ್ಲಿ ನನ್ನ ಸಹೋದ್ಯೋಗಿಯಾಗಿದ್ದವರು. ''ಯಾವುದನ್ನು ಕುರಿತು ಹೇಳಿಕೆ?'' ಎಂದು ಕೇಳಿದರು. ನಾನು ಸಂಗತಿಯನ್ನು ತಿಳಿಸಿದೆನು. ''ಇಷ್ಟಕ್ಕಾಗಿ ತಾವು ಕಚೇರಿಗೆ ಬರಬೇಕು ಏಕೆ? ಹೇಳಿಕೆ ಗುರುತಾಯಿತು ಎಂದಿಟ್ಟುಕೊಳ್ಳಿ.'' ಎಂದು ಅವರು ಅಪ್ಪಣೆ ಕೊಡಿಸಿದರು. ನಾನು, ''ಇದರ ನಿಯಮ ಏನೋ ಹೇಗೋ ನಾನು ಎದುರಿಗೆ ಹೇಳುವುದು ಒಳ್ಳೆಯದಲ್ಲವೇ?'' ಎಂದು ಕೇಳಿದೆ. ಅವರು, ''ಇದು ಎದುರಿಗೇ ಹೇಳಿರುವುದು; ಇದು ಸಾಕು; ನಾನು ಕಚೇರಿಗೆ ತಿಳಿಸುತ್ತೇನೆ. ನೀವು ಬೇರೆ ಏನೂ ತೊಂದರೆ ತೆಗೆದುಕೊಳ್ಳಬೇಡಿ.'' ಎಂದರು. ಸಹೋದ್ಯೋಗಿಯಾಗಿದ್ದ ಮಿತ್ರರ ಈ ದಾಕ್ಷಿಣ್ಯ ವರ್ತನದಿಂದ ನನಗೆ ತುಂಬಾ ಸಂತೋಷವಾಯಿತು.

''ಧಾರವಾಡವಲ್ಲಿದ್ದ ಪತ್ರಿಕೆಯನ್ನು ಬೆಂಗಳೂರಿಗೆ ತರಲು ಅಪ್ಪಣೆ ಪಡೆದಿದ್ದೇನೆ. ದಯಮಾಡಿ ನನಗೆ ತಿಂಗಳಿಗೆ ಇಷ್ಟು ಕಾಗದ ಒದಗಿಸಬೇಕು.'' ಎಂದು ಮೈಸೂರು ಪೇಪರ್ ಮಿಲ್ಸ್ ಕಚೇರಿಗೆ ಒಂದು ಪತ್ರ ಬರೆವದ್ದಾಯಿತು. ಒದಗಿಸುತ್ತೇವೆ ಎಂದು ಹೇಳಿ ಆಮೇಲೆ ಯಾವುದೋ ಕಷ್ಟದ ಹೊತ್ತಿನಲ್ಲಿ ಒದಗಿಸದೆ ತಪ್ಪಿದರೆ ವ್ಯವಹಾರಕ್ಕೆ ಇಳಿಯಬೇಕಾದೀತೆಂದು ಅವರಿಗೆ ಭಯ. ''ಅನುಕೂಲವಾದಾಗ ಒದಗಿಸುತ್ತೇವೆ. ತಪ್ಪದೆ ಒದಗಿಸುತ್ತೇವೆ ಎಂದು ಭರವಸೆ ಕೊಡಲಾರೆವು. ಈಗ ಬಿಳಿಯ ಕಾಗದವನ್ನು ಕೊಡಲಾಗುವುದಿಲ್ಲ. ಕಂದು ಬಣ್ಣದ ಕಾಗದ ಮಾತ್ರ ಇದೆ.'' ಎಂದು ಅವರು ತಿಳಿಸಿದರು. ವ್ಯಾಪಾರದ ಜನ, ವ್ಯವಹಾರದ ಮಾತು, ಒತ್ತಾಯದ ಮಾತು, ಬಣ್ಣದ ಮಾತು, ತಲೆ ಎತ್ತುತ್ತಿದ್ದ ದಿನ. ನಾನೇನಾದರೂ ತೊಂದರೆ ಕೊಟ್ಟೇನು ಎಂದು ಇವರು ಯೋಚಿಸಿದ್ದರೂ ಆಶ್ಚರ್ಯವಿಲ್ಲ. ನಾನೋ ಅಸಹಾಯನಾಗಿದ್ದೆ. ಯಾವ ಕಾಗದ ದೊರೆತರೆ ಆ ಕಾಗದವನ್ನು ಬಳಸುವುದಕ್ಕೆ ಸಿದ್ಧನಾಗಿದ್ದೆ. ಕಾಗದ ದೊರೆಯಲಿಲ್ಲ, ಪತ್ರಿಕೆ ನಡೆಸುವ ಯೋಚನೆಯನ್ನೆ ಬಿಡುವುದಕ್ಕೂ ಸಿದ್ಧನಾಗಿದ್ದೆ. ಆದ್ದರಿಂದ ಕಂಪೆನಿಯ ಮಾತಿಗೆಲ್ಲ ಒಪ್ಪಿದೆ. ಪತ್ರಿಕೆಯ ಕೆಲಸ ಆರಂಭ ಆಯಿತು.

೩

ಧಾರವಾಡದ ಕಚೇರಿಯಿಂದ ಜಿ.ಬಿ. ಜೋಶಿಯವರು ಪತ್ರಿಕೆಯ ಸಂಬಂಧದ ಹಳೆಯ ಕಾಗದ ಪತ್ರ ಎಲ್ಲವನ್ನೂ ಕಳುಹಿಸಿಕೊಟ್ಟರು. ಚಂದಾದಾರರಪಟ್ಟಿ ಸುಮಾರು ನಾನೂರ ಐವತ್ತನ್ನು ಮುಟ್ಟಿತ್ತು. ಪತ್ರಿಕೆಯನ್ನು ಕಳುಹಿಸಲು ಅಂಚೆ ಸೌಕರ್ಯವನ್ನು ಬೇಡಿ ಅಪ್ಪಣೆ ಪಡೆಯಲು ಸ್ವಲ್ಪ ದಿನ ಕಳೆಯಿತು. ಅಂತೂ ಪತ್ರಿಕೆಯ ಐದನೆಯ ಸಂಪುಟದ ಮೊದಲನೆಯ ಸಂಚಿಕೆ ಹೊರಡಬೇಕಾದರೆ ಸಾವಿರದ ಒಂಬೈನೂರ ನಲವತ್ತು ನಾಲ್ಕರ ಮೇ ತಿಂಗಳು ಬಂದಿತು.

ಮೊದಲ ಕೆಲವು ವರ್ಷ ಪತ್ರಿಕೆಯನ್ನು ಬಿ.ಬಿ.ಡಿ. ಪವರ್ ಪ್ರೆಸ್ಸಿನಲ್ಲಿ ಅಚ್ಚು ಮಾಡಿಸಲಾಯಿತು. ಆಮೇಲೆ ಕೆಲವು ವರ್ಷ ಅದು ಬೆಂಗಳೂರು ಪ್ರೆಸ್ಸಿನಲ್ಲಿ ಅಚ್ಚಾಯಿತು. ಅದಾದ ಮೇಲೆ ಈ ಹಲವು ವರ್ಷ ಅದು ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕಂಠಯ್ಯ ಅಚ್ಚುಕೂಟದಲ್ಲಿ ಅಚ್ಚಾಗುತ್ತಾ ಬಂದಿದೆ.

ಕಾಗದದ ಕಷ್ಟ ಕಡಮೆ ಆದಾಗ ಕಂದು ಬಣ್ಣದ ಕಾಗದಕ್ಕೆ ಪ್ರತಿಯಾಗಿ ಕಾರ್ಖಾನೆ ಬಿಳಿಯ ಕಾಗದವನ್ನು ಕೊಡಲು ಒಪ್ಪಿತು. ಈಗ ಅನೇಕ ವರ್ಷಗಳಿಂದ ಪತ್ರಿಕೆ ಬಿಳಿಯ ಕಾಗದದ ಮೇಲೆಯೇ ಅಚ್ಚಾಗಿದೆ. ತಕ್ಕಷ್ಟು ಯೋಗ್ಯತೆಯ ಸಾಹಿತ್ಯ ತಕ್ಕಷ್ಟು ಒಳ್ಳೆಯ ಕಾಗದದ ಮೇಲೆ ತಕ್ಕಷ್ಟು ಒಳ್ಳೆಯ ರೀತಿಯಲ್ಲಿ ಅಚ್ಚಾಗಲಿ

ಎಂದು ಬಯಸುವುದು ಸಹಜ. ಪರದೇಶಗಳಲ್ಲಿ ಇಂಥ ಕೆಲಸಕ್ಕೆ ಬಳಸುವ ಕಾಗದ ಎಷ್ಟು ಶ್ರೇಷ್ಠವಾದದ್ದು ಎನ್ನುವುದನ್ನು ನೋಡಿದರೆ ನಮ್ಮ ದೇಶದಲ್ಲಿ ಅಂಥ ಕಾಗದವನ್ನು ಬಳಸುವ ದಿನ ಬಂದೀತೇ ಎಂದು ಆಸೆ ಆಗುತ್ತದೆ. ಆ ದೇಶಗಳ ಮಾತು ಬೇರೆ, ನಮ್ಮ ದೇಶದ ಮಾತು ಬೇರೆ. ಉನ್ನತ ಮಟ್ಟದ ಪತ್ರಿಕೆ ನಡೆಯುವುದೇ ಕಷ್ಟವಾಗಿರುವಾಗ ಒಳ್ಳೆಯ ಕಾಗದವನ್ನು ಬಯಸಿ ಫಲವೇನು? 'ಜೀವನ' ಪತ್ರಿಕೆ ಈಚೆಗೆ ಬಿಳಿಯ ಕಾಗದವನ್ನು ಬಳಸುತ್ತಿರುವುದನ್ನು ನೋಡಿ ಮಿತ್ರರು ಸಂತೋಷಪಟ್ಟದ್ದು, ಆಶ್ಚರ್ಯಪಟ್ಟದ್ದೂ ಉಂಟು.

೪

ಪತ್ರಿಕೆಯನ್ನು ನಡೆಸಲು ಬೇಕಾದ ಹಣವನ್ನು ನಾನು ಕೈಯಿಂದ ಹಾಕಿ ಕೆಲಸವನ್ನು ಆರಂಭಿಸಬೇಕಾಯಿತು. ಪತ್ರಿಕೆಯ ಕೆಲಸಕ್ಕೆ ಆಗತಾನೆ ಯುದ್ಧದ ಕಾರಣದಿಂದ ಕಲ್ಕತ್ತಾ ನಗರವನ್ನು ತೊರೆದು ಬೆಂಗಳೂರಿಗೆ ಹಿಂತಿರುಗಿ ಬಂದಿದ್ದ ಶ್ರೀ ಎ. ನಾರಾಯಣಸ್ವಾಮಿ ಅಯ್ಯರ್‌ರವರು ಮ್ಯಾನೇಜರಾದರು. ಆಗಿನ ಸ್ಥಿತಿಯಲ್ಲಿ ಅವರಿಗೆ ತಕ್ಕ ಸಂಬಳ ಕೊಡುವುದು ಸಾಧ್ಯವಾಗಿರಲಿಲ್ಲ. ನಡೆದಾಡುವ ವೆಚ್ಚಕ್ಕೆ ಎಂದು ಒಂದು ಸಣ್ಣ ಮೊತ್ತವನ್ನು ಕೊಟ್ಟದ್ದಾಯಿತು. ಹಳೆಯ ಚಂದಾದಾರರಿಗೆ ಪತ್ರಗಳನ್ನು ಬರೆದು ಹೊಸ ಚಂದಾದಾರರನ್ನು ಸೇರಿಸಿಕೊಂಡು ಹಣ ತರಿಸಿಕೊಂಡು ಸ್ವಲ್ಪ ಕಾಸು ಬಂದ ಮೇಲೆ ಅವರಿಗೆ ತಿಂಗಳಿಗೆ ಅರವತ್ತು ರೂಪಾಯಿಯೆಂದು ಗೊತ್ತು ಮಾಡಿದ್ದಾಯಿತು. ನಾರಾಯಣಸ್ವಾಮಿ ಅಯ್ಯರ್ ಸ್ವತಃ ಲೇಖಕರು. ಬಡತನದಲ್ಲಿ ಬೆಳೆದು ಕಷ್ಟವನ್ನು ಸಹಿಸುವ ಶಕ್ತಿಯನ್ನು ಗಳಿಸಿದ್ದರು. ಪ್ರಾಯದ ಮನುಷ್ಯ, ತುಂಬ ದುಡಿಯಬಲ್ಲವರಾಗಿದ್ದರು. ಪತ್ರಿಕೆ ಎಲ್ಲಕ್ಕೂ ಅವರೊಬ್ಬರೇ ದಿಕ್ಕು.

ಮೊದಲ ಮೂರು ವರ್ಷ ಮಿತ್ರರು ಸಲ್ಲಿಸಿದ ಸೇವೆಯೆಷ್ಟು ಎಂದು ಹೇಳಲು ಸಾಧ್ಯವಲ್ಲ. ಅದನ್ನು ಎಷ್ಟು ಹೊಗಳಿದರೂ ಸಾಲದು. ಮೇಲಿನ ವಿಚಾರಣೆ, ಚಂದಾದಾರರನ್ನು ಸೇರಿಸುವುದು, ಬಲ್ಲವರಿಂದ ಹಣ ತರಿಸುವುದು, ಅವಶ್ಯಕವಾದಾಗ ಬರವಣಿಗೆ ಒದಗಿಸುವುದು : ಇಷ್ಟು ನನಗೆ ಕೆಲಸ. ಉಳಿದದ್ದೆಲ್ಲಾ ಈ ಮಿತ್ರರ ಹೊಣೆ ಆಗಿತ್ತು. ಕಚೇರಿಯಲ್ಲಿ ಲೆಕ್ಕಪತ್ರ, ಅಚ್ಚಿನ ಮನೆಯಲ್ಲಿ ನಡೆಯಬೇಕಾದ ಕೆಲಸ, ಪೇಪರ್ ಮಿಲ್ಲಿನೊಡನೆ ವ್ಯವಹಾರ, ಅಂಚೆಯ ಮನೆಯ ವ್ಯವಹಾರ, ಇವೆಲ್ಲವನ್ನೂ ಶ್ರೀ ನಾರಾಯಣಸ್ವಾಮಿ ಅಯ್ಯರ್ ಬೇಸರ ಇಲ್ಲದೆ ಅನಾಯಾಸವಾಗಿ ನೋಡಿಕೊಂಡರು. ಇವರ ಬಹುಮುಖದ ನೆರವು ಇಲ್ಲದಿದ್ದರೆ ಪತ್ರಿಕೆಯನ್ನು ನಡೆಸಲು ಆಗುತ್ತಿರಲಿಲ್ಲ.

ಪತ್ರಿಕೆ ಸ್ವತಂತ್ರವಾಗಿ ನಡೆಯಬೇಕಾದರೆ ಏನಿಲ್ಲವೆಂದರೂ ಒಂದು ಸಾವಿರ ಚಂದಾದಾರರು ಇರಬೇಕು. ಮಿತ್ರರು ನನ್ನ ಹಿರಿಯರಿಗೆ ಮಿತ್ರರಿಗೆ ಪತ್ರಗಳನ್ನು ಬರೆದು ಸಹಾಯವನ್ನು ಬೇಡಿದೆನು. ಅನೇಕರಿಂದ ಈ ಸಹಾಯ ದೊರೆಯಿತು. ಜೊತೆಗೆ ಎಲ್ಲಿ ಹೋದರೂ ಯಾರನ್ನು ಕಂಡರೂ, ಪತ್ರಿಕೆ ನಡೆಸುತ್ತಿರುವ ಮಾತನ್ನು ಹೇಳಿ ಅದಕ್ಕೆ ಅವರ ನೆರವನ್ನು ಬೇಡುತ್ತಿದ್ದೆನು. ಈ ಕೆಲಸವನ್ನು ಕೈಗೆ ತೆಗೆದುಕೊಂಡ ದಿನದಲ್ಲಿ ನಾನು ಪರಿಷತ್ತಿನ ಉಪಾಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದೆನು. ಎರಡೂ ಭಾಷೆಯ ಸೇವೆ. ಜೀವನ ಪತ್ರಿಕೆಯಿಂದ ನನಗೆ ಹಣ ಬರಬೇಕಾಗಿರಲಿಲ್ಲ; ಆದರೂ ಪರಿಷತ್ತು ಸಾರ್ವಜನಿಕ ಸಂಸ್ಥೆ, ಜೀವನ ಪತ್ರಿಕೆ ಒಂದು ಸ್ವಂತ ಉದ್ಯಮ. ಆದ್ದರಿಂದ ಮೊದಲು ಪರಿಷತ್ತಿಗೆ ಸದಸ್ಯರಾಗಿ ಎಂಬ ಬೇಡಿಕೆಯನ್ನು ಮುಂದಿಟ್ಟು ಅದಕ್ಕೆ ಸುಮುಖವಾದ ಉತ್ತರ ಬಂದ ಮೇಲೆ ಜೀವನ ಪತ್ರಿಕೆಯ ಮಾತನ್ನು ಆಡಬೇಕಾಗಿತ್ತು. ಈ ಕಾರಣದಿಂದ ಪತ್ರಿಕೆಯ ಚಂದಾಪಟ್ಟಿ ಬಯಸಬಹುದಾದಷ್ಟು ವೇಗವಾಗಿ ಬೆಳೆಯಲಿಲ್ಲ. ಈ ಸಂದರ್ಭದಲ್ಲಿ ನಾನು ನನ್ನ ಹಿರಿಯರಾದ ಶ್ರೀ. ಎಸ್.ಎಸ್. ಸುಬ್ಬರಾವ್, ಬಿ.ಎಂ. ಶ್ರೀಕಂಠಯ್ಯನವರು, ಈ ಇಬ್ಬರ ಹೆಸರನ್ನು ಹೇಳಬೇಕು. ಶ್ರೀಕಂಠಯ್ಯನವರಿಗೆ ಇಂಥ ಒಂದು ಹೊಸ ಪತ್ರಿಕೆ ನಡೆದೀತೆ ಎಂಬ ವಿಷಯದಲ್ಲಿ ತುಂಬ ಶಂಕೆ. ಕಿರಿಯ,

ಕಷ್ಟದ ಕೆಲಸವನ್ನು ಕೈಗೆತ್ತಿಕೊಳ್ಳುತ್ತಿದ್ದಾನೆ, ಎಂಬ ಭಾವನೆಯಿಂದ, ಅವರು ಉದ್ಯಮದಲ್ಲಿ ಶುಭವನ್ನು ಬಯಸಿ ನನ್ನನ್ನು ಹರಸಿದರು. ಶ್ರೀ ಸುಬ್ಬರಾಯರು ಮೈಸೂರಿನ ಚಂದಾಪಟ್ಟಿಯಲ್ಲಿ ತಮ್ಮ ಹೆಸರನ್ನು ಮೊದಲ ಹೆಸರಾಗಿ ಕೊಟ್ಟರು. ದೈವೇಚ್ಛೆ ಹಾಗಿದ್ದು ಅವರು ತೀರಿಕೊಂಡ ನಂತರ ಅವರ ಸ್ಥಳದಲ್ಲಿ ಅವರ ಕುಮಾರ ಶ್ರೀ. ಎನ್.ಎಸ್. ರಾಮಚಂದ್ರ ಅವರ ಹೆಸರನ್ನು ನಾನು ಮೊದಲ ಹೆಸರಾಗಿ ಇರಿಸಿಕೊಂಡಿದ್ದೇನೆ. ಒಂದು ಸಂದರ್ಭದಲ್ಲಿ ಪತ್ರಿಕೆಯ ಚಂದಾದಾರರಾಗಿ ನಡೆದುಕೊಳ್ಳಲು ಕಷ್ಟವಾಗುತ್ತದೆ ಎಂದು ಕಂಡು ಶ್ರೀ ರಾಮಚಂದ್ರ ತಮ್ಮ ಹೆಸರನ್ನು ಪಟ್ಟಿಯಿಂದ ಬಿಡಬೇಕು ಎಂದು ತಿಳಿಸಿದಾಗ ನಾನು, ''ಚಂದಾ ಕೊಡುವುದು ಅನಾನುಕೂಲವಾದರೆ ಕೊಡುವುದು ಬೇಡ, ನಿಮ್ಮ ಹೆಸರು ನಿಮ್ಮ ತಂದೆಯವರ ಹೆಸರಿಗೆ ಪ್ರತಿನಿಧಿಯಾಗಿ ಅವರ ಸ್ಥಳದಲ್ಲಿದೆ, ಅದನ್ನು ತೆಗೆದು ಹಾಕಲಾರೆ.'' ಎಂದೆನು.

ಈ ಸಂದರ್ಭದ ಇನ್ನು ಕೆಲವು ಕತೆಗಳು ನೆನೆಯಲು ತಕ್ಕವು. ಸೋಸಲೆ ಗರಳಪುರಿ ಶಾಸ್ತ್ರಿಗಳವರು ನಮ್ಮ ತಲೆಮಾರಿನ ಅಭಿಮಾನಿ ಹಿರಿಯರಲ್ಲಿ ಒಬ್ಬ ಪ್ರಮುಖರು. ಕನ್ನಡದ ಕೆಲಸ ಎಂದು ಬಹುಕಾಲ ಜೊತೆಯಾಗಿ ನಡೆದಿದ್ದೆವು. ''ನಿಮ್ಮನ್ನು ಚಂದಾದಾರರನ್ನಾಗಿ ಸೇರಿಸಿಕೊಂಡಿದ್ದೇನೆ. ಪತ್ರಿಕೆಗೆ ನಿಮ್ಮ ಬೆಂಬಲ ಇರಬೇಕು.'' ಎಂದು ಬರೆದು ಮೊದಲ ಸಂಚಿಕೆಯನ್ನು ಕಳುಹಿಸಿಕೊಟ್ಟೆನು. ಅದೇನು ಕಾರಣವೋ ಅದು ಈಗಲೂ ನನಗೆ ತಿಳಿಯದು, ಈ ಮಿತ್ರರು ಆ ಪ್ರತಿಯನ್ನು ಹಿಂದಕ್ಕೆ ಕಳುಹಿಸಿದರು, ''ಈ ಚಂದಾ ಕೊಡುವುದು ನನಗೆ ಅನುಕೂಲ ಅಲ್ಲ, ನನ್ನ ಹೆಸರನ್ನು ಪಟ್ಟಿಯಲ್ಲಿ ಸೇರಿಸಬೇಡ.'' ಎಂದು ಪತ್ರ ಬರೆದರು. ನಾನು ಪತ್ರಿಕೆಯನ್ನು ಮತ್ತೆ ಕಳುಹಿಸಿದೆನು. ''ಚಂದಾ ಕೊಡುವುದು ಅನುಕೂಲ ಅಲ್ಲವೆಂದರೆ ಕೊಡೋಣ ಬೇಡ; ಆದರೆ ಕನ್ನಡದಲ್ಲಿ ನಾನು ಮಾಡುತ್ತಿರುವ ಕೆಲಸ ನಿಮಗೆ ತಿಳಿದಿರಬೇಕು. ಈ ಕಾರಣದಿಂದ ಪತ್ರಿಕೆಯನ್ನು ಚಂದಾ ಬಯಸದೆ ಕಳುಹಿಸುತ್ತೇನೆ. ಸ್ವೀಕರಿಸಿರಿ.'' ಎಂದು ಪತ್ರ ಬರೆದೆನು. ಮಿತ್ರರು ಮತ್ತೆ ಪತ್ರ ಬರೆಯಲಿಲ್ಲ, ಪತ್ರಿಕೆಯನ್ನು ತೆಗೆದುಕೊಂಡರು. ಹಲವು ಸಂಚಿಕೆ ಪ್ರಕಟವಾದ ಮೇಲೆ ಒಂದು ಸಲ ಕ್ಲಬ್ಬಿನಲ್ಲಿ ಕಂಡಾಗ, ''ಈ ಸಲದ ನಿನ್ನ ಪತ್ರಿಕೆಯಲ್ಲಿ ಈ ನಿನ್ನ ಲೇಖನ ಇದೆಯಲ್ಲಾ ಅದು ಬಹಳ ಚೆನ್ನಾಗಿದೆ.'' ಎಂದು ಮೆಚ್ಚಿಕೆಯ ಮಾತನ್ನು ಹೇಳಿದರು. ನಾನು, ''ಲೇಖನ ನಿನಗೆ ರುಚಿಸಿದ್ದು ಬಹಳ ಸಂತೋಷ. ಬರೆಯುವ ಮನುಷ್ಯನಿಗೆ ಇಂಥ ಒಳ್ಳೆಯ ಮಾತು ತೀರಾ ಅವಶ್ಯಕ.'' ಎಂದೆ : ಆ ಕ್ಷಣ ಮಾತು ಅಲ್ಲಿಗೆ ನಿಂತಿತು. ಕ್ಲಬ್ಬಿನಿಂದ ಹೊರಡುವಾಗ ನಾನು, ''ಬರವಣಿಗೆ ಚೆನ್ನಾಗಿದೆ ಎಂದೆಯಲ್ಲಾ, ಇಂಥ ಸಂಗತಿ ಪ್ರಕಟವಾಗಬೇಕೆಂದರೆ ಒಂದು ಪತ್ರಿಕೆಯಿರಬೇಕು. ಅಂಥ ಒಂದು ಪತ್ರಿಕೆಗೆ ನಿನ್ನ ಸಹಾಯ ಬೇಡವೇ?'' ಎಂದು ನಾನು ಕೇಳಿದೆನು. ಗೆಳೆಯ ನಕ್ಕದ್ದು ಕಂಡಿತು. ಏನೊ ಮಾತನ್ನು ಆಡಿದರು. ಅದು ಏನು ಎಂದು ಸ್ಪಷ್ಟವಾಗಲಿಲ್ಲ, ಮಾರನೆಯ ದಿನ ಅವರಿಂದ ಒಂದು ಪತ್ರ ಬಂದಿತು. ''ಜನರನ್ನು ಒಲಿಸಿಕೊಳ್ಳುವ ಗೆಳೆಯನಿಗೆ'' ಅವರು ಅದರಲ್ಲಿ ತಮ್ಮನ್ನು ಚಂದಾ ಪಟ್ಟಿಯಲ್ಲಿ ಸೇರಿಸಿಕೊಳ್ಳಬೇಕು ಎಂದು ಪ್ರಾರ್ಥಿಸಿದ್ದರು. ಜೊತೆಗೆ ಚಂದಾ ಹಣವನ್ನು ಕಳುಹಿಸಿದ್ದರು.

ಪತ್ರಿಕೆ ತುಂಬಾ ಅವಶ್ಯಕ ಕೆಲಸವನ್ನು ಮಾಡುತ್ತಿದೆ, ಅದಕ್ಕೆ ತಮ್ಮ ಸಹಾಯ ಬೇಕು ಎಂದು ಬೇಡುವಲ್ಲಿ ಸಹೃದಯರಲ್ಲದ ಹಿರಿಯರಿಂದ ನಾನು ಕೆಟ್ಟ ಮಾತನ್ನು ಕೇಳಿದ್ದು ಉಂಟು. ಇಂಥ ಒಬ್ಬ ಹಿರಿಯ ಮಿತ್ರರು ನಾನು ಈ ಪ್ರಾರ್ಥನೆ ಮಾಡಿದ ಕ್ಷಣ ಏನೂ ಹೇಳದೆ ಕೆಲವು ನಿಮಿಷ ಬಿಟ್ಟು, ''ನಮ್ಮಲ್ಲಿ ಬಲ್ಲವರು ಎನ್ನುವ ಜನ ಕೂಡ ತಾವು ಮಾಡುತ್ತಿರುವ ಕೆಲಸ ಬಹು ದೊಡ್ಡದು, ಅದು ನಡೆಯದಿದ್ದರೆ ಲೋಕವೇ ನಡೆಯುವುದಿಲ್ಲ ಎಂಬಂತೆ ಮಾತನಾಡುತ್ತಾರೆ.'' ಎಂದರು. ಇವರೂ ಬಲ್ಲವರೆ. ಆ ಕ್ಷಣ ಅಸಹೃದಯರಾಗಿದ್ದರು. ನಾನು ಬೇಸರ ತೋರಿಸಲಿಲ್ಲ. ''ಅಲ್ಲ?'' ಎಂದೆ ಆ ಮಾತನ್ನು ಅಲ್ಲಿಗೆ ಬಿಟ್ಟೆ.

ಚಂದಾದಾರರ ಪಟ್ಟಿ ಬೇಗನೆ ಎಂಟು ನೂರನ್ನು ಮುಟ್ಟಿತು. ಮೂರು ನಾಲ್ಕು ವರ್ಷದಲ್ಲಿ ಸಾವಿರವನ್ನು ಮುಟ್ಟಿತು. ಇನ್ನೆರಡು ವರ್ಷದಲ್ಲಿ ಇನ್ನೊಂದು ನೂರು ಹೆಚ್ಚಿತು. ಅದರಾಚೆಗೆ ಏರಲಿಲ್ಲ. ಒಂದು ಸಂಚಿಕೆಯ

ಸಾವಿರದ ಇನ್ನೂರೈವತ್ತು ಪ್ರತಿಗಿಂತ ಹೆಚ್ಚು ಅಚ್ಚು ಮಾಡುವುದು ಎಂದೂ ಅವಶ್ಯಕವಾಗಲಿಲ್ಲ.

ನಾನು ನಡೆಸುವ ಪತ್ರಿಕೆ ಎಂಬ ಅರ್ಥದಿಂದಲ್ಲ, ತಕ್ಕಷ್ಟು ಒಳ್ಳೆಯ ರೀತಿಯಲ್ಲಿ ನಡೆಯು ಹೊರಟಿರುವ ಕನ್ನಡ ಮಾಸಪತ್ರಿಕೆ ಒಂದಕ್ಕ ಇದಕ್ಕಿಂತ ಹೆಚ್ಚಿನ ಬೆಂಬಲ ದೊರೆಯದಿರುವುದು ಶೋಚನೀಯ. ಅಭಿಮಾನಿ ಮಿತ್ರರು ಪತ್ರಿಕೆಯ ಸ್ಥಿತಿ ಹೇಗಿದೆ ಎಂದು ಕೇಳಿದಾಗ ಹೀಗಿದೆ ಎಂದು ವಿಜ್ಞಾಪಿಸಿದ ವೇಳೆ ''ಇತರ ಭಾಷೆಗಳಲ್ಲಿ ಒಳ್ಳೆಯ ಮಾಸಪತ್ರಿಕೆಗಳಿಗೆ ಇದಕ್ಕಿಂತ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತಿದೆ. ಕನ್ನಡದಲ್ಲಿ ಈ ದುರವಸ್ಥೆ ಏಕೆ?'' ಎಂದು ಕೇಳಿದ್ದುಂಟು. ಇದರ ಕಾರಣ ನನಗೆ ಎಷ್ಟೊ ಅವರಿಗೂ ಅಷ್ಟೇ ಚೆನ್ನಾಗಿ ತಿಳಿಯಬೇಕು. ನಮ್ಮ ಜನ ಈ ವಿಷಯವನ್ನು ಕುರಿತು ಯೋಚಿಸಬೇಕಾಗಿದೆ.

ಚಂದಾದಾರರನ್ನು ಸಂಪಾದಿಸುವುದರಲ್ಲಿ ಬೇರೆಯ ರೀತಿ ಕಷ್ಟ ಆದದ್ದುಂಟು. ಪತ್ರಿಕೆಗೆ ಬೆಂಬಲ ಬೇಡಿದಾಗ ಕೆಲವರು ಮಿತ್ರರು ತಾವು ಪತ್ರಿಕೆ ತರಿಸಿಕೊಳ್ಳುವುದಾಗಿ ಹೇಳಿ ತಮ್ಮ ಮಿತ್ರರ ಹಲವರ ವಿಳಾಸಗಳನ್ನು ಕೊಡುವರು. ''ಇವರಿಗೆ ಪತ್ರಿಕೆ ಕಳುಹಿಸಿರಿ; ಇಂಥ ಕೆಲಸದಲ್ಲಿ ಅವರಿಗೆ ಅಭಿಮಾನವುಂಟು.'' ಎನ್ನುವರು. ನಾನೂರೈವತ್ತರ ಪಟ್ಟಿ ಸಾವಿರದ ನೂರ ಐವತ್ತಕ್ಕೆ ಏರಿದ್ದು ಬಹುಪಾಲು ಹೀಗೆಯೇ. ಇಂಥ ಸಂದರ್ಭದಲ್ಲಿ ಮಿತ್ರರು ಕೊಟ್ಟ ಹತ್ತು ಹೆಸರಿನಲ್ಲಿ ಒಂದೋ ಎರಡೋ ಫಲಿಸದೆ ಹೋಗುವುದು, ಕಾಗದ ಬರೆಯುತ್ತೇನೆ ಎಂದು ಹೇಳಿದ ಮಿತ್ರರು ಬರೆಯದೆ ಇರುವ ಕಾರಣವಿರಬೇಕು. ಪತ್ರಿಕೆ ಪಡೆದ ಭಾಷಾಭಿಮಾನಿಗಳು, ''ನನಗೆ ಪತ್ರಿಕೆ ಬೇಕು ಎಂದು ನಾನು ನಿಮಗೆ ತಿಳಿಸಿಲ್ಲ. ಅದನ್ನು ಯಾಕೆ ಕಳುಹಿಸಿದ್ದೀರಿ? ಜನರಿಗೆ ಹೀಗೆ ಹಿಂಸೆ ಕೊಡುವುದು ತರವಲ್ಲ.'' ಎಂದು ಉತ್ತರ ಬರೆಯುವರು. ಇಂಥ ವೇಳೆ, ''ತಮ್ಮ ಮಿತ್ರರೊಬ್ಬರು ತಮ್ಮ ಹೆಸರನ್ನು ಸೂಚಿಸಿದ್ದರಿಂದ ಪತ್ರಿಕೆ ಕಳುಹಿಸಿದ್ದಾಯಿತು. ಅದು ತಮಗೆ ಬೇಡ ಎಂದು ಈಗ ತಿಳಿದಿರುವುದರಿಂದ ಇನ್ನು ಮುಂದೆ ಕಳುಹಿಸುವುದಿಲ್ಲ.'' ಎಂದು ನಮ್ಮಿಂದ ಉತ್ತರ. ಇಂಥ ಒಂದು ಸಂದರ್ಭದಲ್ಲಿ ಮೂರು ವರ್ಷ ಪತ್ರಿಕೆ ಪಡೆದ ಒಬ್ಬ ಮಿತ್ರರು, ''ಪತ್ರಿಕೆ ನಮಗೆ ಬೇಡವಾಗಿದ್ದರೂ ಇಷ್ಟು ದಿನವೂ ಬಂದಿದೆ. ಮೂರು ವರ್ಷದ ಚಂದಾ ಹಣದ ಬಗ್ಗೆ ಚೆಕ್ ಇದರೊಂದಿಗೆ ಕಳುಹಿಸಿದೆ. ಇನ್ನು ಪತ್ರಿಕೆಯನ್ನು ಕಳುಹಿಸುವುದು ಬೇಡ.'' ಎಂದು ಬರೆದರು. ನಾನು, ''ಬೇಡದೇ ಇದ್ದ ಪತ್ರಿಕೆ ಬಂದ ಮಾತ್ರಕ್ಕಾಗಿ ತಾವು ಏಕೆ ವೆಚ್ಚಕ್ಕೆ ಗುರಿಯಾಗಬೇಕು?'' ಚೆಕ್ ಹಿಂದಕ್ಕೆ ಕಳುಹಿಸಿದ್ದೇನೆ. ಇದನ್ನು ಬೇಸರದಿಂದಾಗಲಿ ಅಸಮಾಧಾನದಿಂದಾಗಲಿ ಮಾಡುತ್ತಿಲ್ಲ. ಪತ್ರಿಕೆಯನ್ನು ಇನ್ನು ಕಳುಹಿಸುವುದಿಲ್ಲ.'' ಎಂದು ಉತ್ತರ ಬರೆದು ಚೆಕ್ಕನ್ನು ಹಿಂತಿರುಗಿಸಿದೆನು. ಆ ಮಿತ್ರರು ಮತ್ತೆ ಪತ್ರ ಬರೆದರು, ''ನಿಮ್ಮಿಂದ ಬಹಳ ಕೆಲಸ ಆಗುತ್ತಿದೆ. ಇದು ನಡೆಯಬೇಕು. ನನ್ನನ್ನು ಚಂದಾದಾರನನ್ನಾಗಿ ಇರಿಸಿಕೊಳ್ಳಿ. ಇನ್ನು ಮುಂದೆಯೂ ಪತ್ರಿಕೆಯನ್ನು ಕಳುಹಿಸಿಕೊಡಿ. ಚೆಕ್ಕನ್ನು ಮತ್ತೆ ಕಳುಹಿಸಿದ್ದೇನೆ.'' ಎಂದು ಅಪ್ಪಣೆ ಮಾಡಿದರು.

ಚಂದಾದಾರರನ್ನು ಸೇರಿಸುವುದು, ಉಳಿಸಿಕೊಳ್ಳುವುದು, ಅವರಿಂದ ಹಣವನ್ನು ತರಿಸಿಕೊಳ್ಳುವುದು, ತುಂಬ ಶ್ರಮದ ಕೆಲಸ. ಎಲ್ಲಿಯೋ ಕಂಡಾಗ ದೊಡ್ಡ ಮನುಷ್ಯರು ಕಷ್ಟಸುಖ ವಿಚಾರಿಸಿದಾಗ ಪತ್ರಿಕೆಯ ಮಾತನ್ನು ಹೇಳಿ ಅವರನ್ನು ಚಂದಾದಾರರಾಗಿ ಎಂದು ನಾನು ಬೇಡಿರುತ್ತೇನೆ. ಅವರು ಆಗಲಿ ಎಂದಿರುತ್ತಾರೆ. ಪತ್ರಿಕೆ ಕ್ರಮವಾಗಿ ಹೋಗುತ್ತದೆ. ನಾಲ್ಕು ಐದು ವರ್ಷ ಪತ್ರಿಕೆ ಹೋಗಿದ್ದರೂ ಚಂದಾ ಬರುವುದಿಲ್ಲ. ಒಟ್ಟೊಟ್ಟು ಚಂದಾದಾರರಿಗೂ ವರ್ಷಕ್ಕೆ ಒಂದು ಸಲ ಒಂದು ನೆನಪಿನ ಪತ್ರ ಹೋಗಿರುತ್ತದೆ. ಅದಕ್ಕೆ ಉತ್ತರ ಇಲ್ಲ. ಅದು ಚಂದಾದಾರ ಮಿತ್ರರ ಕೈಗೆ ಹೋಯಿತೋ ಇಲ್ಲವೋ ತಿಳಿಯದು. ಇಂಥ ವೇಳೆ ಸಂಪಾದಕ ಸ್ವಂತ ಕಾಗದವೊಂದನ್ನು ಬರೆಯಬೇಕು. ಆಗ ಕೆಲವರಿಂದ ಹಣ ಬರುತ್ತದೆ.

ಇದಂತೂ ಅದೆಷ್ಟು ಸಲ ಆಗಿದೆಯೋ. ಕೆಲವು ಸಲ ಇದರಿಂದಲೂ ಪ್ರಯೋಜನ ಇಲ್ಲ. ಇಂಥ ಕೆಲವು ವೇಳೆ ಚಂದಾದಾರರ ಮಿತ್ರರ ಜೊತೆ ಮಿತ್ರರಿಗೆ ಒಂದು ಕಾಗದ. ''ಶ್ರೀಯುತ ಇಂಥವರಿಂದ ನೆನಪಿನ

ಪತ್ರಗಳಿಗೆ ಉತ್ತರ ಬಂದಿಲ್ಲ. ನೆನಪಿನ ಪತ್ರಗಳು ಅವರ ಕೈಗೆ ಹೋದವೊ ಇಲ್ಲವೋ ತಿಳಿಯದು. ದಯವಿಟ್ಟು ಅವರನ್ನು ಈ ವಿಷಯದಲ್ಲಿ ಒಂದು ಮಾತು ಕೇಳಿ.'' ಆ ಮಿತ್ರರು ಮಾತನಾಡಿದ ಮೇಲೆ ಚಂದಾದಾರ ಮಿತ್ರರು ಸಲ್ಲಬೇಕಾಗಿರುವ ಚಂದಾ ಹಣದ ಜೊತೆಗೆ ಇನ್ನೈದು ವರ್ಷದ ಚಂದಾ ಹಣವನ್ನು ಮುಂಗಡವಾಗಿ ಕಳುಹಿಸಿಕೊಟ್ಟಿದ್ದಾರೆ.

ಸ್ವಂತ ಪತ್ರಗಳನ್ನು ಬರೆದು ಮಿತ್ರರ ಮೂಲಕ ಬೇಡಿ ಪತ್ರಿಕೆಗೆ ಬರಬೇಕಾದ ಹಣವನ್ನು ಹೀಗೆ ತರಿಸಿಕೊಂಡಿರುವುದು ಅದೆಷ್ಟು ಬಾರಿ! ಹತ್ತು ವರ್ಷದ ಹಿಂದೆ ವರಮಾನ ಹಿಂದೆ ಬಿದ್ದು ಕೈಯಿಂದ ಮೂರು ಸಾವಿರ ರೂಪಾಯಿ ವೆಚ್ಚವಾಗಿತ್ತು. ಇನ್ನು ಹೆಚ್ಚಿನ ಹಣ ನನ್ನ ಕೈಯಿಂದ ಹಾಕಲು ಅವಕಾಶವಿರಲಿಲ್ಲ. ''ತಮ್ಮಿಂದ ಹಣ ಬಾರದಿದ್ದರೆ ಪತ್ರಿಕೆ ನಡೆಸುವುದು ಕಷ್ಟವಾಗುತ್ತದೆ.'' ಎಂದು ಮುನ್ನೂರು ಮಿತ್ರರಿಗೆ ಪತ್ರ ಬರೆದೆನು. ಸುಮಾರು ಇನ್ನೂರು ಜನ ಹತ್ತು ರೂಪಾಯಿ, ಇಪ್ಪತ್ತು ರೂಪಾಯಿ, ಮೂವತ್ತು ರೂಪಾಯಿಯಷ್ಟನ್ನು ಏಳೆಂಟು ವಾರದ ದಿನದಲ್ಲಿ ಕಳುಹಿಸಿಕೊಟ್ಟರು. ಮೂರು ಸಾವಿರ ಸಾಲ ಇದ್ದದ್ದು ಐದು ನೂರು ಆರು ನೂರರ ಮಟ್ಟಕ್ಕೆ ಇಳಿಯಿತು.

ಪತ್ರಿಕೆ ಇಪ್ಪತ್ತೈದು ವರ್ಷ ನಡೆದಿದೆಯಾದರೂ ನಮ್ಮ ಚಂದಾದಾರರ ಮನೋಧರ್ಮ ಇನ್ನೂ ಹೀಗೆಯೇ ಇದೆ. ಪತ್ರಿಕೆ ಕಚೇರಿಯಿಂದ ನೆನಪಿನ ಓಲೆ ಹೋದರೆ ಸಾಕು ಹಣ ಬರುತ್ತದೆ ಎನ್ನುವುದು ಬಹಳ ಅಪರೂಪ. ಬಹು ಜನಕ್ಕೆ ಸಂಪಾದಕನಿಂದ ಸ್ವಂತ ಪತ್ರವೊಂದು ಹೋಗಬೇಕು, ಆಗಲೇ ಹಣ ಬರುವುದು.

> ''ಇಷ್ಟೆಲ್ಲ ಏಕೆ ಕಷ್ಟ. ಚಂದಾ ಬರದೇ ಹೋದರೆ ಪತ್ರಿಕೆಯನ್ನು ಕಳುಹಿಸುವುದನ್ನು ನಿಲ್ಲಿಸಿ.'' ಎಂದು ಸ್ನೇಹಿತರು ಹೇಳಿರುವುದುಂಟು. ಇದಕ್ಕೆ ಉತ್ತರ, ಎರಡು. ಮೊದಲಾಗಿ ಪತ್ರಿಕೆಯನ್ನು ಒಂದು ಸೇವೆಯೆಂದು ನಡೆಸುವುದಕ್ಕೆ ಹೊರಟದ್ದಾಯಿತು. ತೀರ ವಿಧಿಯಿಲ್ಲವಾದರೆ ಅದನ್ನು ನಿಲ್ಲಿಸುವುದಾಗುತ್ತದೆ. ಆದರೆ ಆ ಸ್ಥಿತಿಗೆ ಬರುವ ಮೊದಲು ನಮ್ಮಿಂದಾದ ಯತ್ನವನ್ನೆಲ್ಲಾ ಮಾಡಿರಬೇಕು. ಎರಡನೆಯದಾಗಿ, ಈ ಮಿತ್ರರಲ್ಲಿ ಎಷ್ಟೋ ಜನರಿಂದ ಎಷ್ಟೋ ಸಾವಕಾಶವಾಗಿ ಹಣ ಬಂದಿದೆ. ಉಳಿದವರಲ್ಲಿ ಇಂಥ ಎಷ್ಟು ಜನ ಇದ್ದಾರೋ, ಅವರಿಂದ ಹಣ ಬರುವುದಾದರೆ ತರಿಸಿಕೊಂಡು ಪತ್ರಿಕೆಯನ್ನು ನಡೆಸೋಣ, ಎನ್ನುವುದು. ಸ್ವಲ್ಪ ಕಷ್ಟಕ್ಕೆ ಸೋತು ಹಿಡಿದ ಕೆಲಸವನ್ನು ಬಿಡುವುದು ಯಾವುದೇ ಸೇವೆಯನ್ನು ಕೈಗೊಂಡ ಮನುಷ್ಯನಲ್ಲಿ ಯೋಗ್ಯವಲ್ಲ.
>
> ನಮ್ಮ ಚಂದಾದಾರರಲ್ಲಿ ಒಬ್ಬರಾಗಿದ್ದ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರವರು ಈ ವಿಷಯದಲ್ಲಿ ಒಂದು ಆದರ್ಶ. ಪತ್ರಿಕೆ ನನ್ನ ಕೈಗೆ ಬಂದ ಒಡನೆಯೇ ನಾನು ಇವರನ್ನು ಚಂದಾ ಪಟ್ಟಿಯಲ್ಲಿ ಸೇರಿಸಿಕೊಂಡು ಸೇರಿಸಿಕೊಂಡಿದೆ ಎಂದು ವಿಜ್ಞಾಪಿಸಿದೆನು. ಸಂತೋಷ ಎಂದು ತಿಳಿಸಿ ಮಹನೀಯರು ವರ್ಷದ ಚಂದಾ ಕಳುಹಿಸಿಕೊಟ್ಟರು. ಚಂದಾ ಮೇ ತಿಂಗಳಲ್ಲಿ ಬರಬೇಕು. ವರ್ಷಂಪ್ರತಿ ಮೇ ಮೊದಲು ಅಥವಾ ಎರಡನೆಯ ತಾರೀಕಿನಲ್ಲಿ ಈ ಮಹನೀಯರು ಒಂದು ಮನಿಯಾರ್ಡರು ಕಳುಹಿಸುವರು. ಅದರಲ್ಲಿ ಬರೆಯುವ ಒಕ್ಕಣಿಕೆ ಪ್ರಾಯಶಃ ಈ ಕೆಲವು ಮಾತಿನದು. ''ಜೀವನ ಪತ್ರಿಕೆ ಸಂಪಾದಕರಲ್ಲಿ ವಿಜ್ಞಾಪನೆ. ಹೊಸ ವರ್ಷದ ಚಂದಾ ಹಣ ಕಳುಹಿಸಿದ್ದೇನೆ, ಸ್ವೀಕರಿಸಬೇಕು-ಅಂಬಳೆ ಸುಬ್ರಹ್ಮಣ್ಯ.''

ಹಿರಿಯರಿಂದ ಮಿತ್ರರಿಂದ ಇಂಥ ದಾಕ್ಷಿಣ್ಯಪೂರ್ಣ ಪ್ರೇಮವನ್ನು ನಾನು ತುಂಬಾ ಪಡೆದಿದ್ದೇನೆ. ಮೊದಲ ದಿನ ಹಣ ಕಳುಹಿದರೂ ಮೂರು ವರ್ಷದ ನಂತರ ಕಳುಹಿಸಿದರೂ ದಾಕ್ಷಿಣ್ಯ ಪ್ರೇಮ ಒಂದೇ. ಆದರೆ ಹೊಸ ವರ್ಷದ ಮೊದಲ ದಿನ ಹಣವನ್ನು ಕಳುಹಿಸುವ ಎನ್ನುವ ಈ ಸೂತ್ರ, ಕಳುಹಿಸುವವರ ದೃಷ್ಟಿಯಿಂದ ಒಂದು ನೇಮದ ಕುರುಹಾಗುತ್ತದೆ. ನಮ್ಮ ಜನರಲ್ಲಿ ಭಾಷಾಪ್ರೇಮಿಗಳಾದ ಒಂದು ಸಾವಿರ

ಜನವಾದರೂ ಒಂದು ಉತ್ತಮ ಪತ್ರಿಕೆಗೆ ಸಹಾಯವಾಗಿ ನಿಲ್ಲುವುದನ್ನು ಹೀಗೆ ಒಂದು ನೇಮವಾಗಿ ಮಾಡಿಕೊಂಡು ನಡೆಸಿದರೆ ನಮ್ಮ ಪತ್ರಿಕೆಗಳ ಸ್ಥಿತಿ ಚೆನ್ನವಾದೀತು.

ಮತ್ತೆ ಕೆಲವು ಮಿತ್ರರು ತಮ್ಮನ್ನು ಆಜೀವ ಚಂದಾದಾರರನ್ನಾಗಿ ಮಾಡಿಕೊಳ್ಳಿ ಎಂದು ಹೇಳಿ ಬಯಸಿದ್ದುಂಟು. ಪತ್ರಿಕೆ ಎಷ್ಟು ದಿನ ನಡೆಯಬಹುದೋ, ಎಂದು ನಿಲ್ಲಬೇಕಾದೀತೋ ಎಂಬ ಸ್ಥಿತಿಯಲ್ಲಿ ಇರುವಾಗ, ಚಂದಾದಾರರಿಂದ ಎರಡು ಮೂರು ವರ್ಷಕ್ಕಿಂತ ಹೆಚ್ಚಿನ ಚಂದಾ ಹಣವನ್ನು ತೆಗೆದುಕೊಳ್ಳುವುದು ವಂಚನೆ ಆದೀತು. ಇಂಥ ಮಿತ್ರರು ಹಣವನ್ನು ಕಳುಹಿಸಿದ್ದೂ ಉಂಟು. ಅಂಥ ವೇಳೆ ಬಹಳವೆಂದರೆ ಐದು ವರ್ಷದ ಹಣ ಇರಿಸಿಕೊಂಡು ಉಳಿದ ಹಣವನ್ನು ನಾನು ಹಿಂದಕ್ಕೆ ಕಳುಹಿಸಿದ್ದೇನೆ. ಈಗ ನೋಡುವುದರಲ್ಲಿ ಆ ಹಣವನ್ನು ಉಳಿಸಿಕೊಂಡಿದ್ದರೆ ತಪ್ಪಾಗುತ್ತಿರಲಿಲ್ಲ. ಆದರೆ ಇಷ್ಟರವರೆಗೆ ಪತ್ರಿಕೆ ನಡೆಯುತ್ತದೆ ಎಂದು ಆಗ ಧೈರ್ಯವಾಗಿ ಹೇಳುವಂತಿರಲಿಲ್ಲ.

ಸೋದರ ಬೇಂದ್ರೆಯವರು, ಗೆಳೆಯ ಶ್ರೀ ಕೃಷ್ಣಕುಮಾರ್ ಕಲ್ಲೂರರವರು, ಪತ್ರಿಕೆಯ ಆರಂಭದಿಂದಲೂ ಅದಕ್ಕಾಗಿ ದುಡಿದಿರುವ ಸಾಹಿತಿಗಳು. ಇವರಿಗೆ ಪತ್ರಿಕೆ ಉಚಿತವಾಗಿ ಹೋಗುತ್ತಿದೆ. ಇವರು ಅದಕ್ಕೆ ಚಂದಾ ಕೊಡಬೇಕಾದ ಕಾರಣವಿಲ್ಲ. ಆದರೂ ಈ ಮಿತ್ರರು ಹಣ ನೀಡಿದ್ದುಂಟು. ನನಗೆ ಇವರು ಬೇರೆ ಅಲ್ಲ. ಇವರ ಹಣ ನನ್ನ ಹಣ ಎಂದು ನಮಗೆ ಭೇದವಿಲ್ಲ. ಶ್ರೀ ಕಲ್ಲೂರರು ತುಂಬಾ ಒತ್ತಾಯ ಮಾಡಿದ್ದರ ಮೇಲೆ ಇವರಿಂದ ಐದು ವರ್ಷದ ಚಂದಾ ಹಣ ತೆಗೆದುಕೊಂಡೆನು. ಉಳಿದಂಥ ಇಂಥ ಕೆಲಸಗಾರರಿಂದ ನಾನು ಹಣ ತೆಗೆದುಕೊಂಡಿಲ್ಲ.

೬

ಒಬ್ಬ ಮಿತ್ರರು, ''ನಿಮ್ಮ ಪತ್ರಿಕೆಯಲ್ಲಿ ನಮ್ಮ ಸಿದ್ಧಾಂತವನ್ನು ಕುರಿತು ತಿಂಗಳಿಗೆ ಒಂದು ಲೇಖನ ತಪ್ಪದೆ ಪ್ರಕಟಿಸುವುದಾದರೆ ಹೇಳಿ ನಾನು ಚಂದಾದಾರನಾಗುತ್ತೇನೆ. ಇತರರೂ ಬಹು ಜನ ಸೇರುತ್ತಾರೆ.'' ಎಂದರು. ನಾನು ''ಪತ್ರಿಕೆ ಸಾಹಿತ್ಯದ ದೃಷ್ಟಿಯದು. ಅದು ಎಲ್ಲಾ ಸಿದ್ಧಾಂತಗಳ ವಿಷಯವನ್ನು ಪ್ರಕಟಿಸಬೇಕು. ಯಾವುದೋ ಒಂದು ಸಿದ್ಧಾಂತವನ್ನು ಎತ್ತಿ ಹಿಡಿಯುವ ಕ್ರಮ ಅದಕ್ಕೆ ಹೊಂದುವುದಿಲ್ಲ.'' ಎಂದೆನು. ಅವರು ಚಂದಾದಾರರಾಗಲಿಲ್ಲ.

ಮತ್ತೊಬ್ಬ ಮಿತ್ರರು ಸಂಪಾದಕ ಹತ್ತು ಕಡೆ ಮಾತು ಪರನಾಗಿರುವಂತೆ ಕಂಡ ದಿವಸದಲ್ಲಿ ಚಂದಾದಾರರಾಗಿದ್ದರು. ಕೆಲವು ವರ್ಷಗಳಲ್ಲಿ ಸಂಪಾದಕರ ವ್ಯಾಪನೆ ಕಡಿಮೆಯಾಯಿತೆಂದು ಕಂಡಿತು. ಪತ್ರಿಕೆಯನ್ನು ಇನ್ನು ಕಳುಹಿಸುವುದು ಬೇಡ ಎಂದರು.

ಮತ್ತೊಬ್ಬರು ಮನಸ್ಸಿನ ಯಾವ ಬೇಸರದ ಹೊತ್ತಿನಲ್ಲೋ ಪತ್ರಿಕೆಯ ಮ್ಯಾನೇಜರು ಚಂದಾ ಕೇಳಲು ಹೋದಾಗ, ''ನಿಮ್ಮ ಪತ್ರಿಕೆ ಯಾರಿಗೆ ಬೇಕು? ನಿಮ್ಮ ಯಜಮಾನರ ಬಲವಂತಕ್ಕೋಸ್ಕರ ತೆಗೆದುಕೊಳ್ಳುತ್ತಲಿದ್ದೇವೆ.'' ಎಂದು ಹೇಳಿದರಂತೆ. ಮ್ಯಾನೇಜರ್ ಇದನ್ನು ತಿಳಿಸಿದಾಗ ನಾನು, ''ಅವರಿಗೆ ಯಾತಕ್ಕೆ ಆಯಾಸ? ಪತ್ರಿಕೆ ಕಳುಹಿಸುವುದು ಬೇಡ.'' ಎಂದೆ. ಕೆಲವು ತಿಂಗಳ ನಂತರ ಮಿತ್ರರೊಬ್ಬರ ಮನೆಯಲ್ಲಿ ಯಾವುದೋ ಮದುವೆಯ ಸಂದರ್ಭದಲ್ಲಿ ಕಂಡಾಗ ಈ ಮಿತ್ರರು ಕ್ಷೇಮ ಸಮಾಚಾರ ವಿಚಾರಿಸಿ, ''ಜೀವನ ಪತ್ರಿಕೆ ನಡೆಯುತ್ತಿದೆಯೇ?'' ಎಂದು ಕೇಳಿದರು. ನಡೆಯುತ್ತಿದೆ ಎಂದುದಕ್ಕೆ, ''ಅದು ನನಗೆ ಬರುತ್ತಿಲ್ಲವಲ್ಲಾ'' ಎಂದರು. ''ನೀವು ಅದನ್ನು ಬೇಡ ಎಂದಿರಂತೆ.'' ಎಂದು ನಾನು ಹೇಳಿದೆ. ''ಇದನ್ನು ಯಾರು ಹೇಳಿದರು?'' ''ನನ್ನ ಪರವಾಗಿ ನಿಮ್ಮಲ್ಲಿಗೆ ಬಂದ ನನ್ನ ಸ್ನೇಹಿತರು.'' ''ಖಂಡಿತ ಇಲ್ಲ,

ನಾನು ಹಾಗೆಂದು ಹೇಳಲಿಲ್ಲ.'' ಎಂದು ಅವರು ಕೂಗಾಡಿದರು. ನಾನು ಸಮಾಧಾನ ಹೇಳಿ ಪತ್ರಿಕೆಯನ್ನು ಮತ್ತೆ ಕಳುಹಿಸುತ್ತೇನೆ ಎಂದೆನು. ಅಂದಿನಿಂದ ಅವರಿಗೆ ಪತ್ರಿಕೆ ಹೋಗುತ್ತಲೇ ಇದೆ. ಅವರು ಶಿಸ್ತಾಗಿ ನಡೆದುಕೊಂಡಿದ್ದಾರೆ.

ಬೇರೆ ದೊಡ್ಡ ಒಂದು ಊರಿನ ಭಾಷಾಭಿಮಾನಿ ಮಿತ್ರರೊಬ್ಬರು, ನನ್ನನ್ನು ತುಂಬ ಪ್ರೀತಿಯಿಂದ ನೋಡಿಕೊಂಡಿರುವವರು, ಒಂದು ಸಂದರ್ಭದಲ್ಲಿ ಬೇಸರದಿಂದ, ''ನಾನು ನನಗೆ ತೀರ ಅವಶ್ಯವಾದ ಸಾಹಿತ್ಯಕ್ಕೆ ಮಾತ್ರ ಹಣ ಕೊಡಲು ನಿಶ್ಚಯಿಸಿದ್ದೇನೆ. ತಮ್ಮ ಪತ್ರಿಕೆಯನ್ನು ಕಳುಹಿಸುವುದನ್ನು ನಿಲ್ಲಿಸಿರಿ.'' ಎಂದು ಬರೆದರು. ತಕ್ಕಷ್ಟು ಒಳ್ಳೆಯ ವರಮಾನದ ಇಂಥ ಅಭಿಮಾನಿ ಮಿತ್ರರು ವರ್ಷದಲ್ಲಿ ಐದು ರೂಪಾಯಿಯನ್ನು ಉಳಿಸುವುದಕ್ಕಾಗಿ ಕನ್ನಡ ಪತ್ರಿಕೆಯೊಂದನ್ನು ಕೈಬಿಡುವರೇ ಎಂದು ನನಗೆ ಖೇದವಾಯಿತು.

ಒಮ್ಮೆ ನಮ್ಮ ಸರಕಾರದ ಹಿರಿಯ ಸ್ಥಾನದಲ್ಲಿದ್ದ ಒಬ್ಬ ಮಿತ್ರರು ಕಷ್ಟ ಸುಖ ವಿಚಾರಿಸಿದಾಗ ನಾನು ಪತ್ರಿಕೆಯ ಮಾತನ್ನು ಹೇಳಿದೆನು. ಕೆಲವು ದಿನಗಳಲ್ಲಿ ಇಂಥ ಇಂಥ ಅಧಿಕಾರಿಗಳಿಗೆ ನಿಮ್ಮ ಪತ್ರಿಕೆಯನ್ನು ಕಳುಹಿಸಿ ಎಂದು ಮುಖ್ಯ ಕಚೇರಿಯಿಂದ ಅಪ್ಪಣೆ ಬಂದಿತು. ಪತ್ರಿಕೆಯನ್ನು ಕಳುಹಿಸಿದ್ದಾಯಿತು. ಮೂರು ನಾಲ್ಕು ತಿಂಗಳು ಕಳೆದಿದೆ. ಪತ್ರಿಕೆಯ ಒಂದು ಸಂಚಿಕೆಯಲ್ಲಿ ಈ ನಮ್ಮ ಮಿತ್ರರ ರಾಜಕೀಯ ಪಕ್ಷದ ಮೇಲೆ ಟೀಕೆ ಮಾಡಿ ಒಂದು ಟಿಪ್ಪಣಿ ಇತ್ತು. ಮೂರು ದಿನದಲ್ಲಿ ಮುಖ್ಯ ಕಚೇರಿಯಿಂದ ಒಂದು ಪತ್ರ : ''ನೀವು ಇನ್ನು ಮುಂದೆ ಈ ಅಧಿಕಾರಿಗಳಿಗೆ ಪತ್ರಿಕೆ ಕಳುಹಿಸುವುದು ಬೇಡ. ಇದುವರೆಗೆ ಕಳುಹಿಸಿರುವ ಬಗ್ಗೆ ಬಿಲ್ ಕಳುಹಿಸಿ. ಹಣ ಮುಟ್ಟಿಸುತ್ತೇವೆ.'' ಎಂದು. ಪತ್ರಿಕೆ ಕಳುಹಿಸುವುದನ್ನು ನಿಲ್ಲಿಸಿದ್ದಾಯಿತು. ಒಂಬತ್ತು ಪತ್ರಿಕೆಯ ೩ ತಿಂಗಳ ಚಂದಾ ೧೦ ರೂಪಾಯಿಗಾಗಿ ಬಿಲ್ ಏನು ಎಂದು ಬಿಲ್ ಕಳುಹಿಸಲಿಲ್ಲ. ಅವರೂ ಮತ್ತೆ ಕೇಳಲಿಲ್ಲ.

ಒಮ್ಮೆ ನಮ್ಮ ಪ್ರಮುಖ ರಾಜಕೀಯ ಪಕ್ಷ ನಮ್ಮ ಅರಸರನ್ನು ನಡೆಸಿಕೊಂಡ ರೀತಿ ಸರಿಯಾಗಿಲ್ಲ ಎಂದು ನಾನು ಟೀಕೆ ಮಾಡಿದೆ. ಅರಮನೆ ಕಚೇರಿಯಿಂದ ಈ ಸಂಚಿಕೆಯ ಪ್ರತಿಯೊಂದನ್ನು ಕಳುಹಿಸಬೇಕೆಂದೂ ಮುಂದೆ ಪತ್ರಿಕೆಯನ್ನು ಕ್ರಮವಾಗಿ ಕಳುಹಿಸುತ್ತಿರಬೇಕೆಂದೂ ಒಂದು ಪತ್ರ ಬಂದಿತು. ಕೆಲವು ತಿಂಗಳು ಪತ್ರಿಕೆ ಹೋಗಿದೆ. ಪತ್ರಿಕೆಯಲ್ಲಿ ಅರಮನೆ ಸಂಬಂಧದ ಮಾತು ಬೇರೆ ಯಾವುದೂ ಬರಲಿಲ್ಲ. ಬರುವ ಕಾರಣ ಇರಲಿಲ್ಲ. ಕಚೇರಿಯಿಂದ ಇನ್ನೊಂದು ಪತ್ರ ಬಂದಿತು. ''ನಿಮ್ಮ ಪತ್ರಿಕೆಯನ್ನು ಇನ್ನು ಮುಂದೆ ಕಳುಹಿಸುವುದು ಬೇಡ, ಇದುವರೆಗೆ ಕಳುಹಿಸಿರುವುದಕ್ಕೆ ಬಿಲ್ ಕಳುಹಿಸಿ.'' ಎಂದು. ಬಿಲ್ ಕಳುಹಿಸಿದ್ದರೆ ಒಂದು ರೂಪಾಯಿ ಚಿಲ್ಲರೆ ಆಗುತ್ತಿತ್ತು. ಬಿಲ್ ಕಳುಹಿಸಲಿಲ್ಲ.

೮

ಪತ್ರಿಕೆಯನ್ನು ಕೈಗೆ ತೆಗೆದುಕೊಳ್ಳುವಾಗ ನನ್ನ ಮನಸ್ಸಿನಲ್ಲಿ ಒಂದು ಆಸೆ ಇತ್ತು. ಒಂದು ಲೇಖನವನ್ನು ಒಪ್ಪಿಕೊಂಡು ಪತ್ರಿಕೆಯಲ್ಲಿ ಪ್ರಕಟಿಸಿದ್ದೇ ಆದರೆ ಅದಕ್ಕೆ ಎಷ್ಟೇ ಅಲ್ಲ ಆದರೂ ಸಂಭಾವನೆ ಎಂತ ಸ್ವಲ್ಪ ಹಣವನ್ನು ಸಲ್ಲಿಸಬೇಕು. ಮೊದಲ ವರ್ಷ ಕೆಲವು ಲೇಖಕರಿಗೆ ಹೀಗೆ ಸ್ವಲ್ಪ ಸಂಭಾವನೆ ಸಲ್ಲಿಸಿದ್ದಾಯಿತು. ಎರಡನೆಯ ವರ್ಷ ಇಷ್ಟು ಕೊಡುವುದಕ್ಕಾಗಲಿಲ್ಲ. ಮೂರನೆಯ ವರ್ಷ ಇದು ಅಸಾಧ್ಯವೇ ಆಯಿತು. ಕಂದು ಕಾಗದವನ್ನು ಬಿಟ್ಟು ಬಿಳಿಯ ಕಾಗದವನ್ನು ಬಳಸುವುದಕ್ಕೆ ಆರಂಭಿಸಿದ ಮೇಲೆ ಕಾಗದದ ಬೆಲೆ ಬೇರೆ ಮತ್ತೆ ಮತ್ತೆ ಏರಿದಂತೆ ಈ ಆಸೆಯನ್ನು ತೀರಾ ಬಿಡಬೇಕಾಯಿತು.

ಬಹಳ ವರ್ಷದ ನಂತರ ವರ್ಷದ ಆಗಸ್ಟ್ ತಿಂಗಳ ಸಂಚಿಕೆಯನ್ನು ಸ್ವಾತಂತ್ರ್ಯದ ವಿಶೇಷ ಸಂಚಿಕೆ ಎಂದು ಪ್ರಕಟಿಸತೊಡಗಿದ ಮೇಲೆ ಆ ಸಂಚಿಕೆಗಳಲ್ಲಿ ಪ್ರಕಟವಾದ ಲೇಖನಗಳಿಗೆ ಸ್ವಲ್ಪ ಸಂಭಾವನೆ ಸಲ್ಲಿಸಿದ್ದಾಯಿತು. ಮೂರನೆಯ ವರ್ಷ ಇದು ಕೂಡ ಸಾಧ್ಯವಾಗಲಿಲ್ಲ.

ಹೀಗಿದ್ದೂ ಪತ್ರಿಕೆಯಲ್ಲಿ ಪ್ರಕಟವಾಗಲು ವಿವಿಧ ವಿಷಯದ ಲೇಖನಗಳು ಪತ್ರಿಕೆಯ ಕಚೇರಿಗೆ ಸತತವಾಗಿ ಬಂದಿದೆ. ಇದರಿಂದ ಕನ್ನಡ ಲೇಖಕರು ತಮ್ಮ ವ್ಯವಸಾಯದಲ್ಲಿ ಸಂಪೂರ್ಣ ಶ್ರದ್ಧೆಯನ್ನು ವಹಿಸಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ. ತಮ್ಮದೇ ಕಾಗದ, ತಮ್ಮದೇ ಅಂಚೆ ವೆಚ್ಚ, ಬರಹಕ್ಕೆ ಕಾಸು ಕೇಳುವುದಿಲ್ಲ, ಇದು ಕನ್ನಡದ ಪತ್ರಿಕೆಗಳಿಗೆ ಬರಹ ಕಳುಹಿಸುವ ಕನ್ನಡ ಲೇಖಕರ ಇಂದಿನ ಸ್ಥಿತಿ. ಇದನ್ನು ಸರಿಪಡಿಸುವುದಕ್ಕೆ ಒಟ್ಟು ನಮ್ಮ ಜನತೆಯೇ ಮನಸ್ಸು ಕೊಡಬೇಕು.

ಲೇಖಕರಿಂದ ಹೀಗೆ ಬಿಟ್ಟಿ ಕೆಲಸ ಮಾಡಿಕೊಳ್ಳುವುದಕ್ಕೆ ನಾನು ತಿಂಗಳು ತಿಂಗಳು ಸಂಕೋಚ ಪಟ್ಟಿದ್ದೇನೆ. ಸಂಕೋಚ ಪಟ್ಟು ಲೇಖನಗಳನ್ನು ಸುಮ್ಮನೆ ಸ್ವೀಕರಿಸಿದ್ದೇನೆ. ಇದರ ಕಾರಣ ಲೇಖಕರಂತೆ ನಾನೂ ಈ ಕೆಲಸವನ್ನು ಸೇವೆ ಎಂದು ಸಲ್ಲಿಸುತ್ತಾ ಬರಬೇಕಾದದ್ದು. ನಾನು ಪತ್ರಿಕೆಯ ಒಡೆಯನಾಗಿ ಲಾಭ ತೆಗೆದುಕೊಳ್ಳಲಿಲ್ಲ, ಸಂಪಾದಕನಾಗಿ ಸಂಭಾವನೆ ಸ್ವೀಕರಿಸಲಿಲ್ಲ, ಮನೆಯ ಒಂದು ಭಾಗವನ್ನು ಕಚೇರಿಗೆ ಕೊಟ್ಟೆನೆಂದು ಬಾಡಿಗೆ ತೆಗೆದುಕೊಳ್ಳಲಿಲ್ಲ, ಈ ಕೆಲಸದಲ್ಲಿ ಬಂಧುಗಳನ್ನು ನಿಯೋಜಿಸಿ ಅವರಿಗೆ ವರಮಾನ ಒದಗಿಸಲಿಲ್ಲ. ''ಕನ್ನಡದ ಕೆಲಸ. ಆದಷ್ಟು ಶ್ರದ್ಧೆಯಿಂದ ಮಾಡುವುದೇ ಪುಣ್ಯ. ದೇವರು ನನಗೆ ಈ ಅವಕಾಶವನ್ನು ಒದಗಿಸಿದ್ದಾರೆ. ಇದೊಂದು ಭಾಗ್ಯ.'' ಎಂದು ಈ ಕೆಲಸದಲ್ಲಿ ದುಡಿದದ್ದಾಯಿತು. ಪತ್ರಿಕೆಯನ್ನು ನಡೆಸುವವನು ಅಚ್ಚು ಕಾಗದ, ಕಚೇರಿ, ಅಂಚೆ ವೆಚ್ಚಕ್ಕೆಂದೇ ಕೈಯಿಂದ ಕಾಸು ಹಾಕಬೇಕಾಗಿರುವಾಗ ಲೇಖಕರಿಗೆ ಸಂಭಾವನೆಯನ್ನು ಹೇಗೆ ಕೊಡುವುದು?

ಪತ್ರಿಕೆಗೆ ಬೇಕಾದ ಲೇಖನ ಸಮೃದ್ಧವಾಗಿ ಬಂದಿತು ಎನ್ನುವುದಲ್ಲದೆ ಈ ಲೇಖನಗಳಲ್ಲಿ ಬಹುಭಾಗ ತಕ್ಕಷ್ಟು ಮೇಲಿನ ಮಟ್ಟದ ಬರವಣಿಗೆಯಾಗಿತ್ತು ಎಂದು ನಾನು ನಿವೇದಿಸಬೇಕಾಗಿದೆ. ಅನೇಕ ತರುಣ ಲೇಖಕರು ಎಂಥ ಶಕ್ತರು ಎನ್ನುವುದು ಜೀವನ ಪತ್ರಿಕೆಯಲ್ಲಿ ಪ್ರಕಟವಾದ ಅವರ ಕೃತಿಗಳಿಂದ ತಿಳಿಯುತ್ತದೆ. ಶ್ರೀ ಸಿದ್ಧಯ್ಯ ಪುರಾಣಿಕ, ಶ್ರೀ ಜಿ.ಎಸ್. ಶಿವರುದ್ರಪ್ಪ, ಶ್ರೀ.ಸಿ.ಎಸ್. ಕಣವಿ, ಶ್ರೀ.ಎಸ್.ಆರ್. ಎಕ್ಕುಂಡಿ ಈ ಮಿತ್ರರ ಲೇಖನಗಳು ಮೊಲದು ಮೊದಲಲ್ಲಿ ಈ ಪತ್ರಿಕೆಯಲ್ಲಿಯೇ ಪ್ರಕಟವಾದವು. ಲೇಖನ ಚೆನ್ನಾಗಿಲ್ಲ ಎಂದು ಹೇಳಿ ಲೇಖಕರ ತೇಜೋವಧೆ ಮಾಡುವುದಾಗಲಿ, ಧೈರ್ಯವನ್ನು ಕೆಡಿಸುವುದಾಗಲಿ, ಒಂದು ಪತ್ರಿಕೆಯ ಕೆಲಸ ಅಲ್ಲ, ಪತ್ರಿಕೆಯಲ್ಲಿ ಪ್ರಕಟವಾಗಲಿಲ್ಲ ಎಂಬ ಕಾರಣದಿಂದ ನಿಮ್ಮ ಲೇಖನ ನಮಗೆ ಒಪ್ಪಿಗೆ ಆಗಲಿಲ್ಲ ಎಂದು ಗ್ರಹಿಸಬೇಡಿ.'' ಎಂದು ನಾನು ಲೇಖಕರಿಗೆ ಸತತವಾಗಿ ಹೇಳುತ್ತ ಬಂದಿದ್ದೇನೆ. ಲೇಖನವನ್ನು ಹಾಕುವ ಮೊದಲು ಆರಂಭದಲ್ಲಿ ಬರಹವನ್ನು ನಾನೇ ನೋಡಿ ಆರಿಸುತ್ತಿದ್ದೆ. ಈಚೆಗೆ ಇದನ್ನು ಮಿತ್ರರ ಕೈಗೆ ಬಿಟ್ಟಿದ್ದೇನೆ. ಇವರು ಜನತೆಯ ಹಿತದೃಷ್ಟಿಯಿಂದ ಪ್ರೇರಿತರಾಗಿ ಲೇಖನಗಳನ್ನು ಆರಿಸುವ ಕಾರಣದಿಂದ ಜೀವನ ಪತ್ರಿಕೆಯಲ್ಲಿ ಪ್ರಕಟವಾದ ಬರವಣಿಗೆ ಕನಿಷ್ಠ ಪಕ್ಷ ಯಾವುದೋ ಒಂದು ಮಟ್ಟವನ್ನು ಮುಟ್ಟಿದೆ ಎಂದು ಲೇಖಕರಿಗೆ ಭರವಸೆ ಉಂಟು.

೬

ಒಂದು ಮಟ್ಟವನ್ನು ಮುಟ್ಟಿತೆನ್ನುವುದಲ್ಲದೆ ಪತ್ರಿಕೆಯಲ್ಲಿ ಪ್ರಕಟವಾದ ಎಲ್ಲ ಬರವಣಿಗೆ ಒಂದು ಮರ್ಯಾದೆಯನ್ನು ಉಳಿಸಿಕೊಂಡು ಬಂದಿದೆ. ಮರ್ಯಾದೆಯನ್ನು ಉಳಿಸಿಕೊಳ್ಳುವುದೆಂಬ ಈ ಯತ್ನವನ್ನು ಹಾಸ್ಯ ಮಾಡುವ ಮನೋಧರ್ಮವೊಂದು ಇತ್ತೀಚೆಗೆ ನಮ್ಮ ಲೇಖಕರಲ್ಲಿ ಕಾಣುತ್ತಿದೆ. ಹೀಗೆ ಹಾಸ್ಯ ಮಾಡುವವರು ಸಹ ಯಾವುದೋ ಒಂದು ಮರ್ಯಾದೆಯನ್ನು ಪಾಲಿಸಿಯೇ ಬಾಳುತ್ತಾರೆ, ಬರೆಯುತ್ತಾರೆ. ಯಾವುದೂ ಮರ್ಯಾದೆಯಿಲ್ಲದೆ ಯಾವ ಸಮಾಜವೂ ಇಲ್ಲ. ಬಹು ಅಸಂಸ್ಕೃತ ಎನ್ನುವ ವನ್ಯ ಜನ ಸಮುದಾಯದಲ್ಲಿಯೂ ಅವುಗಳದೆ ಒಂದು ಮರ್ಯಾದೆಯಿದೆ. ಹೀಗೆಂದ ಮೇಲೆ ನಮ್ಮ ಜನತೆಯ

ಜೀವನದ ಮರ್ಯಾದೆ ಒಂದು ಇದೆ ಎನ್ನುವುದನ್ನು ಅಲ್ಲಗಳೆಯುವುದು ತಪ್ಪು. ಈ ಮರ್ಯಾದೆ ಕಾಲದಿಂದ ಕಾಲಕ್ಕೆ ಬೇರೆಯಾಗುತ್ತದೆ. ಪ್ರದೇಶದಿಂದ ಪ್ರದೇಶಕ್ಕೆ ಬೇರೆಯಾಗುತ್ತದೆ. ಹತ್ತು ಜನಕ್ಕಾಗಿ ದುಡಿಯುವ ಒಂದು ಪತ್ರಿಕೆ ಆದಷ್ಟು ಮಟ್ಟಿಗೆ ಈ ಮರ್ಯಾದೆಯನ್ನು ಪಾಲಿಸಿಕೊಂಡು ಬರುವುದು ಅವಶ್ಯಕ. ಇದನ್ನು ತಿದ್ದುವುದು ಸ್ವಲ್ಪ ಅವಶ್ಯಕ ಎಂದು ಕಂಡಾಗ ಹತ್ತು ಜನರ ಮನಸ್ಸಿಗೆ ಬೇಸರವಾಗದ ರೀತಿಯಲ್ಲಿ ಅಲ್ಪ ಪರಿಮಾಣದಲ್ಲಿ ತಿದ್ದುವ ಯೋಚನೆ ಮಾಡಬೇಕು. ಮರ್ಯಾದೆವಂತ ಜನಕ್ಕೆ ಅಸಹ್ಯ ಎಂದು ಕಾಣುವಂಥ ಸಂಗತಿಯನ್ನು ಮಾಡಬಾರದು. ಜೀವನ ಪತ್ರಿಕೆ ಈ ಅರ್ಥದಲ್ಲಿ ಕನ್ನಡ ಜನರ ಇಂದಿನ ಸಂಸ್ಕೃತಿಯನ್ನು ಗಂಭೀರವಾಗಿ ಪ್ರತಿನಿಧಿಸಲು ಯತ್ನ ಮಾಡಿದೆ.

ಮಧ್ಯೆ ಕಲೆಯನ್ನು ಕುರಿತ ಒಂದು ಲೇಖನದಲ್ಲಿ ಉತ್ತರ ಕರ್ನಾಟಕದ ಮಿತ್ರರು ಬಳಸಿದ ಒಂದು ಶಬ್ದವನ್ನು ಕುರಿತು ಮೈಸೂರಿನ ಒಬ್ಬ ಮಿತ್ರರು, ಮೈಸೂರಿನ ಲೇಖಕರೊಬ್ಬರ ಒಂದು ಕತೆಯ ಕೊನೆಗೆ ಬಂದ ಮೂರು ಶಬ್ದವನ್ನು ಕುರಿತು ಉತ್ತರ ಕರ್ನಾಟಕದ ಮಿತ್ರರೊಬ್ಬರು, ಸ್ವಲ್ಪ ಅಸಮಾಧಾನ ಸೂಚಿಸಿದ ಎರಡು ಸಂದರ್ಭ ಮಾತ್ರ ಇದಕ್ಕೆ ಅಪವಾದ. ಇಪ್ಪತ್ತೊಂದು ವರ್ಷ ನಡೆಸಿದ ಪತ್ರಿಕೆಯಲ್ಲಿ ಎರಡು ಸಲ ಮಾತ್ರ ಹೀಗಾಯಿತೆನ್ನುವುದು ಪತ್ರಿಕೆ ಮರ್ಯಾದೆಯಿಂದ ನಡೆಯಿತೆನ್ನುವುದನ್ನು ಸಿದ್ಧಾಂತ ಮಾಡುತ್ತದೆ.

೧೦

ಪತ್ರಿಕೆ ಆರಂಭವಾದ ಸಂದರ್ಭದಲ್ಲಿ, ಹಾಗೆಯೇ ಈಚೆಗೆ, ನಮ್ಮ ಸಾಹಿತ್ಯದಲ್ಲಿ ಒಂದಲ್ಲ ಒಂದು ದೃಷ್ಟಿಯಿಂದ ಜನ ಬೇರೆ ಬೇರೆ ಗುಂಪಾಗಿ ವಾದ ಮಾಡುವ ಅಪಾಯ ಒಂದಿತ್ತು. ಸಾಹಿತ್ಯದಲ್ಲಿ ಪ್ರಗತಿಯ ಮನೋಧರ್ಮ ಪ್ರಕಟವಾಗಬೇಕು ಎಂಬ ನನ್ನ ತರುಣ ಮಿತ್ರರು ಇಂಥ ಒಂದು ಪ್ರವೃತ್ತಿಯ ಜನ. ಈ ವಿಷಯ ಪತ್ರಿಕೆಯಲ್ಲಿ ಒಂದು ಸಲ ಸಂಪೂರ್ಣವಾಗಿ ವಿವೇಚನೆ ಮಾಡಬೇಕಾಯಿತು. ಈಚೆಗೆ ಇಂಥ ಮಾತು ಬಹಳ ಕೇಳುತ್ತಿಲ್ಲ. ಇದು ಕ್ಷೇಮವಾಯಿತು. ಉಳಿದ ಕ್ಷೇತ್ರದಲ್ಲಿ ಹೇಗೇ ಆದರೂ ಸಾಹಿತ್ಯದಲ್ಲಿ ರುಚಿ ಬೇರೆಯಾದಂತೆ ನಿಲುವು ಬೇರೆ, ನಿಲುವು ಬೇರೆಯಾದಂತೆ ನುಡಿ ಬೇರೆ, ಆಗುವುದನ್ನು ಎಲ್ಲರೂ ಒಪ್ಪಬೇಕು. ''ನಮ್ಮಂತೆ ಬರೆಯುವವರು ಮಾತ್ರ ಲೇಖಕರು, ಉಳಿದವರು ಲೇಖಕರೇ ಅಲ್ಲ.'' ಎನ್ನುವುದು ಲೇಖಕ ಸಮಾಜಕ್ಕೆ ಘಾತಕವಾದ ನಿಲುವು. ಹತ್ತು ಜನರ ಸಂಸ್ಕೃತಿಗೆ ಆಧಾರವಾಗಿರುವ ಪತ್ರಿಕೆ ಲೇಖನದಲ್ಲಿ ಬಹು ವಿಧ ಸಾಧ್ಯ ಎಂದು ಒಪ್ಪಿ ನಡೆಯಬೇಕು; ತನ್ನ ವಿಧ ಮಾತ್ರ ಸರಿಯೆಂದು ಹಟ ಮಾಡಬಾರದು. ಜೀವನ ಪತ್ರಿಕೆ ಇಂಥ ಹಟವನ್ನು ಮಾಡದೆ ಲೇಖನದ ಇತರ ವಿಧಗಳನ್ನು ಕುರಿತು ಸಮಾಧಾನದಿಂದ ನಡೆದಿದೆಯೆಂದು ಕೂಡ ಈ ಸಮಯದಲ್ಲಿ ವಿಜ್ಞಾಪಿಸಬಹುದು.

ಇದೇ ದೃಷ್ಟಿಯಿಂದ ಪತ್ರಿಕೆ, ಯಾರಾದರೂ ಕೆಲವರು ಲೇಖಕರನ್ನು ಎತ್ತಿ ಹಿಡಿಯುವುದು, ವಿರೋಧಿ ಎಂಬ ಜನರನ್ನು ಬಿಟ್ಟುಕೊಡುವುದು, ಇಂಥ ಮಾತಿಗೂ ಹೋಗಲಿಲ್ಲ. ಶ್ರೀ ಬೇಂದ್ರೆ, ಗೋಕಾಕ್, ಮುಗಳಿ ಮಿತ್ರರ ಕೆಲಸವನ್ನು ಕುರಿತು ಸ್ವಲ್ಪ ಅಸಮಾಧಾನದಿಂದ ನಡೆಯುತ್ತಿದ್ದ ಕೆಲವರು ಲೇಖಕರು ಒಮ್ಮೆ ಮುಗಳಿಯವರ ''ಅನ್ನ'' ಎಂಬ ಕಾದಂಬರಿಯನ್ನು ಕುರಿತು ಅತಿ ಕಟುವಾಗಿ ಟೀಕೆಗಳನ್ನು ಮಾಡಿದರು. ಸಾಹಿತ್ಯದಲ್ಲಿ ಟೀಕೆಗೆ ಎಡೆ ಇರಬೇಕು. ಆದರೆ ಅದು ಟೀಕೆ ಮಾತ್ರ ಆಗಿರಬೇಕು. ವ್ಯಕ್ತಿಪರ ಅವಿಶ್ವಾಸದ ಪ್ರಕಟನೆ ಆಗಬಾರದು. ಅದು ಹೀಗಾದಾಗ ಉತ್ತರ ಬರೆದರೆ ಉತ್ತರವೂ ವ್ಯಕ್ತಿಪರ ಆಗುವ ಅಪಾಯ ಇದೆ. ''ಅನ್ನ''ವನ್ನು ಕುರಿತ ಟೀಕೆಗಳನ್ನು ವಿವರ ವಿವರವಾಗಿ ಪರಿಶೀಲಿಸಿ, ಅವು ವಿಮರ್ಶೆಯ ಮಿತಿಯಲ್ಲಿಲ್ಲ ಎಂದು ತೋರಿಸುವ ಯೋಚನೆ ಬಂದಿತು. ಪರಿಶೀಲನೆ ಸಿದ್ಧವೂ ಆಯಿತು. ಆದರೆ ಅದನ್ನೆಲ್ಲಾ ಪ್ರಕಟಿಸಿದರೆ ಮಾತಿಗೆ ಮಾತು ಬೆಳೆದು ಪರಸ್ಪರ ಅಸಮಾಧಾನ ಬಹು ಕಾಲ ನಿಲ್ಲುವಂತಾದೀತು ಎಂದು ನನಗೆ ಭಯ.

ನಾನು ಮಿತ್ರರಲ್ಲಿ ಅರಿಕೆ ಮಾಡಿ ಟೀಕೆಗೆ ಗಂಭೀರವಾದ ಉತ್ತರ ಎಷ್ಟೋ ಅಷ್ಟನ್ನು ಪ್ರಕಟಿಸಿದೆನು. ಎಲ್ಲವನ್ನೂ ಹಾಕಿದ್ದರೆ ಚೆನ್ನಾಗಿದ್ದಿತು ಎಂದು ಕೆಲವರಿಗೆ ತೋರಬಹುದು. ಇಂಥ ವಿಷಯದಲ್ಲಿ ನಾನು ಕನ್ನಡ ಜನದ ಹಳೆಯ ಒಂದು ಸೂತ್ರವನ್ನು ಹಿಡಿಯುತ್ತೇನೆ. ತಾಳಿದವ ಬಾಳಿಯಾನು. ಈ ಕ್ಷಣ ನಮ್ಮ ಕೈ ಮೇಲಾಯಿತು ಎನ್ನುವುದು ಮುಖ್ಯ ಅಲ್ಲ. ಒಳ್ಳೆಯದು ಬೆಳೆಯಬೇಕು; ಒಳ್ಳೆಯತನ ಬೆಳೆಯಬೇಕು. ನಾವು ಸ್ವಲ್ಪ ಸಹನೆಯಿಂದ ನಡೆಯುವುದರಿಂದ ಒಳ್ಳೆಯದು ಬೆಳೆಯುವುದಾದರೆ ಸಹನೆಯೇ ಸರಿಯಾದ ಮಾರ್ಗ. ಒಳ್ಳೆಯದು ಬೆಳೆಯುತ್ತದೆ ಎನ್ನುವುದು ಸಂದಿಗ್ಧ ಎಂದರೂ ಇಂಥ ವೇಳೆ ಸಹನೆ ಒಳ್ಳೆಯದು.

ಮಿತ್ರರ ಗ್ರಂಥಗಳನ್ನು ಕುರಿತ ಮಾತಿಗೆ ಮಿತವಾದ ಉತ್ತರವನ್ನಾದರೂ ಸಂಪಾದಕನಾಗಿ ಪ್ರಕಟಿಸಿದ ನಾನು ನನ್ನ ಪುಸ್ತಕಗಳ ಮಾತು ಬಂದಾಗ ಪತ್ರಿಕೆಯನ್ನು ಎಷ್ಟು ದೂರಕ್ಕೂ ಹೋಗಬಿಡಲಿಲ್ಲ. ಚೆನ್ನಬಸವನಾಯಕ ಕಾದಂಬರಿಯನ್ನು ರಾಷ್ಟ್ರದ ಇತರ ಭಾಷೆಗಳಿಗೆ ಭಾಷಾಂತರ ಮಾಡಲು ಆರಿಸಿದ ವೇಳೆ ಅದರ ವಿರೋಧವಾಗಿ ನಮ್ಮ ಸೋದರ ಕನ್ನಡಿಗರು ಕೆಲವರು ಗೊಂದಲ ಎಬ್ಬಿಸಿದರು. ಅನೇಕ ಮಿತ್ರರು ಕಾದಂಬರಿಯನ್ನು ಸಮರ್ಥಿಸಿ ಜೀವನದಲ್ಲಿ ಲೇಖನ ಬರಲಿ ಎಂದು ಬಯಸಿದರು. ನಾನೇ ಬರೆಯಬಹುದು. ಬೇಕೆಂದರೆ ತಾವು ಬರೆಯಲು ಸಿದ್ಧ. ಸಾಹಿತ್ಯ ಕ್ಷೇತ್ರದಲ್ಲಿ ಇಂಥ ಗೊಂದಲದ ಅನೌಚಿತ್ಯ ಎಷ್ಟು ಎಂದು ಹೇಳುವಂತಿಲ್ಲ. ಕೇವಲ ಸಾಹಿತ್ಯ ದೃಷ್ಟಿಯಿಂದ ಇದರ ಮಾತನ್ನು ಚರ್ಚಿಸಬಹುದಾಗಿತ್ತು. ಆದರೆ ನಾನು ಎಷ್ಟೇ ನಿರ್ಲೇಪದಿಂದ ಬರೆದರೂ ಇತರರಿಗೆ ಈ ನಿರ್ಲೇಪ ಅಷ್ಟು ಸ್ಪಷ್ಟವಾಗದೆ ಹೋಗಬಹುದು. ಮಿತ್ರರು ನನ್ನನ್ನು ಕುರಿತು ಆಡಿದ ಒಳ್ಳೇ ಮಾತಿಗೆಲ್ಲಾ ನಾನು ಒಪ್ಪಿದಂತಾದೀತು. ಸ್ವಾರ್ಥದ ಭಾಸ ಆಗುವ ಇಂಥ ವರ್ತನೆ ಪತ್ರಿಕೆಗೆ ತಕ್ಕದ್ದಲ್ಲ ಎಂದು ನನ್ನ ಭಾವನೆ. ಹೀಗಾಗಿ ನನ್ನ ಪುಸ್ತಕಗಳನ್ನು ಸಮರ್ಥಿಸಿದ ಯಾವ ಒಂದು ಮಾತಿಗೂ ಪತ್ರಿಕೆಯಲ್ಲಿ ಸ್ಥಳ ಕೊಡಲಿಲ್ಲ.

೧೧

ಒಳ್ಳೆಯ ಲೇಖನಕ್ಕೆ ಎಡೆಮಾಡಿಕೊಡುವಷ್ಟೇ ಮುಖ್ಯವಾಗಿ ನಮ್ಮ ಜನರಿಗೆ ಒಳ್ಳೆಯ ಪುಸ್ತಕಗಳ ಪರಿಚಯವನ್ನು ಮಾಡಿಕೊಡಬೇಕು ಎನ್ನುವುದೂ ಪತ್ರಿಕೆಯ ಮುಖ್ಯ ಉದ್ದೇಶ ಆಗಿರಬೇಕು ಎಂದು ನನಗೆ ತೋರಿತು: ಹೊಸ ಪುಸ್ತಕಗಳ ವಿಷಯದಲ್ಲಿ ಇದು ಅವಲೋಕನವೂ ಆಗಬೇಕು. ಈ ಕೆಲಸವನ್ನು ಪತ್ರಿಕೆ ಸ್ವಲ್ಪಮಟ್ಟಿಗೆ ಮಾತ್ರ ಮಾಡಿತು. ಕೆಲವು ವರ್ಷದ ವಿಶೇಷ ಸಂಚಿಕೆಗಳನ್ನು ಈ ಕೆಲಸಕ್ಕೆಂದೇ ಮೀಸಲು ಮಾಡಿದ್ದಾಯಿತು. ಅವಲೋಕನ ಮಾಡುವಲ್ಲಿ ಪತ್ರಿಕೆಯ ನಿಲುವು ಸಹೃದಯವಾಗಿರಬೇಕು ಎನ್ನುವುದು ನನ್ನ ತೀವ್ರ ಅಪೇಕ್ಷೆ. ಬಹುಪಾಲು ಪತ್ರಿಕೆಯಲ್ಲಿ ಬಂದ ಅವಲೋಕನಗಳು ಈ ನಿಲುವಿನವೇ ಆಗಿವೆ. ಇದರ ಮೂಲದ ಭಾವ ಸಾಹಿತ್ಯ ಸೇವಕನಿಗೆ ಮುಖಭಂಗ ಆಗಬಾರದು ಎನ್ನುವುದು. ಬರೆಯುವ ಹೊಸವರಲ್ಲಿ ತಪ್ಪು ತಪ್ಪಿದ್ದಲ್ಲ. ಷೇಕ್ಸ್‌ಪಿಯರ್ ಕಾಳಿದಾಸರಲ್ಲಿ ಆರಂಭದ ಕೃತಿ ತಾನು ಆರಂಭದ ಕೃತಿ ಎನ್ನುವುದನ್ನು ತೋರಿಸುತ್ತದೆ. ಕವಿಸಾರ್ವಭೌಮರಿಗೆ ಇದು ತಪ್ಪಿದ್ದಲ್ಲವಾದರೆ ಉಳಿದವರ ಪಾಡೇನು? ತಪ್ಪಿದ್ದರೆ ಅದನ್ನು ಮುಚ್ಚಿಡಬೇಕಾದದ್ದಿಲ್ಲ ಎನ್ನುವುದರ ಸೂಚನೆ ಸಾಕು. ತಪ್ಪು ಬಹಳವಾಗಿ, ವಿಮರ್ಶೆ ಲೇಖಕನಿಗೆ ಕ್ರೂರವಾಗಿ ಕಂಡೀತು ಎನ್ನುವ ಸಂದರ್ಭದಲ್ಲಿ ಅದನ್ನು ಪತ್ರಿಕೆಯಲ್ಲಿ ಪ್ರಕಟಿಸಲಿಲ್ಲ. ಅಂಥ ವಿಮರ್ಶೆಯನ್ನು ನಮ್ಮ ವಿಮರ್ಶಕರ ಅಭಿಪ್ರಾಯ ಎಂದು ಲೇಖಕರಿಗೆ ಕಳುಹಿಸಿದ್ದಾಗಿದೆ.

ಈ ಕೆಲಸ ತಕ್ಕಷ್ಟು ನಡೆದಿಲ್ಲ ಎಂದು ವಿಜ್ಞಾಪನೆ ಮಾಡಿದ್ದಾಗಿದೆ. ಇದರ ಮುಖ್ಯ ಕಾರಣ ನಮ್ಮಲ್ಲಿ ಈ ಕೆಲಸ ಮಾಡಿಕೊಡಲು ಜನ ಒದಗದೇ ಇರುವುದು. ವಿಮರ್ಶೆ ಮಾಡಬಲ್ಲ ಮಿತ್ರರನ್ನು ಕಂಡಾಗ ಕೆಲವು ಪುಸ್ತಕ ವಿಮರ್ಶೆ ಮಾಡಿಕೊಡುತ್ತೀರಾ ಎಂದು ಪ್ರಶ್ನೆ ಮಾಡಿ ಅವರು ಆಗಲಿ ಎಂದ ಮೇಲೆ ಅವರಿಗೆ

ಪುಸ್ತಕಗಳನ್ನು ಕೊಟ್ಟಿರುವುದು ಎನ್ನುವುದು ಹತ್ತಾರು ಬಾರಿ. ಹೀಗೆ ಪುಸ್ತಕಗಳನ್ನು ಕೊಟ್ಟ ಮೇಲೆ ಆ ಮಿತ್ರರಿಂದ ವಿಮರ್ಶೆ ಬರುವುದಿಲ್ಲ. ಬೇರೆ ಯಾರಿಗಾದರೂ ಕೊಡೋಣವೆಂದರೆ ಪುಸ್ತಕವೂ ಹಿಂದಕ್ಕೆ ಬರುವುದಿಲ್ಲ. ಇದು ನೂರರಲ್ಲಿ ಎಪ್ಪತ್ತೈದು ಬಾರಿ. ಪತ್ರಿಕೆಗೆ ವಿಮರ್ಶೆಗೆಂದು ಬಂದ ಪುಸ್ತಕ ಅನೇಕ ಹೀಗೆ ಚೆಲ್ಲಾಪಿಲ್ಲಿ ಹತ್ತು ದಿಕ್ಕಿನಲ್ಲಿ ಕಣ್ಮರೆಯಾಗಿವೆ. ನಾವೇನೂ ಈ ಮಿತ್ರರನ್ನು ದೂರುವಂತಿಲ್ಲ. ಇವರು ವಿಮರ್ಶೆಯನ್ನು ಕಳುಹಿಸಿದ್ದರೆ, ಅವರಿಗೇನೂ ಸಂಭಾವನೆ ಕೊಡುತ್ತಿರಲಿಲ್ಲ. ಬಿಟ್ಟೀ ಕೆಲಸ. ಮಾಡಿದರೆ ಉಪಕಾರ; ಮಾಡಲಿಲ್ಲ, ಅಪಕಾರ ಅಲ್ಲವಲ್ಲ? ಅಂತೂ, ಪತ್ರಿಕೆಯಲ್ಲಿ ಅವಲೋಕನಕ್ಕೆಂದು ಪುಸ್ತಕಗಳನ್ನು ಕಳುಹಿಸಿದ ಅನೇಕ ಮಿತ್ರರಿಗೆ ಪತ್ರಿಕೆ ಸರಿಯಾಗಿ ನಡೆದುಕೊಳ್ಳಲಿಲ್ಲ ಎಂದು ಹೇಳಲು ಕಾರಣ ಒದಗಿದೆ.

ಇಂಥ ಸಂದರ್ಭದಲ್ಲಿ ಮಿತ್ರರೊಬ್ಬರು, ''ಇಲ್ಲಾ ನಮ್ಮ ಪುಸ್ತಕದ ಅವಲೋಕನವನ್ನು ಪ್ರಕಟಿಸಬೇಕು. ಇಲ್ಲಾ ಅದನ್ನು ನಮಗೆ ಹಿಂದಕ್ಕೆ ಕಳುಹಿಸಬೇಕು.'' ಎಂದು ಪತ್ರ ಬರೆದರು. ಈ ಮಿತ್ರರು ಪುಸ್ತಕ ಕಳುಹಿಸಿದಾಗ ಮೈಸೂರಲ್ಲಿದ್ದವರು ಈ ಕಾಗದ ಬರೆಯುವ ವೇಳೆಗೆ ಬೆಂಗಳೂರಿಗೆ ಬಂದಿದ್ದರು. ''ಅನುಕೂಲವಾದರೆ ಯಾವಾಗಲಾದರೂ ಬಂದು ಈ ವಿಷಯ ನನ್ನೊಂದಿಗೆ ಐದು ನಿಮಿಷ ಮಾತನಾಡಿ.'' ಎಂದು ಇವರಿಗೆ ಹೇಳಿ ಕಳುಹಿಸಿದೆ. ಅವರು ದಯಮಾಡಿಸಿದರು. ''ಪುಸ್ತಕವನ್ನು ಒಬ್ಬ ಮಿತ್ರರಿಗೆ ಅವಲೋಕನಕ್ಕೆಂದು ಕೊಟ್ಟಿದೆ. ಅವರು ಅದನ್ನು ಮಾಡಿಕೊಟ್ಟಿಲ್ಲ. ಪುಸ್ತಕ ಅವರ ಕೈಯಲ್ಲಿದೆ. ಈಗ ಪುಸ್ತಕವನ್ನು ನಿಮಗೆ ಹಿಂದಕ್ಕೆ ಕೊಡಬೇಕೆನ್ನುವುದಾದರೆ ನಾನು ಹಣ ಕೊಟ್ಟು ಎರಡು ಪ್ರತಿಯನ್ನು ಕೊಂಡು ಕಳುಹಿಸಬೇಕು. ಇದನ್ನು ಮಾಡು ಎಂದು ಹೇಳುತ್ತೀರಾ? ಮಾಡಿದೆಯೆನ್ನೋಣ. ವಿಮರ್ಶೆಗೆ ಬರುವ ಎಲ್ಲ ಪುಸ್ತಕಗಳ ವಿಷಯದಲ್ಲಿಯೂ ಹೀಗೆ ನಡೆದುಕೊಳ್ಳಲು ಸಾಧ್ಯವೇ? ಎಂದ ಮೇಲೆ ಪತ್ರಿಕೆ ವಿಮರ್ಶೆಗಾಗಿ ಯಾವ ಪುಸ್ತಕವನ್ನೂ ಸ್ವೀಕರಿಸುವುದಿಲ್ಲ ಎಂದು ಹೇಳುವುದು ಕ್ಷೇಮ ಅಲ್ಲವೇ?'' ಎಂದು ನಾನು ಕೇಳಿದೆನು. ಪತ್ರಿಕಾಕರ್ತನ ತೊಡಕು ದಿಟವಾದದ್ದೆಂದು ಅವರು ಒಪ್ಪಿದರು. ತಮ್ಮ ಪುಸ್ತಕವನ್ನು ಹಿಂದಕ್ಕೆ ಕಳುಹಿಸಬೇಕಾಗಿಲ್ಲ ಎಂದರು. ನಾನು ಅವರಿಗೆ ವಂದನೆ ಹೇಳಿದೆನು. ಎದುರಿಗೆ ತೋರುವ ನಯವನ್ನು ಬರವಣಿಗೆಯಲ್ಲಿ ತೋರುವುದು ಸಾಧ್ಯವಲ್ಲ ಆದ್ದರಿಂದ ಈ ಸಂಗತಿಗೆ ಒಂದು ಕಾಗದ ಬರೆಯುವುದಕ್ಕೆ ಪ್ರತಿಯಾಗಿ ಅವರನ್ನು ಬರಮಾಡಿಕೊಳ್ಳಬೇಕಾಯಿತು. ತೊಂದರೆಯನ್ನು ಕ್ಷಮಿಸಬೇಕು, ಎಂದೆನು. ಮಿತ್ರರು ತುಂಬಾ ಸಮಾಧಾನವಾಗಿ ಬೀಳ್ಕೊಟ್ಟರು.

ಇದರ ಕೌತುಕ ಏನೆಂದರೆ ಈ ಮಿತ್ರರ ಆ ಪುಸ್ತಕದ ಅವಲೋಕನ ಇದುವರೆಗೂ ಬಂದಿಲ್ಲ.

ತಮ್ಮ ಗ್ರಂಥವನ್ನು ಕುರಿತು ಪತ್ರಿಕೆಯಲ್ಲಿ ಪ್ರಕಟವಾದ ಅವಲೋಕನದಿಂದ ಅಸಮಾಧಾನಪಟ್ಟ ಮಿತ್ರರೊಬ್ಬರು ಈ ಕಾರಣವನ್ನು ಸೂಚಿಸದೆ ತಮ್ಮ ಹೆಸರನ್ನು ಚಂದಾಪಟ್ಟಿಯಿಂದ ತೆಗೆದುಹಾಕಬೇಕು ಎಂದಷ್ಟೇ ಹೇಳಿ ಪತ್ರ ಬರೆದರು. ಇವರು ನನಗೆ ತುಂಬಾ ಬೇಕಾದವರು. ಹಿರಿಯ ಲೇಖಕರು. ನಾನು, ''ನಿಮ್ಮ ಈ ಸೂಚನೆಗೆ ಕಾರಣ ಏನೂ ಹೇಳಿಲ್ಲ. ಪತ್ರಿಕೆಯಲ್ಲಿ ಪ್ರಕಟವಾದ ಅವಲೋಕನ ತಮಗೆ ಸಮ್ಮತವಲ್ಲ ಎಂಬ ಕಾರಣ ಇರಬಹುದು. ಇಂಥ ಅಭಿಪ್ರಾಯ ಭೇದ ನಮ್ಮ ಸ್ನೇಹಕ್ಕೆ ಅಡ್ಡಿಯಾಗಬಾರದು. ನಾನು ಕನ್ನಡದಲ್ಲಿ ಮಾಡುತ್ತಿರುವ ಕೆಲಸ ನಾವೆಲ್ಲ ಸೇರಿ ಮಾಡುತ್ತಿರುವ ಕೆಲಸ ಎಂದೇ ನಾನು ಬಗೆದಿದ್ದೇನೆ. ಆ ಕೆಲಸವನ್ನು ನಾನು ನಿಮಗೆ ತಿಳಿಸುತ್ತಲೇ ಇರಬೇಕು. ನೀವು ಚಂದಾದಾರರು ಆಗದೇ ಇದ್ದರೂ ನಾನು ಪತ್ರಿಕೆಯನ್ನು ಕಳುಹಿಸದೆ ನಿಲ್ಲಿಸುವಂತಿಲ್ಲ, ಕಳುಹಿಸುತ್ತೇನೆ. ಸ್ವೀಕರಿಸಿ, ವಿಶ್ವಾಸ ಏಕರೀತಿ ಇರಲಿ.'' ಎಂಬ ಅರ್ಥಕ್ಕೆ ಒಂದು ಪತ್ರವನ್ನು ಬರೆದೆನು. ಮಿತ್ರರು ಉತ್ತರ ಬರೆಯಲಿಲ್ಲ. ಪತ್ರಿಕೆ ಅವರಿಗೆ ಹೋಗುತ್ತಾ ಇದೆ. ಅವರು ಚಂದಾ ಕಳುಹಿಸುತ್ತಾ ಇದ್ದಾರೆ. ವಿಶ್ವಾಸ ಎಂದಿನಂತೆ ಇದೆ.

೧೨

ಪತ್ರಿಕೆಯಲ್ಲಿ ಈಗ ಬಹು ಜನಪ್ರಿಯವಾಗಿರುವ ಭಾಗ ಅದರಲ್ಲಿ ಈಗ ಅನೇಕ ವರ್ಷಗಳಿಂದ ಪ್ರತಿ ತಿಂಗಳೂ ಪ್ರಕಟವಾಗುತ್ತಾ ಬಂದಿರುವ ಸಂಪಾದಕೀಯ ಟಿಪ್ಪಣಿ. ಮೊದಲು ಕೆಲವು ವರ್ಷ ಈ ಟಿಪ್ಪಣಿ ಇರಲಿಲ್ಲ, ಅವು ತುಂಬಾ ಕಷ್ಟದ ವರ್ಷಗಳು. ಎಂಥದೋ ಕಾಗದದ ಮೇಲೆ ಮೂವತ್ತಾರು ಪುಟ ಅಚ್ಚು ಮಾಡಿ ಪತ್ರಿಕೆಯನ್ನು ಕುಟುಕುಜೀವದಲ್ಲಿ ಉಳಿಸಿಕೊಂಡಿದ್ದ ಕಾಲ. ಮೊದಲ ಮೂರು ವರ್ಷ ಅರವತ್ತು ಪುಟದಷ್ಟು ಒಳ್ಳೆಯ ಕಾಗದದ ಮೇಲೆ ವಿವಿಧ ಲೇಖನಗಳನ್ನು ಪ್ರಕಟಿಸುತ್ತಿದ್ದ ಪತ್ರಿಕೆ ಇಂಥ ದುರವಸ್ಥೆಗೆ ಬಂದದ್ದನ್ನು ನೋಡಿ ಅದರ ಅಭಿಮಾನಿ ಮಿತ್ರರೊಬ್ಬರು, ಇದನ್ನು ಹೀಗೆ ಬಾಳಿಸುವುದಕ್ಕಿಂತ ಒಂದು ಬಾವಿಗೆ ತಳ್ಳಿಬಿಡುವುದು ಮೇಲು, ಎಂದು ಕಾಗದ ಬರೆದರು. ಬೇಸರಕ್ಕೆ ಕಾರಣವಿತ್ತು. ಎರಡನೆಯ ಮಹಾಯುದ್ಧದ ಕಾರಣದಿಂದ ರಾಷ್ಟ್ರದ ಜೀವನದ ನೆಮ್ಮದಿ ಎಲ್ಲ ವಿಭಾಗದಲ್ಲೂ ಹೀಗೆಯೇ ಇಳಿದುಹೋಗಿತ್ತು. ನೆಮ್ಮದಿ ಇಲ್ಲವೆಂದು ಆತ್ಮಹತ್ಯೆ ಮಾಡಿಕೊಳ್ಳಲಾದೀತೇ? ಪತ್ರಿಕೆ ಕನ್ನಡ ಜನಜೀವನದ ಒಂದು ಕಂಠ. ಇದು ತನ್ನ ಮಾತನ್ನು ತಾನು ಆಡುತ್ತ ಇರಬೇಕು. ಆದ್ದರಿಂದ ಹೇಗಿರಬಹುದಾದ ಪತ್ರಿಕೆ ಹೀಗಿದೆಯಲ್ಲಾ ಎನ್ನುತ್ತಾ ನಾನು ಪತ್ರಿಕೆಯನ್ನು ನಡೆಸಿದೆನು. ಯುದ್ಧ ಮುಗಿಯುವ ಸುಮಾರಿನಲ್ಲಿ ರಾಷ್ಟ್ರ ಜೀವನದ ವಿಷಯ ಕರ್ನಾಟಕದ ಜೀವದನ ವಿಷಯ, ತಿಂಗಳು ತಿಂಗಳು ನನಗೆ ತೋಚಿದ ಸಂಗತಿಯನ್ನು ಟಿಪ್ಪಣಿಗಳ ರೂಪದಲ್ಲಿ ಪ್ರಕಟಿಸಿದೆನು. ಪ್ರಕಟವಾಗಲು ಮೊದಲಾದ ಒಡನೆಯೇ ಇವು ಜನಕ್ಕೆ ರುಚಿಸಿದವು. ಬರಬರುತ್ತ ಈ ಭಾಗ ಪತ್ರಿಕೆಯ ಒಂದು ಅವಶ್ಯ ಅಂಗ ಆಯಿತು. ಯಾವುದೋ ಕಾರಣದಿಂದ ಒಂದು ತಿಂಗಳು ಟಿಪ್ಪಣಿ ಇಲ್ಲದೆ ಹೋದಾಗ ಒಬ್ಬ ಮಿತ್ರರು ''ಪತ್ರಿಕೆ ತಿಲಕವನ್ನಿಟ್ಟುಕೊಳ್ಳಲು ಮರೆತ ಸ್ತ್ರೀಯ ಮುಖದಂತೆ ಇತ್ತು.'' ಎಂದು ಪತ್ರ ಬರೆದರು.

ಟಿಪ್ಪಣಿಗಳಲ್ಲಿ ಲೋಕಜೀವನ, ರಾಷ್ಟ್ರ ಜೀವನ, ಕರ್ನಾಟಕ ಜೀವನದ ಅನೇಕ ಸಂಗತಿಗಳನ್ನು ಕುರಿತ ನನ್ನ ಯೋಚನೆಗೆ ರೂಪು ಬಂದಿದೆ. ಈ ಎಲ್ಲ ವಿಷಯದಲ್ಲಿ ನಾನು ಕರ್ನಾಟಕದ ಅತ್ಯುಚ್ಚ ಸಂಸ್ಕೃತಿಯ ದೃಷ್ಟಿಯೇನು ಎನ್ನುವುದನ್ನು ತಿಳಿಸಲು ಯತ್ನಿಸಿದ್ದೇನೆ. ಕರ್ನಾಟಕದ ಸಂಸ್ಕೃತಿ ಸದ್ಯದಲ್ಲಿ ಒಂದು ತಗ್ಗಿನ ಮಟ್ಟಕ್ಕೆ ಇಳಿದಿದೆ. ಅದು ಎತ್ತರವನ್ನು ಕಂಡ ದಿನದಲ್ಲಿ ಬಹು ಎತ್ತರವನ್ನು ಮುಟ್ಟಿತ್ತು. ನಮ್ಮ ಜನ ಜೀವನದ ವ್ಯವಸ್ಥೆಯಲ್ಲೆಲ್ಲಾ ಅದರ ಮಹಿಮೆ ಕಾಣುತ್ತಿತ್ತು. ಅದರ ಪ್ರಭಾವ ಆಗ ಸುಮಾರು ಐವತ್ತು ವರ್ಷದವರೆಗೂ ನಮ್ಮ ಜನತೆಯ ಜೀವನವನ್ನು ಬೆಳಗಿತು. ಆ ತಲೆಮಾರಿನಲ್ಲಿ ಎಳೆಯನಾಗಿದ್ದ ನನಗೆ, ಅಂದಿನ ಸಾಮಾನ್ಯರೆಂಬ ಜನರಲ್ಲಿ ಬಹುಸಾಮಾನ್ಯವಾಗಿ ಹರಡಿದ್ದ ಒಳ್ಳೆಯ ಎಣಿಕೆ, ಒಳ್ಳೆಯ ಮಾತು ಒಳ್ಳೆಯ ನಡತೆ, ಎಷ್ಟು ಶ್ರೇಷ್ಠತರ ನೀತಿಯ ಸ್ವರೂಪ ಎಂದು ನಾನೇ ಅರಿಯದೆ ಅಚ್ಚರಿಗೆ ತೃಪ್ತಿಗೆ ಕಾರಣವಾಗಿತ್ತು. ಆ ಜನದ ಜೀವನ ಚೆನ್ನಾಗುವಂತೆ ಮಾಡಿದ ಭಾವನೆ ನಮ್ಮ ಪುರಾತನ ಸಂಸ್ಕೃತಿಯ ಪರಿಪಕ್ವ ಫಲಗಳು. ಅವಕ್ಕಿಂತ ಹೆಚ್ಚಿನ ಸತ್ಯ ಲೋಕದಲ್ಲಿ ಇಲ್ಲ ಎಂದು ನನ್ನ ತಿಳಿವಳಿಕೆ. ಲೋಕದ ಜೀವನವನ್ನು ಅವುಗಳ ಬೆಳಕಿನಲ್ಲಿ ನೋಡಿ, ನಿಷ್ಪಕ್ಷಪಾತ ಮನಸ್ಸಿನಿಂದ ವಿಚಾರಿಸಿ ನನ್ನ ಬುದ್ಧಿಗೆ ಏನು ತೋಚುತ್ತದೆ ಎನ್ನುವುದನ್ನು ನಮ್ಮ ಜನಕ್ಕೆ ವಿಜ್ಞಾಪಿಸುವುದು ಇಂಥ ಪತ್ರಿಕೆಯ ಸಂಪಾದಕನ ಕರ್ತವ್ಯ ಎಂದು ನನಗೆನಿಸಿತು. ಟಿಪ್ಪಣಿಗಳಲ್ಲಿ ನಾನು ಈ ಕೆಲಸವನ್ನು ಮಾಡಿದೆನು.

೧೩

ಭರತ ವರ್ಷದ ಸ್ವಾತಂತ್ರ್ಯ ಸಾರ್ಥಕವಾಗಬೇಕಾದರೆ ಭರತ ವರ್ಷ ತನ್ನ ತನವನ್ನು ಉಳಿಸಿಕೊಂಡು ಸ್ವತಂತ್ರವಾದ ಯೋಚನೆ ಮಾಡಬೇಕು ಎನ್ನುವುದು ನಾನು ವಿಜ್ಞಾಪಿಸುತ್ತ ಬಂದಿರುವ ಒಂದು ದೊಡ್ಡ ಸಂಗತಿ. ಯಾವುದೇ ಜನತೆ ತನ್ನ ಬಾಳನ್ನು ಆದಷ್ಟು ಚೆನ್ನ ಮಾಡಿಕೊಳ್ಳಬೇಕೆಂದು ಬಯಸುವುದಾದರೆ ಆ ಬಾಳಿನ ಎಲ್ಲ

ಕ್ಷೇತ್ರದಲ್ಲಿಯೂ ಅದು ತನ್ನ ಭಾಷೆಯನ್ನು ಬಳಸಬೇಕು ಎನ್ನುವುದು ಇನ್ನೊಂದು ದೊಡ್ಡ ಸಂಗತಿ. ಕನ್ನಡ ಭಾಷೆ, ಕನ್ನಡ ಜನದ ಜೀವನದಲ್ಲಿ ಸಾಧ್ಯವಾದಷ್ಟು ಶುಭವನ್ನು ಸಾಧಿಸಬೇಕಾದರೆ ಕನ್ನಡ ಜನ ತಮ್ಮ ಬಾಳನ್ನು ಒಂದು ಬಾಳಾಗಿ ಬಾಳಬೇಕು ಎನ್ನುವುದು ಇನ್ನೊಂದು. ಈ ಮೂರನೆಯ ಅಪೇಕ್ಷೆಗೆ ಸಾಧಕ ಎಂದೇ ಪತ್ರಿಕೆ ಕರ್ಣಾಟಕದ ಏಕೀಕರಣಕ್ಕಾಗಿ ಪಟ್ಟು ಹಿಡಿದು ಕೆಲಸ ಮಾಡಿತು. ಕನ್ನಡ ನಾಡಿನ ಏಕೀಕರಣ ಕೈಗೂಡಿದೆ. ನಮ್ಮ ಹಿರಿಯರು ಈಗ ಅದರ ಜೀವನದಲ್ಲಿ ಏಕೀಕರಣವನ್ನು ಸಾಧಿಸಬೇಕು.

ಭರತ ವರ್ಷ ತನ್ನನ್ನು ತಾನು ಕಂಡುಕೊಂಡು ಲೋಕ ಜೀವನದಲ್ಲಿ ತನ್ನ ಹೊಣೆಯನ್ನು ನಿರ್ವಹಿಸುವುದು ಒಂದು ಗುರಿಯೆಂದು ನಮ್ಮ ನಾಯಕರು ಇನ್ನೂ ಕಂಡಿಲ್ಲ. ಇದು ಸಿದ್ಧಿಸಬೇಕಾದರೆ ಜನತೆಗಳು ನೇಮಿಸಿ ಕೊಂಡಿರುವ ನಮ್ಮ ಸರ್ಕಾರಗಳು ತಮ್ಮ ಒಡೆಯರಾದ ಈ ಜನತೆಯೊಂದಿಗೆ ಅದರ ಭಾಷೆಗಳಲ್ಲೇ ವ್ಯವಹಾರ ನಡೆಸಬೇಕು. ಹೊರಗಿನ ಭಾಷೆಯಾದ ಇಂಗ್ಲೀಷಿನಲ್ಲಿ ಆಗಲಿ, ಒಳಗಿನದೇ ಆದರೂ ಬಹುಜನಕ್ಕೆ ಅಪರಿಚಿತ ವಾದ ಹಿಂದಿಯಲ್ಲಿ ಆಗಲಿ, ಮಾತ್ರ ವ್ಯವಹಾರ ನಡೆಸುವ ಕೇಂದ್ರ ಸರ್ಕಾರ ತನ್ನ ಕರ್ತವ್ಯದಲ್ಲಿ ಸೋಲುತ್ತಿದೆ ಎನ್ನುವುದು ಇನ್ನೂ ನಮಗೆ ಮನಮುಟ್ಟಿಲ್ಲ. ಪತ್ರಿಕೆ ಇದುವರೆಗೆ ಈ ದಿಕ್ಕಿನಲ್ಲಿ ತನ್ನಿಂದಾದ ಸೇವೆಯನ್ನು ಸಲ್ಲಿಸಿದೆ. ಮುಂದಕ್ಕಾದರೂ ಅದನ್ನು ನಡೆಸಬೇಕೆಂದರೆ ಇದಕ್ಕಿಂತ ಹಿರಿಯದೆನ್ನಬಹುದಾದ ಗುರಿಯಿಲ್ಲ.

೧೪

ಸ್ವತಂತ್ರವಾಗಿ ವಿಚಾರಮಾಡಿ, ಪ್ರಬಲರಾದವರು ಅಸಮಾಧಾನಪಟ್ಟಾರೆಂದು ಭಯವಿಟ್ಟುಕೊಳ್ಳದೆ ಯಾರಿಗೆ ಆಗಲಿ ಅನುಕೂಲ ಆಗಲೆಂದು ಪಕ್ಷಪಾತ ತೋರದೆ, ತನಗೆ ಸತ್ಯವೆಂದು ತೋರಿದ್ದನ್ನು ಹೇಳುವುದು ಸಂಪಾದಕನ ಶ್ರೇಷ್ಠಲಕ್ಷಣ. ಇದನ್ನು without fear or favour ಎಂದು ವರ್ಣಿಸುತ್ತಾರೆ. ಭಯವಿಲ್ಲ, ಪಕ್ಷಪಾತವಿಲ್ಲ. ಪತ್ರಿಕೆಯಲ್ಲಿ ಬಂದ ಟಿಪ್ಪಣಿಗಳು ಈ ಧೈರ್ಯವನ್ನು ಸಾಧಿಸಿದವು ಎಂದು ಹಲವರು ಪ್ರಾಜ್ಞ ಮಿತ್ರರು ಮೆಚ್ಚಿಕೊಂಡರೆಂದು ಹೇಳಿದೆ. ಒಬ್ಬ ಮಿತ್ರರು ಇವುಗಳಲ್ಲಿ ನೆಹರೂ ಅವರನ್ನು ಟೀಕಿಸಿದ್ದು ಕಟುವಾಯಿತು ಎಂದು ಒಮ್ಮೆ ತಿಳಿಸಿದರು. ಉನ್ನತ ಸ್ಥಾನದಲ್ಲಿರುವವರ ಮಾತನ್ನೂ ನಡೆಯನ್ನೂ ಒಪ್ಪದೆ ಇರುವುದು ಒಂದು ಮನೋಧರ್ಮ. ಇದು ಪ್ರಾಯಶಃ ರಾಜಕೀಯಪಕ್ಷಗಳ ಮನೋಧರ್ಮ. ಜೀವನದ ದೃಷ್ಟಿ ಸಾಹಿತ್ಯದ ದೃಷ್ಟಿ. ಇದರಲ್ಲಿ ನಮ್ಮ ನಾಯಕರು ಎಂಬ ಮೋಹ ಇಲ್ಲ. ಇನ್ನೊಂದು ಪಕ್ಷದ ನಾಯಕರು ಎಂದು ಅಸೂಯೆ ಇಲ್ಲ. ಇದೂ ಕೂಡ ಭಯವಿಲ್ಲ ಪಕ್ಷಪಾತವಿಲ್ಲ ಎಂಬಷ್ಟೇ ಮುಖ್ಯ ಧ್ಯೇಯ. ನೆಹರೂ ಅವರ ಸ್ವಭಾವದ ಬಹು ದೊಡ್ಡ ಗುಣಗಳೊಂದಿಗೆ ಅವರ ಆಂಗ್ಲ ವಿದ್ಯೆಯಿಂದ, ಅವರ ಆವರಣದಿಂದ, ಅವರು ಭೋಗಿಸಿದ ಸಂಪತ್ತಿನಿಂದ, ಕೆಲವು ಕೊರತೆಗಳು ಬೆಳೆದುಕೊಂಡವು. ಈ ಕಾರಣದಿಂದ ಕೆಲವು ವೇಳೆ ಅವರ ಮಾತು, ಇನ್ನು ಕೆಲವು ವೇಳೆ ಅವರ ನಡತೆ, ದಾರಿ ತಪ್ಪುತ್ತಿದ್ದವು. ಇಂಥ ವೇಳೆ ಹೀಗಾಯಿತೆನ್ನುವುದನ್ನು ಕಂಡವನು ಹೀಗಾಯಿತೆಂದು ಹೇಳಬೇಕು. ಪತ್ರಿಕೆಯ ಸಂಪಾದಕನಾಗಿ ನಾನು ಈ ಕರ್ತವ್ಯವನ್ನು ನಡೆಸಿದೆನು. ಪಂಡಿತರನ್ನು ಕುರಿತ ನನ್ನ ಇತರ ಬರವಣಿಗೆಯಿಂದ ಇದೇ ಮನುಷ್ಯನಿಗೆ ಅವರ ವಿಷಯಕ್ಕೆ ಬಹಳ ಗೌರವ ಇದೆ ಎನ್ನುವುದು ಕಾಣುತ್ತಿತ್ತು. ಟೀಕೆ ಕಟುವಾಯಿತೆಂದ ಮಿತ್ರರಿಗೆ ನಾನು ಈ ಮನೋಧರ್ಮವನ್ನು ವಿವರಿಸಿ ಹೇಳಬೇಕಾಯಿತು.

ಕಾಂಗ್ರೆಸ್ ಪಕ್ಷ ಕರ್ಣಾಟಕದ ಏಕೀಕರಣದ ವಿಷಯ ಶ್ರದ್ಧೆವಹಿಸದೆ ಕೈ ಬಿಟ್ಟಾಗ, ಇದು ತಪ್ಪಾಯಿತು, ಎಂದು ಪತ್ರಿಕೆಯಲ್ಲಿ ಹಲವು ಸಲ ಟೀಕೆ ಬರೆಯಬೇಕಾಯಿತು. ಲೋಕಸಭೆಯ ಸದಸ್ಯರಾಗಿದ್ದಾಗ ಏಕೀಕರಣ ಒಡನೆಯೇ ಆಗಬೇಕು ಎಂದು ಹೇಳುತ್ತಿದ್ದ ನಮ್ಮ ಹಿರಿಯರೊಬ್ಬರು, ಸರ್ಕಾರದಲ್ಲಿ ಸ್ಥಾನ ಒಂದು ದೊರೆತೊಡನೆ ಜನತೆಯ ಮಾತನ್ನು ಬಿಟ್ಟು, ಏಕೀಕರಣಕ್ಕೆ ಸ್ವಲ್ಪ ತಡ ಆದರೂ ಅಡ್ಡಿಯಿಲ್ಲ, ಎಂದು ಪಕ್ಷದ ಮಾತನ್ನು

ಆಡಿದರು. ಇದನ್ನು ಕುರಿತು ಪತ್ರಿಕೆಯಲ್ಲಿ ಟೀಕೆ ಮಾಡಬೇಕಾಯಿತು. ಈ ಸಂದರ್ಭದಲ್ಲಿ ಉಪಯೋಗಿಸಿದ ಭಾಷೆ ಕಠಿಣವಾಯಿತು ಎಂದು ಈ ಮಿತ್ರರಿಗೆ ಕಂಡಿರಬೇಕು. ಇವರು ಒಮ್ಮೆ ಬೆಂಗಳೂರಿಗೆ ಬಂದಾಗ ನನ್ನನ್ನು ಕಾಣಲು ಅಪೇಕ್ಷಿಸುವುದಾಗಿ ಹೇಳಿ ಕಳುಹಿಸಿದರು. ಕೆಲಸ ಏನು ಎಂದು ನನಗೆ ತಿಳಿಯದು. ಇವರು ನನ್ನ ಮಿತ್ರರೂ ಹೌದು. ಒಲ್ಲೆನೆಂದು ಏಕೆ ಹೇಳಲಿ ಎಂದು ಇವರಲ್ಲಿಗೆ ಹೋದೆ. ಕ್ಷೇಮ ಸಮಾಚಾರದ ಮಾತು ಇತರ ವಿಷಯದ ಪ್ರಸ್ತಾಪ ನಡೆದವು. ಕರೆಸಿದ ಉದ್ದೇಶವೇನು, ಸ್ಪಷ್ಟವಾಗಲಿಲ್ಲ. ಇತರ ಪ್ರಸ್ತಾಪದಲ್ಲಿ ಮುಖ್ಯವಾಗಿ ನಾನೇ ಏಕೀಕರಣದ ಮಾತನ್ನು ಎತ್ತಿ, ''ನೀವು ಇದರ ವಿಷಯ ಅನಾದರಣೆ ಮಾಡಬಾರದು'' ಎಂದು ಬೇಡಿದೆ. ಅವರು, ''ನೀವು ಈ ವಿಷಯದಲ್ಲಿ ಮಾಡುತ್ತಿರುವ ಟೀಕೆಗಳನ್ನು ಓದಿದೆ. ಅವುಗಳ ಭಾಷೆಯಲ್ಲಿ ಹಿಡಿತ ಇಲ್ಲ, ಎನ್ನಿಸಿತು'' ಎಂದರು. ನಾನು, ''ಭಾಷೆಯಲ್ಲಿ ಹಿಡಿತ ಬಹಳ. ಆದರೆ ಅದು ಅಧಿಕಾರದಲ್ಲಿರುವವರ ಮನಸ್ಸನ್ನು ಮುಟ್ಟುವಂತೆ ಕಾಣಲಿಲ್ಲ. ಅದರಿಂದ ಕೆಲವು ವೇಳೆ ಸ್ವಲ್ಪ ಗಟ್ಟಿಯಾಗಿ ಹೇಳಬೇಕಾಗುತ್ತದೆ.'' ಎಂದೆ. ಈ ಸರಣಿಯಲ್ಲಿ ನಾಲ್ಕು ಮಾತು ನಡೆದ ಮೇಲೆ, ನಾವು ವಿಶ್ವಾಸವಾಗಿಯೇ ಪರಸ್ಪರ ಬೀಳ್ಕೊಂಡೆವು. ಹೊರಗೆ ಬಂದಾಗ ಮಿತ್ರರ ಆಪ್ತಕಾರ್ಯದರ್ಶಿ ಕಣ್ಣಿಗೆ ಬಿದ್ದರು. ಅವರೂ ನನಗೆ ತಿಳಿದ ಮಿತ್ರರು. ಅವರ ನಾಯಕರು ನಮಗೆ ಹೇಳಿದ ಮಾತನ್ನು ಅವರಿಗೂ ತಿಳಿಸಿದೆ. ಅವರು, ''ಹೌದು; ಅವರು ತಮಗೆ ಭಾಷೆಯ ವಿಷಯ ಈ ಎಚ್ಚರಿಕೆ ಹೇಳಬೇಕೆಂದು ಅಪೇಕ್ಷಿಸಿದರು.'' ಎಂದರು. ನಾನು, ''ಈ ಶಬ್ದ ಸಂದರ್ಭಕ್ಕೆ ಹೊಂದುವುದಿಲ್ಲ. ಇದು ನನ್ನ ಮಾತಿನಿಂದ ಅವರಿಗೆ ಸ್ಪಷ್ಟವಾಗಿರಬೇಕು.'' ಎಂದು, ಹೊರಟು ಬಂದೆ. ''ಮಿತ್ರರು ಹೇಳಿ ಕಳುಹಿಸಿದ್ದಾರೆ ಎಂದು ಸುಮ್ಮನೆ ಹೋಗಿ ನೋಡಿದ್ದು ತಪ್ಪಾಯಿತು, ಏನು ಕೆಲಸ ಎಂದು ಕೇಳಿ, ಅದನ್ನು ತಿಳಿಸಿದ ಮೇಲೆ ಹೋಗುವುದು ಬಿಡುವುದು ಎನ್ನುವುದನ್ನು ನಿರ್ಧರಿಸಬೇಕಾಗಿತ್ತು.'' ಎಂದುಕೊಂಡೆ.

ಇದಕ್ಕೆ ಹಿಂದೆ ಕೆಲವು ತಿಂಗಳಲ್ಲಿ ಕೇಂದ್ರ ಸರ್ಕಾರದ ಪೊಲೀಸು ಇಲಾಖೆಯ ಇನ್ಸ್‌ಪೆಕ್ಟರೊಬ್ಬರು ನನ್ನನ್ನು ನೋಡುವುದಕ್ಕೆಂದು ಬಂದಿದ್ದರು. ಇವರು ಅದಕ್ಕೆ ಮೊದಲು ನನಗೆ ಪರಿಚಿತರಾಗಿದ್ದ ಭಾಷಾಸೇವಕರು. ಉತ್ತರ ಕರ್ನಾಟಕದ ಒಂದು ದೊಡ್ಡ ಊರಿನಲ್ಲಿ ಕರ್ಣಾಟಕ ಸಂಘದ ಉತ್ಸವಗಳಲ್ಲಿ ಭಾಗವಹಿಸಿದ್ದವರು. ಅವರು ಪೊಲೀಸ್ ಅಧಿಕಾರಿಗಳಾದದ್ದು ನನಗೆ ತಿಳಿದಿರಲಿಲ್ಲ. ಆದರದಿಂದ ಬರಮಾಡಿಕೊಂಡು ಅವರೊಂದಿಗೆ ಮಾತನಾಡಿದೆ. ಅವರು ತಮ್ಮ ಮಾತು ಹಲವನ್ನು ಹೇಳಿದರು. ಒಂದು ಒಂದೂವರೆ ತಾಸಿನಷ್ಟು ಹೊತ್ತು ಮಾತನಾಡುತ್ತಾ ಕುಳಿತಿದ್ದು ಬೀಳ್ಕೊಂಡರು. 'ಏನು ಬಂದಿದ್ದಿರಿ' ಎಂದು ಕೇಳಿದೆ. ''ಯಾವುದೋ ಕೆಲಸಕ್ಕೆ ಬೆಂಗಳೂರಿಗೆ ಬಂದೆ. ತಮ್ಮನ್ನು ನೋಡೋಣ ಎಂದು ಅಪೇಕ್ಷೆಯಾಯಿತು. ಅಷ್ಟಕ್ಕಾಗಿ ಬಂದೆ.'' ಎಂದರು. ''ತುಂಬ ವಿಶ್ವಾಸವಾಯಿತು, ವಂದನೆ'' ಎಂದು ಅವರನ್ನು ಕಳುಹಿಸಿಕೊಟ್ಟೆ. ಈಗ ನನಗೆ ತೋರುತ್ತಿದೆ. ಇವರು ಪತ್ರಿಕೆಯ ವಿಷಯ ನನ್ನೊಂದಿಗೆ ಏನನ್ನಾದರೂ ಹೇಳುವುದಕ್ಕೆ ಬಂದಿದ್ದರೆ ಆಶ್ಚರ್ಯವಿಲ್ಲ. ತಾವು ವಿರೋಧಿಗಳೆಂದು ಎಣಿಸಿದ ನಮ್ಮ ಜನರನ್ನು ಆಂಗ್ಲ ಸರ್ಕಾರ ಈ ರೀತಿ ಕಾಣುತ್ತಿತ್ತು. ಸ್ವತಂತ್ರ ಭಾರತದ ಸರ್ಕಾರದಲ್ಲಿ ಸ್ಥಾನ ಪಡೆದ ಕೆಲವು ಜನ ಇಂಥ ಚೇಷ್ಟೆಗಳನ್ನು ತಮ್ಮ ಅಧಿಕಾರದ ಒಂದು ಭೂಷಣ ಎಂದು ಯೋಚಿಸುವುದು ತೀರ ಸಂಭವ.

೧೫

ಮೊದಲ ಕೆಲವು ವರ್ಷ ಪತ್ರಿಕೆಯಲ್ಲಿ ಪ್ರಕಟನೆಗಳು ಅಷ್ಟೇನೂ ಇರಲಿಲ್ಲ. ಪತ್ರಿಕೆ ಭದ್ರವಾಗಿ ನಿಂತ ಮೇಲೆ ನಾನು ಹಲವು ಮಿತ್ರರಲ್ಲಿ ಪ್ರಕಟನೆಗಳನ್ನು ಬೇಡಿದೆನು. ಅವರು ಕೊಟ್ಟರು. ಈಚೆಗೆ ಕೆಲವು ವರ್ಷಗಳಿಂದ ಏಳು ಸಂಸ್ಥೆಗಳು ಕ್ರಮವಾಗಿ ಪ್ರಕಟನೆಗಳನ್ನು ಕೊಟ್ಟಿವೆ, ಪತ್ರಿಕೆಗೆ ಸಹಾಯ ನೀಡಿವೆ. ಇವಕ್ಕೆ ಹೃತ್ಪೂರ್ವಕ ವಂದನೆ.

ಮೈಸೂರು ಸರ್ಕಾರದಿಂದ ಮೊದಲು ಸ್ವಲ್ಪಕಾಲ ಪ್ರಕಟನೆಗಳು ಬಂದವು. ಆಮೇಲೆ ಪ್ರಕಟನೆಗಳ "policy" "consideration"ನಲ್ಲಿದೆಯೆಂದು ಈ ಪತ್ರಿಕೆಗೆ ಪ್ರಕಟನೆ ಕೊಡುವುದನ್ನು ನಿಲ್ಲಿಸಿದರು. ಬೇರೆ ಪತ್ರಿಕೆಗಳಲ್ಲಿ ಅಲ್ಲಲ್ಲಿ ಪ್ರಕಟನೆಗಳು ಬರುತ್ತಲೇ ಇದ್ದವು. ಅವುಗಳ ಪರವಾಗಿ ಜನ ಹೋಗಿ ಅಧಿಕಾರಿಗಳಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದಿರಬೇಕು. ಸ್ವಲ್ಪಕಾಲದ ನಂತರ ಮದ್ರಾಸಿನ ಪ್ರಕಟನೆಕಾರ ಸಂಸ್ಥೆಯೊಂದು ಮೈಸೂರು ಸರ್ಕಾರದ "Agent" ಎಂದು ನೇಮಕ ಪಡೆಯಿತು. ಈ ಏಜೆಂಟು ಮುಖಾಂತರ ಪತ್ರಿಕೆಯ ವಿಶಿಷ್ಟ ಸಂಚಿಕೆಗಳಿಗೆ ಬಹಳ ಪ್ರಯತ್ನದ ನಂತರ ಒಂದೆರಡು ಸಲ ಪ್ರಕಟನೆಗಳು ದೊರೆತವು. ಸ್ವಲ್ಪ ಕಾಲದಲ್ಲಿ ಈ ಏರ್ಪಾಡು ಕೊನೆಗೊಂಡಿತು. ಒಂದು ಬಾರಿ ಸರ್ಕಾರದಿಂದ ನಮ್ಮ circulation ವಿಷಯ Auditor's Certificate ಬೇಕೆಂದು ಪತ್ರ ಬಂದಿತು. ಒಬ್ಬ ಆಡಿಟರಿಗೆ ಕೊಡುವುದಕ್ಕೆ ನಮ್ಮಲ್ಲಿ ಹಣವಿಲ್ಲ. ಕನ್ನಡ ಪ್ರೇಮಿಗಳಾದ Auditor ಮಿತ್ರರೊಬ್ಬರನ್ನು ಬೇಡಿ ಈ ಕೆಲಸವನ್ನು ಮಾಡಿಸಿಕೊಳ್ಳಬೇಕಾಯಿತು. ಅವರು ನಮ್ಮ ಪುಸ್ತಕ ಲೆಕ್ಕಪತ್ರ ಎಲ್ಲವನ್ನೂ ತರಿಸಿಕೊಂಡು ಪರಿಶೀಲನೆ ನಡೆಸಿ ಒಂದು certificate ಕೊಟ್ಟರು. ಇದನ್ನು ಸರ್ಕಾರಕ್ಕೆ ಕಳುಹಿಸಲಾಯಿತು. ಬಹುದಿನ ಇದರ ಸೊಲ್ಲೇ ಕೇಳಲಿಲ್ಲ. ಕೊನೆಗೆ ಒಂದು ಪತ್ರ ಬಂದಿತು. ಅದು, "ನೀವು ಹೇಳುತ್ತಿರುವ circulation ಸತ್ಯ ಎಂದು ನೀವು ಒಬ್ಬ ಮ್ಯಾಜಿಸ್ಟ್ರೇಟರ ಎದುರಲ್ಲಿ ಪ್ರಮಾಣ ಮಾಡಿ ಕಳುಹಿಸಿಕೊಡಿ." ಎಂದು ನಿರೂಪ. ನಾನು, "ಆಡಿಟರ್ certificat ಕೊಟ್ಟ ಮೇಲೆ ಇದು ಅನವಶ್ಯಕ ಅಲ್ಲವೆ? ಪತ್ರಿಕೆ ಪರಿಷತ್ತಿನ ಅಚ್ಚುಕೂಟದಲ್ಲಿ ಅಚ್ಚಾಗುತ್ತಿದೆ. ಅಂಚೆಮನೆ ಕೊಟ್ಟ ರಶೀತಿಗಳಿವೆ. ಸರ್ಕಾರದಿಂದ ಒಂದು ಐನೂರು ರೂಪಾಯಿ ಪಡೆಯಲು ಇಷ್ಟು ದಿಕ್ಕಿನಲ್ಲಿ ನನ್ನಂಥ ಮನುಷ್ಯ ಮೋಸದ ಕಟ್ಟಡ ಕಟ್ಟಿಯೇನೇ ಯೋಚಿಸಿ. ಇಷ್ಟಕ್ಕೆ ಈ ಪತ್ರಿಕೆಗೆ ಪ್ರಕಟನೆಯನ್ನು ಬೇಡುವುದು ಇದರ ಪ್ರಸಾರ ಬಹಳ ಇದೆಯೆಂಬ ಕಾರಣದಿಂದಲ್ಲ, ಪ್ರಸಾರ ಬಹಳವಾಗುವ ಸಂಭವವೂ ಇಲ್ಲ, ಇದಕ್ಕೆ ಸಹಾಯ ಮಾಡಿ ಎಂಬ ಕಾರಣದಿಂದ. ಭಾಷೆಯಲ್ಲಿ ಇಂಥ ಪತ್ರಿಕೆ ಇರಬೇಕು, ಸರಕಾರ ಇಂಥ ಪತ್ರಿಕೆಯನ್ನು ನಡೆಸುವುದು ಸಾಧ್ಯವಲ್ಲ, ನಡೆಸುತ್ತಿರುವ ಪತ್ರಿಕೆಗೆ ಸಹಾಯ ಮಾಡುವುದು ಒಂದೇ ದಾರಿ ಸರ್ಕಾರಕ್ಕೆ ಇರುವುದು." ಎಂದು ವಿವರಿಸಿ ಉತ್ತರ ಬರೆದೆನು. ಅದಕ್ಕೆ ಪ್ರತ್ಯುತ್ತರ ಬರಲಿಲ್ಲ. ಪ್ರಕಟನೆಯಂತೂ ಬಂದಿಲ್ಲ.

ಮಧ್ಯೆ ಒಂದು ಸಲ ನಮ್ಮ ಸರ್ಕಾರದ ಬಹು ದೊಡ್ಡ ಅಧಿಕಾರಿಗಳೊಬ್ಬರು ಯಾವುದೋ ಸಭೆಯಲ್ಲಿ ಕಂಡಾಗ ಹತ್ತು ವಿಷಯ ಮಾತನಾಡುತ್ತಾ ನಡುವೆ ನಾನು, "ಸರ್ಕಾರದ ಈ ಪ್ರಕಟನೆಯ ಧೋರಣೆ ಸ್ಪಷ್ಟವಾಗಿಲ್ಲ. ಮರ್ಯಾದೆವಂತ ಮಾಸಪತ್ರಿಕೆಗಳು ಸಾವಿರ ಸಾವಿರದ ಸಂಖ್ಯೆಯ ಚಂದಾದಾರರನ್ನು ನಿರೀಕ್ಷಿಸಬಹುದಾದ ಕಾಲ ಬಂದಿಲ್ಲ. ಸರ್ಕಾರ ಈ ವಿಷಯದಲ್ಲಿ ತಕ್ಕ ನೀತಿಯನ್ನು ಕೈಕೊಳ್ಳಬೇಕು." ಎಂದು ವಿಜ್ಞಾಪನೆ ಮಾಡಿದೆನು. ಅವರು, "ಹೌದು, ಇದನ್ನು ಮಾಡಿಸೋಣ." ಎಂದು ಅಲ್ಲೇ ಹತ್ತಿರದಲ್ಲಿದ್ದ ತಮ್ಮ ಆಪ್ತ ಸಹಾಯಕರನ್ನು ಕರೆದು ಸಂಗತಿಯನ್ನು ತಿಳಿಸಿ ಈ ವಿಷಯ ಅಪ್ಪಣೆ ಆಗುವಂತೆ ನೋಡಿಕೊಳ್ಳಿ ಎಂದರು. ಸಹಾಯಕರು 'ಅಪ್ಪಣೆ' ಎಂದರು.

ತಿಂಗಳಾಯಿತು, ಎರಡು ತಿಂಗಳಾಯಿತು. ಇದರ ಮಾತು ಏನೂ ಕೇಳಲಿಲ್ಲ. ಇನ್ನು ಕೆಲವು ತಿಂಗಳಾದ ಮೇಲೆ ಮತ್ತೆ ಎಲ್ಲೋ ಆ ಸಹಾಯಕ ಮಿತ್ರರು ಆಕಸ್ಮಾತ್ ಕಣ್ಣಿಗೆ ಬಿದ್ದಾಗ, "ನಿಮ್ಮ ಯಜಮಾನರು ಆ ವಿಷಯ ನಿಮಗೇನೋ ಹೇಳಿದರಲ್ಲಾ, ಏನಾದರೂ ಆಯಿತೆ?" ಎಂದು ಕೇಳಿದೆನು. ಅವರು, "ನಿಮಗೇನೂ ಪತ್ರ ಬಂದಿಲ್ಲವೇ, ಸಾರ್?" ಎಂದು ಕೇಳಿದರು. ನಾನು, ಬಂದಿಲ್ಲ ಎಂದೆ. ಅದಾಗಿ ಈಗ ಕೆಲವು ವರ್ಷವಾಗಿದೆ. ಇನ್ನೂ ಆ ವಿಷಯದಲ್ಲಿ ನನಗೆ ಯಾವ ಪತ್ರವೂ ಬಂದಿಲ್ಲ. ಇದರ ಯೋಗ್ಯತೆಯೇ ಇಷ್ಟು ಎಂದುಕೊಂಡೆ. ಈ ಮಾತಿನ್ನೂ ಅಲ್ಲಿಯೇ ನಿಂತಿದೆ.

ನಮ್ಮ ಒಂದು ದೊಡ್ಡ ಊರಿನ ಕರ್ನಾಟಕ ಸಂಘದ ಒಂದು ಉತ್ಸವಕ್ಕೆ ಹೋದವೇಳೆ ನಾನು ಅಲ್ಲಿಯ

ಕಾರ್ಖಾನೆಯ ಪ್ರವರ್ತಕರನ್ನು ಪತ್ರಿಕೆಗೆ ಒಂದು ಪ್ರಕಟನೆ ಕೊಡು ಎಂದು ಬೇಡಿದೆನು. ಅವರು ಆಗಲಿ ಎಂದರು. ಹಾಗೆ ಮಾಡಲು ಅವರು ಕಾರ್ಖಾನೆಯ ಅಧ್ಯಕ್ಷರ ಅಪ್ಪಣೆ ಪಡೆಯಬೇಕಾಗಿತ್ತು. ಇವರು ಆಡಳಿತದ ಒಬ್ಬ ಹಿರಿಯರು. ಊರಿಗೆ ಬಂದು ಪ್ರಕಟನೆ ಬೇಡಿ ಒಂದು ಪತ್ರ ಕಳುಹಿಸಿದೆನು. ಉತ್ತರ ಬರಲಿಲ್ಲ. ನೆನಪಿನ ಪತ್ರ ಹೋಯಿತು. ಆಗಲೂ ಉತ್ತರ ಇಲ್ಲ. ಆ ಸ್ಥಳದ ನನ್ನ ಮಿತ್ರರೊಬ್ಬರಿಗೆ ಈ ವಿಷಯ ತಿಳಿದಿತ್ತು. ಸಂಗತಿ ಏನು ವಿಚಾರಿಸಿ ಎಂದು ಅವರಿಗೆ ಪತ್ರ ಬರೆದೆನು. ಅವರು ಹೋಗಿ ಕೇಳಿದಾಗ ಹಿಂದೆ ಪ್ರಕಟನೆ ಕೊಡುತ್ತೇನೆ ಎಂದು ಹೇಳಿದ್ದ ಮಿತ್ರರು The matter seems to be controversial ಎಂದರಂತೆ. Controversy ಏನೋ ಸ್ಪಷ್ಟವಾಗಲಿಲ್ಲ. ಈಗಲೂ ನನಗೆ ತಿಳಿಯದು. ಮೇಲಟ್ಟ ಅಧ್ಯಕ್ಷ ಆಡಳಿತದ ಆ ಹಿರಿಯರಿಗೆ ಪತ್ರಿಕೆಯ ವಿಷಯ ಅಸಮಾಧಾನ ಎಂದಷ್ಟೇ ತೋರಿರುವುದು.

ಕೇಂದ್ರ ಸರ್ಕಾರದ ಪ್ರಕಟನೆಯ ಧೋರಣೆಯಾದರೂ ಈ ರೀತಿಯದೇ ಆಗಿದೆ. ಇವರಿಗೂ ಒಬ್ಬ ಏಜೆಂಟರು ಬೇಕು. ಆ ಏಜೆಂಟರು ಸರ್ಕಾರದ ಕೆಲಸವನ್ನು ಬಹು ಶ್ರದ್ಧೆಯಿಂದ ಮಾಡುತ್ತಿದ್ದೇನೆ ಎಂದು ತೋರಿಸಿಕೊಳ್ಳುವುದಕ್ಕೆ ಬೇಕಾದ ಬೇಡವಾದ ಯಾವ ಯಾವುದೋ ವಿವರಗಳನ್ನು ಕೇಳಿ ಪತ್ರಿಕೆಗೆ ಪತ್ರ ಬರೆಯಬೇಕು. ನಾವು ಅವರಿಗೆ ಉತ್ತರ ಕೊಡಬೇಕು. ಕೇಂದ್ರ ಸರ್ಕಾರದ Publicity ಶಾಖೆಯಿಂದ ನಮಗೆ ಕೆಲವು ವರ್ಷದಲ್ಲಿ ನಾಲ್ಕೋ ಐದೋ ಪುಟಗಳ ಪ್ರಕಟನೆ ದೊರೆತವು. ಆಮೇಲೆ ಒಂದು ಬಾರಿ circulation ವಿಷಯ ಬಂದಿತು. Audit certificate ಕಳುಹಿಸಿದ್ದಾಯಿತು. ಬಹುದಿನ ಕಳೆದು ಐದು ಸಾವಿರಕ್ಕೆ ಕಡಿಮೆ circulation ಇರುವ ಪತ್ರಿಕೆಗೆ ಪ್ರಕಟನೆ ಕೊಡಲಾಗುವುದಿಲ್ಲ ಎಂದು ಪತ್ರ ಬಂದಿತು. ನಾನು "ಕನ್ನಡದ ಪರಿಸ್ಥಿತಿ ತಮಗೆ ತಿಳಿಯದು ಎನ್ನುವುದಷ್ಟೇ ಇದರಿಂದ ಕಾಣುತ್ತದೆ." ಎಂದು ಉತ್ತರ ಬರೆದೆನು. ಅವರು, "ನಿಮ್ಮ ದರ ಮುಂತಾದ್ದನ್ನು ತಿಳಿಸಿ" ಎಂದು ಪತ್ರ ಬರೆದರು. ಇವೆಲ್ಲಾ ಇವರಿಗೆ ಈ ಮುನ್ನವೇ ತಿಳಿಸಿದ್ದ ವಿಷಯಗಳು. ಮತ್ತೆ ತಿಳಿಸುವ ಕೆಲಸ ಇರಲಿಲ್ಲ. ತಿಳಿಸಿ ಏನಾದರೂ ಆದೀತೇನೋ ಎಂಬ ನಂಬಿಕೆ ಇಲ್ಲ. ಹೊಟ್ಟನ್ನು ಕುಟ್ಟುವ ಈ ಕೆಲಸ ಇಲ್ಲಿಗೆ ಸಾಕು ಎಂದು ಅಲ್ಲಿಗೇ ನಿಲ್ಲಿಸಿದ್ದಾಯಿತು.

೧೬

ಜೀವನ ಪತ್ರಿಕೆ ರಾಷ್ಟ್ರ ಸರ್ವ ವಿಧದಲ್ಲಿಯೂ ಸ್ವತಂತ್ರವಾಗಿ ಬೆಳೆಯಬೇಕು ಎಂದು ಬಯಸುವ ಪತ್ರಿಕೆ. ಸರ್ವ ವಿಧದಲ್ಲಿಯೂ ಎಂಗರೆ ಎಲ್ಲಾ ಒಳ್ಳೆಯ ವಿಷಯದಲ್ಲಿಯೂ ಎಂದು ವಿವರಿಸಬೇಕಾದ ಅವಶ್ಯವಿಲ್ಲ. ಸಂಪೂರ್ಣ ಸ್ವಾತಂತ್ರ್ಯದಲ್ಲಿಯೂ ಜನತೆ ಸಂಯಮವನ್ನು ವಹಿಸಬೇಕಾಗುತ್ತದೆ. ಈ ಸ್ವಾತಂತ್ರ್ಯ ಈ ಸಂಯಮ ಎರಡನ್ನೂ ಒಟ್ಟು ಜನತೆ ನಿರ್ಧರಿಸಿಕೊಳ್ಳಬೇಕು. ಪ್ರಜಾಪ್ರಭುತ್ವದ ಹೆಸರಿನಲ್ಲಿ ಆಯ್ಕೆಯಲ್ಲಿ ಜಯಗಳಿಸಿದ ಒಂದು ಪಕ್ಷ ತಮಗೆ ಸರಿಯೆಂದು ತೋರಿದ್ದನ್ನು ಮಾಡಿ, ಇದೇ ಜನರ ಅಪೇಕ್ಷೆ, ಎಂದು ಹೇಳುವ ಇಂದಿನ ಸ್ಥಿತಿ ನಿಜವಾದ ಪ್ರಜಾಪ್ರಭುತ್ವ ಅಲ್ಲ. ಸರ್ಕಾರ ಮಾಡಬಹುದಾದ ಹತ್ತಾರು ರೀತಿಯ ಕೆಲಸಗಳನ್ನು ಕೈಯಲ್ಲಿ ಉಳಿಸಿಕೊಂಡು ಆಡಳಿತ ಉಳಿದ ಕೆಲಸವನ್ನು ಜನರ ಕೈಯಲ್ಲಿ ಬಿಡಬೇಕು. ಒಟ್ಟು ಈ ಸಮುದಾಯ ಆ ಸಮುದಾಯ ದುಷ್ಟ ಎನ್ನುವಂತೆ ಅದಕ್ಕೆ ವಿರೋಧವಾಗಿ ಕಾರ್ಯಕ್ರಮ ಕೈಗೊಳ್ಳುವುದು, ಒಟ್ಟು ಇನ್ನೊಂದು ಸಮುದಾಯ ಮತ್ತೊಂದು ಸಮುದಾಯಕ್ಕೆ ಸಹಾಯ ಮಾಡಬೇಕೆಂದು ಮತ್ತೆ ಬೇರೆ ಏರ್ಪಾಡುಗಳನ್ನು ಕೈಗೊಳ್ಳುವುದು, ಸರ್ಕಾರದಲ್ಲಿ ಸರಿಯಲ್ಲ. ಹೀಗೆ ಮಾಡಿದರೆ ಹೀಗೆ ಆಗುತ್ತದೆ ಎಂದು ಜನರಲ್ಲಿ ತಿಳುವಳಿಕೆ ಹರಡಿ ಜನತೆ ಸರಿಯಾದ ಅಭಿಪ್ರಾಯಕ್ಕೆ ಬರುವಂತೆ ಏರ್ಪಾಡು ಮಾಡಿ ಆ ಅಭಿಪ್ರಾಯವನ್ನು ತಿಳಿದು ಅವರಂತೆ ಆಡಳಿತ ನಡೆಸುವುದು ರಾಜಕೀಯ ಪಕ್ಷಗಳ ಕರ್ತವ್ಯ. ನಮ್ಮಲ್ಲಿ ಯಾವ ರಾಜಕೀಯ ಪಕ್ಷವೂ ಇನ್ನೂ ಇದನ್ನು ಕಂಡುಕೊಂಡಿಲ್ಲ.

ಇಂದು ಪ್ರಬಲವಾಗಿರುವ ಕಾಂಗ್ರೆಸ್ ಪಕ್ಷ ಯಾವುದೋ ಕಾರಣದಿಂದ ಕಮ್ಯುನಿಸ್ಟ್ ಪಕ್ಷದ ನೀತಿಯನ್ನು ವಹಿಸಿ ಕೆಲಸ ಮಾಡುತ್ತಿದೆ. ಇದರ ತೀವ್ರತೆಗಾಗಿ ಸದಸ್ಯರು ಮಾತಿಗೆ ಮುಂಚೆ Nationalisation, nationalization ಎನ್ನುತ್ತಾರೆ. Nationalisation ಈಗಿನ ನಮ್ಮ ಸ್ಥಿತಿಯಲ್ಲಿ ಈ ಜನರನ್ನು ಮುಖಂಡರನ್ನಾಗಿ ಮಾಡೀತು ಹೊರತಾಗಿ ಕೆಲಸವನ್ನು ಚೆನ್ನಾಗಿ ಮಾಡಿಸಲಾರದು; ಜನರಲ್ಲಿ ದಕ್ಷತೆಯನ್ನು ಬೆಳಸಲಾರದು.

ಜನಾಂಗ ಬೆಳೆಯಬೇಕಾದರೆ ಜನರು ತಮ್ಮ ತಮ್ಮ ಶಕ್ತಿಗೆ ತಕ್ಕ ಕಾರ್ಯವನ್ನು ತಾವು ಆರಿಸಿ ತೆಗೆದುಕೊಂಡು, ಸ್ವಂತ ಪ್ರಯೋಜನದ ದೃಷ್ಟಿಯಿಂದ ರಾಷ್ಟ್ರದ ಶುಭದ ದೃಷ್ಟಿಯಿಂದ, ಪ್ರೇರಿತರಾಗಿ ಅದನ್ನು ತಮ್ಮಿಂದ ಆದಷ್ಟು ಚೆನ್ನಾಗಿ ಮಾಡಬೇಕು. ಸರ್ಕಾರ ಎನ್ನುವುದು ಜನಾಂಗದ ಸೇವಕನಾಗಿ ಜನಾಂಗ ಹೀಗೆ ಬೆಳೆಯುವಂತೆ ನೋಡಿಕೊಳ್ಳಬೇಕು; ಸ್ವಾತಂತ್ರ್ಯವನ್ನು ಸ್ವಾರ್ಥಿಗಳು ದುರುಪಯೋಗ ಮಾಡದಂತೆ ಎಚ್ಚರ ವಹಿಸಬೇಕು.

ಸತ್ಯವಾಗಿ ದುಡಿಯುತ್ತಿರುವ ಎಲ್ಲ ಸ್ವಂತ ಉದ್ಯಮಗಳೂ ಈ ನೀತಿಗೆ ಬೆಂಬಲ ಕೊಡಬೇಕು. ಇದರ ಸಲುವಾಗಿ ದುಡಿಯುತ್ತಿರುವ ಪತ್ರಿಕೆಗಳಿಗೆ ಬೆಂಬಲ ಕೊಡಬೇಕು. ಜನರ ಬಲವನ್ನು ಬೆಳೆಸುವ ಆಸೆಯುಳ್ಳ ಎಲ್ಲ ಸಂಸ್ಥೆಗಳೂ ಈ ಅರ್ಥದಲ್ಲಿ ಜೀವನ ಪತ್ರಿಕೆಯಂಥ ಪತ್ರಿಕೆ ನಿಶ್ಶಂಕವಾಗಿ ನಡೆಯುವುದಕ್ಕೆ ಸಹಾಯ ಮಾಡಬೇಕು. ಇಂಥ ಸಂಸ್ಥೆ ನೂರು ಉಂಟು. ಇವುಗಳಲ್ಲಿ ತೊಂಬತ್ತು ಸಂಸ್ಥೆಗೆ ಇದು ತಮ್ಮ ಕರ್ತವ್ಯ ಎಂಬುದರ ಅರಿವೇ ಇಲ್ಲ.

ಇವುಗಳಲ್ಲಿ ಕೆಲವು ಸಂಸ್ಥೆಗಳು ಕನ್ನಡ ಪತ್ರಿಕೆಗಳಲ್ಲಿ ಪ್ರಕಟನ ಹಾಕುವುದಿಲ್ಲ. ಇದರ ಕಾರಣ ಕೆಲವು ವೇಳೆ ಇಂಗ್ಲಿಷ್ ಅಭಿಮಾನ, ಕನ್ನಡವನ್ನು ಕುರಿತು ತಾತ್ಸಾರ. ಕೆಲವು ವೇಳೆ ಮರಾಠಿ ಮುಂತಾದ ಇತರ ಭಾಷೆಗಳ ಅಭಿಮಾನ, ಕನ್ನಡದ ಮೇಲೆ ಅಸೂಯೆ. ಬೆಂಗಳೂರಿನಲ್ಲಿ ನೆಲೆಸಿರುವ ಹೊರನಾಡಿನ ಜನ ಪ್ರಮುಖರಾಗಿರುವ ಸಂಸ್ಥೆಗಳ ಪ್ರವರ್ತಕರ ಮೂರು ಪಾಲು ಕನ್ನಡ ಪತ್ರಿಕೆಗಳನ್ನು ಈ ಎರಡರಲ್ಲಿ ಒಂದಲ್ಲ ಒಂದು ತಪ್ಪು ದೃಷ್ಟಿಯಿಂದ ನೋಡುತ್ತಾರೆ; ಕನ್ನಡ ದೇಶದಲ್ಲಿ ನೆಲೆಸಿ ಬಾಳಿ ಬೆಳೆಯುತ್ತಾ ಕನ್ನಡಕ್ಕೆ ಒಳ್ಳೆಯದನ್ನು ಮಾಡದೆ ಇದ್ದಾರೆ.

ಕನ್ನಡಿಗರೇ ನಡೆಸುವ ಸಂಸ್ಥೆಗಳು ಕೂಡ ಕನ್ನಡ ಪತ್ರಿಕೆಗೆ, ''ನಾವು ಪ್ರಕಟನೆಯ ವೆಚ್ಚವನ್ನು ಕಡಮೆ ಮಾಡಬೇಕಾಗಿದೆ.'' ಎಂದು ಹೇಳಿಬಿಟ್ಟು ಇಂಗ್ಲಿಷ್ ಪತ್ರಿಕೆಗಳಲ್ಲಿ ಪ್ರಕಟನೆಗಳನ್ನು ಕೊಡುತ್ತಲೇ ಇರುತ್ತಾರೆ. ಇವರು ಕನ್ನಡ ಪತ್ರಿಕೆಯಿಂದ ಉಳಿಸುವುದು ಹತ್ತು ರೂಪಾಯಿ; ಇಂಗ್ಲಿಷ್ ಪತ್ರಿಕೆಗೆ ಕೊಡುವುದು ನೂರು ರೂಪಾಯಿ. ನಾವು ಆಂಗ್ಲರ ದಾಸರಾಗಿರುವ ದಿನ ಮುಗಿದವೇ, ನಮ್ಮ ಜನತೆ ಸ್ವತಂತ್ರರಾಗಿ ಬಾಳಬೇಕೇ, ನಮ್ಮ ದೇಶಭಾಷೆಗಳು ಬೆಳೆಯಬೇಕೇ, ಕನ್ನಡಿಗರಾದ, ಕನ್ನಡಿಗರಲ್ಲದ, ಈ ಎಲ್ಲ ಪುಣ್ಯವಂತ ಜನ ಈ ವಿಷಯದಲ್ಲಿ ಇನ್ನಷ್ಟು ಯೋಚನೆ ಮಾಡಬೇಕು.

೧೭

ಪತ್ರಿಕೆ ಪ್ರಕಟಿಸಿದ ವಿಶೇಷ ಸಂಚಿಕೆ ಹಲವು ನಮ್ಮ ನಾಡ ನುಡಿಗಳ ಹಿರಿಯ ಸೇವಕರಿಗೆ ಕಾಣಿಕೆಯಾಗಿ ಪ್ರಕಟವಾದವು. ಪತ್ರಿಕೆ ಆರಂಭವಾದ ಹೊಸದರಲ್ಲಿ ನನ್ನ ಮಿತ್ರರು ಬೆಂಗಳೂರಿನಲ್ಲಿ ನಡೆಸಿದ ನನ್ನ ಸಾಹಿತ್ಯ ಸೇವೆಯನ್ನು ಕುರಿತ ಒಂದು ಮೆಚ್ಚಿಗೆಯ ಸಭೆಯ ಕಾರ್ಯಕ್ರಮವನ್ನು ಒಂದು ವಿಶೇಷ ಸಂಚಿಕೆಯಾಗಿ ಪ್ರಕಟಮಾಡಿತು. ಪತ್ರಿಕೆ ನನ್ನ ಕೈಗೆ ಬಂದ ಮೇಲೆ ಶ್ರೀ ಬೇಂದ್ರೆಯವರ ಐವತ್ತನೆಯ ವರ್ಧಂತಿಯ

ಸಂದರ್ಭದಲ್ಲಿ ಅವರನ್ನು ಕುರಿತು, ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ತೊಂಬತ್ತನೆಯ ವರ್ಷದ ಸಂದರ್ಭದಲ್ಲಿ ಅವರನ್ನು ಕುರಿತು, ಇಂತದೇ ಸಂದರ್ಭದಲ್ಲಿ ಶ್ರೀ ದಿವಾಕರರು, ಶ್ರೀ ಕೃಷ್ಣಶಾಸ್ತ್ರಿಗಳನ್ನು ಕುರಿತು, ವಿಶಿಷ್ಟ ಸಂಚಿಕೆಗಳನ್ನು ಪ್ರಕಟಿಸಿತು. ಶ್ರೀ ನವರತ್ನ ರಾಮರಾಯರು ತೀರಿಕೊಂಡ ಸಂದರ್ಭದಲ್ಲಿ ಅವರನ್ನು ಕುರಿತು ಒಂದು ವಿಶಿಷ್ಟ ಸಂಚಿಕೆ ಪ್ರಕಟವಾಯಿತು. ಇನ್ನೊಬ್ಬ ಹಿರಿಯರನ್ನು ಕುರಿತು ಒಂದು ವಿಶಿಷ್ಟ ಸಂಚಿಕೆಯನ್ನು ಪ್ರಕಟಿಸುವ ಯೋಚನೆ ಇತ್ತು. ಈ ಉದ್ದೇಶ ಅವರ ಗಮನಕ್ಕೆ ಬಂದಾಗ ಅವರು ಇದು ಕೂಡದು ಎಂದು ಅಡ್ಡಿ ಮಾಡಿ ಪತ್ರ ಬರೆದರು. ಆರಾಧಿಸುವ ಯತ್ನದಲ್ಲಿ ಅಸಮಾಧಾನಪಡಿಸುವುದು ಬೇಡ ಎಂದು ಆ ಯೋಚನೆಯನ್ನು ಅಲ್ಲಿಗೇ ಬಿಟ್ಟದ್ದಾಯಿತು.

೧೮

ಪತ್ರಿಕೆಯಲ್ಲಿ ಬಂದ ಲೇಖನ ಹಲವು ವೇಳೆ ಆ ಮೇಲೆ ಪುಸ್ತಕವಾಗಿ ಪ್ರಕಟವಾದದ್ದು ಉಂಟು. ಈ ಪುಸ್ತಕಗಳೆಲ್ಲಾ ಜನರಿಗೆ ತುಂಬ ಪ್ರಿಯವಾದವು. ಇವುಗಳಲ್ಲಿ ಕೆಲವಕ್ಕೆ ಪ್ರಾಂತ ಸರ್ಕಾರದ ಅಥವಾ ಇಂಥ ಸಂಸ್ಥೆಗಳ ಸನ್ಮಾನ ದೊರೆತವು. ಶ್ರೀ ನವರತ್ನ ರಾಮರಾಯರ ಕೆಲವು ನೆನಪುಗಳು, ಸೌಭಾಗ್ಯವತಿ ರಾಜಮ್ಮನವರ ವೀಣೆ ಶೇಷಣ್ಣ, ಶ್ರೀ ಅನಂತರಂಗಾಚಾರ್ಯರ ಋಗ್ವೇದ ಸೂಕ್ತಗಳು, ಬೇರೆ ಬೇರೆ ರೀತಿಯ ಇಂಥ ಉನ್ನತ ಕೃತಿಗಳು ಹೀಗೆ ಸನ್ಮಾನ ಪಡೆಯದಿದ್ದರೂ ಉಳಿದ ಹಲವು ಪುಸ್ತಕ ಇಷ್ಟೇ ಬೆಲೆಯವು, ನಮ್ಮ ಸಾಹಿತ್ಯಕ್ಕೆ ಇಷ್ಟೇ ಶ್ರೇಷ್ಠವಾದ ಕಾಣಿಕೆಯಾದವು ಎಂದು ಪತ್ರಿಕೆ ಹೆಮ್ಮೆಗೊಳ್ಳಬಹುದು.

ಪತ್ರಿಕೆಯನ್ನು ಕುರಿತು ಒಂದು ವಿಷಯದಲ್ಲಿ ನಿಸ್ಸಂಕೋಚವಾಗಿ ಹೆಮ್ಮೆ ಹೇಳಿಕೊಳ್ಳಬಹುದು. ಅದು ತಿಂಗಳು ತಿಂಗಳು ಮೊದಲ ಕೆಲಸದ ದಿನ ಹೊರಡಬೇಕೆಂದು ಉದ್ದೇಶ. ವಿಶೇಷ ಸಂಚಿಕೆಗಳನ್ನು ಮಾತ್ರ ಆಗಸ್ಟು ೧೫ರಂದು ಹೊರಡಿಸಲಾಯಿತು. ಒಟ್ಟು ಇಪ್ಪತ್ತೊಂದು ವರ್ಷದಲ್ಲಿ ಮಹಾತ್ಮಾ ಗಾಂಧಿಯವರು ಜನವರಿ ೩೦ರಂದು ತೀರಿಕೊಂಡ ಸಂದರ್ಭದಲ್ಲಿ ಅವರ ವಿಷಯ ಒಂದು ಹೊಸಲೇಖನ ಸೇರಿಸುವ ಉದ್ದೇಶದಿಂದ ಫೆಬ್ರವರಿ ಮೊದಲನೆಯ ತಾರೀಕು ಹೊರಡಬೇಕಾದ ಸಂಚಿಕೆ ಆ ತಿಂಗಳ ೪ರಂದು ಅಂಚೆಗೆ ಹೋಯಿತು. ಉಳಿದಂತೆ ಅದು ತಪ್ಪದೆ ಆಯಾ ತಿಂಗಳ ಸರಿಯಾದ ದಿನವಲ್ಲೇ ಹೊರಬಿದ್ದಿದೆ. ನಿಯತಕಾಲಿಕ ಪತ್ರಿಕೆಗಳು ಈ ನಿಯಮವನ್ನು ಇಷ್ಟು ಚೆನ್ನಾಗಿ ಪಾಲಿಸುವುದು ಕಷ್ಟ. 'ಜೀವನ' ಪತ್ರಿಕೆ ಇದನ್ನು ಸಾಧಿಸಿತು.

ಪತ್ರಿಕೆಯ ಮಾತು ಬಂದಾಗ ಮಿತ್ರರು ಒಮ್ಮೊಮ್ಮೆ "ಕನ್ನಡದಲ್ಲಿ Reader's Digest ಅಂಥ ಒಂದು ಪತ್ರಿಕೆ ಇಲ್ಲ ಏನು ಪ್ರಯೋಜನ?" ಎಂದದ್ದುಂಟು. ಇದು ನಮ್ಮಲ್ಲಿ ಪತ್ರಿಕಾ ವ್ಯವಸಾಯವನ್ನು ಕುರಿತು ತಿಳಿವಳಿಕೆ ಎಷ್ಟು ಕಡಮೆ ಎನ್ನುವುದನ್ನು ತೋರಿಸುತ್ತದೆ. Reader's Digest ಪತ್ರಿಕೆಯ ಒಂದೊಂದು ಸಂಚಿಕೆಯಲ್ಲಿ ಇಪ್ಪತ್ತು ಒಳ್ಳೆಯ ಲೇಖನಗಳ ಸಂಗ್ರಹ ಇರುತ್ತದೆ. ಆ ಲೇಖನ ಒಂದೊಂದೂ ಒಂದು ಬೇರೆ ಪತ್ರಿಕೆಯಿಂದ ಆಯ್ದದ್ದು. ಈ ಇಪ್ಪತ್ತು ಪತ್ರಿಕೆಯಿಂದ ಈ ಸಲ ಬೇರೆ ಇಪ್ಪತ್ತರಿಂದ ಇನ್ನೊಂದು ಸಲ, ಲೇಖನಗಳನ್ನು ಆರಿಸಿ Digest ಸಿದ್ಧವಾಗುತ್ತದೆ. ಭಾಷೆಯಲ್ಲಿ ಏನಿಲ್ಲವೆಂದರೂ ಐವತ್ತು ಉತ್ತಮ ಮೂಲ ಪತ್ರಿಕೆ ಇದ್ದರೆ ಒಂದು Digest ಸಾಧ್ಯವಾಗಬಹುದು. ಮೊದಲು ಆ ಐವತ್ತು ಪತ್ರಿಕೆ ಬರಬೇಕು ಕನ್ನಡದಲ್ಲಿ ಆ ಮಟ್ಟದ ಲೇಖನಗಳ ಪತ್ರಿಕೆಗಳು ಮೂರು ನಾಲ್ಕು ಸಹ ಇಲ್ಲ. ಇನ್ನು Digest ಹೇಗೆ ಸಾಧ್ಯ?

ಈಗ ಒಂದೆರಡು ಈ ತೆರದ ಪತ್ರಿಕೆ ಪ್ರಕಟವಾಗುತ್ತಿವೆ. ಅವುಗಳಲ್ಲಿ ಬರುವ ಬರಹ ಪ್ರಾಯಶಃ ಆಂಗ್ಲ ಪತ್ರಿಕೆಗಳ ಸಹಾಯದಿಂದ ಸಿದ್ಧವಾದವು. ಜ್ಞಾನ ಪ್ರಸಾರದ ಕಾರ್ಯದಲ್ಲಿ ನಮ್ಮದು ಇತರರದು ಎನ್ನುವುದಿಲ್ಲ, ಸರಿ. ಆದರೆ ನಮ್ಮಲ್ಲಿ ಒಳ್ಳೆಯ ಮೂಲ ಪತ್ರಿಕೆಗಳು ಒಂದಿಪ್ಪತ್ತಾದರೂ ಪ್ರಕಟವಾಗುವ ಮುನ್ನ ಕನ್ನಡದ ಒಂದು

Reader's Digestನ್ನು ಬಯಸುವುದು ವ್ಯರ್ಥವಾದ ಆಸೆ. ನಮ್ಮ ಲೇಖಕರು ಸ್ವಂತವಾಗಿ ಸಂಗತಿ ತಿಳಿದುಕೊಂಡು ತಕ್ಕಷ್ಟು ಸ್ವಾರಸ್ಯವಾಗಿ ತಕ್ಕಷ್ಟು ಎತ್ತರದ ಬರಹ ಬರೆಯುವಂತೆ ಮಾಡುವುದು ನಮ್ಮ ಜನರ ಕರ್ತವ್ಯ. ಇದು ಸಿದ್ಧಿಸಬೇಕಾದರೆ ನಮ್ಮ ಭಾಷೆಯಲ್ಲಿ ಉತ್ತಮ ಮಟ್ಟದ ಮೂಲ ಪತ್ರಿಕೆಗಳ ಸಂಖ್ಯೆಯನ್ನು ಬೆಳೆಯಿಸಬೇಕು.

೧೯

ಇಪ್ಪತ್ತೈದು ವರ್ಷದ ಕೊನೆಯಲ್ಲಿ ನಾನು ನಡೆಸಿದ ಇಪ್ಪತ್ತೊಂದು ವರ್ಷದ ವ್ಯವಹಾರದ ಪರಿಣಾಮವಾಗಿ ಈ ಮೇ ಏಳನೆಯ ತಾರೀಖಿನ ದಿನ ಪತ್ರಿಕೆಯ ವರಮಾನ ವೆಚ್ಚಕ್ಕಿಂತ ಒಂಬೈನೂರ ಅರವತ್ತೆರಡು ರೂಪಾಯಿ ಕಡಮೆ ಬಿದ್ದಿದೆ. ಇದು ನನ್ನ ಶಕ್ತಿ ಮಿಂಚಿದ ಮೊತ್ತ ಏನೂ ಅಲ್ಲ. ದೈವ ಎಲ್ಲ ಸೌಕರ್ಯವನ್ನು ಒದಗಿಸಿ ಇದು ಒಂದು ಕರ್ತವ್ಯ ಎಂಬ ಬುದ್ಧಿಯನ್ನು ಕೊಟ್ಟದ್ದರಿಂದ ಈ ಕೆಲಸ ಇದುವರೆಗೆ ನನ್ನಿಂದ ನಡೆದಿದೆ. ನಡಸದೆ ಇದ್ದರೆ ಕರ್ತವ್ಯಲೋಪ ಆಗುತ್ತದೆಯೆಂದು ನಾನು ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದೇನೆ. ಈಗ ಇದರಿಂದ ಬಿಡಿಸಿಕೊಳ್ಳುವುದು ಅವಶ್ಯ ಎನ್ನಿಸುತ್ತಿದೆ. ಆದ್ದರಿಂದ ಈ ಸೇವೆಯ ಹೊಣೆಯನ್ನು ಮಿತ್ರರ ಕೈಗೆ ಒಪ್ಪಿಸುತ್ತಿದ್ದೇನೆ. ಇದನ್ನು ಕೈಗೆ ತೆಗೆದುಕೊಂಡು ನಡೆಸಲು ಒಪ್ಪಿರುವುದಕ್ಕಾಗಿ ಇವರಿಗೆ ವಂದನೆ ಸಲ್ಲಿಸುತ್ತೇನೆ.

ಇದುವರೆಗೆ ಪತ್ರಿಕೆಯ ಕೆಲಸದಲ್ಲಿ ನೆರವು ನೀಡಿದ ಎಲ್ಲ ಗೆಳೆಯರ ಹೆಸರನ್ನು ಹೇಳುವುದು ಸಾಧ್ಯವಿಲ್ಲ. ಇಪ್ಪತ್ತೊಂದು ವರ್ಷ ಒಂದು ಜೀವನದ ಬಹುದೊಡ್ಡ ಭಾಗ. ನನ್ನ ಜೀವನದ ಈ ವರ್ಷಗಳು ನನಗೆ ತಂದುಕೊಟ್ಟ ಪ್ರೀತಿ, ಆದರ, ವಿಶ್ವಾಸ, ಒಂದು ಜೀವನದಿಯಾಗಿ ಹರಿದು ನನ್ನ ಚೇತನವನ್ನು ತಣಿಸಿ ಪೋಷಿಸಿದೆ. ಈ ಬಗ್ಗೆ ಈ ಎಲ್ಲ ಭಾಷಾ ಪ್ರೇಮಿಗಳಿಗೂ ನನ್ನ ವಂದನೆ ಸಲ್ಲಬೇಕಾಗಿದೆ. ಮುಖ್ಯವಾಗಿ ಪತ್ರಿಕೆಯ ಕಚೇರಿಯ ಕೆಲಸವನ್ನು ಹೊಣೆ ಹೊತ್ತು ನಡೆಸಿದ ಮಿತ್ರರು ಶ್ರೀ ನಾರಾಯಣಸ್ವಾಮಿ ಅಯ್ಯರ್, ಶ್ರೀ ಜಿ.ಪಿ.ರಾಜರತ್ನಂ, ಶ್ರೀ. ಆರ್.ಎಸ್. ರಾಮರಾವ್, ಶ್ರೀ.ಕೆ. ಗೋಪಾಲಕೃಷ್ಣರಾವ್ ಮತ್ತು ಶ್ರೀ ಟಿ.ಜಿ .ಸುಬ್ರಹ್ಮಣ್ಯಂ, ಶ್ರೀ.ಬಿ.ಎಸ್.ಗುಂಡೂರಾವ್, ಶ್ರೀ ಸೂರ್ಯನಾರಾಯಣರಾವ್, ಇವರಿಗೆ ನನ್ನ ವಿಶೇಷ ವಂದನೆಗಳನ್ನು ಒಪ್ಪಿಸುತ್ತೇನೆ.

೨೦


ಜೀವನ ಪತ್ರಿಕೆಯ ಈ ಇತಿಹಾಸ ನನ್ನ ಜೀವನದ ಇತಿಹಾಸದ ಒಂದು ಅಧ್ಯಾಯ. ಪತ್ರಿಕೆ ಕನ್ನಡ ಜನತೆ ಜೀವನದ ಸೇವಕ. ಅದು ವ್ಯಕ್ತಿಯನ್ನು ಅವಲಂಬಿಸಿ ನಿಲ್ಲಬಾರದು. ವ್ಯಕ್ತಿಗಳು ಹಿಂದೆ ನಿಲ್ಲುತ್ತಾರೆ. ಪತ್ರಿಕೆ ಕೆಲಸವನ್ನು ಮಿತ್ರರಿಗೆ ಒಪ್ಪಿಸುತ್ತಾ ನಾನು ದೈವ ಸನ್ನಿಧಿಯಲ್ಲಿ ಈ ಪ್ರಾರ್ಥನೆಯನ್ನು ಮಾಡುತ್ತಿದ್ದೇನೆ. ನಾಡು ನುಡಿಯ ಸೇವೆಯನ್ನು ಸತತವಾಗಿ ನಡೆಸುತ್ತಾ ಜೀವನ ಸಾವಿರ ಕಾಲ ನಡೆಯಲಿ. ನಮ್ಮ ಜನ ಇದನ್ನು ಹೆಮ್ಮೆಯಿಂದ ತಮ್ಮದೆಂದು ನೋಡಿಕೊಳ್ಳುವಂತೆ ದೈವ ಅನುಗ್ರಹಿಸಲಿ. ಕನ್ನಡ ಜೀವನ ಚೆನ್ನವಾಗಲಿ; ಸಿರಿಗನ್ನಡ ಗೆಲ್ಲಲಿ.

ಕೃಪೆ : ಜೀವನ- ಇಪ್ಪತ್ತೈದು ವರ್ಷದ ಉತ್ಸವ ಸಂಚಿಕೆ- ಮೇ ೧೯೬೫

ಜಯಂತಿ

ಒಂದು ಸಾಂಸ್ಕೃತಿಕ ಪತ್ರಿಕೆ

ಸುಮತೀಂದ್ರ ನಾಡಿಗ



ನನಗೆ ಮೂರು ವರ್ಷ ಆಗಿದ್ದಾಗ 'ಜಯಂತಿ'ಯ ಮೊದಲ ಸಂಚಿಕೆ ಪ್ರಕಟವಾಯಿತು. ನಾನೊಬ್ಬ ಲೇಖಕ ಅನ್ನುವ ಆತ್ಮವಿಶ್ವಾಸ ಹುಟ್ಟುವ ಹೊತ್ತಿಗೆ, ನನಗೆ ೨೫ ವರ್ಷ ಆದಾಗ, 'ಜಯಂತಿ' ನಿಂತುಹೋಯಿತು. ಈಗ ಹಿಂದಕ್ಕೆ ನೋಡಿದಾಗ ಬೇಂದ್ರೆ, ಶ್ರೀಧರ ಖಾನೋಳ್ಕರ, ಗಂಗಾಧರ ಚಿತ್ತಾಲ, ಕೆ.ವಿ.ತಿರುಮಲೇಶ, ಗೋಪಾಲಕೃಷ್ಣ ಅಡಿಗ, ಆನಂದಕಂದರ ಕವಿತೆಗಳ ಜೊತೆಯಲ್ಲಿ ನನ್ನ ಕವಿತೆಗಳು ಪ್ರಕಟವಾಗಬಹುದಿತ್ತು. 'ಜಯಂತಿ'ಯ ಜೊತೆಗೆ ನನಗೆ ಹಿಂದೆ ಸಿಕ್ಕದೆ ಹೋದ ಸಂಬಂಧವನ್ನು ಈಗ ಬೆಳೆಸಿಕೊಳ್ಳುತ್ತಿದ್ದೇನೆ.

'ಜಯಂತಿ'ಯ ಸಾಂಸ್ಕೃತಿಕ ಮಹತ್ವವನ್ನು ಈಗ ತಡವಾಗಿ ಕಂಡುಕೊಂಡು ಕೊಳ್ಳುತ್ತಿದ್ದೇನೆ. ನಾನು ಸದ್ಯದಲ್ಲಿ ಬಂಗಾಳಿ-ಮರಾಠಿ-ಕನ್ನಡ ಸಾಹಿತ್ಯಗಳ ಸಂಬಂಧವ ಬಗ್ಗೆ ಒಂದು ಪುಸ್ತಕವನ್ನು ಬರೆಯುತ್ತಿದ್ದೇನೆ. 'ಜಯಂತಿ'ಯ ಲೇಖಕರ ಸೂಚಿಯನ್ನು ನೋಡುತ್ತಿದ್ದಾಗ 'ಜಯಂತಿ'ಯ ೧೫ನೇ ಸಂಪುಟದ ೩೮೮ನೇ ಪುಟದಲ್ಲಿ 'ದಿವಂಗತ ಬಿ.ವೆಂಕಟಾಚಾರ್ಯರು ಬಂಗಾಳಿಯನ್ನು ಕಲಿತದ್ದು ಹೇಗೆ' ಎನ್ನುವ ಲೇಖನವಿದೆ ಅಂತ ಗೊತ್ತಾಯಿತು. ಈ ಪ್ರಶ್ನೆ ನನ್ನನ್ನು ಬಹಳ ದಿನಗಳಿಂದ ಕಾಡುತ್ತಿದೆ. ಏಕೆಂದರೆ ನಾನು ಬಂಗಾಳಿಯನ್ನು ಓದಲಿಕ್ಕೆ ಕಲಿತಿದ್ದೇನೆ. ನೇರವಾಗಿ ಬಂಗಾಳಿಯಿಂದ ಮೂರು ಪುಸ್ತಕಗಳನ್ನು

ಅನುವಾದಿಸಿ ಪ್ರಕಟಿಸಿದ್ದೇನೆ, ನಾಲ್ಕನೆಯದು ಈಗ ಅಚ್ಚಿಗೆ ಹೋಗುತ್ತಿದೆ. ಬಂಗಾಳಿ ಭಾಷೆಗೂ ಮತ್ತು ನನಗೂ ಹೀಗೆ ಸಾಹಿತ್ಯ ಸಂಬಂಧದ ಒಂದು ಅಂಶವಾಗಿರುವುದರಿಂದ ಮತ್ತು ಈ ಸಂಬಂಧದ ಬಗ್ಗೆ ಬೆಳಕು ಚೆಲ್ಲುವ ಒಂದು ಲೇಖನ 'ಜಯಂತಿ'ಯಲ್ಲಿ ಇರುವುದರಿಂದ, ನನಗೆ 'ಜಯಂತಿ' ಸಾಂಸ್ಕೃತಿಕವಾಗಿ ಮಹತ್ವದ್ದಾಗಿ ಕಾಣುತ್ತದೆ.

ಬರೀ ಇದಕ್ಕೆಂತಲೇ ಅಲ್ಲ, ಒಟ್ಟು ಬಂಗಾಳಿ ಮತ್ತು ಕನ್ನಡದ ಸಾಂಸ್ಕೃತಿಕ ಮಹತ್ವಕ್ಕೆ ಮೂರು ಕಾರಣಗಳಿವೆ:

೧. ಹಿಂದೂಧರ್ಮದ ಪ್ರಚಾರಕ್ಕೆ, ಆ ಮೂಲಕವಾಗಿ ಭಾರತೀಯತೆಯನ್ನು ಎತ್ತಿ ಹಿಡಿಯಲಿಕ್ಕೆ, ಹಿಂದೂಧರ್ಮವನ್ನು ವಿಮರ್ಶಾತ್ಮಕವಾಗಿ ನೋಡಲಿಕ್ಕೆ ಮತ್ತು ಸುಧಾರಿಸಲಿಕ್ಕೆ ಬಂಗಾಳ ಕರ್ನಾಟಕಕ್ಕೂ ಪ್ರೇರಣೆಯನ್ನು ನೀಡಿದೆ.

೨. ಬಂಗಾಳಿಯಿಂದ ವೆಂಕಟಾಚಾರ್ಯರು ಬಂಕಿಮ ಚಂದ್ರರ ಎಲ್ಲಾ ಕಾದಂಬರಿಗಳನ್ನು ನೇರವಾಗಿ ಅನುವಾದಿಸಿ, ನಮ್ಮ ಸಾಹಿತಿ ಮತ್ತು ವರ್ಣಚಿತ್ರಕಾರರು ಬಂಗಾಳಕ್ಕೆ ಹೋಗಿ ಬಂದು, ಬಂಗಾಳಿಯಿಂದ ಅಹೋಬಲ ಶಂಕರನಾರಾಯಣರಂಥವರು ಅನೇಕ ಕೃತಿಗಳನ್ನು ಅನುವಾದಿಸಿ, ಬೇಂದ್ರೆ ಮತ್ತು ಕುವೆಂಪು ಪರೋಕ್ಷವಾಗಿ ಇಂಗ್ಲಿಷ್ ಮೂಲಕ ಬಂಗಾಳಿ ಕಾವ್ಯದ ಪ್ರಭಾವವನ್ನು ಸ್ವೀಕರಿಸಿ, ಕನ್ನಡ ಸಾಹಿತ್ಯ ಬೆಳೆದಿದೆ.

೩. ಎಂ.ಎನ್. ರಾಯ್ ಪ್ರಭಾವ ನಮ್ಮಲ್ಲಿ ಅನೇಕರ ಮೇಲೆ ಆಗಿದೆ. ಬಂಗಾಳಿ ಚಿತ್ರಕಲೆಯ ಪ್ರಭಾವ ಅಥವಾ ಬಂಗಾಳಿ ಮತ್ತು ಕರ್ನಾಟಕದ ಚಿತ್ರಕಲಾವಿದರ ಸಂಬಂಧ ಮತ್ತು ಸಾಹಿತಿಗಳ ಸಂಬಂಧ ಈಗಲೂ ಮುಂದುವರೆದಿದೆ. ಆದ್ದರಿಂದ ನಮ್ಮ ಸಾಂಸ್ಕೃತಿಕ ಸಂಬಂಧವನ್ನು ನಾವು ಅಧ್ಯಯನ ಮಾಡಬೇಕಾಗಿದೆ. ಈ ಅಧ್ಯಯನಕ್ಕೆ 'ಜಯಂತಿ'ಯ ಒಂದು ಕೊಡುಗೆಯೂ ಇದೆ ಎನ್ನುವುದು ಗಮನಾರ್ಹವಾಗಿದೆ.

'ಜಯಂತಿ' ಎಂತಹ ಸಾಂಸ್ಕೃತಿಕ ಕೇಂದ್ರವೆಂದರೆ ಅದರಲ್ಲಿ ಬಂದ ಲೇಖನಗಳು ರಷ್ಯಾ, ಅಮೆರಿಕ, ಇಂಗ್ಲೆಂಡ್, ದಕ್ಷಿಣ ಅಮೆರಿಕ, ಪಾಕಿಸ್ತಾನ, ಫ್ರಾನ್ಸ್, ಇಟಲಿ, ಈಜಿಪ್ಟ್ ಜಪಾನ್, ಚೀನ ಮೊದಲಾದ ದೇಶಗಳ ವಿದ್ಯಮಾನಗಳನ್ನು ನಮಗೆ ಪರಿಚಯ ಮಾಡಿಕೊಟ್ಟಿವೆ. 'ಜಯಂತಿ'ಯ ಓದುಗರಿಗೆ ಕಮ್ಯುನಿಸಂ, ಫ್ಯಾಸಿಸಂ, ನಾಜಿಸಂ ಹೊಸ ವಿಷಯಗಳಾಗಿರಲಿಲ್ಲ. ಹೀಗೆ ಸಮಕಾಲೀನ ಚಾರಿತ್ರಿಕ ಸಂಬಂಧಗಳನ್ನು 'ಜಯಂತಿ' ಸ್ಪಷ್ಟ ಮಾಡಿದೆ. ಆಧುನಿಕ ವಿಜ್ಞಾನ, ಭಾರತದಲ್ಲಿ ಪ್ರವಾಸದ ಅನುಭವ, ಹೋಮಿಯೊಪತಿ, ಆಯುರ್ವೇದ ಮೊದಲಾದ ವೈದ್ಯಕೀಯ ವಿಷಯಗಳು, ಜಾನಪದ ಸಾಹಿತ್ಯ, ಕಾವ್ಯ ಮೀಮಾಂಸೆ, ಯೋಗ, ವೇದಾಂತ, ಸ್ವಾತಂತ್ರ್ಯ ಹೋರಾಟ, ಏಕೀಕರಣ, ಹಿಂದೂ ಮುಸಲ್ಮಾನ್ ಸಂಬಂಧ, ಶಿಕ್ಷಣ, ಮನೋವಿಜ್ಞಾನ, ಚರಿತ್ರೆ, ಹಿಂದೂಧರ್ಮ, ಸಂಗೀತ, ನಾಟಕ, ಸಿನಿಮಾ, ಪತ್ರಿಕೋದ್ಯಮ, ಸ್ತ್ರೀ ಸ್ವಾತಂತ್ರ್ಯ, ಜೀವನ ಚರಿತ್ರೆ, ಸಂಶೋಧನೆ, ಹಬ್ಬಗಳು, ಸಾಹಿತ್ಯ ಸಮ್ಮೇಳನ ಹೀಗೆ ಪ್ರತಿಯೊಬ್ಬ ಸುಸಂಸ್ಕೃತನೂ ತಿಳಿದುಕೊಳ್ಳಬೇಕಾದ ಮತ್ತು ತನ್ನನ್ನು ತೊಡಗಿಸಿಕೊಳ್ಳಬೇಕಾದ ವಿಷಯಗಳನ್ನು ಗಮನಕ್ಕೆ ತರುವ 'ಜಯಂತಿ'ಯ ಕೆಲಸ ಸಾಂಸ್ಕೃತಿಕ ಮಹತ್ವದ್ದಾಗಿತ್ತು.

ಭಾರತ ಮತ್ತು ಕರ್ನಾಟಕದ ಬೆಳವಣಿಗೆಯ ಕಡೆಗೆ ಬೆಟಗೇರಿ ಕೃಷ್ಣಶರ್ಮರ ದೃಷ್ಟಿಯಿತ್ತು. ಇಲ್ಲಿಯ ಬದುಕು ಹೇಗಿರಬೇಕೆನ್ನುವುದನ್ನು ಕುರಿತು ಬೆಟಗೇರಿಯವರು ಹೀಗೆ ಹೇಳಿದ್ದಾರೆ:

''ಇಂದಿನ ನನ್ನ ಹಂಬಲವು ದೇವನನ್ನು ಕಾಣಬೇಕೆಂಬುದಲ್ಲ; ರಾಜಕೀಯ ಸ್ವಾತಂತ್ರ್ಯ ಬೇಕೆಂಬುದು ಅಲ್ಲ; ಸುಖಮಯವಾದ ಬಾಳು ಸಿಕ್ಕಬೇಕೆಂಬುದು ಅಲ್ಲ; ಜಗತ್ತಿನಲ್ಲಿ

ನಿಜವಾದ ಮಾನವತೆ ತಲೆದೋರಬೇಕು ಎಂದು. ಪ್ರತಿಯೊಬ್ಬ ಮಾನವನ ಜೀವನ ಯೌಗಿಕ ಜೀವನವಾಗಬೇಕು... ಆಧ್ಯಾತ್ಮಿಕ-ಅಧಿಭೂತಗಳ ಸಮನ್ವಯದ ಸಂಪೂರ್ಣ ಜ್ಞಾನ ಲೋಕದಲ್ಲಿ ನೆಲೆಗೊಳ್ಳಬೇಕು-ಎಂದು. ಹೀಗಾದರೆ ಎಲ್ಲರಿಗೂ ದೇವನ ದರ್ಶನವಾಗುವುದು. ಎಲ್ಲರಿಗೂ ಸ್ವಾತಂತ್ರ್ಯ ಸಿಕ್ಕುವುದು. ಮಾನವನು ನಿಜವಾದ ಮಾನವನಾದರೆ, ಮರ್ತ್ಯಲೋಕವನ್ನೇ ಸ್ವರ್ಗಲೋಕವನ್ನಾಗಿ ಮಾರ್ಪಡಿಸಬಹುದೆಂಬ ಆಶಾವಾದಿ ನಾನು. ಈ ಆಶಾವಾದಿತ್ವವೇ ಇಂದಿನ ನನ್ನ ಸಾಹಿತ್ಯ ನಿರ್ಮಿತಿಯ ಜೀವಾಳವಾಗಿದೆ. ಎಂದೂ ಇದೇ ಜೀವಾಳವಾಗಿರಬೇಕೆಂಬ ಖಂಡಿತವಾದ ನಂಬಿಕೆ ನನ್ನನ್ನು ಎಚ್ಚರಿಸುತ್ತಿದೆ. 'ಜಯಂತಿ' ಪತ್ರಿಕೆಯ ಉದ್ದೇಶ ಇದೇ ಆಗಿದೆ.''

(ಸಾಹಿತ್ಯಜ್ಞರ ಆತ್ಮಕಥನ: ಪುಟ ೧೦೦)

ಮಾನವ ನಿಜವಾದ ಮಾನವ ಆಗಿರಬೇಕಾದರೆ ನಮ್ಮ ಪರಿಸರದಲ್ಲಿ ತಕ್ಕ ಬದಲಾವಣೆಗಳಾಗಬೇಕು, ನಮ್ಮ ಆತ್ಮದ ಬೆಳವಣಿಗೆಯೂ ಆಗಬೇಕು. ಪರಿಸರದಲ್ಲಿ ಬದಲಾವಣೆಗಳಾಗಬೇಕಾದರೆ ಪರಿಸರದ ತಿಳುವಳಿಕೆ ಅಗತ್ಯ. ಆತ್ಮದ ಬೆಳವಣಿಗೆಯಾಗಬೇಕಾದರೆ, ಅಂತರಂಗದ ಪುನಃ ಪುನಃ ಪರೀಕ್ಷಣೆಯಾಗಬೇಕು. ಅದು ಸಾಹಿತ್ಯದಿಂದ, ಯೋಗದಿಂದ, ತತ್ವಜ್ಞಾನದಿಂದ ಸಾಧ್ಯ. ಈ ಸಾಧ್ಯತೆಗಳನ್ನು ಸಂಭಾವ್ಯ ಮಾಡುವ ಸಂಕಲ್ಪವನ್ನು 'ಜಯಂತಿ'ಯ ಲೇಖನಗಳ ವಿಷಯವ್ಯಾಪ್ತಿಯಲ್ಲಿ ಕಾಣಬಹುದು. ಡಿ.ವಿ.ಜಿ.-'ಸಂಸ್ಕೃತಿಯು ಲೋಕ ಸಂಪರ್ಕದಿಂದ ಉಂಟಾಗತಕ್ಕದ್ದು; ಲೋಕ ಜೀವನಕ್ಕೆ ಬೇಕಾದದ್ದು; ಆದರೂ ಅದರ ಮೂಲ ವಸ್ತುವು ವ್ಯಕ್ತಿ' ಎಂದು ಹೇಳುತ್ತಾರೆ. 'ಜಯಂತಿ'ಯ ಲೇಖನಗಳ ವ್ಯಾಪ್ತಿ, ಲೋಕ ಸಂಪರ್ಕದ ಆಳ ಮತ್ತು ವಿಸ್ತಾರಗಳನ್ನು ಸೂಚಿಸುತ್ತದೆ. 'ಮಾನವನು ನಿಜವಾದ ಮಾನವನಾದರೆ' ಎನ್ನುವಾಗ ಬೆಟಗೇರಿಯವರು ವ್ಯಕ್ತಿಯನ್ನು ಕೇಂದ್ರದಲ್ಲಿಟ್ಟುಕೊಂಡು ಮಾತಾಡುತ್ತಾರೆ.

ಬೆಟಗೇರಿಯವರು ೧೯೩೮ರಿಂದ ೧೯೬೦ರವರೆಗೆ 'ಜಯಂತಿ'ಯನ್ನು ನಡೆಸಿದರು. ೧೯೩೮ರಲ್ಲಿ ಅವರು ತುಂಬ ಆಸೆಯಿಟ್ಟುಕೊಂಡಿದ್ದ ವಿಜಯೀಂದ್ರ ಎನ್ನುವ ಬಂಧು ಎಂ.ಎ. ಪರೀಕ್ಷೆ ಉತ್ತೀರ್ಣನಾದ ಕೆಲವೇ ದಿನಗಳಲ್ಲಿ ಅಕಾಲ ಮರಣಕ್ಕೆ ತುತ್ತಾದ. ೧೯೧೫ರಲ್ಲಿ ಪ್ಲೇಗ್ ಆಗಿದ್ದರಿಂದ ಬೆಟಗೇರಿಯವರ ಜೀವನ ಪರ್ಯಂತ ಅವರ ಕಾಲು ಮತ್ತು ಕೈ ನಡುಗುತ್ತಿದ್ದವು. ಅವರು ಜೋಲಿ ಹೊಡೆಯುತ್ತ ನಡೆಯಬೇಕಾಗಿತ್ತು. ೧೯೨೯ರಲ್ಲಿ ಅವರ ಮದುವೆಯಾಗಿತ್ತು. ೧೯೩೮ರಿಂದ 'ಜಯಂತಿ' ಪತ್ರಿಕೆಯನ್ನು ೧೯೬೦ರವರೆಗೆ ನಡೆಸುತ್ತಿದ್ದಾಗ ೧೯೩೮ರಿಂದ ೧೯೪೪ರವರೆಗೆ ೪ ಮಕ್ಕಳಾದವು-ಕೊನೆಯವಳು ಶಶಿ ೧೯೬೦ರಲ್ಲಿ ತನ್ನ ೨೨ನೇ ವಯಸ್ಸಿನಲ್ಲಿ ಸತ್ತು ಹೋದಳು. ೧೯೫೭ರಲ್ಲಿ ಕ್ಷಯರೋಗದಿಂದ ಅವರ ಹೆಂಡತಿ ಸತ್ತರು. ಈ ಎಲ್ಲದರ ನಡುವೆ ೧೯೩೮ರ ಜಮಖಂಡಿಯ ಕವಿಸಮ್ಮೇಳನದ ಕಾರ್ಯಕರ್ತ, ೧೯೪೮ರಲ್ಲಿ ೪ನೇ ಪತ್ರಕರ್ತರ ಸಮ್ಮೇಳನಕ್ಕೆ ಸ್ವಾಗತಾಧ್ಯಕ್ಷ, ೧೯೫೦ರಲ್ಲಿ ಗೌರೀಶವಾಚನ ಮಾಲೆಯ ಸಂಪಾದನೆ ಮತ್ತು ಹರಪನಹಳ್ಳಿಯ ಪ್ರಥಮ ಜನಪದ ಗೋಷ್ಠಿಯ ಅಧ್ಯಕ್ಷತೆ, ೧೯೫೮ರಲ್ಲಿ ಮಗನ ಉಪನಯನ, ೧೯೫೯ರಲ್ಲಿ ಮಗಳು ವೈಜಯಂತಿಯ ಮದುವೆ-ಇಷ್ಟೆಲ್ಲ ಕಾರ್ಯಕ್ರಮಗಳ ನಡುವೆ 'ಜಯಂತಿ'ಯ ಸಂಪಾದನಾ ಕಾರ್ಯ ನಡೆಯುತ್ತಿತ್ತು.

೧೯೨೯ರಲ್ಲಿ 'ನಮ್ಮ ಬದುಕು' ಎನ್ನುವ ಕಥಾಸಂಕಲನವನ್ನು ತಾವೇ ಪ್ರಕಟಿಸಿದರು. 'ಕರ್ನಾಟಕ ಜನಜೀವನ' ಎನ್ನುವ ಪುಸ್ತಕವೂ ಅದೇ ವರ್ಷ ಪ್ರಕಟವಾಯಿತು. ೧೯೫೧ರಲ್ಲಿ 'ಚೇಳವಡಿ ಮಲ್ಲಮ್ಮ', ೧೯೫೪ರಲ್ಲಿ 'ಬೆಂದ ಹೃದಯ' ನಾಟಕಗಳನ್ನು ಬರೆದರು. ೧೯೫೩ರಲ್ಲಿ 'ಕಾರಹುಣ್ಣಿಮೆ' ೧೯೫೭ರಲ್ಲಿ 'ಬಡತಾಯಿ' ಮತ್ತು 'ವಿರಹಿಣಿ', ೧೯೫೮ರಲ್ಲಿ 'ನಲ್ವಾಡುಗಳು' ಎನ್ನುವ ಕವನ ಸಂಕಲನಗಳನ್ನು ಪ್ರಕಟಿಸಿದರು.

ಆ ಕಾಲದಲ್ಲಿ ೯.೦೦ ಗಂಟೆಗೆ ಸರಿಯಾಗಿ ಶಾಲುಹೊದ್ದು ಮನೆಬಿಡುತ್ತಿದ್ದರಂತೆ. ದಾರಿಯಲ್ಲಿ ಬಾಂಬೆ ರೆಸ್ಟೋರೆಂಟ್ ಇತ್ತಂತೆ. ೯ ಗಂಟೆ ೧೦ ನಿಮಿಷಕ್ಕೆ ಹೋಟೆಲ್ ತಲುಪಿ ತುಪ್ಪದ ದೋಸೆ ತಿಂದು ಚಹಾ ಕುಡಿದು

೯.೩೦ಕ್ಕೆ ಸರಿಯಾಗಿ ಆಫೀಸ್ ಸೇರುತ್ತಿದ್ದರಂತೆ. ದಾರಿಯಲ್ಲಿ ದ.ಬಾ. ಕುಲಕರ್ಣಿಯವರ ಅಂಗಡಿ ಇತ್ತು. ದ.ಬಾ. ಕುಲಕರ್ಣಿಯವರು ಕಾಲೋಪಯೋಗಿ ಅಂತ ಬೆಟಗೇರಿಯವರಿಗೆ ಹೆಸರಿಟ್ಟಿದ್ದರಂತೆ. ಇನ್ನೊಂದು ಬೆಟಗೇರಿ ಶಿಷ್ಟಕರ್ಮಿ ಅಂತ ಹೆಸರಿಟ್ಟಿದ್ದರಂತೆ.

ಬೆಟಗೇರಿಯವರು ಬೇಂದ್ರೆಯವರಿಗಿಂತ ನಾಲ್ಕು ವರ್ಷ ಚಿಕ್ಕವರಾದರೂ ಬೇಂದ್ರೆಗಿಂತಲೂ ಮುಂಚೆ ಪ್ರಸಿದ್ಧರಾದವರು. ಅವರಿಗೆ ಹಾಡಲಿಕ್ಕೆ ಬರುತ್ತಿತ್ತು. ಬೆಟಗೇರಿಯವರ ಮೊದಲ ಕವನ ಸಂಕಲನ ೧೯೨೭ರಲ್ಲಿ ಪ್ರಕಟವಾಯಿತು. ಮರಾಠಿ ಕವಿ ಗೋವಿಂದಾಗ್ರಜರ 'ರಾಜ ಹಂಸ ಮಾಝಾ ನಿಝಲಾ' ಎನ್ನುವ ಎಂಟು ಸಾಲಿನ ಪದ್ಯಬಂಧದಲ್ಲಿ ಬೆಟಗೇರಿಯವರು 'ನನ್ನದು ಈ ಕನ್ನಡ ನಾಡು' ಎನ್ನುವ ಕವಿತೆಯನ್ನು ಬರೆದಿದ್ದರು. ಆ ಹೆಸರಿನಲ್ಲಿಯೇ ಬೇಂದ್ರೆಯವರು ಬೇರೆ ಬೇರೆಯವರ ಕವನಗಳನ್ನು ಒಂದು ಪುಸ್ತಕದಲ್ಲಿ ಸಂಪಾದಿಸಿದ್ದರು. ಬೇಂದ್ರೆಯವರು 'ನನ್ನದು ಈ ಕನ್ನಡ ನಾಡು' ಎನ್ನುವ ಕವಿತೆಯನ್ನು ಆಮೇಲೆ ಬರೆದರು. ಬೆಟಗೇರಿಯವರ 'ಮಾಧವ ಮುನಿ' ಎನ್ನುವ ಕವಿತೆಗೂ ಬೇಂದ್ರೆಯವರ 'ಕನಸಿನೊಳಗೊಂದು ಕಣಸು' ಕವಿತೆಗೂ ಸಂಬಂಧವಿದೆ ಅನಿಸುತ್ತದೆ. ಬೆಟಗೇರಿಯವರು ಗೆಳೆಯರ ಗುಂಪಿನಲ್ಲಿ ಒಬ್ಬರಾಗಿದ್ದರು. ಬೇಂದ್ರೆಯವರ 'ಗರಿ' ಪ್ರಕಟವಾಗುವ ಮುಂಚೆ ಆ ಕವಿತೆಗಳನ್ನೋದಿ ಬೆಟಗೇರಿಯವರು ತಮ್ಮ ಸಲಹೆಗಳನ್ನು ಕೊಟ್ಟಿದ್ದರಂತೆ. ಮುದ್ರಣ ದೋಷವನ್ನು ಮತ್ತು ಬರವಣಿಗೆಯ ದೋಷವನ್ನೂ ತಿದ್ದಿದ್ದರಂತೆ. ಆದರೆ ಬೇಂದ್ರೆ, ಅದಕ್ಕಾಗಿಯೇ ಬೆಟಗೇರಿಯವರನ್ನು ಕ್ಷಮಿಸಲಿಲ್ಲ ಅಂತ ಕಾಣುತ್ತದೆ. ಬೇಂದ್ರೆ ಗುಂಪಿನವರು ಮಸಲತ್ತು ಮಾಡಿ 'ಜಯಂತಿ' ನಡೆಯದ ಹಾಗೆ ನೋಡಿಕೊಂಡರು ಅಂತ ಯಾರೋ ಒಬ್ಬರು ನನಗೆ ಹೇಳಿದ್ದರು. ಆಮೇಲೆ ಬಸವರಾಜ ಹೊರಡಿ 'ಜಯಂತಿ'ಯನ್ನು ಕೊಂಡುಕೊಂಡರು. ೨೨ ವರ್ಷಗಳಷ್ಟು ಕಾಲ ಬೆಟಗೇರಿಯವರು ಬೆಳೆಸಿದ ಮರವನ್ನು ಜಿ.ಶ್ರೀ. ಕುಲಕರ್ಣಿ ಮತ್ತು ಹೊರಡಿಯವರು ಕಿತ್ತು ನೆಟ್ಟಾಗ ಅದು ಮತ್ತೆ ಬೇರು ಬಿಡಲಿಲ್ಲ.

ಬೇಂದ್ರೆಯವರಿಗೆ ಸ್ಪರ್ಧಾ ಮನೋಭಾವವಿತ್ತು. ಯಾರಾದರೂ ಛೋಲೋ ಕವಿತೆ ಬರೆದರೆ ಅದಕ್ಕಿಂತ ಛೋಲೋ ಬರೆಯಲಿಕ್ಕೆ ಬೇಂದ್ರೆಯವರಿಗೆ ಬರುತ್ತಿತ್ತು. ಹಾಗೆ ಬೇಂದ್ರೆಯವರು ಬೆಟಗೇರಿ ಮತ್ತು ಶ್ರೀಧರ ಖಾನೋಳ್ಕರರನ್ನು ಉಪಯೋಗಿಸಿಕೊಂಡರು. ಈ ರೀತಿಯಾಗಿ ತಾನು ಬೆಳೆಯುವುದು ಬೇಂದ್ರೆಯವರ ರೀತಿಯಾಗಿತ್ತು. ಆದರೆ ತನ್ನ ಜೊತೆಯಲ್ಲಿನ ಚಿಕ್ಕವರನ್ನು ಬೆಳೆಸುವುದು ಬೆಟಗೇರಿಯವರ ರೀತಿಯಾಗಿತ್ತು. ಬೆಟಗೇರಿಯವರು ತಮ್ಮ ಗಮನವನ್ನು ಪೂರ್ತಿಯಾಗಿ ತನ್ನ ಜೊತೆಯವರಿಗೆ ಕೊಟ್ಟು 'ಜಯಂತಿ'ಯ ಮೂಲಕ ಬೆಳೆಸಿದರು. ಅವರಿಗಿದ್ದ ಆ ತಾಳ್ಮೆ ಮತ್ತು ಹಂಬಲ ಅವರ ಸುತ್ತ ಮುತ್ತ ಇದ್ದವರಲ್ಲಿ ಕಂಡು ಬರಲಿಲ್ಲ.

ಶ್ರೀರಂಗರು 'ಮಂಗನ ಮಲ್ಲಿನಾಥ' ಅಂತ ಒಂದು ಅಂಕಣ ಬರೆಯುತ್ತಿದ್ದರು. ಶ್ರೀರಂಗರು ಅದನ್ನು ನಿಲ್ಲಿಸಿದ ಮೇಲೆ ಲಾಂಗೂಲಾಚಾರ್ಯರು ಅಂಕಣಗಳನ್ನು ಬರೆಯುತ್ತಿದ್ದರು. 'ಮಂಗನ ಮಲ್ಲಿನಾಥ'ಕ್ಕೂ ಲಾಂಗೂಲಾಚಾರ್ಯರಿಗೂ ಇರುವ ಹೆಸರಿನ ಸಂಬಂಧಕ್ಕೂ, ಅವರ ಬರವಣಿಗೆಯಲ್ಲಿ ಕಂಡು ಬರುವ ಕೀಟಲೆತನಕ್ಕೂ ಸಂಬಂಧವಿದೆ. ಪ್ರಜಾವಾಣಿಯಲ್ಲಿ ಆಮೇಲೆ ಬಂದ 'ಛೂಬಾಣ'ಕ್ಕೆ 'ಜಯಂತಿ'ಯ ಈ ಶೀರ್ಷಿಕೆ ದಾರಿ ಮಾಡಿಕೊಟ್ಟಿತು ಅನಿಸುತ್ತದೆ. ಕನ್ನಡದಲ್ಲಿ ಮೊದಲ ಬಾರಿಗೆ ಕಥಾಸ್ಪರ್ಧೆಗಳನ್ನು ಏರ್ಪಡಿಸಿದ್ದು ಸಹ 'ಜಯಂತಿ'ಯ ಹೆಚ್ಚುಗಳವಾಗಿದೆ. ಮೊದಲ ಬಾರಿ ಮೊದಲ ಬಹುಮಾನ ಅಶ್ವತ್ಥರಿಗೂ, ಎರಡನೆಯ ಬಹುಮಾನ ಶ್ರೀನಿವಾಸ ಹಾವನೂರರಿಗೂ ಸಿಕ್ಕಿತ್ತೆಂದು ಕೇಳಿದ್ದೇನೆ.

೧೯೫೩-೫೪ರವರೆಗಿನ ಕಾಲದಲ್ಲಿ ಕೃಷ್ಣಶರ್ಮರ ಪತ್ನಿ ಕ್ಷಯರೋಗದಿಂದ ಹುಕ್ಕೇರಿ ಆರೋಗ್ಯ ಧಾಮದಲ್ಲಿ ಇರಬೇಕಾಗಿ ಬಂದಿತ್ತು. ಹಣದ ಕೊರತೆಯಿತ್ತು. ಮನೆಗೆ ಬರುವ ಅತಿಥಿಗಳಿಗಂತೂ ಯಾವ ಕೊರತೆಯೂ ಇರಲಿಲ್ಲ. ಇಂಥ ಸಂದರ್ಭದಲ್ಲಿ, ೧೯೫೪ರ ಒಂದು ದಿನ, ಹೆಂಡತಿಯ ಔಷಧೋಪಚಾರಕ್ಕೆ ಹಣವಿರಲಿಲ್ಲ, ಜಯಂತಿಗಾಗಿ ತಂದಿದ್ದ ಕಾಗದದ ಬಿಲ್, ಮುದ್ರಣದ ಬಿಲ್ ಕೊಡಲಿಕ್ಕೆ ಬಿಡಿಗಾಸೂ ಇರಲಿಲ್ಲ. ಆ ಸಮಯಕ್ಕೆ ವೆ.ಮು.ಜೋಷಿ ಒಂದು ಇಂಗ್ಲಿಷ್ ಪತ್ರಿಕೆ ಹಿಡಿದು ಬಂದು ''ನಿಮ್ಮ 'ಮಗಳ ಮದುವೆ'

ಕಾದಂಬರಿಗೆ ೨೦೦೦ರೂ ಬಹುಮಾನ ಬಂದಿದೆ'' ಎಂದು ತೋರಿಸಿದರಂತೆ. ಮಾರನೇ ದಿನವೇ ಬಹುಮಾನ ಸ್ವೀಕರಿಸಲಿಕ್ಕೆ ಪತ್ರ ಬಂತು. ೨೦೦೦ರೂ ಔಷಧೋಪಚಾರಕ್ಕೆ, ಪ್ರೆಸ್ ಬಿಲ್ ಕೊಡಲಿಕ್ಕೆ ಖರ್ಚಿಗಾಯಿತು.

ಇನ್ನೊಂದು ದಿನ ಗೌರೀಶ ವಾಚನಮಾಲೆಯ ಶಂಭುಲಿಂಗಪ್ಪ ಕುಲಕರ್ಣಿಯವರು ಮುಂಬೈ ಸರ್ಕಾರದ ಕೆಲವು ಪಠ್ಯ ಪುಸ್ತಕಗಳನ್ನು ತಯಾರು ಮಾಡಿಕೊಡಬೇಕೆಂದು ಕೇಳಿದರು. ಆಗ ಬೆಟಗೇರಿಯವರು 'ಶಂಭುಲಿಂಗಪ್ಪನವರೆ, ನಾನು ನಿಮ್ಮ ಪುಸ್ತಕವನ್ನು ಸಂತೋಷದಿಂದ ಸಿದ್ಧಪಡಿಸಿಕೊಡುತ್ತಿದ್ದೆ. ಆದರೆ ಅನೇಕ ಸಮಸ್ಯೆಗಳಿಂದ ನನ್ನ ಮನಸ್ಸು ತುಂಬ ಕದಡಿ ಹೋಗಿದೆ. ಮುಖ್ಯ ಸಮಸ್ಯೆಯೆಂದರೆ, ಹೆಂಡತಿಯನ್ನು ಟಿ.ಬಿ.ಆಸ್ಪತ್ರೆಯಲ್ಲಿರಿಸಿದ್ದೇನೆ, ಪ್ರತಿ ತಿಂಗಳೂ ನೂರು ರೂಪಾಯಿಗಳನ್ನು ಕಟ್ಟಬೇಕಾಗುವುದು. ಅಲ್ಲದೇ ನನ್ನ 'ಜಯಂತಿ'ಗಾಗಿ ಪ್ರತಿ ತಿಂಗಳು ನೂರು ರೂಪಾಯಿಗಳ ಹೊಣೆಯನ್ನು ನಾನೇ ಹೊರಬೇಕಾಗಿದೆ. ಇತ್ತ ಸಂಸಾರವೂ ಸಾಗಬೇಕು' ಅಂದರಂತೆ. ಶಂಭುಲಿಂಗಪ್ಪನವರು ಹಣವನ್ನು ಕೊಟ್ಟರು. ಜೀಸುವ ದೊಣ್ಣೆ ತಪ್ಪಿತು. ಇನ್ನೊಮ್ಮೆ, ೧೯೫೬ರಲ್ಲಿ ಒಳಗಿನ ಕೋಣೆಯಲ್ಲಿ ರೋಗಿ ಹೆಂಡತಿ ಮಲಗಿದ್ದಳು. ನಡುಮನೆಯಲ್ಲಿ ಹನ್ನೆರಡು ವರ್ಷದ ಮಗಳು ಶಶಿಕಲಾ ವಿಷಮಶೀತ ಜ್ವರದಿಂದ ನರಳುತ್ತಿದ್ದಳು. ಡಾಕ್ಟರರು ಹೇಳಿದ ಔಷಧಿಯನ್ನು ತರಲಿಕ್ಕೂ ಬೆಟಗೇರಿಯವರ ಬಳಿ ಹಣವಿರಲಿಲ್ಲ. ಆ ಸಮಯಕ್ಕೆ ಸರಿಯಾಗಿ ಆಕಾಶವಾಣಿಯ ಅಧಿಕಾರಿಗಳು ಅವರ ಮನೆಗೆ ಬಂದರಂತೆ. 'ಮಾನ್ಯ ಬೆಟಗೇರಿಯವರೇ, ನಾವೀಗ ಒಂದು ಪರೀಕ್ಷೆಯ ಪ್ರಸಂಗದಲ್ಲಿ ಸಿಲುಕಿದ್ದೇವೆ. ಓರ್ವ ಹಿರಿಯ ಸಾಹಿತಿಗಳಿಗೆ 'ಬಲಿಚಕ್ರವರ್ತಿ' ನಾಟಕವನ್ನು ಬರೆದುಕೊಡಲು ಹೇಳಿದ್ದೆವು. ಒಪ್ಪಿಕೊಂಡ ಆ ಮಾನ್ಯರು ಬರೆದು ಕೊಡುವುದು ಇರಲಿ, ಆ ಕುರಿತು ಇದುವರೆಗೂ ಒಂದು ಪತ್ರವನ್ನೂ ಬರೆದಿಲ್ಲ, ಆಲ್ಲದೆ ಇಂದಿಗೆ ಮೂರನೆ ದಿನವೇ 'ಬಲಿಚಕ್ರವರ್ತಿ' ನಾಟಕದ ಪ್ರಸಾರವೆಂದು ಪ್ರಕಟಿಸಲಾಗಿದೆ. ನಾಟಕ ಪ್ರಸಾರವಾಗದೇ ಹೋದರೆ ನನ್ನ ಹಾಗೂ ಆಕಾಶವಾಣಿಯ ಮರ್ಯಾದೆಯೇ ಉಳಿಯುವುದಿಲ್ಲ. ನಮ್ಮ ಮರ್ಯಾದೆಯ ರಕ್ಷಣೆ ನಿಮ್ಮಿಂದ ಖಂಡಿತ ಸಾಧ್ಯವೆಂದು ನಂಬಿಕೊಂಡು ನಿಮ್ಮ ಹತ್ತಿರ ಬಂದಿರುವೆ. ತಾವು ನಾಳೆಯೊಳಗಾಗಿ ನಾಟಕವನ್ನು ಬರೆದು ಕೊಡಬೇಕು. ಆ ನಾಟಕದಲ್ಲಿ ತಾವೊಂದು ಪಾತ್ರವನ್ನೂ ವಹಿಸಬೇಕು' ಎಂದು ಅವರು ಕೇಳಿಕೊಂಡರಂತೆ.

ಅದಕ್ಕೆ ಬೆಟಗೇರಿಯವರು 'ಮಾನ್ಯರೇ ಒಳಕೋಣೆಯಲ್ಲಿ ನನ್ನ ರೋಗಿ ಹೆಂಡತಿ ಜೀವಂತ ಹೆಣವಾಗಿ ಮಲಗಿದ್ದಾಳೆ. ನಡುಮನೆಯಲ್ಲಿ ನನ್ನ ಮಗಳು ಸಾಯುವ ಸ್ಥಿತಿಯಲ್ಲಿ ಬಿದ್ದುಕೊಂಡಿದ್ದಾಳೆ. ಇಂಥ ದಾರುಣ್ಯ ಪರಿಸ್ಥಿತಿಯಲ್ಲಿ ನಾನು ಹೇಗೆ ನಾಟಕವನ್ನು ಬರೆದುಕೊಡಲಿ' ಎಂದು ರೋಗಿಗಳನ್ನು ಪ್ರತ್ಯಕ್ಷ ತೋರಿಸಿದರಂತೆ. ಅಧಿಕಾರಿಗಳು 'ನೋಡಿ ಹೇಗಾದರೂ ಮಾಡಿ' ಎಂದು ವಿನಯದಿಂದ ಹೇಳಿದರಂತೆ. ರೋಗಿಗಳ ಔಷಧೋಪಚಾರಕ್ಕೆ ಹಣವೂ ಬೇಕಾದ್ದರಿಂದ ಬೆಟಗೇರಿಯವರು ಒಪ್ಪಿಕೊಂಡರಂತೆ. ಅದೇ ರಾತ್ರಿ ನಾಟಕ ಬರೆಯಲು ಆರಂಭಿಸಿ, ಬೆಳಗ್ಗೆ ಮುಕ್ಕಾಲು ಭಾಗ ಬರೆದಿದ್ದನ್ನು ಆಕಾಶವಾಣಿಗೆ ಕಳಿಸಿ, ಮತ್ತೆ ಮೂರು ತಾಸು ಕುಳಿತು ಉಳಿದ ಭಾಗವನ್ನು ಪೂರೈಸಿ ಕಳಿಸಿಕೊಟ್ಟರಂತೆ. ನಾಟಕದಲ್ಲಿ ಪ್ರಹ್ಲಾದನ ಪಾತ್ರವನ್ನು ವಹಿಸಿದರು. ಮೂರನೆ ದಿನ ಬೆಳಿಗ್ಗೆ ನಾಟಕ ಪ್ರಸಾರವಾಯಿತು. ಅದೇ ಸಂಜೆ ಇನ್ನೊಂದು ಆಕಾಶವಾಣಿಯ ಕಾರ್ಯಕ್ರಮದಿಂದಲೂ ೧೭೫ ರೂ. ಸಂಭಾವನೆ ದೊರಕಿತಂತೆ. ಔಷಧಿಗೆ ಆ ಹಣ ಹೋಯಿತು.

ಈ ವಿವರಗಳನ್ನೆಲ್ಲ ನಾನು ಏಕೆ ಕೊಡುತ್ತಿದ್ದೇನೆ ಅಂದರೆ ಬೆಟಗೇರಿಯವರ ಮನಸ್ಸು ಕ್ಷೋಭೆಗೊಳಗಾಗಿದ್ದಾಗ ಕೂಡ, ಅವರು ಶಂಭುಲಿಂಗಪ್ಪನವರ ಕೆಲಸವನ್ನು ಮತ್ತು ಆಕಾಶವಾಣಿಯವರ ಕೆಲಸವನ್ನು ತಮ್ಮ ಕರ್ತವ್ಯವೆಂದು ತಿಳಿದು, ಅದಕ್ಕೆ ಬೇಕಾದ ಚಿತ್ತೈಕಾಗ್ರತೆಯನ್ನು ಸಂಪಾದಿಸಿಕೊಂಡು, ಆ ಕೆಲಸಗಳನ್ನ ಮಾಡಿ ಕೊಟ್ಟರು. ಬೆಟಗೇರಿಯವರಿಗೆ ಹಣದ ಅವಶ್ಯಕತೆಯಿತ್ತು. ಆದರೆ ಆ ಹಣ ಹೆಂಡತಿ ಮತ್ತು ಮಗಳ ಔಷಧೋಪಚಾರಕ್ಕೆ ಮತ್ತು 'ಜಯಂತಿ'ಯ ಖರ್ಚಿಗಾಗಿ ಬೇಕಾಗಿತ್ತು. 'ಜಯಂತಿ'ಯನ್ನು ನಡೆಸುವುದರಲ್ಲಿ ಇಡೀ ಸಮಾಜದ ಜವಾಬ್ದಾರಿಯನ್ನು ಹೊತ್ತ ಹಾಗಿತ್ತು. ಅದರಿಂದ ಸ್ವಲಾಭವಿರಲಿಲ್ಲ.


ಅವರು 'ಜಯಂತಿ'ಯನ್ನು ನಡೆಸುವುದಕ್ಕಿಂತ ಲಾಭದಾಯಕವಾದ ಬೇರೆ ಕೆಲಸವನ್ನು ಮಾಡಬಹುದಾಗಿತ್ತು. ಹಾಗೆ ಮಾಡದೆ 'ಜಯಂತಿ'ಯನ್ನು ನಡೆಸುವುದರಲ್ಲಿ ಕರ್ಮಣ್ಯೆವಾಧಿಕಾರಸ್ತೆ ನಾ ಫಲೇಶು ಕದಾಚನ ಅನ್ನುವ ಒಂದು ಮನೋಭಾವವನ್ನು ಬೆಟಗೇರಿಯವರು ರೂಢಿಸಿಕೊಂಡಿದ್ದರು. ಆ ರೀತಿಯಾದ ಒಂದು ಸಂಸ್ಕೃತಿ ಅವರಲ್ಲಿ ಇದ್ದ ಕಾರಣದಿಂದಲೇ, ಸಂಸ್ಕೃತಿಗೆ ಅತ್ಯವಶ್ಯವಾದ ತತ್ವಜಿಜ್ಞಾಸೆ, ಸಾಹಿತ್ಯಾದಿ ಕಲೆಗಳು, ವಿಜ್ಞಾನ, ಚರಿತ್ರೆ ಸ್ವಸಮಾಜದ ಪ್ರಭಾವಕ್ಕೆ ಒಡ್ಡಿಕೊಳ್ಳುವಿಕೆ ಮತ್ತು ಅದನ್ನು ತಿದ್ದುವಿಕೆ, ಅಂತರಂಗದ ಪರಿಶೋಧನೆಗೆ 'ಜಯಂತಿ'ಯನ್ನು ಕೇಂದ್ರವಾಗಿ ಮಾಡಿಕೊಂಡರಷ್ಟೇ ಅಲ್ಲ, ಉಳಿದವರಿಗೂ ಒಂದು ಕೇಂದ್ರವನ್ನಾಗಿ ಮಾಡಿದರು. 'ಜಯಂತಿ'ಯಲ್ಲಿ ತಮ್ಮ ಹೃದಯವನ್ನು ತೊಡಗಿಸಿಕೊಂಡರು.

ತಮ್ಮ ಗೋಳುಗಳನ್ನು, ತಮ್ಮ ದೈಹಿಕ ದೌರ್ಬಲ್ಯಗಳನ್ನು ಅವರು ಬಂಡವಾಳ ಮಾಡಿಕೊಳ್ಳಲಿಕ್ಕೆ ಹೋಗಲಿಲ್ಲ. ಅವರು ಉತ್ತಮಾನ್ವೇಷಣೆಯಲ್ಲಿದ್ದರು. ಹೊಸ ಲೇಖಕರನ್ನು ಪ್ರೋತ್ಸಾಹಿಸಿದರು. ಇನ್ನೊಬ್ಬರನ್ನು ಬೆಳೆಸುವುದು ಸಂಸ್ಕೃತಿಯ ದೃಷ್ಟಿಯಿಂದ ಬಹಳ ಮಹತ್ವವಾದದ್ದು. ಬೆಟಗೇರಿಯವರು ''ಜಯಂತಿ'ಯ ಮೂಲಕವಾಗಿ ಅನೇಕರು ಬೆಳೆಯಲಿಕ್ಕೆ ಅವಕಾಶ ಮಾಡಿಕೊಟ್ಟರು. ಇನ್ನೊಬ್ಬರನ್ನು ಬೆಳೆಸುವವರು ತಾವೂ ಬೆಳೆಯುತ್ತಾರೆ. ಆನಂದಕಂದರು ದೊಡ್ಡ ವ್ಯಕ್ತಿಯಾಗಿ, ದೊಡ್ಡ ಲೇಖಕರಾಗಿ ಬೆಳೆದರು. ಆದ್ದರಿಂದಲೇ ನಾವು ಇವತ್ತಿಗೂ ಅವರನ್ನು ಸ್ಮರಿಸುತ್ತಿದ್ದೇವೆ.

ಕೃಪೆ : 'ಸಾಹಿತ್ಯ ಸಂವಾದ' ೫೬-೫೭, ಅಕ್ಟೊಬರ್ ೨೦೦೦-ಮಾರ್ಚ್ ೨೦೦೧

ಸಾಕ್ಷಿ
ಮುನ್ನುಡಿ

ಗೋಪಾಲಕೃಷ್ಣ ಅಡಿಗ



ತನ್ನತನದ ಅರಿವು ಮನುಷ್ಯತ್ವದ ವಿಶೇಷ ಲಕ್ಷಣ. ಯಾವ ಮನುಷ್ಯನೇ ಆಗಲಿ, ಅವನ ಮನಸ್ಸಿನ ಬೆಳವಣಿಗೆಯ ಮಟ್ಟ ಯಾವುದೇ ಇರಲಿ, ಯೋಚಿಸುತ್ತಿರುವಾಗ, ಮಾತನಾಡುತ್ತಿರುವಾಗ, ಕೆಲಸ ಮಾಡುತ್ತಿರುವಾಗ ತಾನು ಹಾಗೆ ಮಾಡುತ್ತಿರುವೆನೆಂಬ ಪರಿವೆ ಅವನಲ್ಲಿ ಇದ್ದೇ ಇರುತ್ತದೆ. ಮನಸ್ಸಿನ ಒಂದು ಭಾಗ ಕನಸಿನಲ್ಲಿ ಅಥವಾ ಕೆಲಸದಲ್ಲಿ ಮಗ್ನವಾಗಿರುವಾಗ ಅದರ ಯಾವುದೋ ಇನ್ನೊಂದು ಭಾಗ ದೂರ ನಿಂತು ಎಲ್ಲವನ್ನೂ ಗಮನಿಸಲು ಸಮರ್ಥವಾಗುತ್ತದೆ; ಅಲ್ಲದೆ, ನಾವು ತೊಡಗಿರುವ ನಮ್ಮ ಯೋಚನೆ, ಮಾತು ಅಥವಾ ಕೃತಿಗಳನ್ನು ಆ ಆ ಕಾಲದಲ್ಲೇ ತೂಕ ಮಾಡುತ್ತಲೂ ಇರುತ್ತದೆ. ದೇಹವನ್ನು ಬೆಂಬತ್ತಿರುತ್ತದೆ. ಈ 'ಆತ್ಮಸಾಕ್ಷಿ'ಯಿಂದ ಮನುಷ್ಯನಿಗೆ ಬಿಡುಗಡೆ ಇಲ್ಲ. ಇದನ್ನು ಹತ್ತಿಕ್ಕಬಹುದಾದರೂ ನಿಶ್ಶೇಷಗೊಳಿಸಲು ಸಾಧ್ಯವಿಲ್ಲ. ಮನುಷ್ಯತ್ವದ ವಿಶೇಷ ಲಕ್ಷಣವಾದ ಈ ಸಾಕ್ಷಿಪ್ರಜ್ಞೆಯ ಬೆಳವಣಿಗೆಯೇ ಮನುಷ್ಯನ ನಿಜವಾದ ಬೆಳವಣಿಗೆ ಎನ್ನಬಹುದು.

ಇದು ಮನುಷ್ಯತ್ವದ ಲಕ್ಷಣವೇ ಆದರೂ ಎಲ್ಲರಲ್ಲೂ ಇದು ಸಮಾನ ಎಚ್ಚರ, ಶುದ್ಧಿ, ಸಾಮರ್ಥ್ಯಗಳಿಂದ ಕೂಡಿರುವುದಿಲ್ಲ. ಸರಿಯಾದ ಶಿಕ್ಷಣ, ಪರಿಶ್ರಮ, ಅಭ್ಯಾಸಗಳಿಲ್ಲದೆ ಇದು ಕುದುರಿ, ಬೆಳೆದು ಬಿಡುಗಣ್ಣಾಗಿ ನಿಂತಿರಲಾರದು. ಅಪ್ರಬುದ್ಧ ಮನಸ್ಸಿನಲ್ಲಿ ಅರ್ಧ ಮಾತ್ರ

ತೆರೆದಿರುತ್ತದೆ. ಒಳಗೆ ಆಗುವುದನ್ನು ಓರೆಗಣ್ಣಿಂದ ನೋಡುತ್ತದಷ್ಟೆ, ಸ್ಪಷ್ಟವಾಗಿ, ನಿಷ್ಪೃಷ್ಟವಾಗಿ, ನಿಶ್ಚಲವಾಗಿ ಅಲ್ಲ. ಅನೇಕ ಸಲ ಹಾಗೆ ನೋಡುತ್ತಿರುವಾಗಲೂ ತೀರ್ಮಾನ ಕೊಡುವಷ್ಟು ಸಮರ್ಥವಾಗಿರುವುದಿಲ್ಲ. ಈ ಒಳ ಅರಿವಿಗೆ ಅಂಗಸಾಧನೆ ಮಾಡಿಸಿ ಚೇತನ ತುಂಬಿ ಅದರ ಕಣ್ಣು ಸದಾ ತೆರೆದಿರುವ ಹಾಗೂ ಮನಸ್ಸಿನ ಪ್ರತಿಯೊಂದು ಅಲೆಸುಳಿಗಳನ್ನು ಸೂಕ್ಷ್ಮವಾಗಿ ಗಮನಿಸಿ ಗುರುತಿಸಿಕೊಳ್ಳುವ ಹಾಗೂ ಮಾಡುವುದು ಶಿಕ್ಷಣದ ಮೊದಲನೆಯ ಕೆಲಸ. ತಾನು ಗಮನಿಸಿದ ವಿಚಾರ ಮತ್ತು ಆಚಾರಗಳನ್ನು ವಿವೇಚಿಸಿ ತಾರತಮ್ಯಜ್ಞಾನ ಪಡೆದು, ಇದು ಸರಿ, ಇದು ತಪ್ಪು; ಇದು ನ್ಯಾಯ, ಇದು ಅನ್ಯಾಯ; ಇದು ಚೆನ್ನ, ಇದು ಚೆನ್ನಲ್ಲ ಎಂದು ತೀರ್ಪುಗೊಡುವ ಸಾಮರ್ಥ್ಯ ಅದಕ್ಕೆ ಬರುವ ಹಾಗೆ ಮಾಡುವುದು ಎರಡನೆಯ ಕೆಲಸ. ಈ ಎರಡೂ ಕೆಲಸ ಎಲ್ಲಿ ಸರಿಯಾಗಿ ನಡೆಯಬಲ್ಲುದೋ ಅಲ್ಲಿ ಮನುಷ್ಯತ್ವದ ಸಂಪೂರ್ಣ ವಿಕಾಸಕ್ಕೆ ಅವಕಾಶವುಂಟು.

ಈ ಸದಸದ್ವಿವೇಕಬುದ್ಧಿಗೆ ಮಂಕು ಕವಿಯುವ ಹಾಗೆ ಮಾಡುವಂಥದು ಅಹಂಕಾರಜನ್ಯವಾದ ಬಹುಮುಖವಾದ ರಜ; ಭಾವ, ರಾಗ, ದ್ವೇಷ, ಸ್ವಾರ್ಥ; ತನ್ನದು, ತನ್ನವರದ್ದು ಎಂಬ ಮೋಹದ ಧೂಳು. ಮನಸ್ಸಿನ ಕನ್ನಡಿಯ ಮೇಲೆ ಈ ಧೂಳನ್ನು ಹೀಗೆ ಕವಿಯ ಬಿಟ್ಟರೆ ಕ್ರಮೇಣ ಅಲ್ಲಿ ನಮ್ಮ ಮುಖವೇ ನಮಗೆ ಸರಿಯಾಗಿ ಕಾಣಿಸುವುದಿಲ್ಲ; ಅಷ್ಟು ಮಾತ್ರವಲ್ಲ, ಅಲ್ಲಿ ಇನ್ನೊಂದು ಮುಖವೂ ಕಾಣಿಸಬಹುದು; ನಮ್ಮ ಬಗ್ಗೆ ನಮಗಿರುವ ಅಭಿಮಾನ ರೂಪುಗೊಳಿಸುವ ಕಲ್ಪನಾ ಚಿತ್ರ. ತಪ್ಪು ಮಾಡಿದ್ದು ನೀನೇ ಎಂದು ಸಾಕ್ಷಿ ನುಡಿಯುತ್ತಿದ್ದರೂ ನಮ್ಮ ಕೃತಿಯನ್ನು ಸಮರ್ಥನೆ ಮಾಡಿಕೊಳ್ಳಲು ನಾವು ತೊಡಗುವ ಅಪಹಾಸ್ಯವನ್ನು ಇಲ್ಲಿ ಗಮನಿಸಬಹುದು. ಎಷ್ಟೇ ತೊಳೆದರೂ ಈ ಸದಸದ್ವಿವೇಕಬುದ್ಧಿ ಸದಾ ಶುದ್ಧವಾಗಿ ಉಳಿಯುವುದು ಕಷ್ಟ ಎಂಬುದು ನಿಜ. ಏಕೆಂದರೆ ಮನುಷ್ಯ ಕೊನೆಗೂ ಭಾವನಾವಶ; ರಾಗದ್ವೇಷದಿಂದ ಸಂಪೂರ್ಣ ಮುಕ್ತಿ ಸಾಧಾರಣವಾಗಿ ದುಃಸಾಧ್ಯ. ಆದರೂ ಆ ಬಗ್ಗೆ ನಿರಂತರವಾಗಿ ಯತ್ನಿಸುತ್ತಿರುವುದೇ ಬುದ್ಧಿಯನ್ನುಪಯೋಗಿಸಿ ಕೆಲಸ ಮಾಡುವವರ ಕರ್ತವ್ಯ. ಈ ಯತ್ನದಲ್ಲಿ ಎಷ್ಟೆಷ್ಟು ಯಶಸ್ಸು ಸಿಕ್ಕುವುದೋ ಅಷ್ಟಷ್ಟು ಸಂಸ್ಕೃತಿಯ ಅಭಿವೃದ್ಧಿ ಸಾಧ್ಯ.

ಇನ್ನೊಬ್ಬರ ಮಾತುಕೃತಿಗಳನ್ನು ಎಷ್ಟು ಸಮರ್ಪಕವಾಗಿ ನಾವು ವಿವೇಚಿಸಬಲ್ಲೆವೋ ಅಷ್ಟೇ ಸಮರ್ಪಕವಾಗಿ ನಮ್ಮ ಮಾತುಕೃತಿಗಳನ್ನೇ ನಾವು ವಿವೇಚಿಸುವುದು ಸುಲಭವಲ್ಲ. ಇನ್ನೊಬ್ಬರ ಎನ್ನುವಾಗಲೂ ಆ ಇನ್ನೊಬ್ಬರು ಯಾರು ಎನ್ನುವ ಮಮಕಾರ ಅಡ್ಡ ಬರುತ್ತದೆ. ನಮ್ಮ ಅಹಂಕಾರ ವಿಸ್ತಾರವಾಗಿ ನನ್ನ ಮಗ, ಬಂಧು, ಜಾತಿ, ಪಕ್ಷ, ದೇಶ, ಕೊನೆಗೆ ಮನುಷ್ಯಲೋಕ-ಇವುಗಳವರೆಗೂ ಅದು ಹಬ್ಬಬಲ್ಲುದು. ಅಂಥ ಅಹಂಕಾರ ಕವಿದಾಗ ಸತ್ಯ ಅಥವಾ ನಿಜಸ್ಥಿತಿಗಿಂತ ನಮ್ಮ ರಾಗದ್ವೇಷಗಳಿಗೇ ಹೆಚ್ಚು ಪ್ರಾಧಾನ್ಯ ಬರುತ್ತದೆ. ವ್ಯಕ್ತಿಯನ್ನು ಮರೆತು ವಸ್ತುವನ್ನೇ ಗಮನಿಸುವುದಕ್ಕೆ ಮೊದಲ ಹೆಜ್ಜೆ ತನ್ನ ಮಾತುಕೃತಿಗಳನ್ನೇ ಅವುಗಳಿಂದ ದೂರವಾಗಿ ನಿಂತು ಗಮನಿಸಿ ವಿವೇಚಿಸುವ ಸಾಕ್ಷಿಪ್ರಜ್ಞೆಯನ್ನು ಎಚ್ಚರಿಸುವ ಕೆಲಸ. ಆ ಮೇಲೆ ತನಗಿಂತ ಭಿನ್ನವಾದದ್ದನ್ನೂ ಸರಿಯಾಗಿ ತಿಳಿದು ತೂಗುವ ಕೆಲಸ ಸಾಧ್ಯವಾಗಬಹುದು.

ಇನ್ನೊಬ್ಬರದ್ದು ಎಂದು ಯಾವುದನ್ನು ಕರಾರುವಾಕ್ಕಾಗಿ ನಿರ್ಧರಿಸುತ್ತೇವೋ ಅದನ್ನೇ ಆದರೂ ಸಮರ್ಪಕವಾಗಿ ಎಲ್ಲರೂ ವಿವೇಚಿಸಬಲ್ಲರೇ ಎಂಬುದು ಮುಖ್ಯ ಪ್ರಶ್ನೆ. ಮೊದಲನೆಯದಾಗಿ, ಗಮನಿಸುವ ಶಕ್ತಿ ಹಲವರಲ್ಲಿ ಬಹಳ ದುರ್ಬಲವಾಗಿರುತ್ತದೆ. ಆಡಿದ್ದನ್ನಾಗಲೀ, ಮಾಡಿದ್ದನ್ನಾಗಲೀ ಆಮೂಲಾಗ್ರವಾಗಿ ಗಮನಿಸದೆ ಅದರ ವಿವೇಚನೆ ಸಾಧ್ಯವಿಲ್ಲ. ಒಂದು ವೇಳೆ ಹಾಗೆ ಗಮನಿಸಿಯೂ ಕೂಡಾ ಒಂದು ಕೃತಿಯ ವಿವಿಧಾಂಗಗಳನ್ನು ಒಂದುಗೂಡಿಸುವ ಅಂತಃಸೂತ್ರ ಹೊಳೆಯದೆ ಹೋಗಿ ಅಖಂಡವಾದ ಅರಿವೂ ವಿವೇಚನೆಯೂ ಸಾಧ್ಯವಾಗದೆ ಹೋಗಬಹುದು. ಆದ ಕಾರಣ ಇಡಿಯಾಗಿ ನೋಡಬಲ್ಲ ಪ್ರತಿಭೆಯೂ ಅಗತ್ಯ. ಅಲ್ಲದೆ ತಪ್ಪು, ಸರಿ, ಉತ್ತಮ, ಸಾಧಾರಣ, ಅಧಮ ಎಂಬ ತಾರತಮ್ಯ ವಿವೇಕ ಸಿದ್ಧಿಗೆ ಮೌಲ್ಯಗಳ ದೃಢವಾದ ಕಲ್ಪನೆಯೂ ಅವಶ್ಯ. ಆದರೆ ಈ ಕಲ್ಪನೆ ಎಲ್ಲ ಕಾಲಕ್ಕೂ ಸಲ್ಲುವಂಥ ಕೇವಲವೋ ಅಥವಾ

ಕಾಲದೇಶಾವಲಂಬಿಯಾದ ಸಾಪೇಕ್ಷವೋ ಎಂಬ ಸಮಸ್ಯೆಯೂ ತಪ್ಪಿದ್ದಲ್ಲ. ಅದು ಹೇಗೇ ಇರಲಿ. ಪ್ರತಿಯೊಂದು ಕಾಲದಲ್ಲೂ ಪ್ರತಿಯೊಬ್ಬ ವ್ಯಕ್ತಿಗೂ ಸರಿ-ತಪ್ಪು, ನ್ಯಾಯ-ಅನ್ಯಾಯಗಳ ಒಂದಲ್ಲ ಒಂದು ರೀತಿಯ ನಿರ್ದಿಷ್ಟ ಕಲ್ಪನೆ ಇದ್ದೇ ಇರುತ್ತದೆ. ಅಲ್ಲದೆ ಆ ಕಲ್ಪನೆಗಳನ್ನು ಸಿದ್ಧಾಂತಗಳೋ ಎಂಬಂತೆ ದಿನನಿತ್ಯದ ಜೀವನದಲ್ಲಿ ಬಳಸುತ್ತಲೂ ಇರುತ್ತೇವೆ; ಒಂದಲ್ಲ ಒಂದು ರೀತಿಯ ತೀರ್ಮಾನಗಳನ್ನು ವ್ಯಕ್ತಿ ಕೃತಿ ಮಾತುಗಳ ಮೇಲೆ ರೂಪಿಸುತ್ತಲೂ ವ್ಯಕ್ತಪಡಿಸುತ್ತಲೂ ಇರುತ್ತೇವೆ. ನಮ್ಮ ತೀರ್ಪು ಸರಿ ಇರಬಹುದು, ಇಲ್ಲದಿರಬಹುದು- ಆ ಮಾತು ಬೇರೆ. ಆದರೆ ನಾವು ಕೊಡುವ ನಿರ್ಣಯ ಸರಿಯಾಗಿಯೇ ಇರಬೇಕಾದ್ದೂ, ಸರಿಯಾದ ನಿರ್ಣಯ ವ್ಯಕ್ತವಾದಾಗ ಅದು ಸರಿಯೆಂದು ಅರಿತು ಅದನ್ನು ಮನ್ನಿಸಬೇಕಾದ್ದೂ ವ್ಯಕ್ತಿ ಮತ್ತು ಸಮಾಜದ ಅಂತರಂಗದ ಆರೋಗ್ಯಕ್ಕೆ ಅತ್ಯಗತ್ಯ.

ಬಹುಜನಕ್ಕೆ ಸತ್ಯಾಸತ್ಯ ನ್ಯಾಯಾನ್ಯಾಯ ವಿವೇಕಕ್ಕೆ ಬೇಕಾದ ಬುದ್ಧಿ ಸಂಸ್ಕಾರ, ಸತ್ಯನಿಷ್ಠೆ, ತಾಳ್ಮೆ ಇರುವುದಿಲ್ಲ. ಆದರೆ ಪ್ರತಿಯೊಂದು ಕಾಲದಲ್ಲೂ ಸತ್ಯವೊಂದನ್ನೇ ಗಮ್ಯವಾಗಿಟ್ಟುಕೊಂಡು, ಎಲ್ಲ ಮೋಹಗಳನ್ನೂ ಬದಿಗೊತ್ತಿ, ಶುದ್ಧ ಮನಸ್ಸಿನಿಂದ ಸತ್ಯಾನ್ವೇಷಣೆ ಮಾಡುವವರು ಕೆಲವರಾದರೂ ಇದ್ದೇ ಇರುತ್ತಾರೆ. ಸಮಾಜ ನಿಜವಾಗಿ ಅಭಿವೃದ್ಧಿ ಹೊಂದುವುದೆಂದರೆ ಅಂಥವರ ಸಂಖ್ಯೆ ಹೆಚ್ಚುವುದು, ಅಂಥವರ ಕೆಲಸ ನಿರಾತಂಕವಾಗಿ ನಡೆಯಲು ತಕ್ಕ ವಾತಾವರಣ ರೂಪುಗೊಳ್ಳುವುದು ಎನ್ನಬಹುದು. ಅಂಥವರ ಸಂಖ್ಯೆ ಅತ್ಯಲ್ಪ, ಅವರು ಅಲ್ಲೊಬ್ಬ ಇಲ್ಲೊಬ್ಬ ಹೀಗೆ ಆಗಾಗ್ಗ ಕಾಣಿಸಿಕೊಳ್ಳುತ್ತಾರಾದ್ದರಿಂದ ಸ್ವಾತಂತ್ರ್ಯ ಮತ್ತು ಸಹಿಷ್ಣುತೆಯ ವಾತಾವರಣ ಅವರ ಕೆಲಸಕ್ಕೆ ಅತ್ಯಗತ್ಯ. ಅಂಥವರ-ಕೆಲಸ ತುಂಬ ಕಠಿನವಾಗುತ್ತ ಬರುತ್ತಿರುವ ಕಾಲದಲ್ಲಿ ನಾವು ಈಗ ಬದುಕುತ್ತಿದ್ದೇವೆ. ಜಾತಿ, ರಾಜಕೀಯ ಸಿದ್ಧಾಂತಗಳ ಬೀದಿ ಕೂಗುಗಳು; ವಿಚಾರ, ವಿಮರ್ಶೆ ಇಲ್ಲದೆ ಭಾವಾವೇಶಕ್ಕೆ ಹೆಚ್ಚು ಮನ್ನಣೆ ಕೊಡುವ ವಾತಾವರಣ; ಎಲ್ಲಕ್ಕಿಂತ ಹೆಚ್ಚಾಗಿ ಪುರಾತನ ಜೀವನಮೌಲ್ಯಗಳ ಕಟ್ಟು ಸಡಲಿ ಅವುಗಳ ಸ್ಥಾನದಲ್ಲಿ ಅನಿರ್ಬಂಧವಾದ ಧನಕನಕವಸ್ತುವಾಹನಗಳ ಆಶೆಯೇ ಆದರ್ಶವಾಗುತ್ತಿರುವ ಈ ಕಾಲದಲ್ಲಿ ಬುದ್ಧಿಯ ಮೂಲಕ ಕೆಲಸಮಾಡುವವರ ಜವಾಬ್ದಾರಿ ಹೆಚ್ಚುತ್ತದಲ್ಲದೆ ಅವರ ಕೆಲಸವೂ ವರ್ಷವರ್ಷಕ್ಕೆ ಹೆಚ್ಚು ಹೆಚ್ಚು ದುಃಸಾಧ್ಯವಾಗುತ್ತ ಹೋಗುತ್ತಿದೆ. ಬುದ್ಧಿಜೀವನಕ್ಕೆ ಮಾರಕವಾದ ಇಂಥ ವಾತಾವರಣದ ವಿರುದ್ಧ ಹೋರಾಡಿ ಶುದ್ಧಬುದ್ಧಿಯ ಅನಿರ್ಬಂಧ ಪ್ರಕಾಶಕ್ಕೆ ಎಡೆಮಾಡಿಕೊಡುವುದು ಮನುಷ್ಯನ ಅಂತರಂಗ ಜೀವನದ ಶ್ರೇಯಸ್ಸನ್ನು ಬಯಸುವವರೆಲ್ಲರ ಕರ್ತವ್ಯಕರ್ಮವಾಗಿದೆ.

ಇದು ಒಟ್ಟು ಅಂತರಂಗ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಯಾದುದರಿಂದ ಇದು ಸಾಹಿತ್ಯಕ್ಕೂ ಸಂಬಂಧಿಸಿದ ಪ್ರಶ್ನೆ-ಸಾಹಿತ್ಯ ಮಾನವನ ಸಮಗ್ರಜೀವನದ ವಿಶಿಷ್ಟವೂ ಮಹತ್ವದ್ದೂ ಆದ ಅಂಗವಾಗಿರುವುದರಿಂದ. ಸಾಹಿತ್ಯದಲ್ಲಿ ಕೆಲಸ ಮಾಡುವವರೆಲ್ಲರೂ ಉತ್ತಮವರ್ಗದ ಮನುಷ್ಯರೆಂದಾಗಲೀ, ಅವರೆಲ್ಲರಲ್ಲೂ ಈ ಸಾಕ್ಷಿಪ್ರಜ್ಞೆ ಜಾಗ್ರತವಾಗಿರುವುದೆಂದಾಗಲೀ ಅಲ್ಲ. ಉತ್ತಮ ಎನ್ನಿಸಬಹುದಾದ ಸಾಹಿತಿಯು ಒಳಗಣ್ಣು ಉಳಿದವರ ಬಗ್ಗೆ ಹೇಗೋ ಹಾಗೆ ತನ್ನ ಬಗ್ಗೆಯೂ ಕುರುಡಾಗಿರುವುದು ಅಸಂಭವವಲ್ಲ. ಅಂಥ ಅನೇಕ ಉದಾಹರಣೆಗಳೂ ಉಂಟು. ಅತ್ಯುತ್ತಮ ಕವಿ ಅಥವಾ ಸಾಹಿತಿಯಲ್ಲಿ ಈ ಸಾಕ್ಷಿಪ್ರಜ್ಞೆ ಕೃತಿರಚನಾಕಾಲದಲ್ಲಿ ಜಾಜ್ವಲ್ಯಮಾನವಾಗಿರುತ್ತದೆ ಎಂಬ ಮಾತು ಮಾತ್ರ ನಿಜ. ಅಂಥವನು ಸಾಹಿತ್ಯರಚನೆಯಲ್ಲಿ ತೊಡಗಿರುವಾಗಲೇ ಅವನ ಮನಸ್ಸಿನ ಸಾಕ್ಷಿತ್ವ ಶಕ್ತಿಯುಳ್ಳ ಈ ಅಂಗ ಜಾಗ್ರತವಾಗಿದ್ದು ಅವನ ಕೆಲಸವನ್ನು ಗಮನಿಸುತ್ತದೆ; ಬಳಸುವ ಪ್ರತಿಯೊಂದು ಮಾತು, ಉಪಮೆ, ಪ್ರತಿಮೆಗಳನ್ನು ತೂಗಿ ತೂಗಿ ಬಡಿಬಡಿದು, ಒರೆಗಿಟ್ಟು ನೋಡಿ ಅವುಗಳ ಔಚಿತ್ಯವನ್ನು ನಿರ್ಧರಿಸುತ್ತಿರುತ್ತದೆ. ಇಂತಲ್ಲದೆ ಉತ್ತಮ ಕಾವ್ಯರಚನೆಯಾಗಲೀ, ಕೃತಿಶಕ್ತಿಯ ಅಭಿವೃದ್ಧಿಯಾಗಲೀ ಸಾಧ್ಯವಾಗದು. ಆದ ಕಾರಣವೇ ಅತ್ಯುತ್ತಮ ಕವಿ ಅತ್ಯುತ್ತಮ ವಿಮರ್ಶಕನೂ ಆಗಿರುತ್ತಾನೆಂಬ ಮಾತು ಅಂಗೀಕಾರಕ್ಕೆ ಅರ್ಹ ಎಂದು ತೋರುತ್ತದೆ. ಅಂಥ ಕವಿ ವಿಮರ್ಶೆ ಮಾಡುತ್ತಾನೋ ಇಲ್ಲವೋ-ಅಂತೂ ಉತ್ತಮ ವಿಮರ್ಶಕನ ದೃಷ್ಟಿಯನ್ನು ತನ್ನ ಕಾವ್ಯದ ಮೇಲಾದರೂ ಹರಿಸಿಯೇ ಇರುತ್ತಾನೆ

ಎನ್ನಬಹುದು. ಎಂದರೆ ಕೃತಿ ಮತ್ತು ವಿಮರ್ಶೆ ಭಿನ್ನ ಭಿನ್ನ, ಅಥವಾ ಒಂದಾದ ಮೇಲೊಂದು ಎನ್ನುವ ಹಾಗೆ ನಡೆಯುವಂಥವು ಅಲ್ಲ, ಏಕಕಾಲಕ್ಕೆ ನಡೆಯುವಂಥ ಕೆಲಸ ಎಂಬ ಮಾತು ಮಹತ್ವದ್ದು. ಅಥವಾ ವಿಮರ್ಶಕ ಸಾಕ್ಷಿಪ್ರಜ್ಞೆ ಸೃಷ್ಟಿಕರ್ಮದ ಅವಿಭಾಜ್ಯ ಅಂಶ ಎಂಬುದು ಮುಖ್ಯವಾದ ವಿಚಾರ.

ಆದರೆ, ನಮಗೆ ಮುಖ್ಯವಾದ ವಿಷಯ ಸಾಹಿತಿ ಕೃತಿರಚನೆಯಲ್ಲಿ ಬಳಸುವ ವಿಮರ್ಶದೃಷ್ಟಿಯಲ್ಲ, ಅವನ ಕೃತಿಯ ವಿಮರ್ಶನ ಕಾರ್ಯ. ಈ ದೃಷ್ಟಿಯಲ್ಲಿ ವಿಮರ್ಶೆ ಜನ್ಯ ಎನ್ನುವುದು ನಿಜ. ಕೃತಿಕಾರನಿಗೆ ತನ್ನ ಅನುಭವಕ್ಕೆ ರೂಪುಕೊಡುವಾಗ ನೆರವಾಗುವ ಈ ಶಕ್ತಿ ಸಹೃದಯನಿಗೆ ಆತನ ಕೃತಿಯನ್ನು ಓದುವಾಗ ನೆರವಾಗುವಂಥದು. ಸಾಹಿತ್ಯ ಕೃತಿಗಳ ಮೇಲೆ ವಿಮರ್ಶೆ ಅವಲಂಬಿಸಿಕೊಂಡಿರುತ್ತದೆ ಎಂಬ ಮಾತು ನಿರ್ವಿವಾದವಾಗಿ ಕಂಡೀತು. ಆದರೆ ಎಷ್ಟೋ ವಿಮರ್ಶೆಗಳನ್ನು ಓದುವಾಗ ಅದಕ್ಕೂ ಅದು ಯಾವುದನ್ನು ವಿಮರ್ಶೆ ಮಾಡಲು ಹೊರಟಿರುವುದೋ ಅದಕ್ಕೂ ಯಾವ ಸಂಬಂಧವೂ ಕಂಡುಬರುವುದಿಲ್ಲ. ವಿಮರ್ಶಕನ ಬುದ್ಧಿ ಪಾಂಡಿತ್ಯ, ಸಾಹಿತ್ಯ ಶಾಸ್ತ್ರ ಪರಿಜ್ಞಾನ, ನೈತಿಕ ವಿವೇಕ-ಇವುಗಳ ಪ್ರದರ್ಶನಕ್ಕೆ ಮೂಲಕೃತಿ ಕೇವಲ ಒಂದು ನೆಪವಾಗುತ್ತದೆ-ಎಷ್ಟೋ ಸಲ. ವಿಮರ್ಶಕ ಬಹುಶ್ರುತನಾಗಿಯೂ ಉತ್ತಮ ವಿಮರ್ಶೆಗೆ ಅಸಮರ್ಥನಾದಾನು ಎಂಬುದಕ್ಕೆ ಅನೇಕ ನಿದರ್ಶನಗಳುಂಟು. ಇದಕ್ಕೆ ಮುಖ್ಯವಾದ ಕಾರಣ, ವಿಮರ್ಶೆಗೆ ಕೃತಿಯೇ ಏಕಮಾತ್ರವಾದ ಮೂಲ ಎನ್ನುವುದನ್ನು ಮರೆಯುವುದು. ವಿಮರ್ಶನದ ಮೊದಲನೆಯ ಕೆಲಸ ಕೃತಿಯ ಆಮೂಲಾಗ್ರವಾದ ಅಭ್ಯಾಸ; ಆ ಅಭ್ಯಾಸಕ್ಕೆ ತಕ್ಕ ಊಹಾಶಕ್ತಿ, ಭಾಷಾಜ್ಞಾನ, ವಿನಯ ಮತ್ತು ತಾಳ್ಮೆ ಅತ್ಯಗತ್ಯ. ಕೃತಿಯನ್ನು ಆಳವಾಗಿ ಅಭ್ಯಾಸ ಮಾಡಿ ಅದರ ಮರ್ಮ ಮರ್ಮವನ್ನೂ ಅರಿತು ಅದರಿಂದ ಬರಬಹುದಾದ ಮನಃಸಂಸ್ಕಾರ ಪಡೆಯುವುದು ಪ್ರಥಮ ಹಾಗೂ ಸರ್ವೋತ್ತಮವಾದ ಕೆಲಸ. ಈ ಕೆಲಸ ಸರಿಯಾಗಿ ನಡೆಯಬೇಕಾದರೆ ಕೃತಿ ಒಂದು ಸ್ವತಂತ್ರ ವಸ್ತು ಎಂಬ ಅರಿವೂ ಬರೆದವನೊಡನೆ ತನಗಿರಬಹುದಾದ ಭಾವಾತ್ಮಕ, ಬೌದ್ಧಿಕ, ಸಾಂಘಿಕ ಅಥವಾ ರಾಜಕೀಯ ಸಂಬಂಧಗಳಿಂದ ಸಂಪೂರ್ಣ ವಿಮುಕ್ತಿಯೂ ಅವಶ್ಯ. ಅದರೊಂದಿಗೇ ಯಾವುದು ಉತ್ತಮ, ಸಾಮಾನ್ಯ ಅಥವಾ ಅಧಮ ಎಂಬ ತಾರತಮ್ಯ ಜ್ಞಾನವುಳ್ಳ ಸುಸಂಸ್ಕೃತ ಅಭಿರುಚಿಯೂ ಅಗತ್ಯ. ಈ ಎಲ್ಲದಕ್ಕೂ ತಳಹದಿಯಾಗಿ, ಕಾವ್ಯಕ್ಕೆ ಸಹಜವಾದ ಅರ್ಥ ಹೊಳೆಯಲು ಬೇಕಾದ ಪ್ರತಿಭೆ ಉತ್ತಮ ವಿಮರ್ಶೆಯ ಮೂಲ ಬಲ. ಈ ವಿಮರ್ಶನ ಪ್ರತಿಭೆಗೆ ಸರಿಯಾದ ಅರ್ಥ ಹೊಳೆದ ಮೇಲೇ ಸಾಕ್ಷಿಪ್ರಜ್ಞೆಯಿಂದ ನಡೆಯುವ ಮುಂದಿನ ಕೆಲಸ. ಇಷ್ಟಕ್ಕೆ ನಮ್ಮ ಕೆಲಸ ನಿಲ್ಲಬಹುದು. ಓದಿದರೆ ಸಾಲದೇ? ವಿಮರ್ಶೆ ಏಕೆ? ಎನ್ನುವವರೂ ಉಂಟು.

ಆದರೆ ಕೆಲವರಿಗೆ ತಾನು ಕಂಡ ಸತ್ಯವನ್ನು, ತಾನು ಹೊಂದಿದ ಅರ್ಥಪೂರ್ಣ ಅನುಭವವನ್ನು ತನ್ನಲ್ಲೇ ಇಟ್ಟುಕೊಳ್ಳುವುದು ಸಾಧ್ಯವಾಗುವುದಿಲ್ಲ. ಇದು ವಿಮರ್ಶಕನಿಗೆ ಹೇಗೋ ಹಾಗೆ ವಿಜ್ಞಾನಿ ತತ್ತ್ವಜ್ಞಾನಿ ಮುಂತಾದ ಎಲ್ಲ ಚಿಂತಕರಿಗೂ ಸಹಜವಾದ ಧರ್ಮ. ಇಂಥ ಜನರಲ್ಲಿ ಅಂಥ ಬುದ್ಧಿಯಿದ್ದುದರಿಂದಲೇ ಜ್ಞಾನವಿಜ್ಞಾನಗಳಲ್ಲಿ ಅಪಾರವಾದ ಬೆಳವಣಿಗೆ ಆಗುವುದು ಸಾಧ್ಯವಾಯಿತು. ಕವಿ ಕಾವ್ಯರಚನೆ ಮಾಡುವುದೂ ಇದೇ ಬಗೆಯ ಕೆಲಸ. ಇಂಥ ಕ್ರಿಯೆಗಳು ನಮ್ಮ ಮನಸ್ಸಿನ ಅಂಗವೇ ಆದ ಸಮಾಜಬುದ್ಧಿಯ ದ್ಯೋತಕ. ಅಂಥ ಸಮಾಜಬುದ್ಧಿಯುಳ್ಳ ಚಿಂತಕ ವಿಮರ್ಶಕನಾಗಬಹುದು. ಅಂಥವನು ವಿಮರ್ಶೆ ನಡಸುವಾಗ ಮೊದಲು ಕೃತಿಯೊಂದನ್ನು ಕೇವಲ ಸಾಹಿತ್ಯವೆಂದೇ ಅಭ್ಯಾಸ ಮಾಡುತ್ತಾನೆ, ಹಾಗೇ ತೂಗುತ್ತಾನೆ. ಕೃತಿ ತನ್ನ ಕರಗತವಾದ ಮೇಲೆ ಅದೂ ಕೂಡಾ ಜೀವನದ ಅನೇಕ ಕೃತಿ ವಿದ್ಯಮಾನಗಳಲ್ಲಿ ಒಂದು ಎಂಬುದನ್ನು ಗಮನಿಸಿ ಅದರ ಬೆಲೆ ಕಟ್ಟುತ್ತಾನೆ. ಈ ರೀತಿಯ ವಿಮರ್ಶೆ ಲೇಖಕನಿಗೆ ಹೇಗೋ ಹಾಗೆ ಸಮಾಜಕ್ಕೂ ಲಾಭದಾಯಕ.

ಆದರೆ ಒಂದು ಕೃತಿಯ ಅರ್ಥ, ಅದು ಗದ್ಯವೇ ಇರಲಿ ಪದ್ಯವೇ ಇರಲಿ, ಗೊತ್ತಾಗುವುದು ತರ್ಕನಿಷ್ಠ ಬುದ್ಧಿಯ ಕೆಲಸದಿಂದಲ್ಲ, ಹೊಳೆಯುವುದರ ಮೂಲಕ. 'ಹೊಳೆಯುವುದು' ಎಂಬ ಈ ಶಬ್ದ ಮುಖ್ಯ. ಎಲ್ಲರಿಗೆ ಎಲ್ಲವೂ ಹೊಳೆಯುವುದಿಲ್ಲ. ಕೆಲವರಿಗೆ ಏನೂ ಹೊಳೆಯುವುದಿಲ್ಲ. ಕೆಲವರಿಗೆ ಕೆಲವು ಸಲ ಕೆಲವು

ಸಂಗತಿಗಳು ಹೊಳೆಯುತ್ತವೆ. ಎಂಥ ಕಾವ್ಯವಿಮರ್ಶನ ನಿಷ್ಣಾತನೇ ಆದರೂ ಅವನಿಗೆ ಎಲ್ಲವೂ ಏಕಕಾಲಕ್ಕೆ ಹೊಳೆಯದೆ ಹೋಗಬಹುದು. ಆದಕಾರಣ ಒಂದು ಉತ್ತಮ ಕೃತಿಯ ನಿಜವಾದ ಅರ್ಥ ಮತ್ತು ಅದರ ನಿಜವಾದ ಬೆಲೆ ತಿಳಿಯಬೇಕಾದರೆ ಅದರ ಮೇಲೆ ಹಲವು ಸುಸಂಸ್ಕೃತ ಮನಸ್ಸುಗಳು ಕೆಲಸ ಮಾಡಬೇಕಾದ್ದು ಅಗತ್ಯ. ಹೀಗೆ ಸಾಹಿತ್ಯಾಭ್ಯಾಸ ಸಹೃದಯರ ಸಹಕಾರದಿಂದಲೇ ನಡೆಯುವಂಥದು. ಆದ್ದರಿಂದ ಸರಿಯಾಗಿ ಅನುಭವಿಸಿ, ಯೋಚಿಸಿ ಕೃತಿನಿಷ್ಠೆಯಿಂದ ಬರೆದ ಪ್ರತಿಯೊಂದು ವಿಮರ್ಶೆಯೂ ಕಾವ್ಯಾಭ್ಯಾಸಕ್ಕೆ ಸಹಾಯಕ.

ಕನ್ನಡದಲ್ಲಿ ಉತ್ತಮ ವಿಮರ್ಶೆ ಬರುತ್ತಿಲ್ಲ, ನಿಜವಾಗಿ ವಿಮರ್ಶಸಾಹಿತ್ಯ ಸರಿಯಾಗಿ ಬೆಳೆಯಲೇ ಇಲ್ಲ, ಇದೊಂದು ದೊಡ್ಡ ಕೊರತೆ ಎಂಬ ಮಾತು ಈಗ್ಗೆ ಅನೇಕ ವರ್ಷಗಳಿಂದ ಕೇಳಿ ಬರುತ್ತಿದೆ. ಈ ಮಾತು ಬಹಳ ಮಟ್ಟಿಗೆ ನಿಜವೂ ಹೌದು. ಇದಕ್ಕೆ ಮುಖ್ಯ ಕಾರಣ ನಮ್ಮಲ್ಲಿ ಉತ್ತಮ ಸಾಹಿತ್ಯ ವಿಮರ್ಶೆಗೆ ಸಮರ್ಥರಾದವರು ಇಲ್ಲ ಎಂಬುದಲ್ಲ, ಅಂಥ ವಿಮರ್ಶೆಗೆ ಬೇಕಾದ ನೈತಿಕ ಧೈರ್ಯ ತಕ್ಕಷ್ಟು ಬೆಳೆಯಲಿಲ್ಲ ಎಂಬುದೇ ಆಗಿದೆ. ಸಾಹಿತಿಗಳ ಸಂಖ್ಯೆ ಕಡಿಮೆಯಾಗಿದ್ದು, ಅವರಲ್ಲಿ ಒಬ್ಬರು ಇನ್ನೊಬ್ಬರಲ್ಲಿ ವೈಯಕ್ತಿಕ ಸಂಬಂಧ ಹೊಂದಿದವರಾಗಿದ್ದು, ವಿಮರ್ಶೆಯಲ್ಲಿ ಅಪ್ರಿಯವಾದ ಒಂದು ಮಾತು ಬಂದರೆ ಸ್ನೇಹಕ್ಕೆ ಸಂಚಕಾರ ಬಂದೀತು ಎಂಬ ಆತಂಕ, ಅಧಿಕಾರಸ್ಥ ಸಾಹಿತಿಗಳ ಕೃತಿಗಳ ಬಗ್ಗೆ ಮನಸ್ಸಿಗೆ ಅನ್ನಿಸಿದ್ದನ್ನೇ ಹೇಳಿದರೆ ಅವರಿಂದ ಬರಬಹುದಾದ ಪ್ರತೀಕಾರದ ಭಯ-ಇವು ಪ್ರಾಮಾಣಿಕವಾದ ವಿಮರ್ಶೆಯ ಬೆಳವಣಿಗೆ ಕುಂಠಿತವಾಗುವಂತೆ ಮಾಡಿದವು. ಆದ ಕಾರಣ ಈವರೆಗಿನ ನಮ್ಮ ವಿಮರ್ಶೆ ಸ್ನೇಹಿತರ ಬಗ್ಗೆ ದಾಕ್ಷಿಣ್ಯ, ದೊಡ್ಡವರ ಬಗ್ಗೆ ಭಯ, ಮೂರನೆಯವರ ಬಗ್ಗೆ ಔದಾಸೀನ್ಯ ಅಥವಾ ನಿಷ್ಕಾರಣ ವಿರೋಧ-ಇವುಗಳಿಂದ ಸಾಮಾನ್ಯವಾಗಿ ಮಲಿನವಾಗಿದೆ. ಎಂದರೆ ವಿಮರ್ಶನ ಕಾರ್ಯ ವ್ಯಕ್ತಿನಿಷ್ಠವಾಗಿತ್ತೇ ಹೊರತು ಕೃತಿನಿಷ್ಠವಾಗಿರಲಿಲ್ಲ, ಸಾಮಾನ್ಯವಾಗಿ ಪರಸ್ಪರ ಪ್ರಶಂಸೆಯಲ್ಲಿ ಅಥವಾ ಕಾವ್ಯಮೀಮಾಂಸೆಯ ಅಮೂರ್ತರೂಪದಲ್ಲಿ ವಿಮರ್ಶಕ ತನ್ನ ಶಕ್ತಿಯನ್ನು ವಿನಿಯೋಗಿಸಿ ಪ್ರಸಿದ್ಧನಾಗಬೇಕಾಗಿತ್ತು. ಇದಕ್ಕೆ ಕೆಲವು ಅಪವಾದಗಳಿದ್ದರೂ ಕೂಡಾ ಒಟ್ಟಿನಲ್ಲಿ ಪ್ರಾಮಾಣಿಕವಾದ ಕೃತಿವಿಮರ್ಶೆಗೆ ತಕ್ಕ ವಾತಾವರಣ ನಮ್ಮಲ್ಲಿ ಸಿದ್ಧವಾಗದೆ ಹೋಯಿತು. ಇದರಿಂದ ಉತ್ತಮ ಸಾಹಿತ್ಯರಚನೆಗೆ ಹೇಗೋ ಹಾಗೆಯೇ ಉತ್ತಮವಾದ ಸಾಮಾಜಿಕ ವೈಯಕ್ತಿಕ ಸಂಬಂಧಗಳಿಗೂ, ಉತ್ತಮ ವಿಚಾರ, ವಾಗ್ವಾದ, ಚರ್ಚೆ ಮುಂತಾದ ಬುದ್ಧಿಯ ಕೆಲಸಗಳಿಗೂ ತಕ್ಕ ಅವಕಾಶ ಸಿಗದೇ ಹೋಯಿತು. ಏಕೆಂದರೆ, ವಸ್ತುನಿಷ್ಠ ಯೋಚನೆ ವ್ಯವಹಾರಗಳಿಲ್ಲದೆ, ಕೃತಿನಿಷ್ಠ ವಾಚನ ವಿಮರ್ಶನಗಳಿಲ್ಲದೆ ಬುದ್ಧಿ ಜೀವನ ವಿಕಾಸವಾಗುವುದಿಲ್ಲ, ಹೃದಯ ಶುದ್ಧವಾಗುವುದಿಲ್ಲ; ಬದಲಾಗಿ, ಬುದ್ಧಿ ದಾರಿದ್ರ್ಯ, ಹೃದಯ ಕಾರ್ಪಣ್ಯ-ಇವು ಹಬ್ಬುತ್ತವೆ.

ಆದ ಕಾರಣ ಕೃತಿನಿಷ್ಠ ವಿಮರ್ಶೆಗೂ ವಸ್ತುನಿಷ್ಠ ವಿಚಾರಕ್ಕೂ ಒಂದು ವೇದಿಕೆಯಾಗುವ ಹಾಗೆ 'ಸಾಕ್ಷಿ' ಎಂಬ ಪತ್ರಿಕೆಯೊಂದನ್ನು ಸಂಪಾದಿಸಿ, ಪ್ರಕಟಿಸಬೇಕೆಂಬ ಹಂಬಲ ನಮ್ಮಲ್ಲಿ ಅನೇಕರನ್ನು ಹಲವಾರು ವರ್ಷಗಳಿಂದ ಕಾಡುತ್ತ ಬಂದಿದೆ. ಈ ಕೆಲಸಕ್ಕೆ ಮುಖ್ಯವಾದ ಆತಂಕಗಳು ಎರಡು : ಪತ್ರಿಕೆಯನ್ನು ಹೊರಡಿಸಿ ನಡಸಿಕೊಂಡು ಬರಲು ತಕ್ಕ ಅರ್ಥಾನುಕೂಲದ ಮತ್ತು ಜನಪ್ರಿಯವಾಗಲಾರದ ಈ ಸಾಹಸದಿಂದ ಬರುವ ಅರ್ಥನಷ್ಟವನ್ನು ಭರಿಸುವ ಶಕ್ತಿಯ ಅಭಾವ; ಅದಕ್ಕಿಂತ ಹೆಚ್ಚಾಗಿ ಚೆನ್ನಾಗಿ ಯೋಚಿಸಿ, ಹೊಣೆಗಾರಿಕೆಯೊಡನೆ ತಕ್ಕ ಕಾಲಕ್ಕೆ ಉತ್ತಮ ಲೇಖನಗಳನ್ನು ಬರೆದು ಕೊಡಬಲ್ಲ ಲೇಖಕರ ಸಹಕಾರದ ಅಗತ್ಯ. ಇಂದು ಪ್ರಥಮ ಸಂಚಿಕೆ ಪ್ರಕಟವಾಗುತ್ತಿರುವಾಗಲೂ ಈ ಎರಡು ಆತಂಕಗಳ ಪರಿಹಾರ ಆಗಿದೆ ಎಂತಲ್ಲ. ಅವುಗಳಿದ್ದರೂ ಕೂಡಾ ಇದನ್ನು ಕರ್ತವ್ಯ ಕರ್ಮ ಎಂಬ ದೃಷ್ಟಿಯಿಂದ ನಾವು ಕೈಕೊಂಡಿದ್ದೇವೆ. ಆದರೆ ಈ ಉದ್ಯಮದಲ್ಲಿ ಹೆಚ್ಚು ಮಹತ್ವಾಕಾಂಕ್ಷೆಯನ್ನಾಗಲೀ ಮೋಹವನ್ನಾಗಲಿ ನಾವು ಇಟ್ಟುಕೊಂಡಿಲ್ಲ. ಉತ್ತಮ ಲೇಖನಗಳನ್ನು ಎಲ್ಲಿಯವರೆಗೆ ಸಂಪಾದಿಸಲು ಸಾಧ್ಯವಾಗುವುದೋ ಅಲ್ಲಿಯವರೆಗೆ ಮಾತ್ರವೇ 'ಸಾಕ್ಷಿ' ಪ್ರಕಟವಾಗುವುದು. ಇಲ್ಲವಾದರೆ ಇಲ್ಲ.

ಕೊನೆಗೂ ಉಳಿಯುವುದು ಸತ್ಯವೊಂದೇ ಎಂಬ ದೃಢವಿಶ್ವಾಸವೇ ಈ ಸಾಹಸದ ಮೂಲಶಕ್ತಿಯಾಗಿರುವುದರಿಂದ ಇದು ಯಾವುದೇ ಒಂದು ವ್ಯಕ್ತಿಯ, ಗುಂಪಿನ ಅಥವಾ ಪಂಥದ ಮುಖವಾಣಿಯಾಗಲು ಬಯಸುವುದಿಲ್ಲ. ಎಲ್ಲ ಬಗೆಯ ವಿಚಾರಗಳಿಗೂ ಸಿದ್ಧಾಂತಗಳ ಮಂಡನೆಗೂ ಇಲ್ಲಿ ಯಾವಾಗಲೂ ಅವಕಾಶವುಂಟು. ಆದರೆ ಯಾವ ಅಭಿಪ್ರಾಯವೇ ಆಗಲಿ ಅದನ್ನು ಆಳವಾಗಿ ಯೋಚಿಸಿ ಹೊಣೆಗಾರಿಕೆಯೊಡನೆಯೂ ವಸ್ತುನಿಷ್ಠೆಯಿಂದಲೂ ಮಂಡಿಸಬೇಕು. ಲೇಖನದ ಮೂಲಸ್ಫೂರ್ತಿ ಸತ್ಯಶೋಧನೆಯಾಗಿರಬೇಕು. ಅಂಥ ಎಲ್ಲ ಲೇಖನಗಳಿಗೂ 'ಸಾಕ್ಷಿ'ಯಲ್ಲಿ ಸ್ವಾಗತವುಂಟು. ಆ ಬಗೆಯಲ್ಲಿ ಲೇಖನ ಬರೆಯಲು ಸಮರ್ಥರಾದವರು ನಮ್ಮಲ್ಲಿ ಅನೇಕರಿದ್ದಾರೆ. ಅವರಲ್ಲಿ ಕೆಲವರ ಲೇಖನಗಳು ಇಲ್ಲಿ ಪ್ರಕಟವಾಗುತ್ತಿವೆ. ಉಳಿದವರದ್ದು ಇನ್ನು ಪ್ರಕಟವಾಗಲಿವೆ. ಹೊಸ ಹೊಸ ಲೇಖಕರೂ ಮುಂದೆ ಬಂದು ನಾವು ಕೈಕೊಂಡಿರುವಸ ಕೆಲಸ ಅಗತ್ಯವೆನ್ನಿಸಿದರೆ ತಕ್ಕ ಸಹಕಾರ ನೀಡುವರೆಂಬ ಭರವಸೆ ನಮಗಿದೆ. ಲೌಕಿಕವಾದ ಯಾವ ಲಾಭಕ್ಕಾಗಿಯೂ ಸತ್ಯವನ್ನೂ ಋಜುತ್ವವನ್ನೂ ಬಲಿಕೊಡಬಾರದೆಂಬುದೇ 'ಸಾಕ್ಷಿ'ಯ ಮೂಲೋದ್ದೇಶ. ಈ ಉದ್ದೇಶ ಸಾಧನೆಯಾಗುವುದು ಸತ್ಯಪ್ರಿಯರೂ, ಸಂಸ್ಕೃತಿಯ ಪುರೋಭಿವೃದ್ಧಿಯಲ್ಲಿ ಆಸಕ್ತಿಯುಳ್ಳವರೂ ಆದ ಕನ್ನಡ ಬಂಧುಗಳ ಸಹಕಾರದಿಂದ, ಬೆಂಬಲದಿಂದ.

ಪ್ರಜಾಪ್ರಭುತ್ವದ ಹೊಸ ಪ್ರಯೋಗದಲ್ಲಿ ತೊಡಗಿರುವ ನಮ್ಮ ದೇಶದಲ್ಲಿ ಬಹುಮತಕ್ಕೆ ಸಿಕ್ಕದ ಸಾಹಿತ್ಯ ಸಂಸ್ಕೃತಿ ವಿಜ್ಞಾನ ತತ್ತ್ವಜ್ಞಾನಗಳಲ್ಲಿ ಆಸಕ್ತಿಯುಳ್ಳ ಅಲ್ಪಸಂಖ್ಯಾತರ ಕೆಲಸಕ್ಕೆ ತಕ್ಕ ವಾತಾವರಣ ಅತ್ಯಗತ್ಯ. ಈ ದಿಶೆಯಲ್ಲಿ 'ಸಾಕ್ಷಿ' ಒಂದು ಅಂಗಕ್ಷೇಪ-ಅಷ್ಟೆ. ಇದರಿಂದ ಮಹತ್ತಾದ ಫಲ ದೊರೆವುದೆಂಬ ಭ್ರಮೆಯೂ ನಮಗಿಲ್ಲ. ಆದರೆ ಏನಾದರೂ ಮಾಡದೆ ಇದ್ದರೆ ನಮ್ಮ ಅರಿವು ನಿರರ್ಥಕ ಎಂದು ಈ ಸಾಹಸಕ್ಕೆ ಕೈ ಹಾಕಿದ್ದೇವೆ. ಎಷ್ಟು ಸಾಧ್ಯವೋ ಅಷ್ಟನ್ನು ಮಾಡಿ ವಿರಮಿಸುತ್ತೇವೆ.

ಈಗ ಪ್ರಕಟವಾಗುತ್ತಿರುವ 'ಸಾಕ್ಷಿ'ಯ ರೂಪ ಅದರ ಅಂತಿಮ ಸ್ವರೂಪವಲ್ಲ. ಈ ಪತ್ರಿಕೆಯ ಅಂತರಂಗ ಬಹಿರಂಗಗಳೆರಡರಲ್ಲೂ ತಕ್ಕ ಪರಿವರ್ತನೆ ಆಗಲಿದೆ. ಈಗ ಪ್ರಕಟವಾಗಿರುವ ಲೇಖನಗಳು ಸಾಹಿತ್ಯಕ್ಕೆ ಸಂಬಂಧಪಟ್ಟುವು ಆದರೂ ಇದು ಕೇವಲ ಸಾಹಿತ್ಯಕ್ಕೇ ಮೀಸಲಲ್ಲ. ಸಮಾಜ ವಿಜ್ಞಾನ, ಮಾನವಶಾಸ್ತ್ರ ತತ್ತ್ವಜ್ಞಾನ ರಾಜನೀತಿ ಮುಂತಾದ ಶಾಸ್ತ್ರೀಯ ವಿಚಾರಗಳ ಮೇಲೂ, ಸಂಗೀತ, ಚಿತ್ರಕಲೆ ಮುಂತಾದ ಲಲಿತಕಲೆಗಳ ಮೇಲೂ, ಆಳವಾಗಿ ಯೋಚಿಸಿ ಬರೆದ ಲೇಖನಗಳನ್ನು ಸಂಪಾದಿಸಲು ಯತ್ನಿಸಲಾಗುತ್ತಿದೆ. ಅಂಥವಕ್ಕೆ ಸ್ವಾಗತವುಂಟು. ಒಟ್ಟಿನಲ್ಲಿ ಕನ್ನಡ ಭಾಷೆಯನ್ನು ಪ್ರೌಢವೂ ಸೂಕ್ಷ್ಮವೂ ಗಾಢವೂ ಆದ ವಿಚಾರಪ್ರತಿಪಾದನೆಗೆ ತಕ್ಕ ಮಾಧ್ಯಮವನ್ನಾಗಿ ಮಾಡುವ ಪ್ರಯತ್ನಕ್ಕೆ ಈ 'ಸಾಕ್ಷಿ' ಮೀಸಲು.

ಕೃಪೆ: 'ಸಾಕ್ಷಿ' ಪತ್ರಿಕೆಯ ಮೊದಲ ಸಂಚಿಕೆ – ೧೯೬೭

ಸಂಕ್ರಮಣ
ಸಾಗಿಬಂದ ದಾರಿ...

ಚಂದ್ರಶೇಖರ ಪಾಟೀಲ



ಸಂಕ್ರಮಣ ಪತ್ರಿಕೆ ಷುರುವಾದದ್ದು ಆಗಸ್ಟ್ ೧೫, ೧೯೬೪ರಲ್ಲಿ. ಅದನ್ನು ಬಿಡುಗಡೆಗೊಳಿಸಿದ್ದು ನನ್ನ ಗೆಳೆಯ ಸುಮತೀಂದ್ರ ನಾಡಿಗ. ಅದೂ ಹೊಟೇಲ್ ಧಾರವಾಡದಲ್ಲಿ. ಆ ಕಾಲಕ್ಕೆ ಬರಹಗಾರರಾಗಿ ನಾನು, ಪಟ್ಟಣಶೆಟ್ಟಿ ಮತ್ತು ಗಿರಡ್ಡಿ ಗೋವಿಂದರಾಜ್ ಒಂದಷ್ಟು ಪ್ರಸಿದ್ಧರಾಗಿದ್ದಿವಿ. ಆ ಕಾಲಕ್ಕೆ ಪರಸ್ಪರ ಲೇಖಕರ ಒಡನಾಟ-ಸಂಪರ್ಕಗಳು ಸಹಜವಾಗಿದ್ದವು. ಮುಖ್ಯವಾಗಿ ನಮ್ಮ ಗುರುಗಳಾಗಿದ್ದ ವಿ.ಕೃ.ಗೋಕಾಕ್ ಕರ್ನಾಟಕ ಕಾಲೇಜಿನಲ್ಲಿ ಒಂದು ಅಧ್ಯಯನ ಮಂಡಳ ಸ್ಥಾಪಿಸಿ, ನಮ್ಮ ಸಾಹಿತ್ಯ ಅಭಿರುಚಿ ತಿದ್ದಿ ಬೆಳೆಸಿದರು. ಆ ಕಾಲದ ಗೆಳೆಯರಾದ ನಾಡಿಗ್, ಶಾಂತಿನಾಥ ದೇಸಾಯಿ, ಚಿತ್ತಾಲ ಮುಂತಾದವರ ಮೂಲಕ ನವ್ಯ ಚಳವಳಿಯ ಮುಂಚೂಣಿ ಲೇಖಕರ ಸ್ನೇಹ ಜೊತೆಗಾರಿಕೆ ಸಾಧ್ಯವಾಗಿತ್ತು. ಸಹಜವಾಗೇ ನಾವು ಅವರುಗಳಿಂದ ಪ್ರಭಾವಿತರಾದೆವು. ನಾನು, ಪಟ್ಟಣಶೆಟ್ಟಿ ಆ ಕಾಲಕ್ಕೆ ಒಂದು ಸಾಹಿತ್ಯ ಪ್ರವಾಸ ಕೈಕೊಂಡಿದ್ದೆವು. ನಾವು ಮೈಸೂರಿಗೆ ಬಂದಾಗ ತೇಜಸ್ವಿ, ಶ್ರೀರಾಮ್ ಮೊದಲಾದವರು ಲಹರಿ ಎನ್ನುವ ಪತ್ರಿಕೆ ಪ್ರಕಟಿಸುತ್ತಿದ್ದರು. ನಮಗೂ ಈ ಪ್ರಯೋಗದ ಬಗ್ಗೆ ಆಸಕ್ತಿ ಮೂಡಿ ನಾನು ಸಿದ್ದಲಿಂಗ ಪಟ್ಟಣಶೆಟ್ಟಿ, ಗಿರಡ್ಡಿ ಗೋವಿಂದರಾಜ್ ನಾವೆಲ್ಲರೂ ಸಮವಯಸ್ಕರು ಆಗ ಇಪ್ಪತ್ತರ ಆಸುಪಾಸಿನವರು, ಕಾಲೇಜುಗಳಲ್ಲಿ ಅಧ್ಯಾಪಕರಾಗಿ, ಲೇಖಕರಾಗಿ ಆಗಷ್ಟೇ ತೊಡಗಿಕೊಂಡವರು. ಲಹರಿಯ ಪ್ರೇರಣೆಯಿಂದ ನಾವು ಒಂದು

ಪತ್ರಿಕೆ ತೆಗೆಯುವ ನಿರ್ಧಾರಕ್ಕೆ ಬಂದೆವು. ಪಟ್ಟಣಶೆಟ್ಟಿಯ ಸಣ್ಣ ಮನೆಯೊಂದರಲ್ಲಿ ಮೂವರೂ ಕುಳಿತು ಅದರ ಹೆಸರು ಸಂಕ್ರಮಣ ಅಂತಿರಬೇಕೆಂದು ನಿರ್ಧರಿಸಿದೆವು (ಅದಕ್ಕೆ ವಿಶೇಷ ಅರ್ಥಗಳನ್ನೇನೂ ಆ ಕಾಲಕ್ಕೆ ಊಹಿಸಿರಲಿಲ್ಲ.) ಮೂವರೂ ಆ ಕಾಲಕ್ಕೆ ಪತ್ರಿಕೆಗೆ ತಲಾ ಹತ್ತು ರೂಪಾಯಿಯಂತೆ ಮೂವತ್ತು ರೂಪಾಯಿ ಬಂಡವಾಳ ಕೂಡಿಸಿದೆವು. ಅದರಿಂದ ಒಂದಷ್ಟು ಪೋಸ್ಟ್‌ಕಾರ್ಡ್‌ಗಳನ್ನು ಕೊಂಡು ನಮ್ಮ ಪರಿಚಯದ ಅನೇಕ ಹಿರಿ ಕಿರಿಯ ಲೇಖಕರಿಗೆ ಪತ್ರ ಬರೆದು ತಿಳಿಸಿದೆವು. ಎಲ್ಲರ ಪ್ರತಿಕ್ರಿಯೆ ಉತ್ತೇಜನಕಾರಿಯಾಗಿತ್ತು. ನಾಡಿಗರ ಮೂಲಕ ನಾವು ಆ ಕಾಲದ ನವ್ಯ ಲೇಖಕರ ಜೊತೆಗಾರಿಕೆ ರೂಪಿಸಿಕೊಂಡರೂ, ಹಿರಿಯ ಲೇಖಕರ ಜೊತೆಗಿನ ಸಂಪರ್ಕ-ಸಂಬಂಧವನ್ನೇನೂ ಕಡಿದುಕೊಳ್ಳಲಿಲ್ಲ. ಬೇಂದ್ರೆ ಮುಂತಾದ ಹಿರಿಯರೂ ಸಂಕ್ರಮಣಕ್ಕೆ ಆ ಕಾಲಕ್ಕೆ ಬರೆದರು.

ಆರಂಭಕ್ಕೆ ಸರಿಸುಮಾರು ಮುನ್ನೂರು ಮಂದಿ ಚಂದಾದಾರರಾದರು ಸಿಕ್ಕರು. ಒಳ್ಳೊಳ್ಳೆ ಲೇಖನಗಳು ಬರುತ್ತಿದ್ದವು. ಪ್ರಬುದ್ಧಕರ್ನಾಟಕ ಮೊದಲಾದ ವಿಶ್ವವಿದ್ಯಾಲಯದ ಪತ್ರಿಕೆಗಳನ್ನು ಬಿಟ್ಟರೆ ನಾವು ಮೂವರೆ ವೈಯಕ್ತಿಕ ನೆಲೆಯಲ್ಲಿ ಸಂಪಾದಿಸಿ ಪ್ರಕಟಿಸಿದ ಪತ್ರಿಕೆ ಇದು. ಹನ್ನೊಂದು ವರ್ಷಗಳು ನಿರಂತರವಾಗಿ ಪ್ರಕಟಗೊಂಡಿತು. ಇದು ಮೊದಲ ಹಂತ.

೭೫ರ ಹೊತ್ತಿಗೆ ತುರ್ತುಪರಿಸ್ಥಿತಿ ಬಂತು. ಆ ಕಾಲಕ್ಕೆ ಸಾಮಾಜಿಕ ರಾಜಕೀಯ ಪಲ್ಲಟಗಳು ಆಗಹತ್ತಿದವು. ವಿಚಾರವಾದಿ ಆಂದೋಲನ, ಬರಹಗಾರರ ಒಕ್ಕೂಟ ದಲಿತ ಸಂಘರ್ಷ ಸಮಿತಿ ಮುಂತಾದವು ಸಕ್ರಿಯಗೊಂಡವು. ಇದರ ಜೊತೆಗೇ ಅನೇಕ ಕಿರುಪತ್ರಿಕೆಗಳೂ ಪ್ರಕಟಗೊಳ್ಳುತ್ತಿದ್ದವು. ಆಲನಹಳ್ಳಿ ಕೃಷ್ಣರ ಸಮೀಕ್ಷಕ, ಸಾಕ್ಷಿ ಮುಂತಾದ ಅನೇಕ ಕಿರುಪತ್ರಿಕೆಗಳು ಸಂಕ್ರಮಣದ ಜೊತೆಗೂ ಪ್ರಕಟಗೊಂಡಂಥವು.

ಈ ದಶಕದ ಸಾಮಾಜಿಕ ರಾಜಕೀಯ ವಿಪ್ಲವದಲ್ಲಿ ಬರಹಗಾರರಾಗಿ ಹಾಗೂ ಸಂಪಾದಕರಾಗಿಯೂ ನಾವು ಪಾಲ್ಗೊಂಡೆವು. ನಾನು ಪಟ್ಟಣಶೆಟ್ಟಿ ನೇರ ಭಾಗವಹಿಸಿದರೆ ಗಿರಡ್ಡಿ ಸ್ವಲ್ಪ ಹಿಂದೆ ಉಳಿದು ಇವುಗಳ ಜೊತೆಗಿದ್ದರು.

ಅದು ವಾಗ್ವಾದಗಳ ಕಾಲ. ಬ್ರಾಹ್ಮಣ-ಶೂದ್ರ, ಶ್ರೇಷ್ಠತೆ-ಜನಪ್ರಿಯತೆ ಮೊದಲಾದ ಅನೇಕ ಚರ್ಚೆಗಳು ಬಹಳ ಬಿಸಿಯಾಗಿ ನಡೆಯುತ್ತಿದ್ದವು. ಆ ಕಾಲದ ಬರಹಗಾರರಲ್ಲಿ ಸಾಹಿತ್ಯ ಸಾಂಸ್ಕೃತಿಕ ಒಡನಾಟ ಬಹಳ ಇತ್ತು. ಪರಸ್ಪರ ಸ್ನೇಹವೂ ಇತ್ತು. ಸ್ನೇಹದ ಬುನಾದಿಯ ಮೇಲೆ ಆರೋಗ್ಯಕರ ವಾತಾವರಣದಲ್ಲಿ ವಾಗ್ವಾದಗಳು ನಡೆದವು. ನವ್ಯೋತ್ತರ ಬೆಳವಣಿಗೆಯ ಉಳಿದ ಸಾಧನೆಗಳು ಏನೇ ಇದ್ದರೂ ಸ್ನೇಹದ ಸಂಬಂಧ ಹಾಗೂ ಒಡನಾಟಗಳು ಕಡಿಮೆ ಆದವು. ಅಪನಂಬಿಕೆ ಆ ಜಾಗವನ್ನು ಆವರಿಸಿತು. ಜಾತಿ-ಒಳಜಾತಿಗಳು ಪ್ರಧಾನವಾಗಿ ಹೊಸ ಬರಹಗಾರರೂ ಇದರಲ್ಲಿ ಪಳಗಿದರು. ಒಟ್ಟು ಸಂವಾದ ಅನ್ನೋದು ಇಲ್ಲವಾಯ್ತು; ಅರ್ಥಪೂರ್ಣವಾದ ಜಗಳಗಳು ನಿಂತಿತು.

ನಾನು ೭೨-೭೩ರಲ್ಲಿ ಇಂಗ್ಲೆಂಡಿಗೆ ಹೋಗಿದ್ದೆ. ಬಂದ ನಂತರ ಆ ಕಾಲದ ಆಗುಹೋಗುಗಳಲ್ಲಿ ನನಗೆ ಕೆ.ಎಂ.ಶಂಕರಪ್ಪ, ನಂಜುಂಡಸ್ವಾಮಿ, ಲಂಕೇಶ್ ಮತ್ತು ತೇಜಸ್ವಿ ಇವರುಗಳ ಸಹವಾಸ ಲಭಿಸಿತು. ಎಮರ್ಜೆನ್ಸಿ, ಜೆ.ಸಿ. ಆಂದೋಲನಗಳಲ್ಲೂ ಸಕ್ರಿಯವಾಗಿದ್ದೆ. ಆಗಿನ ಸಂದರ್ಭದಲ್ಲಿ ೨೬ ದಿವಸಗಳ ಜೈಲುವಾಸವೂ ನನಗೆ ಲಭಿಸಿತು. ಆ ಕಾಲಕ್ಕೆ ಐದಾರು ತಿಂಗಳು ನಡೆಸುವವರಿಲ್ಲದೆ ಸಂಕ್ರಮಣ ಸ್ಥಗಿತಗೊಂಡಿತು. ಮತ್ತೆ ಷುರು ಮಾಡಬೇಕು ಅಂದುಕೊಂಡಾಗ, ನನ್ನ ಗೆಳೆಯರಿಂದ ಸರಿಯಾದ ಸ್ಪಂದನೆ ಬರಲಿಲ್ಲ. ನಾನೇ ಮುಂದಾಗಿ ದೊಡ್ಡದಾದ ಸಂಪಾದಕೀಯ ಬಳಗವೊಂದನ್ನು ರೂಪಿಸಿದೆ. ಆಗ ೬೫ನೇ ಸಂಚಿಕೆಯಿಂದ ಕ್ರೌನ್ ೧/೮ ಆಕಾರದಲ್ಲಿದ್ದ ಸಂಕ್ರಮಣ ಸ್ವಲ್ಪ ದೊಡ್ಡದಾದ ಡೆಮಿ ೧/೮ ಗಾತ್ರಕ್ಕೆ ಬದಲಾಯಿತು.

ಈ ನಡುವೆ ಲಂಕೇಶ್ ಪತ್ರಿಕೆ ಆರಂಭಗೊಂಡಿತು. ಅದರ ಮೊದಲ ಸಂಚಿಕೆಯಿಂದ ಆರಂಭಿಸಿ ಐದು ವರ್ಷಗಳ ಕಾಲ ಪ್ರತಿ ವಾರ, 'ನೋಟ' ಅಂತ ಒಂದು ಅಂಕಣ ಬರೆಯುತ್ತಿದ್ದೆ. ಆಗ ಟ್ಯಾಬ್ಲಾಯ್ಡ್ ಪತ್ರಿಕೋದ್ಯಮ ಹೊಸದು. ಲಂಕೇಶ್ ಪತ್ರಿಕೆ ರೂಪಿಸಿದ ನುಡಿಗಟ್ಟು ಮಂಡಿಸಿದ ರೀತಿ, ಜನಪರ ಚಳವಳಿಗಳಿಗೆ ಕೊಟ್ಟ ಬೆಂಬಲ ಇವು ಬಹಳ ಪ್ರಭಾವಿಯಾಗಿತ್ತು, ನಿರ್ಣಾಯಕವೂ ಆಗಿತ್ತು. ಆಗ ಹೆಗಡೆ ಅವರ ನೇತೃತ್ವದ ಜನತಾ ಪಕ್ಷದ ಸರ್ಕಾರ ಬಂತು. ಲಂಕೇಶ್ ತಮ್ಮ ಪತ್ರಿಕೆ ಹೆಗಡೆ ಸರ್ಕಾರ ರೂಪಿಸಿದ ಗಾಡ್‌ಫಾದರ್ ಅಂತ ಭಾವಿಸಿದ್ದರು. ನಾನು 'ಕನ್ನಡ ಜನತೆ ಮತ್ತು ಜನತಾ ಪಕ್ಷ' ಎಂಬ ಲೇಖನ ಬರೆದೆ. ರಾಜಧಾನಿಯಲ್ಲಿನ ಲೇಖಕರಿಗಿಂತ ಭಿನ್ನವಾದ ಅನುಭವವಿದ್ದ ನನಗೆ ಹಾಗೆ ಬರೆಯಬೇಕು ಅನ್ನಿಸಿತು. ಲಂಕೇಶ್, ಈ ಪಕ್ಷ ಅಸ್ತಿತ್ವದಲ್ಲಿರೋದೆ ನಮ್ಮ ಪತ್ರಿಕೆಯ ಮೂಲಕ. ಆದ್ದರಿಂದ ನೀವು ಬರೀಬ್ಯಾಡ್ರಿ ಅಂದ್ರು. ನನ್ನದು ಯಾಕೆ ಬರೀಬಾರ್ದು? ಅನ್ನುವ ನಿಲುವು. ಅವರು ಮತ್ತೆ ಬರೀರಿ ಅಂದ್ರು. ಆದರೆ ನಾನು ಒಲ್ಲೆ ಅಂದೆ. ಐದು ವರ್ಷ ಸತತ ಬರೆದ ಅಂಕಣ ನಿಂತಿತು.

ಆ ಕಾಲಕ್ಕೇ ನನಗೆ ಒಂದು ವಾರಪತ್ರಿಕೆ ಚಾಲೂ ಮಾಡಬಾರದ್ಯಾಕೆ? ಅನ್ನುವ ಆಲೋಚನೆ ಬಂದು, ಡೆಮಿ ೧/೪ ಆಕಾರದಲ್ಲಿ ಆರು ಸಂಚಿಕೆಗಳು ಹೊರಬಂದವು. ನಾನು ಆರೇ ವಾರದಲ್ಲಿ ಸಂಪೂರ್ಣ ದಿವಾಳಿಯಾಗಿದ್ದೆ. ಜ್ಯೋತಿಷಿಯೊಬ್ಬ ನಮ್ಮ ಪತ್ರಿಕೆ ನೋಡಿ ಇದು ತುಂಬಾ ದೊಡ್ಡದಾಗಿ ಬೆಳೆಯುತ್ತದೆ ಅಂತ ಭವಿಷ್ಯ ನುಡಿದಿದ್ದ. ನಾನು ಆರೇ ವಾರದಲ್ಲಿ ಅಂಗಡಿ ಮುಚ್ಚಬೇಕಾಯ್ತು.

ಈ ಪತ್ರಿಕೆಯ ಕೆಲಸಗಳು ಯಾಕೆ ಒಬ್ಬರ ಹೆಗಲಿಗೇ ಜೀಳುತ್ತದೆ ಅಂದರೆ ಅದನ್ನು ಮುನ್ನಡೆಸಲು ನಮ್ಮ ಒಳಗಿನ ಒತ್ತಡವೂ ಮುಖ್ಯವಾಗುತ್ತದೆ. ಬಂಡಾಯ ಚಳವಳಿಯ ಸಂದರ್ಭದಲ್ಲಿ ನಾವುಗಳು ಲೋಹಿಯಾವಾದಿಗಳು. ಜೊತೆಗೆ ಎಡಪಂಥೀಯ ವಿಚಾರಧಾರೆಗಳವರು, ಮಾರ್ಕ್ಸ್‌ವಾದಿಗಳು. ಇದರ ಜೊತೆಗೆ ಅಂಬೇಡ್ಕರ್‌ವಾದಿಗಳು ಬೇರೆ ಬೇರೆ ವೇದಿಕೆಗಳಲ್ಲಿ ಒಟ್ಟುಗೂಡುತ್ತಿದ್ದವು.

೧೯೭೯ರಲ್ಲಿ ಅಡಿಗರ ಅಧ್ಯಕ್ಷತೆಯಲ್ಲಿ ಧರ್ಮಸ್ಥಳದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಚೆನ್ನಣ್ಣ ವಾಲಿಕಾರ ಕ.ಸಾ.ಪ ತನ್ನ ಸಮ್ಮೇಳನದಲ್ಲಿ ದಲಿತ ಸಾಹಿತ್ಯ ಕುರಿತು ಒಂದು ಗೋಷ್ಠಿ ನಡೆಸಲು ಕೇಳಿದರು. ಆದರೆ ಕ.ಸಾ.ಪ.ದ ಆಗಿನ ಅಧ್ಯಕ್ಷ ಹಂ.ಪ.ನಾ. ಬಹಳ ಉಡಾಫೆಯಿಂದ ಕಲಿತ-ದಲಿತ-ಬಲಿತ ಇವುಗಳ ಬಗ್ಗೆಯೆಲ್ಲಾ ಗೋಷ್ಠಿ ಮಾಡಲಿಕ್ಕಾಗುತ್ತದೆಯೇ ಅಂದರು. ನಾನು ವೇದಪ್ರಿಯನಲ್ಲ-ನಾದಪ್ರಿಯನೂ ಅಲ್ಲ ಪ್ರಾಸ ಪ್ರಿಯ ಜಹಂಪನಾ ಅಂತ ಗೇಲಿಮಾಡಿದೆ. ಆ ಘಟನೆ ಬಂಡಾಯ ಸಾಹಿತ್ಯಚಳವಳಿಯ ಹುಟ್ಟಿಗೆ ಕಾರಣವಾಯ್ತು.

ಈಗ ಸಂಕ್ರಮಣಕ್ಕೆ ನಲವತ್ತೆಂಟು ವರ್ಷ. ಈ ಹಂತದಲ್ಲಿ ನಿಂತು ಆಲೋಚಿಸಿದಾಗ ೭೪-೭೫ರ ಎಮರ್ಜೆನ್ಸಿ ನಂತರದಿಂದ ೮೫-೯೦ರ ತನಕದ ಕಾಲಾವಧಿ ನನ್ನ ದೃಷ್ಟಿಯಲ್ಲಿ ಅತ್ಯುತ್ತಮವಾಗಿತ್ತು. ಆಗ ಬಂದಷ್ಟು ಒಳ್ಳೊಳ್ಳೆ ಲೇಖನಗಳು, ಪ್ರಬುದ್ಧವಾದ ವಿಚಾರ ಮಂಡನೆ, ಸಂವಾದಗಳಿಗಿದ್ದ ಮುಕ್ತ ಅವಕಾಶ, ಆ ಲವಲವಿಕೆ ಈಗ ಇಲ್ಲ.

ಈ ತನಕ ಸಂಕ್ರಮಣದಲ್ಲಿ ೭-೮ ವಿಶೇಷಾಂಕಗಳು ಪ್ರಕಟಗೊಂಡಿವೆ. ನವ್ಯಕವಿತೆಗಳ ಪ್ರಾತಿನಿಧಿಕ ಸಂಕಲನ 'ಸಂಕ್ರಮಣ ಕಾವ್ಯ' (೧೯೬೫), ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟದ ಸಂಸ್ಥಾಪನಾ ಸಮ್ಮೇಳನದ ವಿಶೇಷಾಂಕ(೧೯೭೪) ಬಂಡಾಯ ಸಾಹಿತ್ಯ ಸಮ್ಮೇಳನದ ವಿಶೇಷಾಂಕ (೧೯೭೯) ಡಾ. ರಾಮಮನೋಹರ ಲೋಹಿಯಾ ವಿಶೇಷಾಂಕ, (೧೯೯೦) ನೆಲ್ಸನ್ ಮಂಡೇಲಾ ವಿಶೇಷಾಂಕ (೧೯೯೦) ಡಾ. ಬಾಬಾಸಾಹೇಬ ಅಂಬೇಡ್ಕರ್ ವಿಶೇಷಾಂಕ (೧೯೯೧) ವಿಚಾರವಾದ ವಿಶೇಷಾಂಕ (೧೯೯೩) ಹಾಗೂ 'ಸಂಕ್ರಮಣ'ದ ಮೊದಲ ನೂರು ಸಂಚಿಕೆಗಳ ಲೇಖನಸೂಚಿ 'ಸಂಕ್ರಮಣ ಶತಕ' (ಸಂ. ಸಿ.ಆರ್. ಕರಸಿದ್ದಪ್ಪ)

ವನ್ನು ಸಂಕ್ರಮಣ ಪ್ರಕಾಶನ ಹೊರತಂದಿದೆ. ಇವಲ್ಲದೆ ಬಿಡಿ ಪ್ರಕಟಣೆಗಾಗಿ ೩೦ಕ್ಕೂ ಅನೇಕ ಕೃತಿಗಳು ಈವರೆಗೆ ಪ್ರಕಟಗೊಂಡಿವೆ. ಕುವೆಂಪು ಕುರಿತು, ಡಂಕೆಲ್ ಪ್ರಸ್ತಾವನೆ ಕುರಿತು ವಿಶೇಷಾಂಕಗಳು ಹೊರ ಬಿದ್ದಿವೆ.


ಚಳವಳಿಯ ಸಂದರ್ಭದಲ್ಲಿ ಸಮಾಜದ ಬೇರೆ ಬೇರೆ ಸ್ತರಗಳ ಬರಹಗಾರರ ಅಭಿವ್ಯಕ್ತಿಗೆ ವೇದಿಕೆ ಆಗುವುದು ಪತ್ರಿಕೆಗೆ ಆಗುವ ಲಾಭವೆ. ಚಳವಳಿ ಮತ್ತು ಪತ್ರಿಕೆಗಳು ಪರಸ್ಪರ ಪೂರಕ ಅಲ್ಲ, ಒಂದು ಒಂದಕ್ಕೊಂದು ಅವಲಂಬಿತ ಅಲ್ಲ-ಮತ್ತೊಂದರಿಂದ ಪ್ರೇರಣೆ ಪಡೆಯಬಹುದು ಕೊಡಬಹುದು. ಆದರೆ ಚಳವಳಿಯ ಮುಖವಾಣಿಯಾದರೆ ಪತ್ರಿಕೆ ಸತ್ತಂತೆ. ರಾಜಕೀಯ ಪಕ್ಷಕ್ಕೆ ಮುಖವಾಣಿ ಇರಬಹುದು. ಆದರೆ ಚಳವಳಿಗಳನ್ನು ವಿಮರ್ಶಾತ್ಮಕವಾಗಿ ಮೌಲ್ಯ ನಿರ್ಣಯ ಮಾಡುವ ಅಂತರವನ್ನ ಪತ್ರಿಕೆ ಯಾವಾಗಲೂ ಉಳಿಸಿಕೊಳ್ಳಬೇಕು. ಮುಕ್ತವಾದ ವೇದಿಕೆಯಾಗಿ ಪತ್ರಿಕೆ ಇರಬೇಕು. ಈ ಮುಕ್ತತೆ ಡೆಮಾಕ್ರಸಿಯ ಮೂಲ ಗುಣ. ಚಳವಳಿ ನಿಂತರೂ ಪತ್ರಿಕೆ ಮುಂದುವರೆಯುತ್ತದೆ. ಎಲ್ಲಾ ವಿಚಾರಗಳಿಗೂ 'ಮುಕ್ತದ್ವಾರ' ನಮ್ಮ ಪತ್ರಿಕೆಗಳು ಉಳಿಯಲು ಕಾರಣ, ಮುಕ್ತತೆ ಇರಬೇಕು. ನೂರು ಸಂಚಿಕೆ ತರುವುದು, ೪೦-೫೦ ವರ್ಷ ಪತ್ರಿಕೆಯನ್ನು ನಿರ್ವಹಿಸುವುದು ಸಣ್ಣ ಸಂಗತಿ ಏನಲ್ಲ. ಕನಿಷ್ಠ ಶಿಸ್ತು ಮತ್ತು ಕಾಯಕ ನಿಷ್ಠೆ ಇದಕ್ಕಿರಬೇಕು. ಈ ಸಾಧನೆ ಇದರ ಕಷ್ಟ ಬಹಳಷ್ಟು ಲೇಖಕರಿಗೆ ಅರ್ಥವೂ ಆಗುವುದಿಲ್ಲ, ತಾವೂ ಮಾಡಲಾರರು, ಪತ್ರಿಕೆ ಮಾಡುವವರನ್ನೂ ಅರ್ಥ ಮಾಡಿಕೊಳ್ಳಲಾರರು. ಬಹಳ ಜನ ಕೇಳುತ್ತಾರೆ ನೀವು ಬಹಳ ಕಷ್ಟಪಟ್ಟು ಪತ್ರಿಕೆ ನಡೆಸಿದ್ದೀರಿ ಅಂತ. ಇಷ್ಟಪಟ್ಟು ನಾನು ಮಾಡುತ್ತಿರುವುದರಿಂದ ಇದರಲ್ಲಿ ಕಷ್ಟವೂ ಇಲ್ಲ, ನಷ್ಟವೂ ಇಲ್ಲ. ಮುಕ್ತತೆ, ಕಾಲಕಾಲಕ್ಕೆ ವಿಸ್ತರಿಸುವ ಲೇಖಕರ ವಲಯ ಇಂಥವು ಪತ್ರಿಕೆಯ ನಿರಂತರತೆ ಕಾಯುತ್ತವೆ. financially ಹೊರೆಯಾಗುವ ಹಾಗೂ ನಾನು ಪತ್ರಿಕೆ ಮಾಡಿಲ್ಲ. ಚಂದಾದಾರರನ್ನು ಓದುಗರನ್ನು ಬೈದು ಪ್ರಯೋಜನ ಇಲ್ಲ. ಅವರಿಂದ ಹಣ ಪಡೆದಿದ್ದೇನೆ, ಅವರಿಗೆ ನಾನು ಪತ್ರಿಕೆ ಕೊಡಬೇಕೆನ್ನುವ ಬದ್ಧತೆ ಬಲು ಮುಖ್ಯ. ಒಳ್ಳೆಯ ವಿಷಯ ಕೊಡುವ ಪತ್ರಿಕೆಗೆ ಚಂದಾದಾರರು ತಾನಾಗಿಯೇ ಹಣ ಕೊಟ್ಟು ಓದುತ್ತಾರೆ.

ಇಂದು ಬರೆಯುತ್ತಿರುವ ಅನೇಕ ಪ್ರಖ್ಯಾತ ಲೇಖಕರು ಮೊದಮೊದಲು 'ಸಂಕ್ರಮಣ'ದಲ್ಲಿಯೇ ಬೆಳಕು ಕಂಡವರು. ಅವರೆಲ್ಲರ ಹೆಸರುಗಳ ಯಾದಿಯೆ ಪುಟಗಳಾಗುತ್ತವೆ ಕಳೆದ ಇಪ್ಪತ್ತು ವರ್ಷಗಳಿಂದ ಸಂಕ್ರಮಣ ನಡೆಸುತ್ತಿರುವ ಸಾಹಿತ್ಯ ಸ್ಪರ್ಧೆಗಳಿಂದಾಗಿ ಹೊಸ ಪ್ರತಿಭೆಗಳು ಪ್ರತಿವರ್ಷವೂ ಹೊರಬರುತ್ತಲೇ ಇವೆ.

ಕಳೆದ ಕಾಲು ಶತಮಾನದ ಅವಧಿಯಲ್ಲಿ ಪತ್ರಿಕೆ ಯಾವುದೇ ರಾಜಿ ಮಾಡಿಕೊಳ್ಳದೆ ನಿರ್ಭೀತವಾಗಿ ನಿಷ್ಪಕ್ಷಪಾತವಾಗಿ ತನ್ನ ಪಾತ್ರವನ್ನು ನಿರ್ವಹಿಸಿಕೊಂಡು ಬಂದಿದೆ ಎಂಬುದನ್ನು ಅದರ ಓದುಗರೆಲ್ಲ ಸ್ವಾನುಭವದಿಂದ ಬಲ್ಲವರಾಗಿದ್ದಾರೆ. ಸಾಹಿತ್ಯದ ಎಲ್ಲಾ ಪ್ರಕಾರಗಳಿಗೂ ಸಮಾನ ಅವಕಾಶವನ್ನು ನೀಡುತ್ತಾ ಬಂದಿದ್ದೇವೆ. ಬಹುಶಃ 'ಸಂಕ್ರಮಣ' ಒಂದೇ ಈ ದೃಷ್ಟಿಯಿಂದ ಸಮಗ್ರ ಸಾಹಿತ್ಯ ಪತ್ರಿಕೆಯಾಗಿದೆ. 'ಸಂಕ್ರಮಣ'ದಷ್ಟು ವಾಗ್ವಾದಗಳನ್ನು, ಚರ್ಚೆಗಳನ್ನು ನಡೆಸಿದ ಸಾಹಿತ್ಯ ಪತ್ರಿಕೆಗಳು ಸಿಗುವುದು ವಿರಳ. ■

ಶೂದ್ರ
ವಿಶಿಷ್ಟ ಮಾಸಪತ್ರಿಕೆ

ನರಹಳ್ಳಿ ಬಾಲಸುಬ್ರಹ್ಮಣ್ಯ



'ಶೂದ್ರ'-ಕನ್ನಡದಲ್ಲಿ, ನಮ್ಮ ಸಂದರ್ಭದಲ್ಲಿ ಒಂದು ಪ್ರೀತಿಯ ಹೆಸರು. ಸಾಂಸ್ಕೃತಿಕ ವಲಯದಲ್ಲಿ ಅತ್ಯಂತ ಪರಿಚಿತವಾದ ಮಾಸಪತ್ರಿಕೆ- 'ಶೂದ್ರ'. ಪತ್ರಿಕೆಯ ಸಂಪಾದಕರಾದ ಎಂ. ಶ್ರೀನಿವಾಸ ಅವರು ಶೂದ್ರ ಶ್ರೀನಿವಾಸ್ ಎಂದೇ ಪ್ರಸಿದ್ಧರು. ಕಳೆದ ಹದಿನಾಲ್ಕು ವರ್ಷಗಳಿಂದಲೂ, ಮಧ್ಯೆ ಎಂದೂ ನಿಲ್ಲಿಸದೆ ನಿಯತವಾಗಿ ಈ ಸಾಹಿತ್ಯಿಕ ಕಿರುಪತ್ರಿಕೆಯನ್ನು ನಡೆಸಿಕೊಂಡು ಬರುತ್ತಿರುವ ಶ್ರೀನಿವಾಸರ ಸಾಹಸ, ಶ್ರದ್ಧೆ ಪ್ರಶಂಸನೀಯವಾದುದು.

'ಶೂದ್ರ' ಪತ್ರಿಕೆ ಆರಂಭವಾದದ್ದು ಸೆಪ್ಟೆಂಬರ್, ೧೯೭೩ರಲ್ಲಿ. ಮೈಸೂರಿನಲ್ಲಿ ಜಾತಿವಿನಾಶ ಸಮ್ಮೇಳನ ನಡೆದ ಸಂದರ್ಭದಲ್ಲಿ ಈ ನೆಲದ ಸಂಸ್ಕೃತಿಯೊಡನೆ ಅರ್ಥಪೂರ್ಣ ಸಂಬಂಧವನ್ನು ಸೃಷ್ಟಿಸಿಕೊಳ್ಳುವ, ಬಹುಮುಖೀ ಸಂಸ್ಕೃತಿಯ ಸಾಧ್ಯತೆಗಳತ್ತ ಕೈ ಚಾಚುವ ಆಶಯದೊಡನೆ ಹುಟ್ಟಿಕೊಂಡ ಈ ಪತ್ರಿಕೆಗೆ 'ಶೂದ್ರ'- ಎಂದು ಹೆಸರು ಕೊಟ್ಟವರು ಪ್ರಸಿದ್ಧ ಲೋಹಿಯಾವಾದಿ ಎಸ್. ವೆಂಕಟರಾಂ. ಲೋಹಿಯಾ ಚಿಂತನೆಯಲ್ಲಿ 'ಶೂದ್ರ' ಒಂದು ಹೆಸರಲ್ಲ, ವಿಶಾಲ ಅರ್ಥವುಳ್ಳ ಒಂದು ಪರಿಕಲ್ಪನೆ. ಮಧ್ಯೆ ಕೆಲವು ಕಾಲ ಶ್ರೀನಿವಾಸರು ಪತ್ರಿಕೆಯ ಹೆಸರನ್ನು 'ಸವಾಲು' ಎಂದು ಬದಲಾಯಿಸಿದ್ದುಂಟು. ಆದರೆ ಯು.ಆರ್. ಅನಂತಮೂರ್ತಿ, ವೆಂಕಟರಾಂ ಮೊದಲಾದವರ ಪ್ರತಿಭಟನೆ, ಒತ್ತಾಯಗಳಿಂದ ಮತ್ತೆ 'ಶೂದ್ರ'ವೆಂಬ ಹೆಸರೇ ಮುಂದುವರೆಯಿತು.

ಈ ಹದಿನಾಲ್ಕು ವರ್ಷಗಳಲ್ಲಿ 'ಶೂದ್ರ' ಅನೇಕ ಹಂತಗಳನ್ನು ಹಾದು ಪಕ್ವವಾಗುತ್ತಾ ಬಂದಿದೆ. ಕೆಲವು ಕಾಲ 'ಶೂದ್ರ' ಪತ್ರಿಕೆ ಕಮ್ಯುನಿಸ್ಟ್ ಪಕ್ಷದ ಬುಲೆಟಿನ್ ಎನ್ನುವಷ್ಟರ ಮಟ್ಟಿಗೆ ಆ ಸಂಬಂಧೀ ಲೇಖನಗಳನ್ನೇ ಪ್ರಕಟಿಸುತ್ತಿತ್ತು. ಆ ಸಂದರ್ಭದಲ್ಲಿ ಒಮ್ಮೆ ಜಿ.ಎಸ್. ಶಿವರುದ್ರಪ್ಪನವರು ಶ್ರೀನಿವಾಸರೊಡನೆ ಮಾತನಾಡುತ್ತಿದ್ದಾಗ 'ಸಾಹಿತ್ಯಕ್ಕೂ ಕೆಲವು ಪುಟ ಇರಲಪ್ಪಾ!' ಎಂದು ಹೇಳಿದರಂತೆ. 'ಶೂದ್ರ'ದ ವಿನ್ಯಾಸ ಬದಲಾಯಿತು.

'ಶೂದ್ರ'-ಒಂದು ಪತ್ರಿಕೆ ಮಾತ್ರವಲ್ಲ, ಅನೇಕ ಹೋರಾಟಗಳ ವೇದಿಕೆಯೂ ಹೌದು. ನಾಡಿನ ಮುಖ್ಯ ಸಾಂಸ್ಕೃತಿಕ ಚಳವಳಿಗಳಲ್ಲಿ ಈ ಪತ್ರಿಕೆ ಸಕ್ರಿಯವಾಗಿ ಪಾಲ್ಗೊಂಡಿದೆ. ತುರ್ತು ಪರಿಸ್ಥಿತಿ ಕಾಲದಲ್ಲಿ 'ಶೂದ್ರ' ಪತ್ರಿಕೆಯನ್ನು ಸರ್ಕಾರ ಮುಟ್ಟುಗೋಲು ಹಾಕಿತ್ತು. ಶ್ರೀನಿವಾಸರು ಬಂಧನಕ್ಕೊಳಗಾಗಿದ್ದರು. ಬಸವಲಿಂಗಪ್ಪನವರ ಬೂಸಾ ಪ್ರಕರಣ, ಬಂಡಾಯ ಸಾಹಿತ್ಯ ಚಳವಳಿ, ಜೆ.ಪಿ. ಚಳವಳಿ-ಇವುಗಳಲ್ಲೆಲ್ಲಾ 'ಶೂದ್ರ' ಪತ್ರಿಕೆಯ ಪಾತ್ರ ಮಹತ್ವದ್ದು. ನಾಡಿನ ಎಲ್ಲಾ ಪ್ರಗತಿಪರ ಚಳವಳಿಗಳಲ್ಲೂ 'ಶೂದ್ರ' ತನ್ನನ್ನು ತೊಡಗಿಸಿಕೊಂಡಿದೆ; ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಎಚ್ಚರ ಮೂಡಿಸಲು ಪ್ರಯತ್ನಿಸಿದೆ.

'ಶೂದ್ರ'-ಸದ್ಯದ ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ಸಂವಾದಕ್ಕಿರುವ ಒಂದು ಮುಕ್ತ ವೇದಿಕೆಯೂ ಹೌದು. ಶ್ರೀನಿವಾಸರ ಮುಕ್ತ, ಮುಗ್ಧ, ಬೆಚ್ಚನೆಯ ಪ್ರೀತಿಯ ವ್ಯಕ್ತಿತ್ವ ಎಲ್ಲ ಬಗೆಯ, ಎಲ್ಲ ಮನೋಭಾವದ ಜನರನ್ನೂ ತನ್ನ ಕಕ್ಷೆಯೊಳಗೆ ಸೇರಿಸಿಕೊಂಡಿದೆ. ನಿಜಕ್ಕೂ ಇದೊಂದು ವಿಶಿಷ್ಟ ಸಾಧನೆ. ನವೋದಯ, ನವ್ಯ, ಪ್ರಗತಿಶೀಲ, ಬಂಡಾಯ-ಎಲ್ಲ ಪಂಥದ ಲೇಖಕರೂ 'ಶೂದ್ರ' ಬಳಗದಲ್ಲಿ ಸೇರಿದ್ದಾರೆ. ಬೆಂಗಳೂರು, ಮೈಸೂರು, ಧಾರವಾಡ, ಮಂಗಳೂರು-ಎಲ್ಲ ಭಾಗದ ಜನ 'ಶೂದ್ರ'ದೊಡನೆ ಪ್ರೀತಿಯ ಸಂಬಂಧವಿರಿಸಿಕೊಂಡಿದ್ದಾರೆ. ಸಾಹಿತ್ಯ, ಕಲೆ, ನೃತ್ಯ, ಸಂಗೀತ, ರಾಜಕೀಯ, ಅರ್ಥಶಾಸ್ತ್ರ ಮನೋವಿಜ್ಞಾನ, ಸಮಾಜಶಾಸ್ತ್ರ-ಎಲ್ಲ ಬಗೆಯ ಲೇಖನಗಳನ್ನೂ 'ಶೂದ್ರ' ಪ್ರಕಟಿಸುತ್ತಾ ಬಂದಿದೆ. ಕಲಾವಿದರು, ಕಾರ್ಮಿಕರು, ರೈತಬಂಧುಗಳು, ರಾಜಕಾರಣಿಗಳು-ಎಲ್ಲರ ಅಭಿಪ್ರಾಯಗಳಿಗೂ ಈ ಪತ್ರಿಕೆಯಲ್ಲಿ ಮನ್ನಣೆಯಿದೆ. ಪ್ರತಿ ಸಂಚಿಕೆಯ ಮುಖಪುಟ-ಬೆನ್ನ ಪುಟಗಳಲ್ಲಿ ಕಲಾವಿದರೊಬ್ಬರ ಕೃತಿ ನಿಯತವಾಗಿ ಪ್ರಕಟವಾಗುತ್ತಾ ಬಂದಿದೆ. ಇದು 'ಶೂದ್ರ' ಪತ್ರಿಕೆಯ ವೈಶಿಷ್ಟ್ಯವೂ ಹೌದು.

'ಶೂದ್ರ' ಪತ್ರಿಕೆ ತನ್ನ ಆಶ್ರಯದಲ್ಲಿ ಅನೇಕ ವಿಚಾರ ಸಂಕಿರಣಗಳನ್ನು ನಡೆಸಿದೆ. ಸನ್ನಿವೇಶ ಒತ್ತಾಯಿಸಿದಾಗೆಲ್ಲ ಚರ್ಚೆ, ಸಂವಾದಗಳನ್ನು ಏರ್ಪಡಿಸುತ್ತ ಮುಕ್ತ ವಾತಾವರಣ ನಿರ್ಮಿಸಲು ಪ್ರಯತ್ನಿಸಿದೆ. ಈ ಚರ್ಚೆ ಸಂವಾದಗಳು 'ಶೂದ್ರ'ದ ವಿಶೇಷ ಸಂಚಿಕೆಗಳಾಗಿ ಪ್ರಕಟವಾಗಿವೆ. 'ಸಾಹಿತ್ಯ ಮತ್ತು ಕ್ರಿಯಾಶೀಲತೆ' ಬೇಂದ್ರೆ, ಶಿವರಾಮ ಕಾರಂತ, ಅನಂತಮೂರ್ತಿ, ಲಂಕೇಶ್-ಇವರನ್ನು ಕುರಿತ ವಿಶೇಷ ಸಂಚಿಕೆಗಳು ಸಂಗ್ರಹಯೋಗ್ಯವಾದಂಥವು.

'ಶೂದ್ರ' ತನ್ನ ಸಂಚಿಕೆಗಳಲ್ಲಿ ಹೆಸರಾಂತ ಲೇಖಕರ ಜೊತೆಗೆ ಅನೇಕ ಹೊಸ ಬರಹಗಾರರಿಗೆ ಅವಕಾಶ ಕಲ್ಪಿಸಿಕೊಟ್ಟು ಹೊಸ ಲೇಖಕರಲ್ಲಿ ಆತ್ಮವಿಶ್ವಾಸ ಮೂಡಿಸಿ ಸೃಜನಶೀಲತೆಯನ್ನು ಸಮೃದ್ಧಗೊಳಿಸುವತ್ತ ಮಾಡಿರುವ ಸಾಧನೆ ಗಮನಾರ್ಹವಾದುದು. ಹಾಗೆಂದು 'ಶೂದ್ರ' ತನ್ನ ಅಭಿರುಚಿಯೊಡನೆ ಎಂದೂ ರಾಜಿ ಮಾಡಿಕೊಂಡಿಲ್ಲ, ಉತ್ತಮ ಗುಣಮಟ್ಟದ ಬರಹಗಳನ್ನು ಯಾವುದೇ ಪೂರ್ವಗ್ರಹವಿಲ್ಲದೆ ಪ್ರಕಟಿಸುವಂಥ ವೇದಿಕೆಯಾಗಿ 'ಶೂದ್ರ' ಪತ್ರಿಕೆ ಬೆಳೆದು ಬರುತ್ತಿರುವುದು ಸಂಪಾದಕರಾದ ಶ್ರೀನಿವಾಸರ ಬೆಳವಣಿಗೆಯನ್ನೂ ಸೂಚಿಸುತ್ತದೆ.

ತನ್ನ ಮಿತಿಯಲ್ಲೇ 'ಶೂದ್ರ' ಪತ್ರಿಕೆ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾ ಬಂದಿದೆ. ತನ್ಮೂಲಕ ಹೆಚ್ಚು ಸಮಗ್ರವಾಗಲು ಶ್ರಮಿಸುತ್ತಿದೆ. ಹಿರಿಕಿರಿಯ ಲೇಖಕರ ಮುಖಾಮುಖಿ; ಹೊಸದಾಗಿ ಬಂದ ಮುಖ್ಯ

ಕೃತಿಗಳ ಪರಿಚಯ, ವಿಮರ್ಶೆ; ಸಾಹಿತ್ಯ ವಾಗ್ವಾದಗಳಿಗೆ ಅವಕಾಶ; ಹೊಸ ಪರಿಕಲ್ಪನೆಗಳ ಕುರಿತ ಚರ್ಚೆಗಳು; ಅನುವಾದ. ಇತರ ಜ್ಞಾನಾಂಗಗಳಿಗೆ ಸಂಬಂಧಿಸಿದ ಉಪಯುಕ್ತ ಲೇಖನಗಳ ಪ್ರಕಟಣೆ- ಹೀಗೆ ಅನೇಕ ರೀತಿಯಲ್ಲಿ ನಮ್ಮ ಅರಿವನ್ನು ವಿಸ್ತಾರಗೊಳಿಸುವ, ನಮ್ಮ ಸಾಂಸ್ಕೃತಿಕ ಪರಿಸರವನ್ನು ಜೀವಂತವಾಗಿಡುವ ಪ್ರಯತ್ನವನ್ನು 'ಶೂದ್ರ' ಸತತವಾಗಿ ಮಾಡುತ್ತಲೇ ಬಂದಿದೆ.

'ಶೂದ್ರ' ಪತ್ರಿಕೆಯ ವಿಶಿಷ್ಟ ಅಂಕಣ- 'ಕನಸಿಗೊಂದು ಕಣ್ಣು'. ಇದರಲ್ಲಿ ಶ್ರೀನಿವಾಸರು ಕನ್ನಡದಲ್ಲಿ ಹೊಸ ರೀತಿಯದೆನ್ನಬಹುದಾದ ಬರವಣಿಗೆಯ ರೀತಿಯನ್ನು ಬಳಕೆಗೆ ತಂದಿದ್ದಾರೆ. ಕೆ.ವಿ. ತಿರುಮಲೇಶ್ ಹೇಳುವಂತೆ 'ಶ್ರೀನಿವಾಸರ ಈ ಬರಹಗಳು ನಡೆದಲ್ಲಿ ಹೋಗುವ ದಾರಿಗಳಂತೆ ಎಲ್ಲಿಂದ ಎಲ್ಲಿಗೋ ನಮ್ಮನ್ನು ಒಯ್ಯುತ್ತವೆ; ಮುಗಿಯಿತು ಎನ್ನುತ್ತಲೇ ಹೊಸತೊಂದು ಮಗ್ಗುಲನ್ನು ತೋರಿಸುತ್ತವೆ. ಇಲ್ಲಿ ಉತ್ತರಕ್ಕಿಂತ ಪ್ರಶ್ನೆಗಳೇ, ಪ್ರಶ್ನೆಗಳಿಗಿಂತ ಸಂದೇಹಗಳೇ, ಸಂದೇಹಗಳಿಗಿಂತ ಗೊಂದಲಗಳೇ ಹೆಚ್ಚು... ನಿಜವಾದ ಪ್ರಶ್ನೆಗಳಿಗೆ ಶೀಘ್ರವಾದ ಹಾಗೂ ಸರಳವಾದ ಉತ್ತರಗಳಿಲ್ಲ. ಆದ್ದರಿಂದ ಸಂತೆಯೊಳಗೊಂದು ಮನೆಯ ಮಾಡಿದವರು ಒಂದೋ ಆರ್ಭಟಿಸಲು ಸುರು ಮಾಡುತ್ತಾರೆ, ಇಲ್ಲಾ ಮೌನಿಗಳಾಗುತ್ತಾರೆ. ಶ್ರೀನಿವಾಸರ ಈ ಖಾಸಗಿ ಪತ್ರಗಳ ತುಂಬ ನಾವು ಕಾಣುವುದು ಇಂಥ ಮೌನದ ಧ್ವನಿಗಳು. ಈ ಧ್ವನಿಗಳು ನಮ್ಮ ಮನದ ಇದುತನಕ ಮಿಡಿಯದ ಅಥವಾ ಎಂದೋ ಮಿಡಿದು ಸುಮ್ಮನಾದ ತಂತಿಗಳು ಸ್ಪಂದಿಸುವುದಕ್ಕೆ ಕಾರಣವಾಗುತ್ತವೆ.'

ಜೀವನವನ್ನು ಪ್ರೀತಿಯಿಂದ ನೋಡಬೇಕೆನ್ನುವ, ಆರೋಗ್ಯಕರವಾದ ಮನುಷ್ಯ ಸಂಬಂಧವನ್ನು ಅಪೇಕ್ಷಿಸುವ, ಕರಗಬಲ್ಲ, ಕೋಪಗೊಳ್ಳಬಲ್ಲ, ಗೇಲಿಮಾಡಬಲ್ಲ, ಸ್ವಲ್ಪ ಹುಂಬರೆನ್ನಬಹುದಾದ, ಆದರೆ ಸೂಕ್ಷ್ಮಮನಸ್ಸಿನ ಶ್ರೀನಿವಾಸ್ 'ಶೂದ್ರ' ಪತ್ರಿಕೆಗೆ ಒಂದು 'ವ್ಯಕ್ತಿತ್ವ' ದೊರಕಿಸಿಕೊಡಲು ಶ್ರಮಿಸಿದ್ದಾರೆ. ಆ ಮೂಲಕ ನಮ್ಮ ನಡುವಿನ 'ವಿಶಿಷ್ಟವ್ಯಕ್ತಿ' ಎನ್ನಿಸಿದ್ದಾರೆ.

ಸುಮಾರು ಮೂರು ಸಾವಿರ ಚಂದಾದಾರರನ್ನುಳ್ಳ ಈ ವಿಶಿಷ್ಟ ಸಾಹಿತ್ಯಿಕ ಕಿರುಪತ್ರಿಕೆ ಸಮೃದ್ಧವಾಗಿ ಬಹುಕಾಲ ಬೆಳೆದು ಬರಲಿ ಎಂಬುದು ಸಾಹಿತ್ಯ ಪ್ರಿಯರೆಲ್ಲರ ಹಾರೈಕೆ.

ಕೃಪೆ: ತರಂಗ, ೧ ಮಾರ್ಚ್ ೧೯೮೭

ಅಂಕಣ
ಅರೆಮುಗಿದ ಕನಸು

ಎಚ್.ಎಸ್. ರಾಘವೇಂದ್ರ ರಾವ್



ಕನಸುಗಳು ನನಸಾಗಿ, ಆ ವರ್ತಮಾನವು ಗತಕಾಲವಾಗಿ, ಕೊನೆಗೆ ಅವೆಲ್ಲವೂ ನೆನಪುಗಳ ಗೋಜಲಾಗಿ ಬಿಡುವುದು ಎಂತಹ ಉಲ್ಲಾಸ, ಎಂತಹ ವಿಷಾದ. ನನಗಂತೂ ಈ ಎಲ್ಲ ನೆನಪುಗಳು ಗೆಳೆಯ ರಾಜು ಅವರ ಸುತ್ತಲೂ ಗೂಡುಕಟ್ಟುವ ರೇಷಿಮೆ ಎಳೆಗಳ ಹಾಗೆ. ಸಾವಿರ ನೆನಪುಗಳ ನಡುವೆ, 'ಅಂಕಣ' ಕೂಡ ಒಂದು ಹಸಿರು ಮತಾಪು. ಉರಿಯುವಾಗ ಹಸಿರು. ಕರಗಿದಾಗ ಕತ್ತಲು.

ಈ ಕನಸನ್ನು ಮೊದಲು ಕಂಡವನು, ಗೆಳೆಯ ಕೆ.ವಿ. ನಾರಾಯಣ. ಹಂಚಿಕೊಂಡವರು ನಾವು ಕೆಲವರು. ರಾಜು, ಕಿ.ರಂ., ಕ.ನಂ., ಡಿ.ವಿ.ರಾಜಶೇಖರ, ಮಾಧು, ಕಲ್ಗುಡಿ, ಶಿವಪ್ರಕಾಶ್ ಮತ್ತು ನಾನು. ಎಲ್ಲ ಕನಸುಗಳ ಹಾಗೆ, ಇದರ ಹಿಂದೆಯೂ ಇದ್ದಿದ್ದು ಸುತ್ತಲಿನ ಸನ್ನಿವೇಶದ ಬಗೆಗಿನ ಅತೃಪ್ತಿ ಮತ್ತು ಏನಾದರೂ ಮಾಡಬೇಕು ಎನ್ನುವ ಆಸೆ. ಆ ದಿನಗಳಲ್ಲಿ ಸಮುದಾಯ, ಪ್ರಗತಿಪಂಥ, ಡಿಎಸ್.ಎಸ್., ದಲಿತ ಬಂಡಾಯ ಚಳುವಳಿ, 'ಕನ್ನಡ ಉಳಿಸಿ' ಚಳುವಳಿ.... ಸ್ವಪ್ನವೃಕ್ಷಕ್ಕೆ ಎಷ್ಟೊಂದು ಟಿಸಿಲುಗಳು. ಎಲ್ಲ ಟಿಸಿಲುಗಳಲ್ಲಿಯೂ ಸಮಾಜ ಮತ್ತು ಕಲೆಗಳು ಹಾಸುಹೊಕ್ಕು. ಇಂದಿಗೆ ಸಹಜವೆಂದು 'ನಮಗೆ' ತೋರುವ ಸಿನಿಕತೆ ಮತ್ತು 'ಅವಕಾಶವಾದಗಳು' ಅಂದು ಇರಲಿಲ್ಲ, ಇರಲಿಲ್ಲವೇ?? ಇಪ್ಪತ್ತರಿಂದ ಮೂವತ್ತರವರೆಗೆ ಎಲ್ಲ ಬಣ್ಣವೂ ಗುಲಾಬಿಯೇ ಇರಬೇಕು.

ಒಂದು ಮಾತು ಸ್ಪಷ್ಟವಿತ್ತು. ಕತೆ, ಕವಿತೆ, ನಾಟಕಗಳನ್ನು ನಮ್ಮ ಪತ್ರಿಕೆಯು ಹರಹಿನಿಂದ ಆಚೆಗೆ ಇಡಬೇಕು ಎನ್ನುವುದು. ಏಕೆಂದರೆ, ಆಗ 'ಸಾಕ್ಷಿ', ಸಂಕ್ರಮಣ', 'ಲಹರಿ', 'ಅಕಾವ್ಯ', 'ಸಂಕೀರ್ಣ', 'ಶೂದ್ರ', 'ಸಾಧನೆ', 'ರುಜುವಾತು', 'ಸಂವಾದ'..... ಕೆಲವು ಬಂದಿದ್ದವು; ಕೆಲವು ಬಂದುಹೋಗಿದ್ದವು; ಕೆಲವು ಬರಲಿದ್ದವು. ಕವಿಗಳಿಗೆ, ಕತೆ ಬರೆಯುವವರಿಗೆ ವೇದಿಕೆಗಳು ಧಂಡಿಯಾಗಿದ್ದವು. ನಮಗೂ ಆಗಿನ ಜನಪ್ರಿಯ ಬ್ರಾಂಡಾದ ನವ್ಯದ ಬಗ್ಗೆ ಅರೆಸೆಳೆತ, ಅರೆಮರುಕ. ವಿಮರ್ಶೆ, ಸಂಶೋಧನೆ, ಶಿಕ್ಷಣ, ಸಮಾಜ ಮುಂತಾದ ವಲಯಗಳಿಗೆ ಅವಕಾಶ ಸಿಗಬೇಕು ಎನ್ನುವುದು ನಮ್ಮ ಆಶಯವಿರಬೇಕು. ಹೆಚ್ಚು ಪುಟಗಳು ಎಂದರೆ, ಹೆಚ್ಚು ಹಣ! ಬರುವುದಲ್ಲ, ಖರ್ಚಾಗುವುದು. ನಮಗಿದ್ದ ಮುಖ್ಯ ಆಸರೆ ರಾಜು ಮತ್ತು ಅವರ ಕುಟುಂಬ ವರ್ಗ, ಇಳಾ ವಿಜಯ ಮತ್ತು ಅವರ ಕುಟುಂಬವರ್ಗ. ಒಂದು ಮಾತಂತೂ ನಿಜ. ನಮ್ಮಲ್ಲಿ ಯಾರೂ 'ಸ್ಟಾರು'ಗಳಿರಲಿಲ್ಲ, ಡಾನುಗಳಿರಲಿಲ್ಲ, 'ಅಂಕಣ'ದೊಂದಿಗೆ ನಾವು ಬೆಳೆದೆವು, ನಮ್ಮೊಂದಿಗೆ ಅದು ಬೆಳೆಯಿತು. ಒಂದೇ ದಿಕ್ಕಿನಲ್ಲಿಯೋ ಬೇರೆ ಬೇರೆ ದಿಕ್ಕುಗಳಲ್ಲಿಯೋ? (ಬೆಳವಣಿಗೆಗೂ ಬದಲಾವಣೆಗೂ ಏನು ವ್ಯತ್ಯಾಸ?!) ಹೇಳುವುದು ಕಷ್ಟ.

'ಅಂಕಣ'ದ ಮೊದಲ ಹೆಸರು 'ಆಲೋಕ'. ಅದಕ್ಕೆ ಅನುಮತಿ ಸಿಗಲಿಲ್ಲ. ಮೂರು ಸಂಚಿಕೆಗಳ ನಂತರ 'ಅಂಕಣ' ಹುಟ್ಟಿಕೊಂಡಿತು. ನಮ್ಮೆಲ್ಲರ ಗೆಳೆಯರಾದ ಬರಗೂರು ರಾಮಚಂದ್ರಪ್ಪನವರು, 'ಕೊಂಚ ಈ ಲೋಕಕ್ಕೂ ಬನ್ನಿ' ಎಂದು ಪ್ರೀತಿಯ, ಸರಿಯಾದ ಒತ್ತಾಯ ಮಾಡಿದ್ದು ಇನ್ನೂ ನೆನಪಿದೆ. ಹೌದು. ನಮಗೆ ಆಗ ನವ್ಯದ ಲೋಕ ಮತ್ತು ಬಂಡಾಯದ ಲೋಕ ಎರಡೂ ದೂರದಲ್ಲಿಯೇ ಇದ್ದವು. ಆದರೆ ನಾವು, ಸಾಮಾಜಿಕ ಎಚ್ಚರ ಹಾಗೂ ಹೋರಾಟಗಳಿಂದ ದೂರ ಇರಲಿಲ್ಲ. ಅಂಕಣದಲ್ಲಿ ಆ ರಕಮಿನ ಅನೇಕ ಲೇಖನಗಳು ಬಂದವು. ಈ ಪತ್ರಿಕೆಯ ಚೌಕಟ್ಟಿನೊಳಗೆ ಯಾವುದು ಎಷ್ಟು ಬರಬೇಕು, ಹೇಗೆ ಬರಬೇಕು ಎಂಬ ಬಗ್ಗೆ ನಮಗೆ ಕೆಲವು ನಿಲುವುಗಳು ಇದ್ದವು. ಯಾರು ಬರೆಯುತ್ತಾರೆ ಎನ್ನುವುದು ನಮಗೂ ಸ್ಪಷ್ಟವಿರಲಿಲ್ಲ. ನಾವಂತೂ ಇದ್ದೇಇದ್ದೆವು. ಬಹಳ ಬಿಕ್ಕಟ್ಟಾದ 'ಟೆಲಿಗ್ರಾಫಿಕ್' ಭಾಷೆಯಲ್ಲಿ ಬರೆಯುವುದರಲ್ಲಿ ಒಬ್ಬರಿಗಿಂತ ಒಬ್ಬರು ನಿಪುಣರು. ಆತ್ಮವಿಶ್ವಾಸಕ್ಕೇನೋ ಕೊರತೆಯಿರಲಿಲ್ಲ. ಇನ್ನೂರು ಪ್ರತಿಗಳು ಮಾರಾಟವಾದರೆ, ಸಕ್ಸೆಸ್, ಮುನ್ನೂರಾದರೆ ಬಂಪರ್.

ಮೊದಲ-ಸಂಚಿಕೆಯಲ್ಲಿಯೇ ನಾಲ್ಕು ಲೇಖನಗಳು,(ಕಿ.ರಂ., ಕೆ.ವಿ.ಎನ್., ಕಲ್ಗುಡಿ ಮತ್ತು ನಾನು) ತಾತ್ವಿಕತೆ, ಪ್ರಗತಿಪರವಾದ ದಾಖಲೆಗಳ ಪರಿಶೀಲನೆ, 'ಜನಪ್ರಯ ಸಾಹಿತ್ಯ'ದ ವಿಶ್ಲೇಷಣೆ... ಇವೆಲ್ಲದರ ಜೊತೆಗೆ ಕೆಲವು ಸ್ಥಿರ ಶೀರ್ಷಿಕೆಗಳು: ಕಾದಂಬರಿಯೊಂದರ ವಿಮರ್ಶೆ, (ಮುಕ್ತಿ, ಹಳದಿಮೀನು...) ಪಾಶ್ಚಾತ್ಯ ಪುಸ್ತಕವೊಂದರ ಪರಿಚಯ, (The Modern Tradition...) ಇತ್ಯಾದಿ. ಅದು ಇನ್ನೂ ಹೊರಗಿನಿಂದ ಬಂದಿದ್ದು ಅಸ್ಪೃಶ್ಯವೆನಿಸದ ಕಾಲ. ಆದರೂ ಆ ದಿನಗಳಲ್ಲಿಯೇ ಕಲ್ಗುಡಿ 'ಓರಿಯೆಂಟಲಿಸಂ'ನ ಜಾತಕ ಬಿಡಿಸುವ ಲೇಖನ ಬರೆದಿದ್ದರು.

ನಿಧಾನವಾಗಿ ಪತ್ರಿಕೆಗೆ ಒಂದು 'ಐಡೆಂಟಿಟಿ' ಬಂತು. ಜನಪ್ರಿಯವಾಗುವ ಹಂಬಲವಿಲ್ಲದ, ಅತಿಗಂಭೀರವಾದ ಬರವಣಿಗೆಗಳ ಮೊತ್ತವೆಂಬ ಐಡೆಂಟಿಟಿ. ಆದರೆ, ಯಾರೂ ಅದನ್ನು ಕಡೆಗಣಿಸಲಿಲ್ಲ, ಎದೆಗಪ್ಪಿಕೊಳ್ಳಲೂ ಇಲ್ಲ. ಒಂದು ಘಟನೆ ನೆನಪಿಗೆ ಬರುತ್ತಿದೆ. ಹಲವು ದಿನಗಳ ಹಿಂದೆ, ಮಾಸ್ತಿಯವರ ಮನೆಗೆ ಹೋಗಿ, 'ಅಂಕಣ'ದ ಕೆಲವು ಪ್ರತಿಗಳನ್ನು ಕೊಟ್ಟುಬಂದಿದ್ದೆವು. ಆಮೇಲೆ ಒಂದು ದಿನ ಗುರುಗಳಾದ ಚಿದಾನಂದಮೂರ್ತಿಯವರೊಂದಿಗೆ ಮತ್ತೆ ಅವರ ಮನೆಗೆ ಹೋಗಿದ್ದೆವು. ರಾಜು ಮತ್ತು ನಾನು ಎರಡು ಗುಂಪುಗಳಲ್ಲಿಯೂ ಇದ್ದೆವು. ಮಾಸ್ತಿಯವರು ಚಿದಾನಂದಮೂರ್ತಿಯವರ ಸಂಗಡ ಮಾತನಾಡುತ್ತಾ, ''ನೋಡಿ, ಮೊನ್ನೆ ಯಾರೋ ಹುಡುಗರು ಬಂದಿದ್ರು. ಒಂದು ಮಾಸಪತ್ರಿಕೆ ಕೊಟ್ಟುಹೋದರು. ಓದಲು

ಪ್ರಯತ್ನಿಸಿದೆ. ನನಗೇ ಏನೂ ಅರ್ಥವಾಗಲಿಲ್ಲ. ಹುಡುಗುಬುದ್ಧಿ. ಏನು ಬರೀತಾರೋ ಏನೋ?' ಎಂದರು. ನಮ್ಮ ಮೇಷ್ಟ್ರು ಪಾ..ಪ, ''ಇಲ್ಲ ಸಾರ್, ಅವರೆಲ್ಲ ಸಾಹಿತ್ಯದ ಗಂಭೀರ ವಿದ್ಯಾರ್ಥಿಗಳು. ಬುದ್ಧಿವಂತರು.' ಎಂದರು. ಹಿರಿಯರು (ಎಂದಿನಂತೆ?) ಕೇಳಿಸಿಕೊಳ್ಳಲಿಲ್ಲ. ನಮಗೋ 'ಕಾಲರ್ಸ್ ಅಪ್' ಮತ್ತು 'ನಾಚಿಕೆ', ಒಟ್ಟೊಟ್ಟಿಗೆ.

ಪತ್ರಿಕೆಯ ಎಲ್ಲ ಸಂಚಿಕೆಗಳ ಖಾನೇಶುಮಾರಿ ಮಾಡುವ ಉದ್ದೇಶ ನನಗಿಲ್ಲ. ಅದು ಹಿರಿಯರು, ಕಿರಿಯರು ಎಲ್ಲರನ್ನೂ ಒಳಗೊಳ್ಳುವ ಪ್ರಯತ್ನ ಮಾಡಿತು. ಮುಗಳಿಯವರು, ಅಡಿಗರು, ಶ್ರೀರಂಗ, ನರಸಿಂಹಸ್ವಾಮಿ, ಜಿ.ಜಿ.ಎಲ್. ಸ್ವಾಮಿ, ಚಿತ್ತಾಲ, ಪಾರಿ, ಜಿಳಿಗಿರಿ. ಎನ್.ಎಸ್.ಎಲ್, ಕೆ. ಸತ್ಯನಾರಾಯಣ, ವಿಲಿಯಂ ಫಾಕ್ನರ್, ಎರಿಕ್ ಫ್ರಾಂ, ಯೂಂಗ್, ಫ್ರಾಯ್ಡ್ ಟಿ.ಪಿ.ಅಶೋಕ... ಎಷ್ಟೊಂದು ಜನ? 'ಸ್ಟ್ರೇಂಜ್ ಬೆಡ್ ಫೆಲೋಸ್'. ಹಾಗೆಯೇ ಎಂದೆಂದಿಗೂ ಅದರಲ್ಲಿ ಏನನ್ನೂ ಬರೆಯದೆ ಹೋದ ಹಿರಿಯ ಕಿರಿಯ ಲೇಖಕರೂ ಇದ್ದಾರೆ. ಯಾಕಿರಬಹುದು? ಅವರು ಕಾರಣವೋ, ನಾವು ಕಾರಣವೋ. ಯಾವಾಗಲೂ ಉತ್ತರಗಳು ಪ್ರಶ್ನೆಯಷ್ಟು ಸರಳವಲ್ಲ. ಇದರ ಜೊತೆಗೆ, ಪ್ರಸಿದ್ಧ ಪುರುಷರನ್ನು ವಾಗ್ವಾದಗಳಲ್ಲಿ ಎದುರಿಸಬೇಕಾದರೆ, ನಾವು ಗೆಳೆಯರೇ ಇಟ್ಟುಕೊಂಡ ಗುರುಮೂರ್ತಿ, ರಾಮಕೃಷ್ಣ ಮುಂತಾದ 'ಕಟ್ಟುಹೆಸರುಗಳು' ನೆರವಾದವು. ಬೇಕಾದಷ್ಟು ಮುಖ್ಯ ವಿಷಯಗಳನ್ನು ಕುರಿತ ಹತ್ತು ಹಲವು ಲೇಖನಗಳು ಬಂದವು. ಮೂರು ವಿಶೇಷ ಸಂಚಿಕೆಗಳು ಹೊರಬಂದವು. 'ಅಂಕಣ ಕಾವ್ಯ ವಿಶೇಷಾಂಕ', 'ಬೇಂದ್ರೆ ವಿಶೇಷಾಂಕ' ಮತ್ತು 'ಶ್ರೀರಂಗ ವಿಶೇಷಾಂಕ'.

ಆದರೆ, ಅವೆಲ್ಲಕ್ಕೂ ಇದ್ದ ಫೋಕಸ್ ಯಾವುದು? ಅಂಥದೊಂದು ಇತ್ತೇ? ಮೊದಮೊದಲು ಇದ್ದರೂ ಕೊನೆಕೊನೆಗೆ ಕರಗಿಹೋಯಿತೆಂದು ನನಗೆ ತೋರುತ್ತದೆ. ಹಾಗಾದಾಗ, ಸಾಹಿತ್ಯ/ಸಾಮಾಜಿಕ ನಿಯತಕಾಲಿಕಗಳು 'ಸ್ವೈರ ಬರೆಹ'ಗಳ ಸಂಕಲನ ಆಗಿಬಿಡುತ್ತದೆ. ಅದು ದುರಂತ. ಅದು, ಆ ಪತ್ರಿಕೆಯ ಸಾವಿನ ಹಿಂದಿನ ಹೆಜ್ಜೆ. ಉದಾಹರಣೆಗೆ 'ಅಂಕಣ'ದ ಕೊನೆಯ ಸಂಚಿಕೆಯಲ್ಲಿ ಕೇವಲ ಎರಡು ಲೇಖನಗಳಿದ್ದವು. ಎರಡೂ ಟಿ.ಪಿ. ಅಶೋಕ ಅವರೇ ಬರೆದವು. ನನಗೆ ತೋರುವಂತೆ ಕೊನೆಕೊನೆಗೆ ಪತ್ರಿಕೆಯ ಎಲ್ಲ ಭಾರಗಳೂ ಶ್ರೀನಿವಾಸರಾಜು ಅವರ ಹೆಗಲ ಮೇಲೆ ಬಿದ್ದಿದ್ದು ಕೂಡ ಇದಕ್ಕೆ ಕಾರಣ. ಉಳಿದವರು ಬೇರೆ ಬೇರೆ ಊರುಗಳಲ್ಲಿ ಬೇರೆಬೇರೆ ಲೋಕಗಳಲ್ಲಿ ಹಂಚಿಹೋಗಿದ್ದೆವು. ಕೂಡುಕೆಲಸವಾಗಿ ಮೊದಲಾಗಿದ್ದು ಹಾಗೆ ಉಳಿದಿರಲಿಲ್ಲ. ಎಷ್ಟೋ ಪತ್ರಿಕೆಗಳು ಆಗಲೂ ಸಾಯದೆ ಉಸಿರೆಳೆಯುತ್ತಿರುತ್ತವೆ. ಇಂದಿನ ಹಲವು ಪತ್ರಿಕೆಗಳ ಹಾಗೆ. 'ಅಂಕಣ' ಹಾಗೆ ಸತ್ತುಹೋಯಿತು ಮತ್ತು ನಿಂತುಹೋಯಿತು.

ಸುಮಾರು ಹದಿನೆಂಟು ವರ್ಷಗಳ ನಂತರ ಆಲೋಚನೆ ಮಾಡಿದಾಗ, 'ಅಂಕಣ' ಬಂದಿದ್ದು, ನಿಂತಿದ್ದು ಎರಡೂ ದೊಡ್ಡ ಸಂಗತಿ ಎನಿಸುವುದಿಲ್ಲ. ಕೆಲಸದಲ್ಲಿ ತೊಡಗಿಕೊಂಡ ದಿನಗಳಲ್ಲಿ ಪಡೆದ ಸಾಂಗತ್ಯ ಮತ್ತು ಉಲ್ಲಾಸಗಳಷ್ಟೆ ನಮಗೆ ರೋಚಕ. ಒಂಟಿಯಾಗಿ ಮಾಡುವ ಕೆಲಸದಲ್ಲಿ ಇಲ್ಲದ ಒಂದು ಖುಷಿಯು ಕೂಡಿ ಕೆಲಸ ಮಾಡುವುದರಲ್ಲಿ ಇರುತ್ತದೆ. ಇನ್ನೊಂದು ಸಂಗತಿಯೆಂದರೆ, ಅಲ್ಲಿ ಬರೆಯುತ್ತಿದ್ದ, ಅದನ್ನು ನಡೆಸುತ್ತಿದ್ದ ನಾವೆಲ್ಲರೂ ನಿಧಾನವಾಗಿ ನಮ್ಮ ಬರಹದ ಶೈಲಿಯನ್ನು ತಿದ್ದಿಕೊಂಡೆವೆಂದು ತೋರುತ್ತದೆ. ಪಾರಿಭಾಷಿಕ ಖಚಿತತೆಯಷ್ಟೇ ಸಂವಹನವೂ ಮುಖ್ಯವೆಂಬ ಪಾಠವನ್ನು ನಾವು ಅಂಕಣದಿಂದಲೂ ಕಲಿತಿರಬಹುದು. ಇನ್ನೂ ಮುಖ್ಯವಾಗಿ, ಚಳುವಳಿಗಳ ಮುಖವಾಣಿಯಾಗದ, ಸಮುದಾಯಗಳ ಸಂಗಡ ಕ್ರಿಯಾಶೀಲ ಸಂಪರ್ಕಗಳನ್ನು ಕಟ್ಟಿಕೊಳ್ಳದ, ಅಪಾರ ಸಂಪನ್ಮೂಲಗಳಿಲ್ಲದ ಪತ್ರಿಕೆಗಳ ಹಾಡುಪಾಡುಗಳ ಕಡೆಗೆ ನನ್ನ ಮನಸ್ಸು ಹರಿಯುತ್ತಿದೆ. ಇವು ಒಂದು ಕಡೆ ಅಕಡೆಮಿಕ್ ಪತ್ರಿಕೆಗಳೂ ಅಲ್ಲ. ಇನ್ನೊಂದು ಕಡೆ ಜನಪ್ರಿಯ ಸಾಹಿತ್ಯಕ ಪತ್ರಿಕೆಗಳೂ ಅಲ್ಲ. ನಾನು ಬಲ್ಲಂತೆ, ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಕೆಲಸ ಮಾಡುವ

ಅಧ್ಯಾಪಕರಲ್ಲಿ ಶೇಕಡಾ ಐದರಷ್ಟು ಕೂಡ ಇವುಗಳ ಚಂದಾದಾರರಾಗಿರುವುದಿಲ್ಲ. ಪರಿಭಾಷೆಯ ಕಡಲಿನಲ್ಲಿ ಮುಳುಗಿ ತೇಲುತ್ತಿರುವ ಬರಹಗಳನ್ನು 'ಜನಸಾಮಾನ್ಯ'ರು ಓದಬೇಕೆಂದು ನಿರೀಕ್ಷಿಸುವಂತಿಲ್ಲ. ನಾವು ನಾಲ್ಕು ಜನರು ನಮ್ಮದೇ ಆದ ಕೋಟೆಕೊತ್ತಲಗಳನ್ನು ಕಟ್ಟಿಕೊಂಡು ಪಾಳೆಯಗಾರರಾದರೆ ಅದು ಪತ್ರಿಕೆಯ ದುರ್ಬಳಕೆ. ಪತ್ರಿಕೆ ನಡೆಸುವವರು, ಅದರಲ್ಲಿ ಬರೆಯುವವರು, ಕೊಳ್ಳುವವರು ಎಲ್ಲರೂ ಪರೋಪಕಾರ ಬುದ್ಧಿಯಿಂದ ಪ್ರೇರಿತರಾದ ಸಾಧುಜೀವಿಗಳಾಗಿರುವುದಿಲ್ಲ. ಹೀಗಾಗಿ, ಇಂಥ ಕೆಲಸಗಳು, 'ಪ್ರೊಫೆಷನಲ್' ಆಗಿರುವುದಿಲ್ಲ. ಹಾಗೆಂದು ಅತಿ ಪ್ರೊಫೆಷನಲ್ ಆದರೆ, ಕಾಗದದ ಹೂಗಳು ಸೃಷ್ಟಿಯಾಗುತ್ತವೆ. ಇದು ತಂತಿಯ ಮೇಲಿನ ನಡಿಗೆ.

ನಾವೆಲ್ಲರೂ ಇಂತಹ ಪತ್ರಿಕೆಗಳ ಹಳೆಯ ಸಂಚಿಕೆಗಳನ್ನು ಕಾಪಾಡಿಕೊಳ್ಳುವ ಬಗ್ಗೆ ಯೋಚಿಸಬೇಕು. 'ಅಂಕಣ'ದ ಪ್ರತಿ ಸಂಚಿಕೆಗಳನ್ನು ರಾಜು ಅವರು ಬೇಕೆಂದೇ ಬದಿಗಿಡುತ್ತಿದ್ದರು. ಕೊನೆಗೆ ಅವೆಲ್ಲವನ್ನೂ ಒಟ್ಟಿಗೆ ಬೈಂಡ್ ಮಾಡಿಸಿ ಸಂಯುಕ್ತ ಸಂಚಿಕೆಗಳನ್ನು ತಂದೆವು. ಅನಂತರದ ದಿನಗಳಲ್ಲಿ 'ಅಭಿನವ'ದ ರವಿಕುಮಾರ್ ಅವರು ಕೂಡ ಇನ್ನಷ್ಟು ಸಂಯುಕ್ತಸಂಪುಟಗಳನ್ನು ತಂದರು. ಈ ದಿನಗಳಲ್ಲಿ ಇವುಗಳನ್ನು ಡಿಜಿಟೈಸ್ ಮಾಡಿಸುವ ಸಾಧ್ಯತೆಗಳಿವೆ. 'ಸಾಕ್ಷಿ'ಯ ಎಲ್ಲ ಸಂಚಿಕೆಗಳೂ 'ಸಿ.ಡಿ.'ಯ ರೂಪದಲ್ಲಿ ಲಭ್ಯವಾಗಿ ಅಂತರ್ಜಾಲದಲ್ಲಿ ದೊರಕುತ್ತವೆ. ಹೀಗೆ ಹಳೆಯದನ್ನು ಉಳಿಸಿಕೊಳ್ಳುವ ಮತ್ತು ಬಳಸಿಕೊಳ್ಳುವ ಹಾಗೂ ಪರೀಕ್ಷೆಗೆ ಒಳಪಡಿಸುವ ಕೆಲಸದಲ್ಲಿಯೂ ನಾವು ತೊಡಗಿಕೊಳ್ಳಬೇಕೇನೋ.

ಕೊನೆಗೂ 'ಅಂಕಣ' ಕೂಡ ಶ್ರೀನಿವಾಸರಾಜು ಅವರ ಕೂಸುಗಳಲ್ಲಿ ಒಂದು ಆಗಿತ್ತು. ಅವರು ಅದನ್ನು ಭೌತಿಕವಾಗಿ ಪೊರೆದರು, ತಮಗಿದ್ದ ಅಪಾರ ತಿಳಿವಳಿಕೆಯಿಂದ ಅದಕ್ಕೆ ತೊಂದರೆಯಾಗದಂತೆ ನೋಡಿಕೊಂಡರು. ಉಳಿದವರು ಬೌದ್ಧಿಕವಾಗಿ ಅದಕ್ಕೆ ಹೊಳಹುಗಳನ್ನು ನೀಡಿದರು. ಅದು ನಮಗೆ ನೀಡಿದ ಅನುಭವಕ್ಕೆ ನಾನು ಋಣಿ.

೨೯-೧೦-೨೦೧೨

ಕಿರುಪತ್ರಿಕೆ ಮತ್ತು ಹಿರಿವಿಜ್ಞಾನಿ

ಎಚ್.ಎಸ್. ರಾಘವೇಂದ್ರ ರಾವ್

ಕಲ್ಕತ್ತಾಗೆ ಹೋದ ಮರುದಿನವೇ ಕೈಗೆ ಸಿಕ್ಕ Calcutta : This fortnight ಅನ್ನು ಓದಿದ 'ಅಂಕಣರಾಜು' ಅವರಿಗೆ ರೋಮಾಂಚನವಾಗಿತ್ತು. ಏಕೆಂದರೆ ನಾವು ಅಲ್ಲಿರುವ ಅವಧಿಯಲ್ಲಿಯೇ ಕಿರುಸಾಹಿತ್ಯಕ ಪತ್ರಿಕೆಗಳ ಪ್ರದರ್ಶನವೊಂದು ನಡೆಯಲಿದೆಯೆಂಬ ಸುದ್ದಿ ಆದರಲ್ಲಿತ್ತು. ಅಂಕಣ, ರುಜುವಾತು, ಶೂದ್ರ, ಸಂಕ್ರಮಣ, ಸಂವಾದಗಳೆಲ್ಲದರ ಪರವಾಗಿ ಆದನ್ನು ನೋಡಲೇಬೇಕೆಂದು ನಿರ್ಧರಿಸಿದ್ದ ನಾವು ಆ ದಿನ ಸಂಜೆ, ಒಲ್ಲದ ಹೆಂಡತಿ ಮಕ್ಕಳನ್ನು ಜೊತೆಯಲ್ಲಿ ಕರೆದುಕೊಂಡು ಅಲ್ಲಿಗೆ ಹೋದೆವು.

ಸಾಹಿತ್ಯಕ ಪತ್ರಿಕೆಗಳು ಎಂದರೆ ಬಂಗಾಳಿಗಳಿಗೆ ಅನ್ನ-ನೀರು-ಗಾಳಿ ಇದ್ದ ಹಾಗೆ. ಓದುವುದು ಮಾತ್ರವಲ್ಲ ಪ್ರಕಟಿಸುವುದು ಕೂಡ. ಕನ್ನಡದಲ್ಲಿ ಒಂದು ಪತ್ರಿಕೆಯ ಎಷ್ಟು ಪ್ರತಿಗಳನ್ನು ಮುದ್ರಿಸುತ್ತೇವೆಯೋ, ಅಷ್ಟು ಪತ್ರಿಕೆಗಳೇ ಬಂಗಾಳಿಯಲ್ಲಿವೆಯೆಂದು ಕಾಣುತ್ತದೆ. ಅಶೋಕಮಿತ್ರ ಅವರು ತಮ್ಮ The Quashing of Many Dreams ಎಂಬ ಲೇಖನದಲ್ಲಿ ಹೇಳಿರುವಂತೆ;

> "Good, bad, often indifferent, together they still constituted a climate. A mirror to the Bengali middle class life,

you could say. Insufferable egotism, matinee kind sentimentalism, wide eyed sensitiveness, in corrigiblemihilism, malice stemming from close claustrophobic existence. The imagination full audacity, the courage to dream impossible dreams, the courage to compose incredibly sensuous lines, the total indifference eve to the basic rudiments of economics and finance, dangerous survival from day to day…. A complex of urges would grope around in search of an outlet. The libido must have other alternatives for its sublimation. If there is not going to be any letting out of words who knows, there might be a whole lot of extra letting of blood."

(Calcutta Diary 91, 93)

ಸಣ್ಣ ಪತ್ರಿಕೆಗಳ ಸ್ವರೂಪ ಮತ್ತು ಅಗತ್ಯವನ್ನು ಕುರಿತು ಇದಕ್ಕಿಂತ ಚೆನ್ನಾಗಿ ಹೇಳಲು ಸಾಧ್ಯವಿಲ್ಲ.

ನಾವು ನೋಡಿದ ಪ್ರದರ್ಶನ ಮತ್ತು ಅದಕ್ಕಿಂತ ಹೆಚ್ಚಾಗಿ ಅಲ್ಲಿದ್ದ ವ್ಯಕ್ತಿಗಳು ಈ ಮಾತುಗಳಿಗೆ ಪುರಾವೆ ನೀಡಿದರು. ಅಪೂರ್ವಸಾಹಾ ಎನ್ನುವವರು ಅಖಿಲ ಬಂಗಾಳ ಸಣ್ಣ ಪತ್ರಿಕೆಗಳ ಸಂಘದ ಉಪಾಧ್ಯಕ್ಷರಂತೆ. ಇವರು ಸರ್ಕಾರದ ಅಸಹಕಾರ ಮತ್ತು ಪಕ್ಷಪಾತದ ಬಗ್ಗೆ ಗೊಣಗಿದರೂ ಕೂಡ ನಮಗೆ ಚಹದ ಜೊತೆಗೆ ಅನೇಕ ಉಪಯುಕ್ತ ಮಾಹಿತಿಗಳನ್ನು ನೀಡಿದರು.

ಇಲ್ಲಿ ಆದ ಹಾಗೆ ಅಲ್ಲಿಯೂ ಕೂಡ ಸಾಹಿತ್ಯಕ ಪತ್ರಿಕೆಗಳ ಇತಿಹಾಸವು ಸಾಹಿತ್ಯದ ಇತಿಹಾಸದೊಂದಿಗೆ ತಳುಕು ಹಾಕಿಕೊಂಡಿದೆ. ಅತ್ಯಂತ ಹಿರಿಯ ಸಾಹಿತಿಗಳು ತಮ್ಮ ಬರವಣಿಗೆಯ ಮಾಧ್ಯಮವಾಗಿ ಪತ್ರಿಕೆಗಳನ್ನು ಕಂಡುಕೊಂಡಿದ್ದಾರೆ. ಬೇರೆ ಬೇರೆ ಸಾಹಿತ್ಯ ಪಂಥಗಳು ಮತ್ತು ಚಳವಳಿಗಳು ತಮ್ಮ ಮುಖವಾಣಿಯಾಗಿ ಹಲವು ದಶಕಗಳಿಂದಲೇ ಸಾಹಿತ್ಯಕ ಪತ್ರಿಕೆಗಳನ್ನು ನಡೆಸಿಕೊಂಡು ಬಂದಿವೆ.

ತತ್ತ್ವಬೋಧಿನಿ ಪತ್ರಿಕಾ(೧೮೪೩), ಸೋಮ ಪ್ರಕಾಶ(೧೮೫೮), ಬಂಕಿಮಚಂದ್ರ ಚಟರ್ಜಿಯವರನ್ನು ಕೇಂದ್ರಬಿಂದುವಾಗಿ ಹೊಂದಿದ್ದ, ಆಮೇಲೆಯೂ ಹಲವು ಹಂತಗಳಲ್ಲಿ ಬೆಳೆದ 'ಬಂಗದರ್ಶನ', 'ಭಾರತಿ' (೧೮೭೭), 'ಬಾಂಧವ' (೧೯೭೪), 'ಸಾಹಿತ್ಯ'(೧೯೯೦) ಮುಂತಾದವು ಈ ಕ್ಷೇತ್ರದಲ್ಲಿ ಮೊವಲಿಗರು.

ಬಂಗಾಳಿಯಲ್ಲಿ ಪ್ರಗತಿಶೀಲ ಅಲೆಯನ್ನು ಮೊದಲಬಾರಿಗೆ ಉದ್ಘಾಟಿಸಿದ ಬಹುಪಾಲು ಪತ್ರಿಕೆಗಳು ಡಾಕಾದಲ್ಲಿ ಮೊದಲಾದವು. 'ಕಲ್ಲೋಲ್', 'ಕಾಲಿಕಾಲಮ್', 'ಪ್ರಗತಿ' ಮುಂತಾವ ಹೆಸರುಗಳೇ ಆ ಮಾತಿಗೆ ಸಾಕ್ಷಿಯಾಗಿವೆ. ಸುಧೀಂದ್ರನಾಥ ದತ್ತ ಅವರು ನಲವತ್ತು ವರ್ಷಗಳ ಹಿಂದೆಯೇ ಪ್ರಾರಂಭಿಸಿ, ಇಂದಿಗೂ ಮಾರ್ಕ್ಸಿಸ್ಟ್ ವಿಮರ್ಶೆಯ ಆಧಾರವಾಗಿ ನಡೆದುಕೊಂಡು ಬರುತ್ತಿರುವ 'ಪರಿಚಯ್', 'ಪ್ರಮುಖ ಲೇಖಕ ಬುದ್ಧದೇವ್ ಬಸು ಅವರು ಸ್ಥಾಪಿಸಿರುವ 'ಕವಿತಾ', ವಿಮರ್ಶೆಗೇ ಮೀಸಲಾಗಿರುವ ಸಂಜೀವ ಚಕ್ರವರ್ತಿಯವರ 'ಸಾಹಿತ್ಯ ಮತ್ತು ಸಂಸ್ಕೃತಿ' ಹೀಗೆಯೇ ಹೆಸರುಗಳ ಪಟ್ಟಿಯನ್ನು ಬೆಳೆಸಬಹುದು. 'ಜಾಗೋರಿ', 'ಅನುಷ್ಟುಪ್', 'ಸಾಹಿತ್ಯ ಚಿಂತಕ್' ಮುಂತಾದವು ಇನ್ನೂ ಕೆಲವು.

ಆದರೆ ಸಂಗೀತಕ್ಕೆ ಮೀಸಲಾದ 'ರಾ-ಪತ್ರಿಕಾ' ಕುರಿತು ಒಂದು ಘಟನೆ ಹೇಳಬೇಕು. ನಾವು ನಮಗೆ ಬರದ ಬಂಗಾಳೀ ಹೆಸರುಗಳನ್ನು ನೋಡುತ್ತಿದ್ದಾಗ, ಸುಮಾರು ಮೂವತ್ತು ವರ್ಷಗಳ ಯುವಕನೊಬ್ಬ ಪ್ರತ್ಯಕ್ಷನಾದ. ನಮ್ಮನ್ನು ಒಂದು ಮೂಲೆಗೆ ಕರೆದುಕೊಂಡು ಹೋಗಿ ಒಂದು ಪತ್ರಿಕೆಯನ್ನು ತೆಗೆದುಕೊಟ್ಟ.

''ನೋಡಿ, ಇದು 'ರಾ-ಪತ್ರಿಕೆ' ಇದು ಸಂಗೀತಕ್ಕೆ ಮೀಸಲಾದ ಪತ್ರಿಕೆ. ಇದರ ಸಂಪಾದಕರು ರಿತೇಶ್ ಚಕ್ರವರ್ತಿ. ಅನೇಕ ವರ್ಷಗಳಿಂದ ಚೆನ್ನಾಗಿ ಬರುತ್ತಿದೆ. ಬಂಗಾಳಿಯಲ್ಲಿ ಇಂಥ ಪತ್ರಿಕೆ ಮತ್ತೊಂದಿಲ್ಲ...''

ನಮಗೇಕೋ ಅನುಮಾನ ಬಂತು. ನಿಮ್ಮ ಹೆಸರೇನೆಂದು ವಿಚಾರಿಸಿದೆವು. ಬಿಲ್ಲಿನಿಂದ ಚಿಮ್ಮುವ ಬಾಣದಂತೆ ಉತ್ತರ ಬಂತು.

"I am Ritesh Chakravarti, the editor of Ra-Patrika" ಇಂಥ ಹಲವು ಅಣ್ಣಂದಿರು ನಮಗೆ ತಗುಲಿಕೊಳ್ಳುವ ಅಪಾಯ ಸ್ಪಷ್ಟವಾಗಿ ಕಾಣತೊಡಗಿತು. ತಮ್ಮ ಹೆಸರು, ಪತ್ರಿಕೆ ಕರ್ನಾಟಕದಲ್ಲಿ ಡಾಣಾಡಂಗುರವಾಗುವುದಾದರೆ ಯಾರಿಗೆ ಬೇಡ?

ಅಷ್ಟರಲ್ಲಿ ರಾಜು ಅವರಿಗೆ ಒಂದು ಅಪಾಯಕಾರಿ ಆಹ್ವಾನ ಬಂತು. ಅಲ್ಲಿ ಆಗಲೇ ಆ ಸಂಸ್ಥೆಯದೇ ಆಶ್ರಯದಲ್ಲಿ ಒಂದು ಕವಿಗೋಷ್ಠಿ ನಡೆಯಲಿತ್ತು. ವಾತಾವರಣ ನಿಧಾನವಾಗಿ ಉತ್ಸಾಹವನ್ನು ತುಂಬಿಕೊಳ್ಳತೊಡಗಿತು. ಹಾಲ್‌ನ ಮಧ್ಯದಲ್ಲಿ ಒಂದು ಹರಕು ಜಮಖಾನ ಪ್ರತ್ಯಕ್ಷವಾಯಿತು. ಅದರ ಮೇಲೆ ಒಂದು ಮೈಕ್, ಒಂದು ಧ್ವನಿ ಪೆಟ್ಟಿಗೆ. (ಬೇಕಾದರೆ ಓದಬಹುದು, ಬೇಡವಾದರೆ ಹಾಡಬಹುದು) ಕವಿಸೈನ್ಯ ಜಮಾಯಿಸಿತು. ರಾಜು ಅವರನ್ನು ದಯವಿಟ್ಟು 'ಕೊನ್ನಡ್ ಕೊಬಿತಾ' ಓದುವಿರಾ ಎಂದು ಕೇಳಿದರು. ಅವರಿಗೆ ಆಸಕ್ತಿಯಿರಲಿಲ್ಲ.


ಏನಾದರಾಗಲೀ ಕಾಳೀಪೂಜೆ, ದುರ್ಗಾಪೂಜೆ, ರವೀಂದ್ರರ ಜನ್ಮೋತ್ಸವಗಳಿಗೆಂದೇ ೮೦೦ರಿಂದ ೧೨೦೦ ವಿಶೇಷಾಂಕಗಳನ್ನು ಹೊರತರುವ 'ಬಾಬು'ಗಳ ಉತ್ಸಾಹ ಮತ್ತು ಅವನ್ನು ಕೊಂಡು ಓದುವವರ ಆಸಕ್ತಿಗೆ ಹೋಲಿಸಿದಾಗ, ಹಾಗೂ-ಹೀಗೂ ಕುಟುಕು ಜೀವ ಹಿಡಿದಿರುವ ನಮ್ಮ ಮೂರು ಮತ್ತೊಂದು ಸಾಹಿತ್ಯಕ ಪತ್ರಿಕೆಗಳ ಸ್ಥಿತಿ-ಗತಿ ಶೋಚನೀಯವೆನಿಸಿತು.

ಕೃಪೆ : ಜನ ಗಣ ಮನ-೧೯೮೯
ಕರ್ನಾಟಕ ಸಾಹಿತ್ಯ ಅಕಾಡೆಮಿ.

ರುಜುವಾತು

ಹಿನ್ನೆಲೆ

ಎನ್. ವಿದ್ಯಾಶಂಕರ್



ಸುಮಾರು ೧೯೭೭ರಲ್ಲಿ ನಾನು ಸಾಹಿತ್ಯದ ಜಗತ್ತಿಗೆ ತೆರೆದುಕೊಂಡೆ. ಅದರಲ್ಲೂ ಗೋಪಾಲಕೃಷ್ಣ ಅಡಿಗರ ಸಮಗ್ರ ಕಾವ್ಯದ ಸಂದರ್ಭದಲ್ಲಿ, ನನ್ನ ಜೊತೆ ರಿಸರ್ವ್ ಬ್ಯಾಂಕಿನ ಸಹೋದ್ಯೋಗಿಯಾಗಿದ್ದ ಕೆ. ಸತ್ಯನಾರಾಯಣರ ಮೂಲಕ. ಅಡಿಗರನ್ನು ಮೊದಲ ಬಾರಿಗೆ ಭೇಟಿಯಾಗುವ ಅವಕಾಶವೂ ದೊರೆಯಿತು. ಆ ಕಾಲದಲ್ಲಿ ಸಾಹಿತ್ಯಕ ಚರ್ಚೆಗಳು ಸಣ್ಣ ಸಣ್ಣ ಗುಂಪುಗಳಲ್ಲಿ ತೀವ್ರವಾಗಿ ನಡೆಯುತ್ತಿತ್ತು. ಕಿ.ರಂ. ಮನೆಯಲ್ಲೋ, ಲಾಲ್‌ಬಾಗ್‌ನಲ್ಲೋ ನಾವು ಕೆಲವು ಆಸಕ್ತರು ಸೇರುತ್ತಿದ್ದೆವು. ಸಾಹಿತ್ಯ, ರಾಜಕೀಯ ಮೊದಲಾದ ಸಂಗತಿಗಳು ಚರ್ಚಿಸಲ್ಪಡುತ್ತಿದ್ದವು. ಅಂಥದ್ದೇ ಒಂದು ಭೇಟಿಯಲ್ಲಿ ಜಿ.ರಾಮಕೃಷ್ಣ, ಮೀಸಲಾತಿ ಕುರಿತು ಮಂಡಿಸಿದ್ದು ಮನಸ್ಸಿನಲ್ಲಿ ಹಸಿರಾಗಿದೆ. ಮೈಸೂರಿನಿಂದ ಬಂದಿದ್ದ ಕೆ.ಸತ್ಯನಾರಾಯಣ ಅಲ್ಲಿನ ಸಾಹಿತ್ಯ ವಾತಾವರಣದಿಂದ ಗಾಢವಾಗಿ ಪ್ರಭಾವಿತರಾಗಿದ್ದರು. ಮೈಸೂರು ಯೂನಿವರ್ಸಿಟಿಯ ಸಾಹಿತ್ಯದ ಆಗುಹೋಗುಗಳು ಪ್ರೇರೇಪಿಸುವಂತಿತ್ತು. ಹಾಗೆ ನೋಡಿದರೆ ಸಾಹಿತ್ಯವಲಯಕ್ಕೆ ನಾನು ಹೊರಗಿನವನು. ಬೆಂಗಳೂರಿನ ಕಂಟೋನ್ಮೆಂಟ್ ಪ್ರದೇಶದಿಂದ ಬಂದವನು. ವಿಜ್ಞಾನದ ವಿದ್ಯಾರ್ಥಿ ಬೇರೆ. ಈ ಗೆಳೆಯರ ಮೂಲಕ ಸ್ವಲ್ಪ ಸ್ವಲ್ಪವಾಗಿ ಸಾಹಿತ್ಯ ವಲಯದೊಳಕ್ಕೆ ಬಂದೆ. ಸಾಕ್ಷಿ ಪತ್ರಿಕೆ ತನ್ನ ಪ್ರಕಟಣೆ ನಿಲ್ಲಿಸಿತು. ಸಾಕ್ಷಿ ಪತ್ರಿಕೆ ಆ ಕಾಲಕ್ಕೆ ಅತ್ಯಂತ ಪ್ರಭಾವಿಯಾಗಿ ಪ್ರಕಟಗೊಳ್ಳುತ್ತಿತ್ತು.ಕಿ.ರಂ., ಕೆ.ಸತ್ಯನಾರಾಯಣ ಮತ್ತು ನಾನು ಸಾಕ್ಷಿ

ನಿಂತಿದೆ, ನಾವು ಯಾಕೆ ಒಂದು ಸಾಹಿತ್ಯ ಪತ್ರಿಕೆ ರೂಪಿಸಬಾರದು ಎಂಬ ಆಲೋಚನೆ ಹೊಳೆಯಿತು. ಚರ್ಚೆಯಲ್ಲಿ ಅಂಥಾ ಪತ್ರಿಕೆ ಮಾಡುವ ಶಕ್ತಿ ಯಾರಿಗಿದೆ ಅನ್ನುವ ಪ್ರಶ್ನೆ ಬಂದಾಗ ಲಂಕೇಶ್ ಅಥವಾ ಅನಂತಮೂರ್ತಿ ಅವರ ಹೆಸರು ಎದುರು ಬಂತು. ಸಹಜವಾಗೇ ನಾವು ಅನಂತಮೂರ್ತಿಯವರನ್ನು ಭೇಟಿ ಮಾಡಿ ಕೇಳಿಕೊಂಡೆವು. ಅದು ನಮ್ಮ ಮೊದಲ ಭೇಟಿ. ತಕ್ಷಣಕ್ಕೆ ಅನಂತಮೂರ್ತಿಯವರೂ ಒಪ್ಪಿಕೊಂಡರು. ಒಂದು ಸಾಹಿತ್ಯ ಪತ್ರಿಕೆಗೆ ಅಗತ್ಯವಿರುವುದು ಎರಡು ಸಂಗತಿಗಳು- ಒಂದು ಬೌದ್ಧಿಕ ಸಂಪನ್ಮೂಲ ಮತ್ತೊಂದು ನಿರ್ವಹಣೆಯ ಭಾಗ. ಬೌದ್ಧಿಕವಾಗಿ ನಾನು ಆ ಕಾಲಕ್ಕೆ ಏನನ್ನೂ ಕೊಡಬಲ್ಲವನಾಗಿರಲಿಲ್ಲ, ಪತ್ರಿಕೆಯ ನಿರ್ವಹಣೆಯ ಭಾಗ ನನ್ನ ಪಾಲಿಗೆ ಬಂತು. ನವ್ಯ ಸಾಹಿತ್ಯದ ಕಾಲದ ಒಂದು ಆದರ್ಶದ ಹಿನ್ನೆಲೆ ರುಜುವಾತುವಿಗಿತ್ತು. ನವ್ಯ ಸಾಹಿತ್ಯ ತನ್ನ ಕೊನೆಯ ಘಟ್ಟದಲ್ಲಿತ್ತು. ಆದರೆ ಒಂದು ವಿಮರ್ಶಾತ್ಮಕ ನೆಲೆ ಆಗ ರೂಪುಗೊಂಡಿತ್ತು. ಸಾಹಿತ್ಯದ ಒಂದು ದೊಡ್ಡ ಕೊಡುಗೆ ಈಗ ವಿಮರ್ಶಾತ್ಮಕ ದೃಷ್ಟಿಕೋನ. ಆಗಿನ ಕಾಲದ ಎಮರ್ಜೆನ್ಸಿ ನಂತರ ರಾಜಕೀಯ ಪರಿಸ್ಥಿತಿಯ ಬಗೆಗೂ ಒಂದು ವಿಮರ್ಶಾತ್ಮಕ ನಿಲುವಿನ ಅಗತ್ಯವಿತ್ತು. ಆ ಕಾಲದ ರಾಜಕಾರಣ, ಸಾಮಾಜಿಕ ವ್ಯವಸ್ಥೆ ಹಾಗೂ ಸಾಹಿತ್ಯ ಇವುಗಳೆಲ್ಲದರ ಬಗ್ಗೆ ಒಂದು ವಿಮರ್ಶಾ ಧೋರಣೆ ಅಗತ್ಯವಾಗಿತ್ತು.

ನವ್ಯದಲ್ಲೂ ಭಿನ್ನತೆಗಳು ಆರಂಭವಾಗಿತ್ತು. ಒಕ್ಕೂಟ ಆಗಿತ್ತು. ಲಂಕೇಶ್ ಪತ್ರಿಕೆಯೂ ಆರಂಭಗೊಂಡಿತ್ತು. ಪರಿಸ್ಥಿತಿ ಹೆಚ್ಚು ಚರ್ಚೆಯಲ್ಲಿತ್ತು. ಸಾಹಿತ್ಯ, ಸಮಾಜ, ಸಂಸ್ಕೃತಿ ಮತ್ತು ರಾಜಕಾರಣ ಈ ನಾಲ್ಕು ವಿಷಯಗಳು ನಮ್ಮಲ್ಲಿ ಮತ್ತೆ ಮತ್ತೆ ಚರ್ಚೆಗೆ ಬರುತ್ತಿತ್ತು. ಲಂಕೇಶ್ ಅನಂತಮೂರ್ತಿ ಇಬ್ಬರೂ ಈ ನಾಲ್ಕು ಕ್ಷೇತ್ರಗಳಲ್ಲಿ ತೀವ್ರವಾಗಿ ತೊಡಗಿಸಿಕೊಂಡಿದ್ದರು. ಅನಂತಮೂರ್ತಿ ರುಜುವಾತುವಿನ ಸಂಪಾದಕರಾಗಿದ್ದು ಒಂದು obvious ಆದ ಆಯ್ಕೆಯಾಗಿತ್ತು. ಈ ಎಲ್ಲಾ ವಿಚಾರಗಳು ಸಾಹಿತ್ಯಿಕವಾದ ಸಂವಹನದಲ್ಲಿ ಒಟ್ಟುಗೊಳ್ಳಬೇಕು ಅಂತ ಬಯಸಿದ್ದೆವು. ಅದು ಸಾಧ್ಯವಾಯಿತು. ಮೊದಲ ಸಂಚಿಕೆ ಅವರು ಬರೆದ 'ಮೌನ ಕಣಿವೆ' silent valley ಕುರಿತ ಲೇಖನ ಅದೊಂದು ಸಾಮಾಜಿಕ ಕೇಂದ್ರಿತವಾದರೂ ಅದರ ಮೂಲಕ ಒಂದು ಸಾಹಿತ್ಯದ ಚರ್ಚೆಯಷ್ಟೇ ಸಹಜವಾಗಿ ಬರಹದಲ್ಲಿ ಮೂಡಿಬಂತು.

ಷುರುವಿನಲ್ಲಿ ಆ ರೀತಿಯ Infrastructure Issueಗಳು ಅಷ್ಟಾಗಿ ಇರಲಿಲ್ಲ, ನಾನು ಉದ್ಯೋಗ ದಲ್ಲಿದ್ದೆ. ಇದರಲ್ಲಿ ತೊಡಗಿಸಿಕೊಳ್ಳುವುದಕ್ಕೆ ಯಾವ ಭಾರವೂ ಇರಲಿಲ್ಲ, ಪ್ರತಿ ಶನಿವಾರ ನನ್ನ ಖರ್ಚಿನಲ್ಲಿ ಮೈಸೂರಿಗೆ ಹೋಗಿ ಬರುತ್ತಿದ್ದೆ. ಪತ್ರಿಕೆಗೆ ನಿರ್ವಹಿಸಲು ಅಂಥಾ ತೊಂದರೆಗಳೇನೂ ಇರಲಿಲ್ಲ, ಈ ರೀತಿಯ ಪತ್ರಿಕೆಗಳಿಗೆ ಬೌದ್ಧಿಕವಾದ ನೆಲೆಯ ಒಂದು ನೆರವು ಅಗತ್ಯವಾಗಿರುತ್ತದೆ. ಅದನ್ನು ಕಿ.ರಂ., ಸತ್ಯನಾರಾಯಣ ಹಾಗೂ ಅನಂತಮೂರ್ತಿ ಮತ್ತು ಅವರ ಮಿತ್ರರು ಒದಗಿಸುತ್ತಿದ್ದರು.

ತಾವು ಹೀಗೊಂದು ಪತ್ರಿಕೆ ನಡೆಸಲು ಉದ್ದೇಶಿಸಿರುವುದಾಗಿ ಅನಂತಮೂರ್ತಿ ಪತ್ರ ಬರೆದಾಗ ಅತ್ಯುತ್ತಮ ಪ್ರತಿಕ್ರಿಯೆ ಬಂತು. ಸಿನಿಮಾ, ಚಿತ್ರಕಲೆ, ರಾಜಕೀಯ ಎಲ್ಲಾ ವಲಯದ ಜನಗಳೂ ಸ್ಪಂದಿಸಿದರು. ದೆಹಲಿಯಿಂದ ಜಾರ್ಜ್ ಫರ್ನಾಂಡಿಸ್ ಬರೆದಿದ್ದರು. ಎಸ್.ಜಿ.ವಾಸುದೇವ ಮೊದಲ ಸಂಚಿಕೆ ಮುಖಪುಟ ರಚಿಸಿದ್ದರು. ಮೈಸೂರಿನ Institute of engineers ನಲ್ಲಿ ಪತ್ರಿಕೆಯ ಬಿಡುಗಡೆ ಸಮಾರಂಭ ಜರುಗಿತು. ಆಗ ಹಾ.ಮಾ. ನಾಯಕ್ ಮುಂತಾದವರು ಅನಂತಮೂರ್ತಿ ಅವರ ಜೊತೆಗೆ ವಿಚಾರಭೇದಗಳಿದ್ದ ಅನೇಕ ಲೇಖಕರು ಬಂದಿದ್ದರು. It was a critical community of people. ಕೆಲ ಕಾಲಾನಂತರ ಮುದ್ರಣ ಕಾರ್ಯ ಮೈಸೂರಿಗೆ ಹೋಯಿತು. ರಾಯಲ್ ೧/೮ ಅಂತ ಸ್ವಲ್ಪ ಭಿನ್ನವಾದ ಗಾತ್ರಕ್ಕೆ ಪತ್ರಿಕೆ ರೂಪಿಸಿದೆವು.

ಆಗ ಸಾಹಿತ್ಯದ ವಾತಾವರಣ ಹಾಗೂ ಸಂದರ್ಭಗಳು, ಕಾಲ ನಮ್ಮ ಪರವಾಗಿತ್ತು. ಈಗಿನಷ್ಟು ಕಠಿಣವಾಗಿರಲಿಲ್ಲ, ಆ ಕಾಲದ ರಾಜಕೀಯ ಧ್ರುವಗಳು ನಮಗೆ ನೆರವಾಗಿದ್ದವು. ಈಗ ಎಲ್ಲ ಪಕ್ಷಗಳದ್ದೂ ಒಂದೇ ಐಡಿಯಾಲಜಿ Economic Ideology. ಸಾಹಿತ್ಯಿಕ ಆದರ್ಶಗಳಿಗೆ ಸೋವಿಯಟ್ ಒಕ್ಕೂಟ

ಕುಸಿದು ಬಿದ್ದ ನಂತರ, Comparitive knowledge ಇಲ್ಲ. ಈಗ ಯಾವುದೇ ವಿಚಾರದ ಪರ ಅಥವಾ ವಿರೋಧ ಏನೇ ಮಾತಾಡಿದರು ಅದು ನಮ್ಮ ಮುಂದಿನ ಆಯ್ಕೆಯಾಗಿ ಅಲ್ಲ. ಆಗ ಕಮ್ಯುನಿಸಮ್ ಮತ್ತು ಸಮಾಜವಾದಗಳು ನಮಗೆ ಮುಂದಿನ ಆಯ್ಕೆಗಳಾಗಿ ಕಾಣಿಸುತ್ತಿದ್ದವು. ಸಾಹಿತ್ಯದ ಮೂಲಕ ಇವುಗಳು ಸಾಧ್ಯ ಅಂತ ಅನ್ನಿಸುತ್ತಿತ್ತು. ಈಗ ನಾವು ಇರುವ ಆಯ್ಕೆಗಳನ್ನು ಪುನಃ ಪರಿಶೀಲಿಸುತ್ತಾ ಇದ್ದೀವಿ. ಮುಂದೇನು ಅಂತ ನೋಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಕಿರುಪತ್ರಿಕೆಗಳು ಆ ರೀತಿ ಆಗ ಆಲೋಚನೆ ಮಾಡುತ್ತಿದ್ದವು. ಎ.ಜಿ.ಪಾಷಾ ನಡೆಸುತ್ತಿದ್ದ Quest ಥರದ ಪತ್ರಿಕೆ ನಮಗೆ ಪ್ರೇರಣೆ ಆಗಿತ್ತು. 'ಶೂದ್ರ', 'ಸಂಕ್ರಮಣ', 'ಅಂಕಣ' ಮುಂತಾದ ಅನೇಕ ಕಿರುಪತ್ರಿಕೆಗಳೂ ಆಗ ರುಜುವಾತುವಿನ ಜೊತೆಗಿತ್ತು.

ನಮ್ಮ ಯಾವುದೇ ತಿಳುವಳಿಕೆ ಸಂವಹನಗೊಳ್ಳಬೇಕಾದರೆ ಅದಕ್ಕೊಂದು Literary form ಬೇಕಾಗತ್ತೆ. ಈ ಮೊದಲಿಗೆ ಉದಾಹರಿಸಿದ್ದ ಹಾಗೆ ಅನಂತಮೂರ್ತಿ ಮೌನ ಕಣಿವೆ ಬಗ್ಗೆ ಬರೆದಾಗ ಅದು ಸಮಾಜ ವಿಜ್ಞಾನದ ವಿಷಯ ಆಗದ್ದೂ ಸಾಹಿತ್ಯದ ಚೌಕಟ್ಟಿನಲ್ಲಿ ಮಂಡಿತವಾಗಿತ್ತು. ಕಾವ್ಯದ ಓದುವಿಕೆಗೆ ಸಂಬಂಧಿಸಿದ ಹಾಗೆ 'ಪದ್ಯ ಬಗೆಯುವ ಬಗೆ' ಅನ್ನುವ ಅಂಕಣವೊಂದು ಬಂತು. ಅದು ಆ ಕಾಲಕ್ಕೆ ಪ್ರತಿಕ್ರಿಯೆಯಾಗಿ ಹೊಳೆದ/ರೂಪುಗೊಂಡ ಯೋಜನೆಗಳು. ಯಾವುದೇ ನಿಶ್ಚಿತ ಪ್ಲಾನ್ ಮಾಡಿ ಮಾಡಿದ್ದು ಅಂತ ಅನ್ನಿಸಲಿಲ್ಲ. ಬಂಡಾಯ ಚಳುವಳಿ ಬಂದ ತಕ್ಷಣ ಅರ್ಥವಾಗುವ ಹಾಗೆ ಬರೆಯಬೇಕು ಅನ್ನುವ ಚರ್ಚೆ ಚಾಲ್ತಿಯಲ್ಲಿತ್ತು. ಮಾಸ್ತಿಯವರ ಮಾತಿಗೆ ಅಡಿಗರೂ ಪ್ರತಿಕ್ರಿಯಿಸದರು. ಅರ್ಥ ಮಾಡಿಸುವುದಕ್ಕಿಂತಲೂ ಪದ್ಯ 'ಬಗೆಯುವ ಬಗೆ' ಆಯ್ತು.

ಅದು ನಿಂತ ಸನ್ನಿವೇಶಕ್ಕೆ ೮೯ರಲ್ಲಿ ಸೋವಿಯತ್ ಪತನ ಹಾಗೂ Failure of Intellectual Infrastructure, ಆರ್ಥಿಕ ಬಿಕ್ಕಟ್ಟು ಶುರುವಾಗಿತ್ತು. ಸಾಹಿತ್ಯ ದಲಿತ ಬಂಡಾಯ ಚಳುವಳಿಗಳ ಹಿನ್ನೆಲೆಯಲ್ಲಿ ಸಮಾಜವನ್ನು ತನ್ನ ಕೇಂದ್ರವನ್ನಾಗಿ ಸ್ವೀಕರಿಸಿಕೊಂಡಿತು. ಹಾಗಾಗಿ ಸಾಹಿತ್ಯ Esthatics ಕೇಂದ್ರವಾಗಿಟ್ಟುಕೊಂಡ ಪತ್ರಿಕೆ ತನ್ನ ಅಸ್ತಿತ್ವ ಕಳೆದುಕೊಂಡಿತು. ೮೮ರಲ್ಲಿ ಅನಂತಮೂರ್ತಿ ಮೈಸೂರಿನಿಂದ ಕೇರಳಕ್ಕೆ ಹೊರಟರು. ಆ ಕಾಲದ ಕಿರುಪತ್ರಿಕೆಗಳು ಲೇಖಕ ಕೇಂದ್ರಿತವಾಗಿತ್ತು. ಲಂಕೇಶ್ ಪತ್ರಿಕೆ ಲಂಕೇಶರ ವ್ಯಕ್ತಿಗತ ಛಾಪು ಹೊಂದಿದ್ದರೆ, ಸಾಕ್ಷಿಗೆ ಅಡಿಗರು ಕೇಂದ್ರಬಿಂದುವಾಗಿದ್ದರು. ರುಜುವಾತುವಿಗೆ ಅನಂತಮೂರ್ತಿ ಪ್ರತಿ ಸಂಚಿಕೆಗೂ ಸಂಪಾದಕೀಯ ಬರೆಯುತ್ತಿದ್ದಷ್ಟು ಕಾಲವೂ ಬಲಿಷ್ಠವಾಗಿತ್ತು. ಅವರು ಮೈಸೂರು ಬಿಟ್ಟ ನಂತರ ರುಜುವಾತುವಿನ ಕೇಂದ್ರಗಮ್ಯ ಕಳೆದು ಹೋಯ್ತು. ಹಾಗಾಗಿ ರುಜವಾತು ನಿಂತಿತು ಅಂತ ನನಗೆ ಈ ಕಾಲಬಿಂದುವಿನಲ್ಲಿ ಅನ್ನಿಸುತ್ತಿದೆ.

ಪತ್ರಿಕೆಯ ಎಂಟು ವರ್ಷಗಳ ಪ್ರಕಟಣೆಯಲ್ಲಿ ಯಾವುದೇ ಬಿಕ್ಕಟ್ಟುಗಳಿರಲಿಲ್ಲ. ಆರ್ಥಿಕವಾಗಿಯೂ ಸದೃಢವಾಗಿತ್ತು. ಆರಂಭದಲ್ಲೇ ೮೦೦ರಿಂದ ೯೦೦ರ ತನಕ ಚಂದಾದಾರರಿದ್ದರು. ಒಂದು ಘಟ್ಟಕ್ಕೆ ಅದು ನಾಲ್ಕು ಸಾವಿರದ ತನಕ ಮುಟ್ಟಿತ್ತು. ಮೀನ ಮೈಸೂರು ನಮಗೆ ನಿರ್ವಹಣೆಗೆ ಸಹಕಾರ ನೀಡುತ್ತಿದ್ದರು. ಜೊತೆಗೆ ಕಿರಿಯ ಲೇಖಕರು ತಾವೇ ಆಸಕ್ತಿಯಿಂದ ಬಂದು ನಮಗೆ ನೆರವು ನೀಡಿ ಸ್ವಯಂಸೇವೆಗೆ ಮುಂದಾಗುತ್ತಿದ್ದರು. ಈಗ ಹಾಗಿಲ್ಲ. ಜನಕ್ಕೆ ಯಾವುದೂ ಬೇಕಿಲ್ಲ. ಬರಹಗಳಿಗೂ ಕೊರತೆ ಇರಲಿಲ್ಲ. ಪರಸ್ಪರ ಬಾಯಿ ಮಾತಿನ ಮೂಲಕ ಪತ್ರಿಕೆಯ ವರ್ಚಸ್ಸು ಬೆಳೆದಿತ್ತು. ಮೊದಲ ಮೂವತ್ತೆರಡು ಸಂಚಿಕೆಗಳ ನಂತರ ಪ್ರಸನ್ನ ಮುಂದುವರೆಸಿ ೪೩ನೇ ಸಂಚಿಕೆಯವರೆಗೂ ಮುಂದುವರೆಯಿತು.

ರುಜುವಾತು ಒಂದು ವೇದಿಕೆಯಾಗಿ ಸಮಾಜದ ವಿಭಿನ್ನ ಕ್ಷೇತ್ರಗಳ ಜನಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತ್ತು. ನಾನು ಉದ್ಯೋಗಿಯಾಗಿದ್ದ Reserve bankನಲ್ಲೇ ಒಂದು ನೂರಕ್ಕೂ ಹೆಚ್ಚು ಜನ ಚಂದಾದಾರರು ಇದ್ದರು. ಪ್ರತಿಯೊಬ್ಬರೂ ಇದೊಂದು ಮುಖ್ಯವಾದ ಚಟುವಟಿಕೆ ಅಂತ ಭಾವಿಸಿದ್ದರು. ವಾಗ್ವಾದಗಳು ಪ್ರಜಾಪ್ರಭುತ್ವದ ಆಶಯಗಳು ದೊಡ್ಡದಾಗಿ ಕಾಣುತ್ತಿತ್ತು. ■

ಸಂವಾದ

ನಿರಂತರ ಸವಾಲುಗಳು... ನಿರಂತರ ಸಂವಾದ

ರಾಘವೇಂದ್ರ ಪಾಟೀಲ



ಪ್ರತಿಯೊಂದು ಸಾಹಿತ್ಯಿಕ-ಸಾಂಸ್ಕೃತಿಕ ಪತ್ರಿಕೆಯ ಹಿಂದೆ ಕೆಲಸ ಮಾಡುತ್ತಿರುವ ಮನಸ್ಸನ್ನು ಕುರಿತು ನನಗೆ ಒಂದು ರೂಪಕ ಹೊಳೆಯುತ್ತದೆ. ಅದಾವುದೆಂದರೆ: ಡಾನ್‌ಕ್ವಿಕ್ಸೋಟನದು. ಈ ಡಾನ್‌ಕ್ವಿಕ್ಸೋಟ್, ರಟ್ಟಿನ ಚಿಲಕತ್ತುಗಳನ್ನು ಧರಿಸಿ ಸಾಂಕೋಪಾಂಜಾನನ್ನು ಬೆಂಗಾವಲಿಗಿಟ್ಟುಕೊಂಡು ಹೊರಟು ಸುತ್ತಲಿನ ಜಗತ್ತಿನಲ್ಲಿ ಸುವ್ಯವಸ್ಥೆಯನ್ನು ಸ್ಥಾಪಿಸಲು ಉದ್ಯುಕ್ತನಾದವನು! ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸಿ ದೇವರಿಗೆ ಪ್ರಿಯವಾಗುವಂತಹ ಲೋಕವನ್ನು ಕಟ್ಟುತ್ತೇನೆಂದು ದಿಗ್ವಿಜಯಕ್ಕೆ ಹೊರಡುವ ಕ್ವಿಕ್ಸೋಟನಂತಹ ಪ್ರಜ್ಞೆ ಸಾಹಿತ್ಯಿಕ-ಸಾಂಸ್ಕೃತಿಕ ಸಣ್ಣ ಪತ್ರಿಕೆಗಳ ಹಿನ್ನೆಲೆಯಲ್ಲಿ ಕೆಲಸ ಮಾಡುತ್ತಿರುತ್ತದೆ. ಇದು ಮುಗ್ಧತೆಯ ಪ್ರಜ್ಞೆ. ಈ ಮುಗ್ಧತೆಯಿಂದ ಏನೇನು ಸಾಧ್ಯವಾಗುತ್ತದೆ ನೋಡಿ: ತನ್ನ ವರ್ಗಜಾತಿ ಮುಂತಾದ ಸಂಬಂಧಗಳನ್ನು ಮೀರಿ ಅವುಗಳಲ್ಲಿ ಬೆರೆತುಕೊಂಡಿರುವ ಕೊಳಕುಗಳನ್ನು ಗುರುತಿಸಲು ಸಾಧ್ಯವಾಗುತ್ತದೆ-ಕೊಳಕುಗಳಿಲ್ಲದ ಚಂದದ ಸಂದರ್ಭವನ್ನು ಕನಸಿನ ಮಾರ್ಗವಾಗಿ ಕಂಡುಕೊಳ್ಳುತ್ತ, ಆ ದಿಕ್ಕಿನತ್ತಲಿನ ಪ್ರಯಾಣಕ್ಕೆ ಸಜ್ಜುಗೊಳ್ಳುವದು ಸಾಧ್ಯವಾಗುತ್ತದೆ-ಸಂಬಂಧಗಳ ನೆಲೆಯಲ್ಲಿ ವೈಚಾರಿಕ ಮಾದರಿಗಳ ಪೆಡಸುತನದ ಗ್ರಹಿಕೆ ಸಾಧ್ಯವಾಗುತ್ತ ನಿರ್ಜೀವಕ್ಕೆ ಜೋತು ಬಿದ್ದ ಕಣ್ಣುಕಪ್ಪಡಿಗೆ ಬಿಡುಗಡೆ ದೊರೆತು, ಜೀವಂತಿಕೆಗೆ ಪ್ರವೇಶ ದೊರೆಯಲು

ಸಾಧ್ಯವಾಗುತ್ತದೆ. ಮುಗ್ಧತೆ ಇದ್ದಾಗ ಮಾತ್ರ ಹುಂಬತನ ಮತ್ತು ಆ ಮೂಲಕದ ಮಹತ್ವಾಕಾಂಕ್ಷೆಯ ನೆಗೆತಗಳು ಸಾಧ್ಯವಾಗುತ್ತದೆ.

ಈ ಕ್ವಿಕ್ಸೋಟನ ಪ್ರಜ್ಞೆಯ ರೂಪಕವನ್ನು ಇದಕ್ಕಿಂತ ಉದ್ದವಾಗಿ ಬೆಳೆಸಿಕೊಂಡು ಹೋಗಲಾಗದು. ಮುಗ್ಧತೆಗೆ ಈತ ಅತ್ಯಂತ ಸಮರ್ಥವಾದ ಪ್ರತಿಮೆಯಾಗುತ್ತಾನೆನ್ನುವಲ್ಲಿಯೇ ಈ ರೂಪಕವನ್ನು ನಿಲ್ಲಿಸಬೇಕು. ಯಾಕೆಂದರೆ ಕ್ವಿಕ್ಸೋಟನದು ಪೆದ್ದು ಪೆದ್ದಾದ ಮುಗ್ಧತೆ. ವಿಂಡ್‌ಮಿಲ್ಲನ್ನು ರಾಕ್ಷಸನೆಂದು ಭಾವಿಸುತ್ತ ಅದರೊಂದಿಗೆ ಯುದ್ಧಕ್ಕೆ ನಿಲ್ಲುವ ಪೆದ್ದುತನ ಅವನಲ್ಲಿದೆ. ಈ ಘಟನೆಯಿಂದ ಕೂಡ, ವಿಜ್ಞಾನವನ್ನು ಸಂಕೇತಿಸುವ ವಿಂಡ್‌ಮಿಲ್‌ನ್ನು ವಿರೋಧಿಸುವ ಅರ್ಥ ಹೊರಡುತ್ತದೆಯಾದರೂ ನಾನು ಈ ರೂಪಕದೊಂದಿಗೆ ಇನ್ನಷ್ಟು ಮುಂದುವರೆಯುವುದಿಲ್ಲ. ಪೆದ್ದುತನವಿಲ್ಲದ, ವಾಸ್ತವವನ್ನು ಉಧ್ವಸ್ತಗೊಳಿಸದೇ ನೋಡಬಲ್ಲ, ಸಮಸ್ಥಿತಿಯ ಮುಗ್ಧತೆ ನಿಜವಾಗಿ ಮಹತ್ವಾಕಾಂಕ್ಷೆಯ ಕನಸು ಕಾಣುತ್ತದೆ ಮತ್ತು ಆ ದಿಕ್ಕಿನತ್ತ ಸಾಗಲು ಉದ್ಯುಕ್ತವಾಗುತ್ತದೆ. ಬಸವಣ್ಣ ಕನಸಿದ ಅನುಭವ ಮಂಟಪ ಇಂಥ ಒಂದು ಮಹತ್ವಾಕಾಂಕ್ಷೆ. ಮುಗ್ಧತೆಯ ಭಂಡಾರಿಯಾದ ಬಸವಣ್ಣ ಅದನ್ನು ಬಿಜ್ಜಳನಿಗೆ ಕೊಟ್ಟ-ಸೂಳೆಸಂಕಮ್ಮರಾದಿಯಾಗಿ ವಿವಿಧ ಕಾಯಕದವರಿಗೆ ಹಂಚಿದ-ಬ್ರಾಹ್ಮಣ ಮಧುವರಸನಿಗೂ ನೀಡಿದ. ಆಗ ಎಲ್ಲರೂ ಮಾತಾಡಬಲ್ಲವರಾದರು. ಎಲ್ಲರೂ ಒಂದೆಡೆಗೆ ಸಮಾನರಾಗಿ ಸೇರುವ, ಸೇರಿ ತಮ್ಮ ಒಳಗಿನ ಮಾತನ್ನು ಹೇಳುವ ವಚನ ಚಳುವಳಿಯ ಅನುಭವ ಮಂಟಪವನ್ನು ಕಟ್ಟಿದ. ಇದೀಗ ನೋಡಿ ಪ್ರತಿಯೊಂದು ಸಾಹಿತ್ಯಿಕ-ಸಾಂಸ್ಕೃತಿಕ ಪತ್ರಿಕೆಯ ಹಿನ್ನೆಲೆಯಲ್ಲಿ ಇರಬೇಕಾದ ಮುಗ್ಧತೆಯ ಮಹತ್ವಾಕಾಂಕ್ಷೆ!

ಬಹುಶಃ ಪ್ರತಿಯೊಂದು ಸಾಹಿತ್ಯಿಕ-ಸಾಂಸ್ಕೃತಿಕ ಪತ್ರಿಕೆಯ ಹಿಂದೆ ಇರಬೇಕಾದ ಅತ್ಯುತ್ಕೃಷ್ಟ ಕನಸು ಈ ಅನುಭವ ಮಂಟಪವಾಗಿದೆ. ಈ ಅನುಭವ ಮಂಟಪವನ್ನು ಆದರ್ಶವಾಗಿಟ್ಟುಕೊಳ್ಳಬೇಕೆಂದು ಹೇಳುವಾಗ ಸಾಹಿತ್ಯಿಕ-ಸಾಂಸ್ಕೃತಿಕ ಪತ್ರಿಕೆಗಳ ಅತ್ಯುನ್ನತವಾದ ಕನಸನ್ನು ಮಾತ್ರ ಹೇಳುತ್ತಿದ್ದೇನೆ. ಇದು ಜಟ್ಟಿಯೊಬ್ಬ, ನಾನು ಸಾಮುಗೀಮು ಮಾಡಿದ್ದೇನೆ-ಸ್ನಾಯುಬಲ ಸಂಪಾದಿಸಿದ್ದೇನೆ, ಆದ್ದರಿಂದ ಈಗ ಆಕಾಶಕ್ಕೆ ನೆಗೆಯುತ್ತೇನೆ ಎಂದೆನ್ನುವಂತಹ ಅವಾಸ್ತವವಾದ ಆದರ್ಶ. ಆದರೆ ಆ ಜಟ್ಟಿ ಮುಗಿಲಿನತ್ತ ನೆಗೆಯುವ ಕ್ರಿಯೆಯನ್ನು ಸುಳ್ಳು ಎಂದು ಹೇಳಲಾಗದು. ಅದು ನಿಜವಾದದ್ದೇ. ಹೀಗೆಯೇ ನಾವು ಕೂಡ ಅನುಭವ ಮಂಟಪದಂತಹ ಸಾಧನೆಯತ್ತ ನಡೆಯಬೇಕು. ಅನುಭವ ಮಂಟಪದತ್ತ ಬರೀ ನಡೆಯುವದು ಎಂದು ಹೇಳುವಾಗ ನಾವು ಈ ಸಾಹಿತ್ಯಿಕ-ಸಾಂಸ್ಕೃತಿಕ ಪತ್ರಿಕೆಗಳನ್ನು ನಡೆಸುವುದರಲ್ಲಿ ಇರುವ ಸವಾಲುಗಳ ಗಾಢತೆ ಗಂಭೀರತೆಗಳು ಹೊಳೆಯುತ್ತವೆ.

ಅತಿ ದೊಡ್ಡದಾದ ಒಂದು ಸವಾಲೆಂದರೆ ಈ ಪತ್ರಿಕೆಗಳ ಹಿನ್ನೆಲೆಯಲ್ಲಿ ಇರುವ ಮನಸ್ಸಿನ ಮುಗ್ಧತೆ ಕಳೆದುಹೋಗುವದು. ಬಸವಣ್ಣನು ಬಿಜ್ಜಳನಲ್ಲಿ ಬಿತ್ತಿ ಬೆಳೆಸಿದ್ದ ಮುಗ್ಧತೆಯ ಬೆಳೆಯನ್ನು ಕೊಳಕು ಮನಸ್ಸುಗಳು ನಾಶ ಮಾಡಿಬಿಟ್ಟಾಗ ಬಸವಣ್ಣ ಕಪ್ಪಡಿ ಸಂಗಮಕ್ಕೆ ನಡೆದ-ಅಕ್ಕ ಅಲ್ಲಮ ಕದಳಿಗೆ-ಚನ್ನಬಸವಣ್ಣ ಉಳವಿಗೆ-ಉಳಿದ ಶರಣರು ತಮತಮಗೆ ತಿಳಿದಲ್ಲಿಗೆ! ಅನುಭವ ಮಂಟಪ ಎನ್ನುವುದಕ್ಕೆ ಒಂದು ಛತ್ತು ಎನ್ನುವಂತಹದು ಇದ್ದಿದ್ದರೆ ಜಡವಾದ ಅದು ಕುಸಿದು ಹೋಗಿರುತ್ತದೆ. ಈ ಅನುಭವ ಮಂಟಪದಂತಹ ಅನುಭವ ಮಂಟಪವೇ ಕುಸಿದು ಹೋಗಿರುವಾಗ ಇನ್ನು ಅದನ್ನು ಆದರ್ಶದ ನೆಲೆಯಲ್ಲಿ ಮಾತ್ರ ಪರಿಭಾವಿಸಿಕೊಂಡು ಸಾಗುವ ಸಾಹಿತ್ಯಿಕ-ಸಾಂಸ್ಕೃತಿಕ ಸಣ್ಣ ಪತ್ರಿಕೆಗಳ ಮಾತು ಎಲ್ಲಿಗೆ ತಲುಪುತ್ತದೆಂದು ಹೇಳುವುದು ಬಲು ಕಷ್ಟ. ಮುಗ್ಧತೆಯನ್ನು ಸ್ಥಾನಪಲ್ಲಟಗೊಳಿಸಿ ಅದರ ಸ್ಥಾನದಲ್ಲಿ ಬಂದು ಕುಳಿತುಕೊಳ್ಳುವ ವೈಯಕ್ತಿಕ ಆಸೆ ಆಕಾಂಕ್ಷೆಗಳು, ಪರಸ್ಪರ ದ್ವೇಷಗಳು, ಪ್ರೀತಿ ವ್ಯಾಮೋಹಗಳು-ಈ ಸಾಹಿತ್ಯಿಕ-ಸಾಂಸ್ಕೃತಿಕ ಪತ್ರಿಕೆಗಳನ್ನು ನಡೆಸತೊಡಗಿದಾಗ ಈ ಪತ್ರಿಕೆಗಳು ಸಾಂಸ್ಕೃತಿಕ ರೋಗಗಳನ್ನು ಹರಡತೊಡಗುತ್ತವೆ. ಹೀಗೆ

ಬಿತ್ತಲಾಗುವ ಸಾಂಸ್ಕೃತಿ ರೋಗಗಳು-Cultural Plague-ತೀವ್ರವಾದ ಸಾಂಕ್ರಾಮಿಕವಾದವುಗಳು. ಅವು ಪರಿಣಾಮಗಳಾಗಿರುವಂತೆ, ಪರಿಣಾಮವನ್ನುಂಟುಮಾಡುವಂತಹ ಪರಿಣಾಮಕಾರಿಯಾದವುಗಳೂ ಆಗುತ್ತವೆ. ಅಂದರೆ ಅವು ಇತರ ಇಂಥ ಸಣ್ಣ ಪತ್ರಿಕೆಗಳ ಹಿನ್ನಲೆಯಲ್ಲಿರುವ ಮುಗ್ಧತೆ-ಆದರ್ಶಗಳನ್ನೂ ನಾಶ ಮಾಡಿಬಿಡಬಲ್ಲವು. ಈ ಸಾಂಸ್ಕೃತಿಕ ಪತ್ರಿಕೆಗಳ ಹಿಂದಿರುವ ಮನಸ್ಸಿನ ಮುಗ್ಧತೆಗೆ ಆವರಿಸುವ ಆರಂಭದ ರೋಗಗಳೆಂದರೆ ವೈಯಕ್ತಿಕ ಆಸೆ ಆಕಾಂಕ್ಷೆಗಳು. ಇವು ಮೃದುವಾದ ರೋಗಗಳು. ಅಷ್ಟು ಸಾಂಕ್ರಾಮಿಕವಾದವುಗಳಲ್ಲ. ಆದರೆ ಈ ರೋಗಗಳು ಬಲಿತು ಮತ್ಸರ, ದ್ವೇಷಗಳ ಭಯಂಕರ ರೋಗಗಳಾಗಿ ನೆಲೆ ನಿಲ್ಲುತ್ತವೆ. ಇದು ಕ್ಯಾನ್ಸರ್‌ನಷ್ಟು ಭಯಂಕರವಾದುದು. ಕ್ಯಾನ್ಸರಿನ ಜೀವಕೋಶಗಳು ದೇಹದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಚಲಿಸಿ ಅಲ್ಲಿ ಕ್ಯಾನ್ಸರ್ ಉಂಟು ಮಾಡುವಂತೆ ಈ ದ್ವೇಷ-ಮತ್ಸರಗಳ ರೋಗಾಣುಗಳು ಸಮಾಜದ ದೇಹದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹರಡಬಲ್ಲವು. ಇದರಿಂದ ಒಂದು ಪತ್ರಿಕೆಯ ಹಿನ್ನಲೆಯಲ್ಲಿ ಬೆಳೆಯುವ ಇಂಥ ರೋಗವು ಬೇರೆ ಪತ್ರಿಕೆಗಳ ಮನಸ್ಸುಗಳನ್ನು ಬಲು ಬೇಗನೇ, ಸುಲಭವಾಗಿ ಆಕ್ರಮಿಸಿಕೊಳ್ಳುತ್ತದೆ-Computer Virus ಒಂದೆರಡು ದಿನಗಳ ಅಂತರದಲ್ಲಿ ಎಲ್ಲೆಲ್ಲಿಯೋ ಇರುವ ಕಂಪ್ಯೂಟರ್‌ಗಳನ್ನು ಆಕ್ರಮಿಸಿಕೊಳ್ಳುವ ತರಹ!

ಇಷ್ಟೆಲ್ಲ ಹೇಳಿದ್ದು ಈ ಸಣ್ಣ ಪತ್ರಿಕೆಗಳನ್ನು ನಡೆಸುವ ಮನಸ್ಸುಗಳು ಎದುರಿಸುವ ಸವಾಲಿನ ಬಗೆಗೆ. ಈ ಮನಸ್ಸುಗಳಷ್ಟೇ ಪತ್ರಿಕೆಗಳನ್ನು ರೂಪಿಸುವುದಿಲ್ಲ. ಪತ್ರಿಕೆಯ ಓದುಗಲೋಕದ ಮನಸ್ಸು ಕೂಡ ಪತ್ರಿಕೆಯ ಅಸ್ತಿತ್ವದ ಒಂದು ಅವಶ್ಯವಾದ ಮತ್ತು ಮಹತ್ವವಾದ ಅಂಗವಾಗಿರುತ್ತದೆ. ಈ ಅಂಗದ ಮೂಲಕವಾಗಿ ಕೂಡ ಸಣ್ಣ ಪತ್ರಿಕೆಗಳು ಸವಾಲುಗಳನ್ನು ಎದುರಿಸುತ್ತಿವೆ. ಇಂಥವುಗಳಲ್ಲಿ ಅತ್ಯಂತ ದೊಡ್ಡದಾದ ಒಂದು ಸವಾಲೆಂದರೆ-ಇಂದು ಓದುಗಲೋಕದ ಮನಸ್ಸು ಮುಕ್ತವಾಗಿ ಉತ್ಸಾಹದಿಂದ ಸ್ಪಂದಿಸುತ್ತಿಲ್ಲದಿರುವುದು. ಓದುಗಲೋಕದ ಮನಸ್ಸು ಒಂದು ರೀತಿಯಾಗಿ ಒಳಗೆ ಮುಚ್ಚಿಕೊಳ್ಳುವ ಪರಿಯನ್ನು ತೋರುತ್ತಿದೆ. ಹೀಗಾಗಿ ಯಾವ ಮಹತ್ವದ ಸಾಂಸ್ಕೃತಿಕವಾದ ಅಥವಾ ತಾತ್ವಿಕವಾದ ಚರ್ಚೆಗಳು ಏರ್ಪಡುತ್ತಿಲ್ಲ. ಲೇಖನ ಒಂದನ್ನು ಪ್ರಕಟಿಸುವುದು ಎಂದರೆ ಒಂದು ನಿರ್ದಿಷ್ಟವಾದ ಅಂಶದ ಬಗೆಗೆ ಚರ್ಚೆಯೊಂದನ್ನು-ವಾಗ್ವಾದ ಒಂದನ್ನು ಅನಾವರಣಗೊಳಿಸುವ ಉದ್ದೇಶದ ಪ್ರಕಟಣೆ ಇದ್ದಂತೆ. ಸಣ್ಣ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುವ ಎಲ್ಲ ಲೇಖನಗಳೂ ಇಂತಹ ಅರ್ಹತೆಯನ್ನು ಹೊಂದಿರುವುದಿಲ್ಲ. ಆದರೆ ಕನ್ನಡದ ಎಲ್ಲ ಸಣ್ಣ ಪತ್ರಿಕೆಗಳಲ್ಲಿ ಇಂಥ ಅರ್ಹತೆಯ ಕೆಲವಾದರೂ ಲೇಖನಗಳು ಪ್ರಕಟವಾಗುತ್ತಿವೆ. ಆದರೆ ಈ ಲೇಖನಗಳು ಮಂಡಿಸುವ ವಿಷಯಗಳು ಚರ್ಚೆ-ಮಂಥನಗಳ ಮೂಲಕ ಬೆಳೆಯದೇ ಹಾಗೆಯೇ ಉಳಿದುಬಿಡುತ್ತವೆ. ಓದುಗಲೋಕದ ಮನಸ್ಸು ಹೀಗೆ ನಿರ್ಲಿಪ್ತವಾಗಿ ಉತ್ಸಾಹವನ್ನೇ ತೋರದಿರುವುದು ಎಲ್ಲ ಸಾಂಸ್ಕೃತಿಕ ಪತ್ರಿಕೆಗಳ ದೊಡ್ಡ ಸವಾಲಾಗಿವೆ. ಕನ್ನಡದಲ್ಲಿಯಂತೂ ಈ ಸವಾಲು ಅತ್ಯಂತ ತೀವ್ರವಾಗಿದೆ. ಇಂಥ ನಿರಾಳತೆಯ ನಿರ್ಲಿಪ್ತಿ ಕಳಚಿ ಹಾಕಲು ಸಾಹಿತ್ಯಿಕ ಸಾಂಸ್ಕೃತಿಕ ಪತ್ರಿಕೆಗಳು ಪ್ರಚೋದನಾಕಾರಿಯಾದ ಮಾರ್ಗವನ್ನು ಅನುಸರಿಸುವುದನ್ನು ಕಾಣುತ್ತೇವೆ. ಬಹುಶಃ 'ಸಂಕ್ರಮಣ' ಪತ್ರಿಕೆಯಲ್ಲಿ ಚಂದ್ರಶೇಖರ ಪಾಟೀಲರು ಇಂಥ ಉದ್ದೇಶಕ್ಕೆ ಬಹಳ ಪ್ರಚೋದನಾಕಾರಿಯಾದ ಭಾಷಾರೀತಿಯನ್ನು ಬಳಸುತ್ತಾರೆ. ಅಷ್ಟರಮಟ್ಟಿಗೆ ಅವರು ಓದುಗ ಲೋಕದ ಮನಸ್ಸಿನ ಪ್ರತಿಕ್ರಿಯೆಯನ್ನು ಪಡೆಯುವಲ್ಲಿ ಸಫಲರೂ ಆಗಿದ್ದಾರೆ. ಆದರೆ ಅಲ್ಲಿ ಏರ್ಪಡುವ ಚರ್ಚೆ ಬಹುತೇಕವಾಗಿ ವೈಯಕ್ತಿಕತೆಯ ಮಿತಿಯೊಳಗೆ ಸಿಲುಕಿ, ಸಾರ್ಥಕವಾದ ಚರ್ಚೆ ಏರ್ಪಡುತ್ತಿಲ್ಲವೇನೋ ಎನ್ನುವ ಅನುಮಾನ ನನಗಿದೆ.

ನಮ್ಮ ಸಾಹಿತ್ಯಿಕ ಸಣ್ಣ ಪತ್ರಿಕೆಗಳಲ್ಲಿ ಬಂಡಾಯ ಸಾಹಿತ್ಯವನ್ನು ಕುರಿತಾದ ವಿಮರ್ಶಾ ಮಾನದಂಡಗಳಂತಹ ಮುಖ್ಯ ವಿಷಯದ ಬಗೆಗೆ ಫಲಪ್ರದವಾದ ಚರ್ಚೆ ಏರ್ಪಡಲಿಲ್ಲ. ತಪ್ಪು ಗ್ರಹಿಕೆಗಳನ್ನು ಎತ್ತಿ ತೋರಿಸುತ್ತ,

ಪೂರಕವಾದ ಸಂಗತಿಗಳನ್ನು ಮಂಡಿಸುತ್ತ ಚರ್ಚೆಯನ್ನು ಬೆಳೆಸುತ್ತ ಮಂಥನವನ್ನು ಏರ್ಪಡಿಸುತ್ತ ನವನೀತದ ಉಗಮಕ್ಕೆ ನಾವು ಸಂದರ್ಭವನ್ನು ಸೃಷ್ಟಿಸಲೇ ಇಲ್ಲ. ಬರೀ ಸಾಹಿತ್ಯವಷ್ಟೇ ಏಕೆ- ಯಾವುದೇ ಸಾಂಸ್ಕೃತಿಕ ಮಹತ್ವದ ವಿಷಯವೂ ಇಂದು ಚರ್ಚೆಯನ್ನು ಉದ್ದೀಪಿಸುತ್ತಿಲ್ಲ. ಇಂದು ನಾವು ಅತ್ಯಂತ ಕ್ಲಿಷ್ಟವಾದ ಕಾಲಮಾನದಲ್ಲಿ ಬದುಕುತ್ತಿದ್ದೇವೆ. ಭಾರತದಲ್ಲಿನ ಎಲ್ಲ ಜನಾಂಗಗಳೂ ತಲೆಗೆ ತಲೆ ಢಿಕ್ಕಿ-ಹೊಡೆಯಲು ಸಜ್ಜುಗೊಳ್ಳುತ್ತಿವೆ. ರಾಜಕೀಯ ಪ್ರೇರಿತ ಧರ್ಮ ನಿರಪೇಕ್ಷತೆ, ರಾಜಕೀಯ ಪ್ರೇರಿತ ಧಾರ್ಮಿಕ ಮೂಲಭೂತವಾದಗಳು ಜನರ ಮನಸುಗಳನ್ನು ಕಲಕು ಮಲಕುಗೊಳಿಸಿವೆ. ನಮ್ಮ ಇತಿಹಾಸ ಮತ್ತು ಸಾಂಸ್ಕೃತಿಕ ಸಂಶೋಧನೆಗಳು ಭೂತಕಾಲದಲ್ಲಿ ಯಾರನ್ನು ಯಾರು ಶೋಷಿಸಿದರು ಮತ್ತು ಆದ್ದರಿಂದ ಇಂದಿನ ಕಾಲದಲ್ಲಿ ಯಾರು ಯಾರನ್ನು ದ್ವೇಷಿಸಬೇಕು ಎನ್ನುವ ಜ್ಞಾನ ನಿಷ್ಪತ್ತಿಯಲ್ಲಿ ಸಾರ್ಥಕತೆಯನ್ನು ಕಂಡುಕೊಳ್ಳುತ್ತಿವೆ. ವಿಜ್ಞಾನವು ಧರ್ಮವನ್ನು ಮೂಢನಂಬಿಕೆಗಳ ಸಂಚಯವೆಂದು ಭಾವಿಸುತ್ತ-ಧರ್ಮವು ವಿಜ್ಞಾನವನ್ನು ನಾಸ್ತಿಕವಾದ -ಪಾಷಂಡಿತನ-ದೈವದ್ರೋಹಿಯಾದದ್ದು ಎಂದು ಭಾವಿಸುತ್ತ, ಅವೆರಡೂ ಒಟ್ಟು ಮನುಷ್ಯನ ಸಂಪನ್ನ ಬದುಕಿನ ಮಾಧ್ಯಮಗಳೆನ್ನುವುದನ್ನು ಪರಸ್ಪರ ಮರೆತುಬಿಟ್ಟಿವೆ. ಅರ್ಥಶಾಸ್ತ್ರ ರಾಜಕೀಯ ವ್ಯವಸ್ಥೆ ಇವುಗಳಿಗೆ ಸಂಬಂಧಪಟ್ಟಂತೆಯೂ ಸಾಕಷ್ಟು ಗೊಂದಲಗಳಿವೆ. ಗಾಂಧೀಜಿಯವರ ವಿಕೇಂದ್ರೀಕರಣ-ಪಶ್ಚಿಮದ ಬಂಡವಾಳಶಾಹಿಯ ದೈತ್ಯೋತ್ಪಾದನೆಯ ಕೇಂದ್ರೀಕರಣ-ರಶಿಯದ ರಾಜ್ಯ ವ್ಯವಸ್ಥೆಯ ಕುಸಿತ... ಹೀಗೆ ಹತ್ತೆಂಟು ಸೆಳೆತಗಳ ನಡುವೆ ನಾವು ನಿರ್ಲಿಪ್ತವಾಗಿ ನಿರುಂಬಳವಾಗಿ ಕೂತುಬಿಟ್ಟಿದ್ದೇವೆ. ಈ ಎಲ್ಲ ಗೊಂದಲಗಳ ನಡುವೆ 'ಎಲ್ಲ ತತ್ವದೆಲ್ಲೆ ಮೀರಿ' ಹರಿಯುತ್ತಿರುವ ಜೀವಂತಿಕೆಯ ಸ್ರೋತವನ್ನು ಕಾಣುವ ಕನಸುಗಳು ಚಿಗುರಲು ಓದುಗಲೋಕದ ಮನದ ಮಾಧ್ಯಮವು ದೊರೆಯದಿದ್ದರೆ... ಏನು ಮಾಡುವುದಿನ್ನು!?

ಜೀವನವನ್ನು ಒಳಕ್ಕೆ ಬಿಟ್ಟುಕೊಳ್ಳದೆ, ಮೇಲ್ಪದರಿನ ಮೇಲೆ ಜಾರುತ್ತ, ವೇಗದ ಬೆನ್ನು ಹತ್ತಿ ಸಾಗುತ್ತಿರುವ ಜನಾಂಗ ನಮ್ಮದು. ನಮ್ಮದು 'ಧಿಡೀರ್' ಪ್ರಜ್ಞೆ. ಎಲ್ಲ ಧಿಡೀರೆಂದು ಸಾಧಿತವಾಗಬೇಕು ನಮಗೆ! ಇಂಥ ವೇಗಕ್ಕೆ ಬೆನ್ನು ಹತ್ತಿದ ನಾವು ಒಂದಿನಿತು ವಿರಾಮವಾಗಿ ಕೂತು ಅಕ್ಷರಗಳ ಹಿನ್ನೆಲೆಯಲ್ಲಿ ಹುದುಗಿರುವ ಜೀವಂತಿಕೆಯ ತತ್ವವನ್ನು ಅನಾವರಣಗೊಳಿಸಿಕೊಳ್ಳುವ ಅವಶ್ಯಕತೆ ಇದೆ. ನಾವು ಜಾನಪದದ ಮೌಖಿಕತೆಯ ಸಂಸ್ಕೃತಿಯನ್ನು ದಾಟಿ, ಅದರ ಮುಂದಿನ ಅಕ್ಷರ ದಾಖಲೆಯ ಬರಹದ ಸಂಸ್ಕೃತಿಯನ್ನು ದಾಟಿ, ದೃಶ್ಯ ಮಾಧ್ಯಮದ ಸಂಸ್ಕೃತಿಯನ್ನು ಪ್ರವೇಶಿಸುತ್ತಿದ್ದೇವೆ. ಆದರೆ ಈ 'ದೃಶ್ಯ' ಗ್ರಹಿಕೆಯು ಅತ್ಯಂತ ಮೇಲ್ಪದರದ್ದು. ಇದಲ್ಲದೆ, 'ದೃಶ್ಯ' ಮಾಧ್ಯಮದ ಗ್ರಹಿಕೆಯು ಅತ್ಯುಗ್ರ ವೈಯಕ್ತಿಕತೆ ನೆಲೆಯನ್ನು ಹೊಂದಿರುವಂತಹದು. ಮೌಖಿಕತೆ ಮತ್ತು ಬರೆಹದ ಮಾಧ್ಯಮಗಳಿಗೆ ಸಾಧ್ಯವಾಗುವ ಸಮಷ್ಟಿಯ ಗ್ರಹಿಕೆ ಈ ದೃಶ್ಯ ಮಾಧ್ಯಮಕ್ಕೆ ಲಭ್ಯವಾಗುವುದಿಲ್ಲ. ಇದಕ್ಕೆ ಸಂಬಂಧ ಪಟ್ಟಂತೆ ಒಂದು ಕಥೆ ನೆನಪಿಗೆ ಬರುತ್ತದೆ: ತಾಯವ್ವ ಮುಂಗುಸಿಯೊಂದನ್ನು ಸಾಕಿರುತ್ತಾಳೆ. ಒಂದು ದಿನ ಅವಳು ತನ್ನ ಮಗುವನ್ನು ನೋಡಿಕೊಂಡಿರಲು ಮುಂಗುಸಿಗೆ ಸೂಚಿಸಿ ನೀರು ತರಲು ಬಾವಿಗೆ ತೆರಳುತ್ತಾಳೆ. ಇತ್ತ ತೊಟ್ಟಿಲಿನ ಹಗ್ಗದಗುಂಟ ಹಾವೊಂದು ಇಳಿದು ಬರುವುದನ್ನು ನೋಡಿದ ಮುಂಗುಸಿ ಅದನ್ನು ಕಚ್ಚಿ ಕೊಂದು ಹಾಕುತ್ತದೆ. ತಾಯವ್ವನಿಗೆ ಸೂಚಿಸಲೋ ಎನ್ನುವಂತೆ ಮುಂಗುಸಿ ಅವಳತ್ತ ಧಾವಿಸಿ ಬಂದಾಗ ಅದರ ಬಾಯಿಗೆ ಅಂಟಿದ ರಕ್ತವನ್ನು ಕಂಡು, ಅವಳು ಮುಂಗುಸಿಯು ತನ್ನ ಮಗುವನ್ನು ಕಚ್ಚಿ ತೊಂದರೆಪಡಿಸಿರಬೇಕೆಂದು ಭಾವಿಸಿ, ಕೊಡವನ್ನು ಅದರ ಮೇಲೆ ಅಪ್ಪಳಿಸಿ ಕೊಂದುಹಾಕಿ, ಅಳುತ್ತ ಮನೆಗೆ ಓಡಿಬಂದರೆ ಅವಳ ಮಗು ಆಡುತ್ತಿದೆ-ಆ ಮಗುವಿನ ಪಕ್ಕದಲ್ಲಿ ಮುಂಗುಸಿಯ ಆಕ್ರಮಣಕ್ಕೆ ಸಿಕ್ಕ ಹಾವು ಸತ್ತು ಬಿದ್ದಿದೆ. ತಿಳಿಗೇಡಿ ತಾಯವ್ವ ತಾನು ಕಂಡ 'ದೃಶ್ಯ'ವನ್ನು ನಂಬಿದ ಅವಿವೇಕದ ಬಗೆಗೆ ಹಳಹಳಿಸಿ ಶೋಕಿಸುತ್ತಾಳೆ.

ಅದಕ್ಕೇ ನಮ್ಮಲ್ಲಿ ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು ಎನ್ನುವ ಮಾತು ಇರುವುದು. ಅಂದರೆ,

ಈ ದೃಶ್ಯ ಗ್ರಹಿಕೆಯು ತನ್ನಷ್ಟಕ್ಕೆ ತಾನು ಸ್ವತಂತ್ರವಾದದ್ದಾಗಿರದೇ ಇತರ ಗ್ರಹಿಕೆಗಳ ಪ್ರಮಾಣವನ್ನು ಬಯಸುವಂಥದು. ಮತ್ತು ಇತರ ಗ್ರಹಿಕೆಗಳ ಮೂಲಕವಾಗಿ ಸಮೂಹ ಸಾಧ್ಯತೆಯನ್ನು ಸಾಧಿಸಿಕೊಳ್ಳುವಂತಹದು. ಬರೆಹ ಮಾಧ್ಯಮವು ಈ ನೆಲೆಯಲ್ಲಿಯೇ ಮಹತ್ವವನ್ನು ಪಡೆದುಕೊಳ್ಳುತ್ತದೆ. ಆದರೆ ವೇಗದ ಬೆನ್ನು ಹತ್ತಿದ ಮನಸ್ಸಿಗೆ ಬರೆಹಕ್ಕೆ ತೆರೆದುಕೊಳ್ಳುವ ವಿರಾಮವೆಲ್ಲಿದೆ? ಇಂಥಲ್ಲಿ ಸಾಹಿತ್ಯಿಕ ಸಾಂಸ್ಕೃತಿಕ ಸಣ್ಣ ಪತ್ರಿಕೆಗಳು ಇನ್ನಷ್ಟು ಮಹತ್ವ ಪಡೆದುಕೊಳ್ಳುತ್ತವೆ. ಈ ಪತ್ರಿಕೆಗಳಲ್ಲಿ ಏರ್ಪಡುವ ವಿಚಾರ ಮಂಥನಗಳು 'ನವಸ್ಮೃತಿ'ಯನ್ನು ನಿರ್ಮಿಸಬಲ್ಲವು.

■


ಒಂಭತ್ತು ವರ್ಷಗಳ ಹಿಂದೆ(೧೯೮೬ರಲ್ಲಿ) ನಾವು ಆರು ಜನ ಗೆಳೆಯರು ಇಂಥ ಹತ್ತು ಹಲವು ಯೋಚನೆಗಳನ್ನು-ಕನಸುಗಳನ್ನು ಇಟ್ಟುಕೊಂಡು 'ಸಂವಾದ' (ಇಂದು ಸಾಹಿತ್ಯ ಸಂವಾದ) ಪತ್ರಿಕೆಯನ್ನು ಆರಂಭಿಸಿದೆವು. ನಮ್ಮಲ್ಲಿ ಯಾರೇ ಸಂಪಾದಕರಾಗಿದ್ದರೂ, ಈ 'ಸಂವಾದ'ವನ್ನು ನಡೆಸುವ ಮನಸ್ಸು ನಮ್ಮೆಲ್ಲರದ್ದೂ ಆಗಿರುತ್ತದೆ. ಅದರ ಕನಸುಗಳು ನಮ್ಮೆಲ್ಲರ ಕನಸುಗಳೂ ಆಗಿರುತ್ತವೆ. ಈ ನಮ್ಮ ಕನಸುಗಳು ಸಾಂಸ್ಕೃತಿಕ ಆರೋಗ್ಯವನ್ನು ಕುರಿತಾದವುಗಳು-ರುಚಿ ಪ್ರಜ್ಞೆಯನ್ನು ಕುರಿತಾದವುಗಳು. 'ಎಲ್ಲ ತತ್ವದೆಲ್ಲೆ ಮೀರಿ' ಇರುವ ಜೀವಂತಿಕೆಯ ಧಾರೆಯನ್ನು ಕಾಣುವಂಥದು-ಕಾಣಿಸುವಂಥದು ಇಂಥ ಕನಸು ಕಾಣುವ ಮುಗ್ಧತೆ ಇರುವವರೆಗೆ ಸಂವಾದ ನಡೆಯಬೇಕು-ನಡೆಯುತ್ತದೆ. ಅಂಥ ಮುಗ್ಧತೆ ನಮ್ಮಲ್ಲಿ ತೀರಿದಾಗ ಅದು ಮತ್ತೊಂದು ಮನದ ಮುಂದೆ ರೂಹುಗೊಳ್ಳುತ್ತದೆನ್ನುವುದು ನಮ್ಮ ನಂಬಿಕೆ. ಆಗ ಆ ಮನಸ್ಸು ಇಂಥ ಸಂವಾದದ ಬೆನ್ನು ಹತ್ತುತ್ತದೆ. ಅಂತೂ ಹೀಗೆ ಈ ಸಂವಾದ ನಿತ್ಯ... ನಿರಂತರ...

(೧೯೯೫ರ ಡಿಸೆಂಬರಿನಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ಪತ್ರಿಕಾ ಅಕಾಡೆಮಿ ಏರ್ಪಡಿಸಿದ್ದ ಸಣ್ಣ ಪತ್ರಿಕೆಗಳನ್ನು ಕುರಿತ ವಿಚಾರ ಸಂಕಿರಣದಲ್ಲಿ ಓದಿದ ಟಿಪ್ಪಣಿಗಳು)

ಕೃಪೆ: 'ಸಾಹಿತ್ಯ ಸಂವಾದ', ಸಂ: ೭, ಸಂ: ೩೮ ಮಾರ್ಚ್-ಏಪ್ರಿಲ್ ೧೯೯೫

ಸಂಚಯ
ಮಧು ಸಂಗ್ರಹದ ಆ ದಿನಗಳು...

ರವಿಕುಮಾರ ಕಾಶಿ



ಆರಂಭಿಸುವ ಮುನ್ನ ಒಂದೆರೆಡು ವೈಯುಕ್ತಿಕ ಮಿತಿಗಳನ್ನು ಹೇಳಿಬಿಟ್ಟರೆ ಒಳ್ಳೆಯದೇನೋ. ಮುಂಚಿನಿಂದಲೂ ನನಗೆ ಘಟನೆಗಳು ಸಂಭವಿಸಿದ ದಿನ, ದಿನಾಂಕದ ವಿವರಗಳನ್ನು ನೆನಪಿನಲ್ಲಿ ಇಡುವುದೇ ಕಠಿಣ. ದಿನಾಂಕವಂತಿರಲಿ ಘಟನೆಗಳೇ ಎಷ್ಟೋ ಬಾರಿ ನೆನಪಿನಲ್ಲಿ ಇರುವುದಿಲ್ಲ. ಇದು ಬರೀ ಸಂಚಯದ ವಿಷಯದಲ್ಲಷ್ಟೇ ಅಲ್ಲ, ಎಲ್ಲ ವಿಷಯದಲ್ಲೂ ಅಂತೆಯೇ; ಕೆಲವು ಸ್ಥೂಲವಾದ ವಿವರಗಳನ್ನು ಬಿಟ್ಟರೆ ವಿವರ ವಿವರವಾಗಿ ಕಂತೆ ಬಿಚ್ಚುವಂಥ ಸ್ಮರಣಶಕ್ತಿ ಇಲ್ಲ. ಹಾಗಾಗಿ ನಾನು ಮುಂದೆ ಎಂದಾದರೂ 'ಭಯಾಗ್ರಫಿ' ಬರೆಯುವ ಯೋಚನೆಯೂ ಇಲ್ಲ. ನನ್ನಲ್ಲಿರುವುದು ಮಂಜಾದ ಚಿತ್ರಗಳ ಕಲಸು ಮೇಲೋಗರ ಅಷ್ಟೆ. ಇಂತಿಂಥ ದಿನ ಹೀಗಾಯಿತು, ಇಂತಿಥವರು ಬಂದಿದ್ದರು ಎಂಬ ಖಚಿತ ಮಾಹಿತಿ ಕೆಲವರು ಕೊಡುವಂತೆ ನನ್ನಿಂದ ಸಾಧ್ಯವೇ ಇಲ್ಲ. ಆ ರೀತಿ ಮಾತನಾಡುವ ನನ್ನ ಶ್ರೀಮತಿಯಂತಹವರ ಮುಂದೆ ಕಣ್ಣರಳಿಸಿ ಹೌದೇ ಎನ್ನುತ್ತೇನೆ. 'ನನಗೂ ಅಂತ ನೆನಪಿನ ಶಕ್ತಿ ಇದ್ದಿದ್ದರೆ' ಎಂಬ ಅಸೂಯೆಯ ಮಿಂಚೂ ಸುಳಿದು ಹೋಗುತ್ತದೆ. ಹಾಗಾಗಿ ನನ್ನಿಂದ ಸಂಚಯದ ಬಗ್ಗೆ ಹೆಚ್ಚಿನ ಖಚಿತವಾದ 'ಮಾಹಿತಿ' ಏನೂ ಸಿಕ್ಕಲಿಕ್ಕಿಲ್ಲ. ಕೆಲವೊಂದು ಅನಿಸಿಕೆಗಳನ್ನು, ಅದೂ ಸಹ ಆಗ ಅನಿಸಿದ್ದು ಅಂತ ಈಗ ನಾನು ನೆನೆಸಿಕೊಳ್ಳುವುದು, ತೇಲುವಾಗಿ ನೆನೆಪಿನಾಳದಿಂದ ಮೇಲಕ್ಕೆ ಬಂದಿದ್ದು, ಆಗ ಮಾಡಿದ್ದನ್ನ ಈಗಿನ ಕನ್ನಡಿಯಲ್ಲಿ ನೋಡುತ್ತಲಿರುವಾಗ ಸಿಕ್ಕುವ ಹಲವಾರು ತುಣುಕುಗಳಷ್ಟೇ ಇಲ್ಲಿದೆಯೇ ಹೊರತು ಪೂರ್ಣ ಅಥವಾ ಮೂಲ ಚಿತ್ರವಲ್ಲ.

ಇಪ್ಪತ್ತೈದು ವರುಷದ ಅಂತರದಲ್ಲಿ ನಿಂತು ನಮ್ಮ ಸಂಚಯದ ಮೊದಲ ದಿನಗಳನ್ನು ನೆನೆಸಿಕೊಂಡರೆ ನಾವು ಅಂಥ ಮಹತ್ವಾಕಾಂಕ್ಷಿಯಾದ ಉದ್ದೇಶ್ಯಗಳನ್ನೇನೂ ಇಟ್ಟುಕೊಂಡು ಸಂಚಯ ಆರಂಭಿಸಲಿಲ್ಲ ಅಥವಾ ಮೊದಲ ದಿನಗಳಲ್ಲಿ 'ಸಂಚಯ' ಎಂಬ ರೂಪವೂ ಇರಲಿಲ್ಲ ಅನ್ನಿಸುತ್ತದೆ. ಹಾಗಾಗಿ 'ಸಂಚಯ' ಇಂಥ ದಿನವೇ ಆರಂಭವಾಯಿತು ಎನ್ನುವುದೂ ಕಠಿಣವೇ (ಅಂಥದೊಂದು 'ಅಫಿಷಿಯಲ್' ದಿನ ಇದ್ದರೂ ಪ್ರಹ್ಲಾದನಿಗೆ - ನಾವು ಸ್ನೇಹಿತರು ಕರೆಯುವುದು ಪಾಲಿ ಅಂತಲೇ - ಗೊತ್ತಿರಬಹುದು). ನನಗೆ ಅಂಥದೊಂದು ದಿನಾಂಕಕ್ಕಿಂತ ಅದು ಹ್ಯಾಗೆ ನಮ್ಮ ಮನಸ್ಸುಗಳಲ್ಲಿ ಹಾಗೂ ಸ್ನೇಹಿತರ ನಡುವಿನ ಒಡನಾಟದಲ್ಲಿ ಒಡಮೂಡಿತು ಎಂಬುದು ಮುಖ್ಯ ಎನಿಸುತ್ತದೆ. ಮೊದಲಲ್ಲಿ ಮಲ್ಲೇಶ್ವರದ ನಾಲ್ಕಾರು ರಸ್ತೆಗಳ ಅಂತರದಲ್ಲೇ ಮನೆಗಳಿದ್ದ ನಾವು ಕೆಲವು ಸ್ನೇಹಿತರು ಭೇಟಿಯಾಗಿ ಹರಟೆ ಹೊಡೆದಿದ್ದು ಕ್ರಮೇಣ ಸ್ವಲ್ಪ ಸ್ವಲ್ಪವೇ ಹರಳುಗಟ್ಟಿ ರೂಪುಗೊಂಡಿದ್ದು 'ಸಂಚಯ'ವಾಗಿ. ಆರಂಭದಲ್ಲಿ ಕೆಲವು ಸಲ ಸೇರಿದಾಗ ಸುಮ್ಮನೆ ಕವನ ಓದಿದ್ದು ಇತರೆ ಒಂದಿಷ್ಟು ಚಟುವಟಿಕೆ ಮಾಡುತ್ತಲಿದ್ದುದು ಮಧ್ಯದಲ್ಲಿ ಯಾವಾಗಲೋ ಪತ್ರಿಕೆ ತೂರಿಕೊಂಡಿತು (ಮತ್ತೆ, ಅದರ ಅಧಿಕೃತ ದಿನಾಂಕ ಪಾಲಿಗೆ ಗೊತ್ತಿರಬಹುದು). ಅದಕ್ಕೆ 'ಸಂಚಯ'- ಎಲ್ಲ ಕಡೆಗಳಿಂದ ಮಧುವನ್ನು ಸಂಗ್ರಹಿಸುವ ಕ್ರಿಯೆ ಎಂಬ ಅರ್ಥದೊಡನೆ- ಎಂಬ ಹೆಸರನ್ನು ನಿರ್ಧಾರ ಮಾಡಿದೆವು. ಅದರ ಲೋಗೊ ನನ್ನದೆ. ಕೊಂಬೆಗಳಿಂದ ಜೋತಾಡುತ್ತಿರುವ ಜೇನುಗೂಡಿನ ಚಿತ್ರ ಅದಾಗಿತ್ತು. ಮುಂದೆ ಹಲವಾರು ವರ್ಷದ ಬಳಿಕ ಸಂಚಯದ ಲೋಗೋವನ್ನು ಮತ್ತೆ ಬದಲಾಯಿಸಿದೆವು. ಬದಲಾದ ಲೋಗೋನಲ್ಲಿ ಕೈ ಹಿಡಿದು ಜೊತೆಯಲ್ಲಿ ನಿಂತಿರುವವರ ಚಿತ್ರವಿದೆ. ಪತ್ರಿಕೆಯನ್ನು ಮೊದಲಲ್ಲಿ ಟೈಪು ಮಾಡಿ ಜೆರಾಕ್ಸ್ ಮಾಡುತ್ತಿದ್ದೆವು, ನಂತರ ಡೂಪ್ಲಿಕೇಟ್ ಯಂತ್ರದಲ್ಲಿ ಮುದ್ರಣ ಮಾಡಿದೆವು ಕಡೆಗೆ ಸುಮಾರು ೧೯೮೮ರ ವೇಳೆಗೆ ಲೆಟರ್ ಪ್ರೆಸ್‌ನಲ್ಲಿ ಮುದ್ರಣ ಮಾಡಿದ ಸಂಚಿಕೆಗಳು ಬರಲಾರಂಭಿಸಿದವು. ನಮ್ಮಗಳ ಹಾಗೂ ಸುತ್ತಲ ಸ್ನೇಹಿತರ ವಲಯಕ್ಕೆ ಸಂಚಯ ಬರಹ ಪ್ರಕಟಣೆಯ ವೇದಿಕೆಯಾಯ್ತು.

ಸಂಚಯ ಆರಂಭವಾದಾಗ ಅದನ್ನು ಹೀಗೆಯೇ ರೂಪಿಸಬೇಕು, ಅದರ ರೂಪು ರೇಷೆಗಳು ಇಂತಿರಬೇಕು, ಅದರ ರಾಜಕೀಯ / ವೈಚಾರಿಕ ಧೋರಣೆ ಇದು, ಹೀಗೆ ಸ್ಪಷ್ಟವಾದ ಚಿಂತನೆಯ ಮೂಲಕ ಸಂಚಯ ಹುಟ್ಟಿಕೊಂಡದ್ದಲ್ಲ. ಈಗ ಹಿಂದಿರುಗಿ ನೋಡುವಾಗ ಇಂತಹ ಮುಕ್ತತೆ ಅದರ ಗುಣವೂ ಹೌದು ಸ್ವಲ್ಪ ಮಟ್ಟಿಗಿನ ದೋಷವೂ ಹೌದು ಅನ್ನಿಸುತ್ತದೆ. ಆದರೆ ಆಗ ನಮ್ಮಲ್ಲಿ ಯಾರಿಗೂ ಇದನ್ನೆಲ್ಲ ಚಿಂತಿಸುವಷ್ಟು ಮಟ್ಟದ ಮೆಚ್ಯೂರಿಟಿ ಇರಲಿಲ್ಲ. ಮೊದಲಲ್ಲಿ ನಾವು ಸೇರಿದ್ದು ಪಾಲಿ ಮನೆಯ ಪಕ್ಕದಮನೆಯ ಮಹಡಿ ಮೇಲೆ. ಆಗ ಅಲ್ಲಿ ಪಾಲಿ, ಅವನ ತಮ್ಮ ಸೀನ, ನನ್ನಣ್ಣ ಶೇಷ, ಕಿಟ್ಟ ಅವನ ತಮ್ಮ ಸೂರಿ, ಸಂಪತ್ತು ಎಂದು ನೆನಪು. ನಮ್ಮಲ್ಲಿ ಯಾರಿಗೂ ಖಡಾಖಂಡಿತವಾದ ಎಡ, ಬಲ, ಮಧ್ಯ ಇತ್ಯಾದಿ ಪ್ರಬಲವಾದ ರಾಜಕೀಯ ಧೋರಣೆಗಳಿರಲಿಲ್ಲ; ಕಟ್ಟರ್ ಪಂಥೀಯ ನಿಲುವುಗಳು ಯಾವುದರ ಬಗ್ಗೆಯೂ ಇರಲಿಲ್ಲ. ನಮ್ಮಗಳ, ಎಲ್ಲದಕ್ಕೂ ತೆರೆದುಕೊಂಡ, ಈ ಮಧ್ಯ ಮಾರ್ಗದ ಗುಣವೇ ಸಂಚಯಕ್ಕೂ ಅಂಟಿಕೊಂಡಿತು. ಆದರೆ ಅದು ಹಾಗಾಗಿದ್ದನ್ನು ನಾನು ಈಗ ಸ್ಪಷ್ಟವಾಗಿ ಕಾಣಬಲ್ಲೆನೇ ಹೊರತು ಆಗ ನಮಗೆ ಅದರ ತಿಳಿವಿತ್ತು ಅಂತ ಅನ್ನಿಸುವಿದಿಲ್ಲ.

ಆರಂಭದ ದಿನಗಳಲ್ಲಿ ಅದು ನಮ್ಮ ಕ್ರಿಯಾಶೀಲತೆಯನ್ನು ತೊಡಗಿಸುವ, ನಮ್ಮಲ್ಲಿ ಉಕ್ಕಿ ಹರಿಯುತ್ತಿದ್ದ ಶಕ್ತಿ, ಉತ್ಸಾಹ, ಹುಮ್ಮಸ್ಸುಗಳನ್ನು ಹರಿ ಬಿಟ್ಟ ಕಾಲುವೆಯಂತಾಯಿತು. ಇಲ್ಲಿ ನಾನು ಸಂಚಯ ಪತ್ರಿಕೆ ಹಾಗೂ ಗೆಳೆಯರ ಸಮೂಹ ಎರಡೂ ಕೂಡಿಯೇ ಮಾತನಾಡುತ್ತಿದ್ದೇನೆ. ಎಷ್ಟೋ ವರ್ಷಗಳ ತನಕ ಅವೆರಡೂ ಬೇರೆ ಎಂಬ ಕಲ್ಪನೆ ಇರಲಿಲ್ಲ, ನನ್ನ ಮನಸ್ಸಿನಲ್ಲಂತೂ ಈಗಲೂ ಇಲ್ಲ. ಸಂಚಯ ಸಹಜವಾಗಿ ತನ್ನದೇ ಹಾದಿಯನ್ನು ಕಂಡುಕೊಂಡಿತಾದ್ದರಿಂದ ಅದರ ರಚನೆ (ಸ್ಟ್ರಕ್ಚರ್) ಸಹ ಪೂರ್ವ ನಿರ್ಧಾರಿತವಲ್ಲದ

ದಾರಿಯಲ್ಲೇ ನಡೆಯಿತು. ಆರಂಭದ ದಿನಗಳಿಂದಲೂ ನಾವ್ಯಾರೂ ಅಧ್ಯಕ್ಷ, ಕಾರ್ಯದರ್ಶಿ, ಖಜಾಂಚಿ, ಅಜೀವ ಸದಸ್ಯರು, ವಿಶೇಷ ಕಾರ್ಯಕ್ರಮಗಳಿಗೆ ಸಮಿತಿ- ಈ ದಿಕ್ಕಿನಲ್ಲಿ ಎಂದೂ ಯೋಚಿಸಲಿಲ್ಲ ಸಂಚಯ 'ಸಂಸ್ಥೆ'ಯಾಗಲಿಲ್ಲ. ಯಾರಿಗೆ ಯಾವ ಕೆಲಸ ಎಷ್ಟು ಆಗುತ್ತೋ ಅಷ್ಟು ಮಾಡುವುದು ಮಿಕ್ಕಿದ್ದ ಕೆಲಸವನ್ನೆಲ್ಲ ಪಾಲಿ ಮಾಡುವುದು- ಮುಂಚಿನಿಂದಲೂ ನಡೆದು ಬಂದದ್ದು ಹೀಗೆಯೇ. ಆ ಅರ್ಥದಲ್ಲಿ ಪಾಲಿ ಸಂಚಯವನ್ನು ಹಿಡಿದಿಟ್ಟ ಆಯಸ್ಕಾಂತ ಅಥವಾ ಕೇಂದ್ರ ಎಂದರೂ ತಪ್ಪೇನಲ್ಲ. ಅವನಿಲ್ಲದಿದ್ದರೆ ಸಂಚಯ ಇಷ್ಟು ದಿನ ಉಳಿಯುವ ಸಾಧ್ಯತೆಯೇ ಇರಲಿಲ್ಲ. ನನ್ನಂತೆಯೇ ಅನೇಕರು ಸಂಚಯದಲ್ಲಿ ಕೆಲವು ಕಾಲ ಭಾಗಿಗಳಾಗಿ ಭಿನ್ನ ಕಾರಣಗಳಿಗಾಗಿ ದೂರವಾದಾಗ ಸಹ ಸಂಚಯ ಮುಂದುವರೆದಿರುವುದು ಅವನಿಂದಲೇ, ಇದು ಹೊಗಳಿಕೆಯ ಮಾತಲ್ಲ, ಸತ್ಯ. ಪಾಲಿಗೆ ಇದು ಅಂತರಂಗದ ಅವಶ್ಯಕತೆ, ಹಿಡಿದಿದ್ದನ್ನು ಬಿಡಲಾರೆನೆಂಬ ಹಠ, ಕಮಿಟ್‌ಮೆಂಟ್ ಎಲ್ಲ ಸೇರಿ - ಒಟ್ಟಿನಲ್ಲಿ ಇಪ್ಪತ್ತೈದು ವರುಷಗಳಷ್ಟು ನಡೆಸಿಬಿಟ್ಟ ಸಾತತ್ಯ ಅವನದ್ದು.

ಇಂಥದೊಂದು ಚಟುವಟಿಕೆ ಮಲ್ಲೇಶ್ವರದಲ್ಲಿ ಅರಳಿದ್ದು ಸಹಜವೇ ಅನ್ನಿಸುತ್ತೆ. ನಮ್ಮಲ್ಲಿ ಹೆಚ್ಚಿನವರು ಮಲ್ಲೇಶ್ವರದ ನಿವಾಸಿಗಳಾಗಿದ್ದು ಒಂದು ಕಾರಣವಾದರೆ ಮಲ್ಲೇಶ್ವರದಲ್ಲಿದ್ದ ಸಾಂಸ್ಕೃತಿಕ ವಾತಾವರಣ ಮತ್ತೊಂದು. ನಮ್ಮೆಲ್ಲ ಕಾರ್ಯಕ್ರಮಗಳಿಗೂ ಗಾಂಧೀ ಸಾಹಿತ್ಯ ಸಂಘದಿಂದ ಹಾಗೂ ಕಸ್ತೂರಿಯವರಿಂದ ಸಿಕ್ಕ ಬೆಂಬಲ, ಶ್ರೀನಿವಾಸರಾಜು ಮೇಷ್ಟ್ರುರವರು ನಮ್ಮೊಂದಿಗೆ ಪ್ರತಿ ಹೆಜ್ಜೆಯಲ್ಲೂ ಜೊತೆಗೆ ನಿಂತದ್ದು ಇದನ್ನೆಲ್ಲ ಇಲ್ಲಿ ನೆನಸಿಕೊಳ್ಳಬೇಕು. ಈ ಎಲ್ಲ ಒತ್ತಾಸೆಗಳು ಹಿನ್ನೆಲೆಯಲ್ಲಿ ಕೆಲಸ ಮಾಡಿವೆ. ಮಲ್ಲೇಶ್ವರ ಹೇಗೆ ನಮ್ಮನ್ನು ಕೂಡಿಸಿತ್ತೋ ಹಾಗೆಯೇ ಒಬ್ಬೊಬ್ಬರಾಗಿ ಮಲ್ಲೇಶ್ವರದಿಂದ ದೂರವಾದಂತೆ, ವಿಧ್ಯಾರ್ಥಿ ದಿನಗಳನ್ನು ಮುಗಿಸಿ ಮುಂದಿನ ಘಟ್ಟಕ್ಕೆ ಸರಿದು ಕೆಲಸ ದುಡಿಮೆ ಇತ್ಯಾದಿಗಳಲ್ಲಿ ತೊಡಗಿಕೊಂಡಂತೆ ಸಂಚಯದ ಮೊದಲ ಹಂತದ ಅಥವಾ ಮೊದಲಲ್ಲಿ ಇದ್ದ ಗೆಳೆಯರ ಗುಂಪು ಚದುರಿತೆನ್ನಬೇಕು. ಆದರೆ ಈ ರೀತಿ 'ಹಂತ'ದ ಬಗ್ಗೆ ಮಾತನಾಡುವುದೂ ಹಿನ್ನೋಟದಿಂದ ಲಭ್ಯವಾದ ಅರಿವು.

ಸಂಚಯದಲ್ಲಿ ನಾನು ಸಕ್ರಿಯವಾಗಿ ತೊಡಗಿಕೊಂಡಿದ್ದ ದಿನಗಳ ಕೆಲವು ಚಟುವಟಿಕೆ/ನೆನಪುಗಳು. ಕಲಾವಿಮರ್ಶೆ ಬಗ್ಗೆ ನಡೆಸಿದ ಕಮ್ಮಟ, ರಾಮಚಂದ್ರಶರ್ಮರು ಗಾಂಧಿ ಸಾಹಿತ್ಯ ಸಂಘಕ್ಕೆ ಬಂದದ್ದು, ಭೂಮಂಡಲವನ್ನು ಪೇಪರ್ ಮ್ಯಾಶೆಯಲ್ಲಿ ಮಾಡಿ ವಿಶ್ವ ಭೂದಿನದಂದು ಮೆರವಣಿಗೆ ಮಾಡಿದ್ದು, ಕಲಾವಿದರಿಂದ ವುಡ್‌ಕಟ್ ಮಾಡಿಸಿ ಸಂಚಯದ ಸಂಚಿಕೆಗಳೊಂದಿಗೆ ಹಂಚಿದ್ದು, ಪ್ರಿಂಟ್‌ಮೇಕಿಂಗ್ ಕುರಿತ ವಿಶೇಷ ಸಂಚಿಕೆ ಎಲ್ಲಕ್ಕಿಂತ ಹೆಚ್ಚಾಗಿ ಮೊದಲ ವರ್ಷಗಳಲ್ಲಿ ಪ್ರತಿ ಕಾರ್ಯಕ್ರಮದಲ್ಲೂ ಹೊರಗೆ ನಿಂತು ಬರುವವರನ್ನು ಒಂದು, ಎರಡು ಎಂದು ಎಣಿಸುವುದು, ಎಷ್ಟೊತ್ತಾದರೂ ಜನ ಬರದಿದ್ದಾಗ ಕಾರ್ಯಕ್ರಮವನ್ನು ನಿಧಾನವಾಗಿ ಆರಂಭಿಸಿ ಬಂದಿದ್ದ ಅಥಿತಿಗಳಿಗೆ ಪೆಚ್ಚುಮೋರೆಯಿಂದ ಸಮಜಾಯಿಷಿ ಹೇಳುತ್ತಾ ಸ್ವಾಗತ ಮಾಡುವುದು. ಪ್ರತಿ ಕಾರ್ಯಕ್ರಮಕ್ಕೂ ಪಾಲಿ ತರುತ್ತಿದ್ದ ಜೋಳಿಗೆ ಹೀಗೆ ಹಲವಾರು ನೆನಪುಗಳು.

ಸಂಚಯಕ್ಕೆ ನಾನು ಕೊಟ್ಟಿದ್ದು ಕಮ್ಮಿ, ಅದರಿಂದ ಪಡೆದದ್ದು ಬಹಳ ಎನ್ನಬೇಕು. ಆಗಾಗ್ಗೆ 'ಹಾಗೆ ಮಾಡೋಣ, ಹೀಗೆ ಮಾಡೋಣ' ಎಂದು ಹತ್ತಾರು ಐಡಿಯಾಗಳನ್ನು ಹತ್ತಿಸಿಕೊಂಡುಬಿಡುವುದು. ಕೊನೆಗೆ ಈ 'ಮಾಡೋಣ'ದ ಬಹುಪಾಲು ಪಾಲಿಯ ಹೆಗಲಿಗೇ ಬೀಳುತ್ತಿತ್ತು, ನಾನು ನನ್ನ ಪ್ರದರ್ಶನಗಳಲ್ಲಿ, ಜೊತೆಗಿನ ಪ್ರವಾಸದಲ್ಲಿ ಬ್ಯುಸಿಯಾಗಿಬಿಡುತ್ತಿದ್ದೆ. ಪಾಲಿಗೆ ಸಂಚಯ ಅವನ ಜೀವನದ ಕೇಂದ್ರವಾದಂತೆ ನನಗಾಗಲಿಲ್ಲ, ನನ್ನ ದಾರಿಯೇ ಬೇರೆ. ಅವನು ಪ್ರೀತಿಯಿಂದ ಸತತವಾಗಿ ನೀರೆರೆದು ಬೆಳೆಸಿದ ಸಂಚಯ ಈಗ ಹೂ ಬಿಟ್ಟು, ಫಲಕೊಟ್ಟಿದೆ, ತನ್ನ ಬೇರುಗಳನ್ನು ಸುತ್ತಲೂ ಆಳವಾಗಿ ಚಾಚಿ ಹೆಮ್ಮರವಾಗುತ್ತಿದೆ, ಇದು ಹೆಮ್ಮೆಯ, ಸಂತಸದ ವಿಷಯ. ಆ ಹೆಮ್ಮರದಲ್ಲಿ ಕೊಂಬೆ ಕೊಂಬೆಗೂ ಜೇನು ಗೂಡುಗಳು ಕಟ್ಟಿ ಮಧು ಸಂಗ್ರಹವಾಗಲಿ, ಇದು ಆಶಯ.

೨೦ ಸೆಪ್ಟೆಂಬರ್ ೨೦೧೨

ಸೆಂಚುರಿ ಅಂಚಿನಲ್ಲಿ ನಿಂತು...

ಡಿ.ವಿ. ಪ್ರಹ್ಲಾದ್



ನಾಳೆ ಸಂಚಯದ ನೂರನೇ ಸಂಚಿಕೆ ಪ್ರಿಂಟಾಗಲಿದೆ. ಮೊದಲ ಸಂಚಿಕೆ ರೂಪಿಸುವಾಗಿನ ಆತಂಕ ತಹತಹ ಇಪ್ಪತ್ತೈದು ವರ್ಷಗಳ ನಂತರ ನೂರನೆಯದಕ್ಕೂ ಇದೆ. ತನ್ನ ಮರಿಗಳನ್ನು ಸಾಕಲು ಹೋರಾಡುವ ಅಮ್ಮ ಬೆಕ್ಕಿನ ಹಾಗೆ. ಆವಾಗ ರೂಪಿಸಿದ್ದ ಮೊದಲ ಸಂಚಿಕೆ ಜೆರಾಕ್ಸಿನದ್ದು. ಎ-ಫೋರ್ ಆಕಾರದ ಬಿಳಿಕಾಗದದ ಮೇಲೆ ಟೈಪು ಮಾಡಿಸಿ ಅದಕ್ಕೆ ಇಂಡಿಯನ್ ಇಂಕಿನಿಂದ ಚಿತ್ರ ಲೇಔಟ್‌ಗಳನ್ನು ಜಿಡಿಸಿ ಆಮೇಲೆ ಜೆರಾಕ್ಸು ಮಾಡಿಸುವುದು. ರವಿಕಾಶಿ ಅದಕ್ಕೊಂದು Mast Head ಹಾಗೂ ಚಿತ್ರಗಳನ್ನು ರೂಪಿಸಿದ್ದ.

ಮೊದಲ ಸಂಚಿಕೆ ನಾವು ನಮ್ಮ ಗೆಳೆಯರಿಗೆ ಅಂತ ಹೊರತಂದ ಪ್ರತಿಗಳು ಕೇವಲ ಇಪ್ಪತ್ತು. ಆ ಕಾಲಕ್ಕೆ ನೂರು ರೂಪಾಯಿಯ ಖರ್ಚು. ನನ್ನ ಮಟ್ಟಿಗೆ ದೊಡ್ಡ ಮೊತ್ತವೇ ಆಗಿತ್ತು. ಈ ಸಂಚಿಕೆಗಳನ್ನ ಜೋಪಾನವಾಗಿ ಇಟ್ಟುಕೊಂಡು, 'ನೋಡಿ ನಾವು ಇಂಥಾ ಘನಕಾರ್ಯಕ್ಕೆ ಹೊರಟಿದ್ದೀವಿ' ಅಂತ ತೋರಿಸಿಕೊಳ್ಳುವ ಇಪ್ಪತ್ತರ ವಯೋಸಹಜ ಹಂಬಲವೂ ಇತ್ತು. ಹಾಗೂ ಹೀಗೂ ಒಂಭತ್ತು ಸಂಚಿಕೆ ಎರಡು ತಿಂಗಳಿಗೊಂದರಂತೆ ಹೊರಬಂತು. ನಮ್ಮ ಕಾಲೇಜಿನ ಕನ್ನಡ ಉಪನ್ಯಾಸಕ ನಾ.ಗೀತಾಚಾರ್ಯರು ಯಾಕೆ ಪ್ರಿಂಟು ಮಾಡಿಸಬಾರದು? ಅಂತ ತಲೆಯಲ್ಲಿ ಹುಳ ಬಿಟ್ಟುಬಿಟ್ಟರು. ಪ್ರಿಂಟೇನೋ ಮಾಡಿಸಬಹುದು, ಓದೋರ್‍ಯಾರು?

ಅದರ ಖರ್ಚು ಜಾಸ್ತಿ. ಇನ್ನೂರು ರೂಪಾಯಿಯಷ್ಟು. ಯಾಕೆ ಬೇಕು ಅಂತಲೂ ಅನ್ನಿಸಿತ್ತು. ಆದರೂ ಒಂದು ಕೈ ನೋಡುವ ಅಂತ ಪ್ರೆಸ್ಸಿನ ದಾರಿ ಹಿಡಿದೆವು. ನನ್ನ ಪೀಚಲು ಆಕಾರ ನೋಡಿದ ಮುನಿಧರ್ಮಯ್ಯ 'ಓಹೋ ನೀವೇನಾ ಎಡಿಟರ್? ಪ್ರೂಫ್ ನೋಡೋಕೆ ಬರುತ್ತಾ ನಿಮಗೆ?' ಬೇಗ ಬೇಗ ಮುಗಿಸಿಕೊಡಬೇಕು. ಇಲ್ಲಾ ಅಂದ್ರೆ ನಮಗೆ ಲೆಡ್ (ಅಚ್ಚಿನ ಮೊಳೆ) ಹೆಲ್ಡಪ್ ಆಗುತ್ತೆ ಅಂತ ಜಬರಿಸಿದರು. ಅಷ್ಟೇ ಅಲ್ಲ ಆ ಸಂಚಿಕೆಗೆ ಮ್ಯಾಪ್ಲಿಥೋ ಪೇಪರ್ ಹಾಕಿದ್ದೀನಿ ಇನ್ನೂ ಐವತ್ತು ರೂಪಾಯಿ ಜಾಸ್ತಿ ಕೊಡಬೇಕು ಅಂದಿದ್ದರು. ಮರು ಮಾತಿಲ್ಲದೆ ಒಪ್ಪಿ ನಡೆದಿದ್ದೆ. ಕೆಲಸಕ್ಕೆ ಸೇರಿದ್ದ ಹೊಸತರಲ್ಲಿ ನನ್ನ ಸಂಬಳ ಎಂಟುನೂರು. ಎರಡು ತಿಂಗಳಿಗೊಮ್ಮೆ ಪ್ರೆಸ್ಸಿನ ಬಿಲ್ಲು ನಾಲ್ಕು ನೂರು ಸದ್ದಿಲ್ಲದೆ ಸಂದಾಯ. ವಿಜ್ಞಾನದ ವಿದ್ಯಾರ್ಥಿಯಾಗಿದ್ದ ನನ್ನ ಈ ಹುಚ್ಚು ಕೆಲವರಿಗೆ ವಿಚಿತ್ರವಾಗಿ ಕಂಡರೆ ಮತ್ತೆ ಕೆಲವರು ಮಾಡಿ ಒಳ್ಳೆ ಕೆಲಸ ಅಂತ ಹುರಿದುಂಬಿಸಿದರು.

ಮೊದಲ ಪ್ರಯತ್ನ ಅಂತ ಅಕ್ಕಪಕ್ಕದ ಮನೆಯವರನ್ನು ಚಂದಾ ಕೇಳಿದರೆ ಮುಲಾಜಿಲ್ಲದೆ ಇಂಥವಕ್ಕೆಲ್ಲಾ ದುಡ್ಡಿಲ್ಲ ಅಂದರು. ಒಬ್ಬ ಯಜಮಾನರು ಅವರ ಹೆಸರು ಶಿಂಧೆ ಇರಬೇಕು. ನಮ್ಮ ಜೆರಾಕ್ಸ್ ಪತ್ರಿಕೆಗೆ ಇಪ್ಪತ್ತು ರೂಪಾಯಿ ಚಂದಾ ಕೊಟ್ಟುಬಿಟ್ಟರು. ಸರಿಯಾಗಿ ಪತ್ರಿಕೆ ತಲುಪಬೇಕು ಅಂತ ತಾಕೀತು ಮಾಡಿದರು. ನಾನಂತೂ ಸೈಕಲ್ ಮೇಲೆ ಗುಟ್ಟಳ್ಳಿಯ ಅವರ ಮನೆಗೆ ಹೋಗಿ ಭಯ ಭಕ್ತಿಯಿಂದ ಪತ್ರಿಕೆ ಒಪ್ಪಿಸಿಬರುತ್ತಿದ್ದೆ. ಅವರ ಚಂದಾ ಅವಧಿ ಮುಗಿದ ನಂತರ ನಿಟ್ಟುಸಿರು ಬಿಟ್ಟೆ. ಮತ್ತೆ ಕೇಳಲಿಲ್ಲ.

ಯಾರಾದರೂ ಸಿಕ್ಕಿ ಸಾಹಿತ್ಯದಲ್ಲಿ ಆಸಕ್ತಿ ಇದೆ ಅಂತ ಅನ್ನಿಸಿದವರಿಗೆ, ಬರಹಗಾರರಿಗೆ ನಮ್ಮ ಪತ್ರಿಕೆ ಕೊಡತೊಡಗಿದೆವು ಉಚಿತವಾಗಿ. ಒಬ್ಬ ವಿಮರ್ಶಕರು ಒಂದು ಸಂಚಿಕೆ ಪಡೆದ ಮೂರು ನಾಲ್ಕು ದಿನಗಳ ನಂತರ ಸಿಕ್ಕರು. ನಮ್ಮ ಪತ್ರಿಕೆ ಹೇಗಿದೆ ಸಾರ್ ಅಂತ ಕೇಳಿದ್ದೆ. ಯಾವ ಪತ್ರಿಕೆ ಅಂತ ಪ್ರಶ್ನಿಸಿದ್ದರು. ದೊಡ್ಡ ದೊಡ್ಡವರಿಗೆ ಪತ್ರಿಕೆ ಕೊಟ್ಟು ಓದಿಸಬೇಕೆಂಬ ನಾವು ಏನೋ ಮಾಡಿದ್ದೇವೆ ಅಂತ ತೋರಿಸಿಕೊಳ್ಳುವ ಹಂಬಲ. ಒಮ್ಮೆ ಧಾರವಾಡದಲ್ಲಿ ಅಟ್ಟದ ಮೇಲೆ ಕುರ್ತಕೋಟಿ ಅವರಿಗೆ ಒಂದು ಸಂಚಿಕೆ ಕೊಟ್ಟು 'ನಿಮ್ಮ ಅನಿಸಿಕೆ ತಿಳಿಸಿ ಸಾರ್' ಅಂದೆ. 'ಅದಕ್ಕೆಲ್ಲಾ ನನಗೆ ಟೈಮಿಲ್ಲ' ಅಂದಿದ್ದರು. ಮತ್ತೊಮ್ಮೆ ಅಂಚೆ ಮೂಲಕ ಹಾ.ಮಾ. ನಾಯಕರಿಗೆ ಪತ್ರಿಕೆ ಕಳಿಸಿ ಚಂದಾದಾರರಾಗಲು ವಿನಂತಿಸಿದ್ದಕ್ಕೆ ನಿಮ್ಮ ಪತ್ರಿಕೆಯಲ್ಲಿ ಏನೂ ಇಲ್ಲ ಚಂದಾ ಕೊಡಲಾರೆ ಅಂತ ಬರೆದಿದ್ದರು. ಅದು ನಿಜವೂ ಆಗಿದ್ದಿರಬೇಕು.

ದೊಡ್ಡವರು ತಮ್ಮ ಬರಹ ನಮ್ಮ ಪತ್ರಿಕೆಗೆ ಕೊಡುವುದು ಬಲು ಕಷ್ಟ ಆಗಿತ್ತು. ಯಾಕೆಂದರೆ, ಆಗ ನಮ್ಮ ಹೆಸರು ವರ್ಚಸ್ಸು ಯೂನಿವರ್ಸಿಟಿಯ ಮಠ ಮಾನ್ಯತೆ ಗಾಡ್‌ಫಾದರ್ ಥರದ ಲೇಖಕರು ಯಾರೂ ನಮ್ಮ ಬೆನ್ನಿಗಿರಲಿಲ್ಲ. ಇದ್ದವರು ರಾಜು ಮೇಷ್ಟ್ರು ಕಸ್ತೂರಿ ಥರದ ಫಕೀರರು. ಅಷ್ಟರ ನಡುವೆಯೂ ಬರಗೂರು ತಮ್ಮ ಕವಿತೆ ಕೊಟ್ಟಿದ್ದಾರೆ. ಇಷ್ಟಕ್ಕೂ ನಮ್ಮ ಪತ್ರಿಕೆ ಶುರುವಾಗಿದ್ದೇ ನಮ್ಮಂಥ ಹೆಸರಿಲ್ಲದ ಜನಗಳ ಬರಹ ಪ್ರಕಟಣೆಗೆ. ಅವರು ನಮ್ಮನ್ನು ಕ್ಯಾರೇ ಅನ್ನದಿದ್ದಕ್ಕಿಂತ ನಾವೂ ಅವರನ್ನ ಕೇಳಲಿಲ್ಲ. ವರ್ಷಗಳ ಅಂತರದಲ್ಲಿ ನಮ್ಮದೇ ಲೇಖಕರ ವಲಯ ನಿಧಾನವಾಗಿ ವಿಸ್ತರಿಸಿತು. ಪತ್ರಿಕೆಯ ಪ್ರಾಮಾಣಿಕತೆ ಲೇಖಕರ ವಲಯವನ್ನು ಮುಟ್ಟಿತು. ತನ್ನದೇ ಲೇಖಕರ ಪಡೆಯೊಂದನ್ನು ಕಿರುಪತ್ರಿಕೆ ರೂಪಿಸಿಕೊಳ್ಳುವುದು ಕಡಿಮೆ ಸಾಹಸ ಏನಲ್ಲ. ಅದೂ ಚಳುವಳಿಗಳ ಕಾವಿಳಿದ ಎಲ್ಲಾ ದೊಡ್ಡ ಸಾಹಿತ್ಯ ಶಿಖರಗಳೂ ಬದುಕಿ ಬೆಳಗುತ್ತಿದ್ದ ದಶಕಗಳಲ್ಲಿ. ಹಾಗೆ ನೋಡಿದರೆ ಸೈದ್ಧಾಂತಿಕ ಗೂಟಗಳಿಗೂ ನಾವು ಜೋತುಬೀಳಲಿಲ್ಲ. ಗುಂಪುಗಳಿಗೂ ಸೇರಲಿಲ್ಲ. ಇವುಗಳ ಬಗ್ಗೆ ಒಂದು ಅನುಮಾನ-ಅಂತರ ಉಳಿಸಿಕೊಂಡೇ ಬಂದೆವು. ಅದು ಅನೇಕ ಹಂತಗಳಲ್ಲಿ ಲಾಭಕರವಾದರೂ ನಷ್ಟವೂ ಕಡಿಮೆ ಏನಲ್ಲ.

ಸಂಚಿಕೆಯಿಂದ ಸಂಚಿಕೆಗೆ ನಿಧಾನವಾಗಿ ಓದುಗರು ಮತ್ತು ಲೇಖಕರು ಸೇರತೊಡಗಿದರು. ಕೆ.ಎಲ್. ನರಸಿಂಹನ್ ನಮ್ಮ ಮೊದಮೊದಲ ಸಂಚಿಕೆಗಳ ಪ್ರಿಂಟಿಂಗು ಇತ್ಯಾದಿಗಳ ಬಗ್ಗೆ ಸಲಹೆ ಕೊಟ್ಟು ನೆರವನ್ನೂ

ನೀಡಿದ್ದರು. ಅವರು ತಮ್ಮ ಪ್ರಕಟಣೆಗೆ ಬಳಸಿದ್ದ ಕೆಲವು ಬ್ಲಾಕುಗಳನ್ನು ನಮಗೂ ಬಳಸಿಕೊಳ್ಳಲು ಕೊಟ್ಟರು. ಆರ್.ಎಂ. ಹಡಪದ್ ಮೇಷ್ಟ್ರು ಲಲಿತ ಕಲಾ ಅಕಾಡೆಮಿ ಅಧ್ಯಕ್ಷರಾಗಿದ್ದಾಗ ಅವರಿಗೆ ಒಂದು ಪತ್ರಮುಖೇನ ವಿನಂತಿ ಮುಂದಿಟ್ಟೆವು. ಅಕಾಡೆಮಿ ತನ್ನ ಪುಸ್ತಕಗಳಿಗೆ ಬಳಸಿರುವ ಬ್ಲಾಕುಗಳನ್ನೂ ನಮ್ಮ ಪತ್ರಿಕೆಗೆ ಬಳಸಿಕೊಂಡು ತಪ್ಪದೇ ವಾಪಸ್ಸು ಕೊಡಬೇಕಾದ ಕರಾರಿನ ಮೇಲೆ ಕೊಡುತ್ತಿದ್ದರು. ಆಗ ಅಕಾಡೆಮಿಯಲ್ಲಿದ್ದ ಮರಿಶಾಮಾಚಾರ್ ತಮ್ಮ ಕಡತ ಹಾಗೂ ಪುರಾತನ ರ್‍ಯಾಕುಗಳ ಸಂದಿಯಿಂದ ಕೈಹಾಕಿ ತೆಗೆದುಕೊಟ್ಟು ಒಂದು ಬ್ಲಾಕು ನಮ್ಮ ಆ ಸಂಚಿಕೆಯ ಮುಖಪುಟ ಆಗುತ್ತಿತ್ತು. ಅವರ ಹತ್ತಿರ ಫೋಟೋ ಬ್ಲಾಕುಗಳಿಗಿಂತಾ ಲೈನ್ ಡ್ರಾಯಿಂಗ್ ಉಳ್ಳ ಬ್ಲಾಕ್ ಕೊಡಿ ಅಂತ ಗೋಗರೆಯುತ್ತಿದ್ದೆ. ಕಾರಣ ಅದು ಮುದ್ರಿತವಾದಾಗ ಚೆನ್ನಾಗಿ ಕಾಣುತ್ತಿತ್ತು. ಕೇವಲ ಐವತ್ತು ಅರುವತ್ತು ರೂಪಾಯಿಯ ಖರ್ಚು ಉಳಿಸಲು ಮಲ್ಲೇಶ್ವರದಿಂದ ನೃಪತುಂಗ ರಸ್ತೆ ಅಲ್ಲಿಂದ ಚಾಮರಾಜಪೇಟೆಗೆ ಸೈಕಲ್ಲು ತುಳಿಯುತ್ತಿದ್ದೆ.

ವಿಶೇಷಾಂಕವೊಂದಕ್ಕೆ ನಮ್ಮ ಗುಂಪಿನ ಹಿರಿಯರೊಬ್ಬರು ತಮಗೆ ಗೊತ್ತಿದ್ದ ಎಲ್ಲಾ ಕಡೆಗಳಿಂದ ನೂರು ಇನ್ನೂರು ರೂಪಾಯಿಗಳ ಜಾಹಿರಾತು ಕೊಡಿಸಿದರು. ಆಮೇಲೆ ತಮ್ಮ ಪದ್ಯ ಒಂದು ಪ್ರಿಂಟಾಗಬೇಕೆಂದು ಪಟ್ಟು ಹಿಡಿದರು. ಆಗ ಒಪ್ಪಿ ಆನಂತರ ಇಂಥಾ ಮುಜುಗರಗಳ ಬಗ್ಗೆ ಜಾಹಿರಾತು ಬಾರದಿದ್ದರೂ ಚಿಂತೆ ಯಿಲ್ಲ, ಕೆಟ್ಟ ಪದ್ಯ ಪ್ರಿಂಟು ಮಾಡಲಾರೆ ಅಂತ ನಿರ್ಧರಿಸಿಬಿಟ್ಟೆ. ಮತ್ತೊಂದು ಸಲ ಹಿರಿಯ ಲೇಖಕರೊಬ್ಬರು ಬೇಂದ್ರೆ ಬಗ್ಗೆ ಒಂದು ಲೇಖನ ಕೊಟ್ಟರು. ಈಗ ಆ ಕವಿಗಳು ವಿಧಾನಪರಿಷತ್ ಸದಸ್ಯರು. ಹೈಸ್ಕೂಲು ಹುಡುಗರು ಬರೆಯುವುದಕ್ಕಿಂತ ಕೆಟ್ಟದಾಗಿದ್ದ ಆ ಲೇಖನ ಹಾಕಲಾಗುವುದಿಲ್ಲ ಅಂದೆ. ತಿದ್ದಿಕೊಡಬಹುದಾ ಅಂದೆ. ನಮ್ಮಿಬ್ಬರ ನಡುವೆ ಅವರ ಸಹೋದ್ಯೋಗ ಗೆಳೆಯನಿಗೆ ಬಹಳ ಕಿರಿಕಿರಿ ಆಯ್ತು. ಅವನಿಂದ ಬೈಸಿಕೊಂಡೆ. ಲೇಖನ ವಾಪಸ್ಸು ಕೊಟ್ಟೆ.

ಪತ್ರಿಕೆ ರೂಪಿಸುವ ಯಾವ ಥಿಯರಿಗಳೂ ನಮಗೆ ಗೊತ್ತಿರಲಿಲ್ಲ. ಎಲ್ಲವೂ ಫೀಲ್ಡಿನ ಪ್ರತ್ಯಕ್ಷ ಪ್ರಮಾಣಗಳೇ. ಒಬ್ಬ ಟೀವಿ ಷೋರೂಂ ಯಜಮಾನರ ಹತ್ತಿರ ಚಂದಾ ಮತ್ತು ಜಾಹಿರಾತು ಕೇಳಿದೆವು. ಅವರು ತಮ್ಮ ಕೈಯಲ್ಲಿದ್ದ ಸಂಚಯ ನೋಡಿ, 'ನಿಮ್ಮದು ಬ್ರಾಹ್ಮಣರ ಪತ್ರಿಕೆ' ಅಂದರು. ಅವತ್ತು ಗೊತ್ತಾಯಿತು ಪತ್ರಿಕೆಗಳಿಗೂ ಜಾತಿ ಇರುತ್ತವೆ ಅಂತ. ಆ ಸಂಚಿಕೆಯಲ್ಲಿ ರಷ್ಯಾದ ಮಾಯ್ ಕೋವಸ್ಕಿ ಕವಿತೆ, ಗೊರೂರು, ಮಾಸ್ತಿ ಇವರ ಬಗ್ಗೆ ಎರಡು ಲೇಖನ ಮೊದಲಾದವು ಇದ್ದವು. ಇವರೆಲ್ಲಾ ಬರೀ ಬ್ರಾಹ್ಮಣರಾ ಅಥವಾ ಲೇಖಕರಾ?

ಎ.ಕೆ.ರಾಮಾನುಜನ್ ಬಗ್ಗೆ ಒಂದು ವಿಶೇಷ ಸಂಚಿಕೆ ಮಾಡಬೇಕು ಅಂತ ನಿರ್ಧರಿಸಿದ್ವಿ. ಅವರು ಇಂಡಿಯಾಕ್ಕೆ ಬಂದಾಗ ಅವರ ಭೇಟಿಯಾಗಬೇಕು ಅಂತೆಲ್ಲಾ ಆಸೆ ಇತ್ತು. ಅವರ ಅಕಾಲ ಮರಣಕ್ಕೆ ಶ್ರದ್ಧಾಂಜಲಿಯಾಗಿ ನಮ್ಮ ಸಂಚಿಕೆ ರೂಪುಗೊಂಡಿತು. ಇನ್ನು ರಾಮಚಂದ್ರ ಶರ್ಮರಂತೂ ನಿಮ್ಮ ಬಗ್ಗೆ ಒಂದು ವಿಶೇಷಾಂಕ ಮಾಡ್ತೀವಿ ಅಂದಾಗ ತಮ್ಮ ಯಾವತ್ತಿನ ತಮಾಷೆಯಲ್ಲಿ ನಾನು ಸತ್ತ ಮೇಲೆ ಮಾಡಿ ಅಂದಿದ್ದರು. ಛೆ ಅದು ಹಾಗೇ ಆಯ್ತು. ಪದ್ಮಾ ಶರ್ಮರಿಗೆ ಆ ಸಂಚಿಕೆಯ ಕೆಲವು ಪ್ರತಿಗಳನ್ನು ಕೊಡಲು ಹೋಗಿದ್ದಾಗ ಅವರು ಭಾವುಕರಾದ ಪ್ರಸಂಗ ಮನಸ್ಸು ಮುದುಡುವಂಥದ್ದು. ಬೆಸಗರಹಳ್ಳಿ ರಾಮಣ್ಣನವರ ಬಗ್ಗೆ ಒಂದು ವಿಶೇಷ ಸಂಚಿಕೆ ಮಾಡಿದಾಗ ಸಂವಾದದ ಸಂಪಾದಕ ರಾಘವೇಂದ್ರ ಪಾಟೀಲ್ ಹಾಗೂ ರಾಜು ಮೇಷ್ಟ್ರು ರಾಮಣ್ಣನ ಸಹಜ ಗುಣಗಳ ಬಗ್ಗೆ ಬರೆದದ್ದು ವಿಶೇಷ. ಶಾಂತಿನಾಥ ದೇಸಾಯಿ ಬಗ್ಗೆ ಸಂಚಿಕೆ ಪುಸ್ತಕ ಎರಡೂ ಮಾಡಿ ಪುಸ್ತಕ ಬಿಡುಗಡೆ ಧಾರವಾಡದಲ್ಲಿ, ಆಗ ಅಲ್ಲಿನ ಲೇಖಕರು ದೇಸಾಯಿ ನಮ್ಮವರು ಆದರೆ ನೀವು ಬೆಂಗಳೂರಿನವರು. ಅವರ ಬಗ್ಗೆ ಪುಸ್ತಕ ತಂದಿದ್ದೀರಿ ಅನ್ನುವ ಅರ್ಥದ ಮಾತಾಡಿದಾಗ ದೇಸಾಯಿ ಕನ್ನಡದ ಲೇಖಕ ಅಲ್ವಾ? ಅವರು ಧಾರವಾಡದವರಷ್ಟೇ ಬೆಂಗಳೂರಿನವರೂ ಅಲ್ವಾ ಅನ್ನುವ ಪ್ರಶ್ನೆ ಬಂತು.

ಹೊತ್ತುಕೊಂಡು ಹೋಗಿದ್ದ ಇನ್ನೂರು ಪುಸ್ತಕಗಳಲ್ಲಿ ಎಂಟೋ ಹತ್ತು ಖರ್ಚಾಗಿ ಉಳಿದ ಬ್ಯಾಗುಗಳ ಭಾರ ಹೊತ್ತು ಹೊಟೆಲ್ ಧಾರವಾಡದ ಎದುರು ಆಟೋ ಹತ್ತುವಾಗ, ಬೇಕಿತ್ತಾ ನನಗೆ ಅಂತ ಕಣ್ಣೀರು ಬಂದಿತ್ತು. ಅದು ೨೦೦೪ರ ಸಮಯ ತೇಜಸ್ವಿ ಈಗಿನಷ್ಟು ಭಜನಾಮಂಡಳಿಗಳ ಆರಾಧ್ಯ ಮೂರ್ತಿ ಆಗಿರಲಿಲ್ಲ. ಅವರ ಸಾಹಿತ್ಯ ಕುರಿತು ಒಂದು ವಿಶೇಷಾಂಕ ರೂಪಿಸಿದೆವು. ತುಂಬಾ ಚೆನ್ನಾಗಿ ಬಂದಿತ್ತು. ಆ ಕುರಿತು ನಾವು ಅವರಿಗೇನೂ ಹೇಳುವ ಕೇಳುವ ಗೋಜಿಗೆ ಹೋಗಿರಲಿಲ್ಲ. ಅವರಿಗೆ ಎರಡು ಅಥವಾ ಮೂರು ಪ್ರತಿ ಕಳಿಸಿದ್ದೆವು. ಅವರು ಅದನ್ನು ಇಷ್ಟಪಟ್ಟಿದ್ದರು. ಆತ್ಮೀಯರು ಕೇಳಿದರೆ ಅದನ್ನು ಜೆರಾಕ್ಸ್ ಮಾಡಿಸಿ ಕೊಡುತ್ತಿದ್ದರು ಅಂತ ಗೆಳೆಯರ ಮೂಲಕ ಅವರ ನಿರ್ಗಮನದ ನಂತರ ಕೇಳಿದಾಗ ಅವರ ನಿರ್ಲಿಪ್ತಿ ಬಗ್ಗೆ ಅಚ್ಚರಿಯಾಯ್ತು. ಮಂಡ್ಯದಲ್ಲಿ ತೇಜಸ್ವಿ ಬಗ್ಗೆ ನಡೆದ ಸೆಮಿನಾರ್ ಒಂದರಲ್ಲಿ ಇಪ್ಪತ್ತು ರೂಪಾಯಿಗೊಂದರಂತೆ ತೇಜಸ್ವಿ ವಿಶೇಷಾಂಕ ಬಿಸಿ ಬಿಸಿ ಬೋಂಡ ಕೊಂಡ ಹಾಗೆ ಕಾಲೇಜು ಹುಡುಗರು ಕೊಂಡಿದ್ದು ಕಣ್ಣ ಮುಂದೆ ಬರುತ್ತದೆ. ಆಮೇಲೆ ಅದು ತೇಜಸ್ವಿಲೋಕ ಪುಸ್ತಕವಾಯ್ತು ಅದೂ ಮುಗಿಯಿತು.

ಇನ್ನು ಸಂದರ್ಶನಗಳದ್ದು ಒಂದು ವಿಶಿಷ್ಟ ಅನುಭವ. ಇನ್ನೂರು ಮುನ್ನೂರು ಓದುಗರಿದ್ದ ಪತ್ರಿಕೆಯನ್ನು ಬೆನ್ನಿಗಿಟ್ಟುಕೊಂಡು ಕನ್ನಡದ ದೊಡ್ಡ ದೊಡ್ಡ ಲೇಖಕರನ್ನು ಮಾತಿಗೆಳೆದಿದ್ದು ವಿಶೇಷ. ಶಿವರಾಮ ಕಾರಂತರು ಪಂಪ ಪ್ರಶಸ್ತಿ ಆಗಿನ ಭ್ರಷ್ಟ ಸರ್ಕಾರದಿಂದ ಪಡೆಯಬಾರದಿತ್ತು ಅಂತ ಬರೆದಾಗ ಅವರಿಗೆ ಕಿರಿಕಿರಿಯಾಗಿ ಒಂದು ಕಾರ್ಡು ಬರೆದಿದ್ದರು. ಅಡಿಗರ ಸಂದರ್ಶನ ಮಾಡುವ ಮೊದಲು ಎಚ್.ಎಸ್.ರಾಘವೇಂದ್ರರಾವ್ ಅವರೊಂದಿಗೆ ಚರ್ಚಿಸಿಕೊಂಡು ಪ್ರಶ್ನೆಗಳನ್ನು ನಿರ್ಧರಿಸಿಕೊಂಡು ಹೋಗಿದ್ದೆವು. ಅವರನ್ನು ಸಾಕಷ್ಟು ಪ್ರಶ್ನೆ ಕೇಳಿ ಕೆರಳಿಸಿದ್ದೆವು. ಆದರೆ ಆ ಸಂದರ್ಶನ ಪ್ರಿಂಟಾಗಿದ್ದು ಅವರು ನೋಡಲಿಲ್ಲ. ಎ.ಎನ್. ಮೂರ್ತಿರಾಯರ ಸಂದರ್ಶನದಲ್ಲಿ ರಾಮಜನ್ಮಭೂಮಿ ಬಗ್ಗೆ ಕೇಳಿದ ಒಂದು ಪ್ರಶ್ನೆಗೆ ಅವರ ಉತ್ತರ ಅವರಿಗೇ ಸಮಾಧಾನ ಕೊಡಲಿಲ್ಲ. ಅವರೇ ಮತ್ತೆ ಬೇರೆ ಸ್ಪಷ್ಟ ಉತ್ತರ ಹೇಳಿ ಬರೆಸಿದ್ದು. ನನ್ನ ನೆನಪಿನ ಭಾಗ. ಅಲ್ಲಿ ಎದ್ದು ಕಂಡಿದ್ದು ಅವರ ಪ್ರಾಮಾಣಿಕತೆ ಕಾಳಜಿ, ಹುಡುಗರು ಬೇಕಾದ್ದು ಬರಕೊಂಡು ಹೋಗಲಿ ಎಂಬ ಮನೋಭಾವವಲ್ಲ.

ಜಿ.ಎಸ್.ಎಸ್ ನಮ್ಮ ಪತ್ರಿಕೆಗೆ ಸಂದರ್ಶನ ಕೊಟ್ಟರು. ಪ್ರಿಂಟಿಗೆ ಮೊದಲು ಹಸ್ತಪ್ರತಿ ನಾನು ನೋಡಬೇಕು ಅಂದಿದ್ದರು. ಅವರು ತಮ್ಮ ತಿದ್ದುಪಡಿ ಹಾಕಿ ಕಾಯುತ್ತಿದ್ದರೆ ಅದನ್ನ ತರುತ್ತೇನೆ ಅಂದ ಗೆಳೆಯ ಅವರಲ್ಲಿಗೆ ಹೋಗಲೇ ಇಲ್ಲ. ಪ್ರೆಸ್ಸಿನಲ್ಲಿ ಲೆಡ್ಡು ಬೇಕು, ಬೇಗ ಪ್ರಿಂಟು ಹಾಕಿಸಿ ಅನ್ನುವ ಒತ್ತಡಕ್ಕೆ ಮಣಿದು ಸಂದರ್ಶನ ಪ್ರಿಂಟಾಗಿಬಿಟ್ಟಿತು. ಜಿ.ಎಸ್.ಎಸ್.ಗೆ ಇದರಿಂದ ಸಂತೋಷವಾಗಲಿಲ್ಲ. ಹಾಗಂತ ಒಂದು ಕಾರ್ಡು ಬರೆದರು. ಆದರೆ ಅವರ ಸಂದರ್ಶನದ ಹಸ್ತಪ್ರತಿ ಮೂರೇ ಮೂರು ಪದಗಳ ತಿದ್ದುಪಡಿ ಹೊಂದಿತ್ತು ಅನ್ನುವುದು ಸಮಾಧಾನ. ಇಂಥಾ ಹಿರಿಯರೆಲ್ಲಾ ನಮಗೆ ಸ್ಪಂದಿಸುತ್ತಿದ್ದರು ಅನ್ನುವುದೇ ಒಂದು ಹೆಮ್ಮೆಯ ಸಂಗತಿ.

ಇನ್ನು ನೆನಪಾಗುವುದು ಕಾದಂಬರಿಕಾರ ವ್ಯಾಸರಾಯ ಬಲ್ಲಾಳರ ಸಂದರ್ಶನ. ಅದಕ್ಕೆ ಮುಂಚೆ ಅವರ ಎಲ್ಲಾ ಪುಸ್ತಕಗಳನ್ನು ಸಂಗ್ರಹಿಸಿ ಓದಿ ತಯಾರಿ ಮಾಡಿಕೊಂಡಿದ್ದೆ. ಮಜ ಅನ್ನಿಸಿದ್ದು ಲಂಕೇಶ್ ಸಂದರ್ಶನ; ಸ್ವಲ್ಪ ಹೊತ್ತಿಗೆ ಅಂತ ಶುರುವಾದದ್ದು, ಸರಿಸುಮಾರು ಮೂರು ಗಂಟೆ ತುಂಬಾ ತನ್ಮಯರಾಗಿ ಅಲ್ಲಲ್ಲಿ ಭಾವುಕರೂ ಆಗಿ ಉತ್ತರಿಸಿದರು. ಆಮೇಲೆ ಅವರಿಗೆ ಜಾಸ್ತಿ ಮಾತಾಡಿಬಿಟ್ಟೆ. ಯಾರ್‍ಯಾರ ಬಗ್ಗೆಯೋ ಏನೇನೋ ಹೇಳಿಬಿಟ್ಟೆ ಅಂತ ಆತಂಕವಾಗಿತ್ತು. ಪ್ರಕಟವಾದ ಮೇಲೆ ಅಂಥಾದ್ದೇನೂ ಆಗಲಿಲ್ಲ. ಆದರೆ ಅವರ ಆತ್ಮಕತೆ ಹುಳಿಮಾವಿನಮರ ಟೀಕಿಸಿ ಬರೆದಾಗ ಮಾತ್ರ ಅವರು ನಮ್ಮ ಹೆಸರು ಉಲ್ಲೇಖಿಸದೆ ಬ್ರಾಹ್ಮಿನ್ ಪಾಲಿಟ್ ಬ್ಯೂರೋ ಅಂತ ಬರೆದಿದ್ದರು. ಇದ್ದಿದ್ದು ಇದ್ದ ಹಾಗೆ ನಾವು ಹೇಳಿದ್ದೆವು. ಅದು ಅವರೇ ನಮಗೆ ಕಲಿಸಿದ್ದ ಮೊದಲ ಪಾಠ. ಇನ್ನು ಚಿದಾನಂದ ಮೂರ್ತಿಗಳ ಸಂದರ್ಶನದಲ್ಲಿ ಎದ್ದು ಕಾಣಿಸಿದ್ದು ಅವರ ಪ್ರಾಮಾಣಿಕ

ಮುಗ್ಧತೆ. ಇದೇ ವಾಮನರೂಪಿ ಕನ್ನಡಕ್ಕೋಸ್ಕರ ಜಲಪ್ರವೇಶ ಮಾಡಿ ಆತ್ಮಾಹುತಿಗೆ ಯತ್ನಿಸಿದ್ದು ಸೋಜಿಗ ಅನ್ನಿಸಿತು. ಹೀಗೆ ಮೊಗೆದಷ್ಟೂ ಸಾವಿರ ಸಾವಿರ ಸಾವಿರದ ನೆನಪುಗಳು.

'ಸಂಚಯ' ಕಳೆದ ಎರಡು ಶತಮಾನಗಳ ನಡುವಿನ ಸೇತುವೆ. ತಾಂತ್ರಿಕವಾಗಿಯೂ, ತಾತ್ವಿಕವಾಗಿಯೂ ಲೆಟರ್ ಪ್ರೆಸ್ಸಿನ ಕಾಲದಿಂದ ಆಫ್‌ಸೆಟ್ ಮುದ್ರಣದ ಈ ಕಾಲದ ಅನೇಕ ಸಾಧ್ಯತೆಗಳನ್ನು ಬಳಸಿಕೊಂಡಿದೆ. ಸರಳವಾಗಿ ಆದರೆ ಅದ್ದೂರಿತನವಿಲ್ಲದೆ ಸುಂದರವಾಗಿ ಹೊರಬಂದಿದೆ. ಬಡತನ, ಕಿರುಪತ್ರಿಕೆಗಳ ಆಯ್ಕೆಯಷ್ಟೇ ಅಲ್ಲ, ಅನಿವಾರ್ಯತೆಯೂ ಹೌದು. ಕಾಲಾನುಕ್ರಮದಲ್ಲಿ ರೂಢಿಸಿಕೊಂಡ ನಂಬಿಕೆ, ನಿಷ್ಠುರತೆ, ಗುಣಮಟ್ಟ ಹಾಗೇ ಜೋಪಾನವಾಗಿದೆ. ವಿಮರ್ಶೆ ಮುಕ್ತತೆಯ ಜೊತೆಗೆ ಕಾಲಕಾಲಕ್ಕೆ ರಾಜಕೀಯವಾಗಿ ಸರಿ ಅನ್ನಿಸಿಕೊಳ್ಳುವ ಚಟಕ್ಕೆ ಬಿದ್ದಿಲ್ಲ. ಜಾತಿ-ವರ್ಚಸ್ಸುಗಳನ್ನು ನೋಡಿ ಯಾರಿಗೂ ಮಣೆ ಮನ್ನಣೆ ಹಾಕಿಲ್ಲ. ಪ್ರತಿಕ್ರಿಯೆಗಳಿಗಿಂತಾ ಕ್ರಿಯೆ ದೊಡ್ಡದು, ಮುಖ್ಯವಾದದ್ದು- ಇದು ಹಿರಿಯರು ಕಲಿಸಿದ ಪಾಠ. ಅದಕ್ಕೊಂದು ತೃಪ್ತಿ, ಸಮಾಧಾನವನ್ನೂ ಕೊಟ್ಟಿದೆ.


ತುಂಬಾ ಜನ ನನ್ನ ಕೇಳುತ್ತಾರೆ. ನೀವು ಕಷ್ಟಪಟ್ಟು ಇಷ್ಟು ವರ್ಷ ಪತ್ರಿಕೆ ತಂದಿದ್ದೀರಿ ಹೇಗೆ ಅಂತೆಲ್ಲಾ. ಒಂದು ನೆಲೆಯಲ್ಲಿ ಇದು ಕಷ್ಟ ಅನ್ನಿಸಬಹುದು. ಒಂದು ಕತೆ ನೆನಪಾಗುತ್ತೆ. ಹುಡುಗಿಯೊಬ್ಬಳು ತನ್ನ ತಮ್ಮನನ್ನು ಬೆನ್ನ ಮೇಲೆ ಹೊತ್ತು ನಡೆಯುತ್ತಿದ್ದಳಂತೆ ತಿಳಿದವರೊಬ್ಬರು ಯಾಕೆ ಮಗು ಇಷ್ಟು ಭಾರ ಹೊತ್ತು ಬಿಸಿಲಲ್ಲಿ ನಡೆಯುತ್ತಿದ್ದೀಯ ಅಂದರಂತೆ. ಅದಕ್ಕವರು 'ಹೇ ಇದು ಭಾರ ಅಲ್ಲ, ನನ್ನ ತಮ್ಮ!' ಅಂದಳಂತೆ. ಪ್ರೀತಿಯಿಂದ ಪ್ರಾಮಾಣಿಕತನದಿಂದ ಮಾಡುವ ಯಾವ ಕೆಲಸವೂ ಭಾರ ಅಲ್ಲ, ಹೊರೆಯೂ ಅಲ್ಲ. ಹಾಗಂತ ಯಾವಾಗಲೂ ಈ ಕೆಲಸ ಸಂತೋಷವನ್ನಂತೂ ಕೊಟ್ಟಿಲ್ಲ. ಒಂದು ದಿನ ನನ್ನ ಎಲ್ಲಾ ಕೆಲಸ ಬದಿಗಿಟ್ಟು ಒಂದು ಸಂಚಿಕೆ ರೂಪಿಸಿದಾಗ ನನ್ನ ನಂಬಿದ ಹೆಂಡತಿ ಮಕ್ಕಳಿಗೆ ದ್ರೋಹ ಮಾಡಿದೆ ಅಂತಲೂ ಅನ್ನಿಸಿದೆ. ಆದರೆ ಸಾಹಿತ್ಯ ಪತ್ರಿಕೆ ಮಾಡಲಿಕ್ಕೆ ಒಂದು ಹಾದರಕ್ಕಿರಬಹುದಾದ ತಹತಹ, ತೀವ್ರತೆ ಬೇಕು ಅನ್ನಿಸುತ್ತೆ. ಈ ಉದಾಹರಣೆ ಕೆಟ್ಟದಾಗಿ ಕಾಣಬಹುದು. ಆದರೆ ತನ್ನವರನ್ನ, ಸುತ್ತಲ ಜನಗಳನ್ನ ಎದುರು ಹಾಕಿಕೊಳ್ಳುತ್ತಾ ಯಾರಿಗೂ ಇಷ್ಟವಾಗದೆ ಬದುಕುವುದಿದೆಯಲ್ಲಾ ಅದಕ್ಕೆ ಹಾದರದ ತೀವ್ರತೆಯೇ ಬೇಕು. ತಾನು ಮಾಡುವ ಕೆಲಸದ ಸಾರ್ಥಕತೆಗಿಂತಾ ನಿರರ್ಥಕತೆ ಕೂಡಾ ಒಬ್ಬ ವ್ಯಾಮೋಹಿಯಾದ ಭಕ್ತನಿಗೆ ಗೊತ್ತಿರುತ್ತದೆ. ಸೆಂಚುರಿ ಹೊಡೆಯುವ ಆಟಗಾರ ಯಾವುದೇ ಪವಾಡ ಮಾಡಲಾರ. ಒಂದೊಂದೇ ರನ್ನು ಶ್ರಮದಿಂದಲೇ ಕಟ್ಟಬೇಕು. ತನ್ನ ಬೆವರಿನ ಬೆಲೆ ಅವನಿಗೂ ಗೊತ್ತು. ಕವಿಯ ಹಾಗೆ ಸ್ಫೂರ್ತಿಯ ಅತೀತದ ಮಾತುಗಳನ್ನ ಸಂಪಾದಕ ಆಡಲಾಗುವುದಿಲ್ಲ.

ಇಷ್ಟಕ್ಕೂ ಇವೆಲ್ಲಾ ನಾನು ಮಾಡಿದೆ ಅಂತನ್ನುವ ಕ್ರೆಡಿಟ್ಟೂ ನನ್ನದಲ್ಲ. ಇಂಥದನ್ನೆಲ್ಲಾ ಮತ್ತೆ ಮಾಡಬಲ್ಲೆನಾ? ಗೊತ್ತಿಲ್ಲ. ಅದು ಹಾಗೆ ಸಂಭವಿಸಿತು ಅಷ್ಟೆ. ಗೆಳೆಯರು ಹೆಗಲು ಕೊಟ್ಟರು, ಓದುಗರು ಚಂದಾ ಕೊಟ್ಟರು, ದೊಡ್ಡವರು ಬೆನ್ನು ತಟ್ಟಿದರು, ಉಳ್ಳವರು ತಮ್ಮಲ್ಲಿದ್ದದ್ದನ್ನು ಇಲ್ಲದವರು ಬರೀ ಕೈಯನ್ನ, ಜೊತೆಗಾರಿಕೆಯನ್ನ ನೈತಿಕವಾಗಿ ಬೆಂಬಲವನ್ನ. ಹಾಗೇ ಸಾಗಿ ಬಂದಿದೆ ಬಂಡಿ.

೧೧.೧೧.೧೨

ವಿಶ್ವವಿದ್ಯಾಲಯಗಳ ಸಾಹಿತ್ಯ ಪತ್ರಿಕೆಗಳು

ವಾಸುದೇವ ಶೆಟ್ಟಿ



ಕನ್ನಡ ಸಾಹಿತ್ಯ ಪತ್ರಿಕೆಗಳ ಇತಿಹಾಸವನ್ನು ಗಮನಿಸಿದಾಗ ವಿಶ್ವವಿದ್ಯಾನಿಲಯಗಳಂಥ ಸಂಸ್ಥೆಗಳ ಪಾತ್ರವನ್ನು ವಿಶೇಷವಾಗಿ ಗಮನಿಸಬೇಕಾಗುತ್ತದೆ. ವಿಶ್ವವಿದ್ಯಾನಿಲಯಗಳಿಗೆ ಇರುವ ಸಂಪನ್ಮೂಲವು ವ್ಯಕ್ತಿಗಳು ನಡೆಸುವಂಥ ಪತ್ರಿಕೆಗಳಿಗೆ ಇರುವುದಿಲ್ಲ ಎನ್ನುವುದು ನಿಜ. ವಿಶ್ವವಿದ್ಯಾನಿಲಯಗಳಲ್ಲಿಯೇ ಪಂಡಿತರು ಇರುತ್ತಾರೆ. ಅಧ್ಯಯನ ಸಾಮಗ್ರಿಗಳಿಗೆ ಸಮೃದ್ಧವಾದ ಗ್ರಂಥಾಲಯಗಳ ನೆರವು ಇರುತ್ತದೆ. ಇನ್ನೂ ಹೆಚ್ಚಿನದೆಂದರೆ ಇಂಥ ಸಾಹಿತ್ಯ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳನ್ನು ವಿಶ್ವವಿದ್ಯಾನಿಲಯಗಳು ನೇಮಕಾತಿ ಮತ್ತು ಬಡ್ತಿ ಸಮಯದಲ್ಲಿ ಮಾನದಂಡವಾಗಿ ಪರಿಗಣಿಸುತ್ತವೆ.

ಹೀಗಿದ್ದೂ ವಿಶ್ವವಿದ್ಯಾನಿಲಯಗಳಿಂದ ಬರುತ್ತಿರುವ ಪತ್ರಿಕೆಗಳು ನಿರೀಕ್ಷಿಸಿದ ರೀತಿಯಲ್ಲಿ ಇಲ್ಲ ಎಂದು ಹೇಳಬೇಕಾಗುತ್ತದೆ.

ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ಅತ್ಯಂತ ಹಳೆಯದಾದುದು ಮೈಸೂರು ವಿಶ್ವವಿದ್ಯಾನಿಲಯ. ಹಾಗೆಯೇ ವಿಶ್ವವಿದ್ಯಾನಿಲಯ ಹೊರತಂದ ಮೊದಲ ಸಾಹಿತ್ಯ ಪತ್ರಿಕೆಯ ಅಗ್ಗಳಿಕೆಯೂ ಅದೇ ವಿಶ್ವವಿದ್ಯಾನಿಲಯದ ಹೆಸರಿನಲ್ಲಿದೆ. ಅದು ''ಪ್ರಬುದ್ಧ ಕರ್ನಾಟಕ''.

ಸಾಹಿತ್ಯ ಪತ್ರಿಕೆಗಳನ್ನು ಹೊರತರುತ್ತಿದ್ದ ಇತರ ವಿಶ್ವವಿದ್ಯಾನಿಲಯಗಳು ಕರ್ನಾಟಕ

ವಿಶ್ವವಿದ್ಯಾನಿಲಯ, ಗುಲ್ಬರ್ಗ ವಿಶ್ವವಿದ್ಯಾನಿಲಯ, ಕುವೆಂಪು ವಿಶ್ವವಿದ್ಯಾನಿಲಯ ಹಾಗೂ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯ.

ಕರ್ನಾಟಕ ವಿಶ್ವವಿದ್ಯಾನಿಲಯವು ''ಕರ್ನಾಟಕ ಭಾರತಿ''ಯನ್ನು, ಗುಲ್ಬರ್ಗಾ ವಿಶ್ವವಿದ್ಯಾನಿಲಯವು ''ಕಲಾ ಗಂಗಾ''ವನ್ನು, ಕುವೆಂಪು ವಿಶ್ವವಿದ್ಯಾನಿಲಯವು ''ಸುವರ್ಣ ಕರ್ನಾಟಕ''ವನ್ನು ಹಂಪಿ ಕನ್ನಡ ವಿಶ್ವವಿದ್ಯಾನಿಲಯವು ''ಕನ್ನಡ ಅಧ್ಯಯನ''ವನ್ನು ಪ್ರಕಟಿಸುತ್ತಿದ್ದವು. ಇದೀಗ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾತ್ರ ನಿಯಮಿತವಾಗಿ ಪತ್ರಿಕೆ ಬರುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರತಿಷ್ಠಿತ ''ಪ್ರಬುದ್ಧ ಕರ್ನಾಟಕ''ವೇ ಅನಿಯಮಿತವಾಗಿದೆ.

ಧಾರವಾಡದಲ್ಲಿ ನಾನು ವಿದ್ಯಾರ್ಥಿಯಾಗಿದ್ದಾಗ ೧೯೮೩-೮೪ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಪೀಠದಿಂದ ವಿದ್ಯಾರ್ಥಿಗಳ ಸಾಹಿತ್ಯ, ವಿಮರ್ಶೆ, ಸಂಶೋಧನ ಲೇಖನಗಳನ್ನು ಪ್ರಕಟಿಸಲು ''ವಿದ್ಯಾರ್ಥಿ ಭಾರತಿ'' ಎಂಬ ತ್ರೈಮಾಸಿಕ ಪತ್ರಿಕೆಯನ್ನು ತರುತ್ತಿದ್ದರು. ಅದೂ ಈಗ ಅನಿಯಮಿತವಾಗಿದೆ.

ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಅರ್ಧವಾರ್ಷಿಕವಾದ ''ಕನ್ನಡ ಅಧ್ಯಯನ''ವಲ್ಲದೆ ಪುಸ್ತಕ ಮಾಹಿತಿ, ಚೆಲುವ ಕನ್ನಡ ಎಂಬ ತ್ರೈಮಾಸಿಕಗಳನ್ನು, ನಮ್ಮ ಕನ್ನಡ ಎಂಬ ಮಾಸಿಕವನ್ನು, ಮಹಿಳಾ ಅಧ್ಯಯನ, ದ್ರಾವಿಡ ಅಧ್ಯಯನ, ಜಾನಪದ ಕರ್ನಾಟಕ, ಹಸ್ತಪ್ರತಿ ಅಧ್ಯಯನ, ಚರಿತ್ರೆ ಅಧ್ಯಯನ, ಶಾಸನ ಅಧ್ಯಯನ, ಅಭಿವೃದ್ಧಿ ಅಧ್ಯಯನವೆಂಬ ಅರ್ಧವಾರ್ಷಿಕಗಳನ್ನು, ವಿಜ್ಞಾನ ಸಂಗಾತಿ ಎಂಬ ಮಾಸಿಕವನ್ನು ಹಾಗೂ ಇಂಗ್ಲಿಷಿನಲ್ಲಿ ಜರ್ನಲ್ ಆಫ್ ಕರ್ನಾಟಕ ಸ್ಟಡೀಸ್ ಎಂಬ ಅರ್ಧವಾರ್ಷಿಕವನ್ನು ಹೊರತರುತ್ತಿದೆ.

ಕರ್ನಾಟಕದ ಸಮಗ್ರ ಶೋಧಿತ ಮುಖವನ್ನು ಅನಾವರಣಗೊಳಿಸುವುದು ಇದರ ಉದ್ದೇಶ.

ಪುಸ್ತಕ ಮಾಹಿತಿಯು ಕಳೆದ ೧೨ ವರ್ಷಗಳಿಂದ ಪ್ರಕಟವಾಗುತ್ತಿದೆ. ಮಾರುಕಟ್ಟೆಗೆ ಯಾವ ಹೊಸ ಪುಸ್ತಕ ಬಂದಿದೆ, ಅವುಗಳ ಸಾರವೇನು ಎಂಬುದನ್ನು ಅದು ಹೇಳುತ್ತದೆ. ಆಯಾ ತಿಂಗಳಲ್ಲಿ ಪ್ರಕಟವಾದ ಪುಸ್ತಕ, ನಮ್ಮ ಪ್ರಕಟಣೆ, ಪರಿಶೀಲನೆ, ಮೊದಲ ನೋಟ, ನಾವು ನೋಡಿದ ಪುಸ್ತಕ, ಹಳೆಯ ಪುಸ್ತಕ, ಪ್ರಕಾಶ- ಪ್ರಕಾಶನ, ಹೊಸಬೆಳೆ ಮತ್ತು ಪುಸ್ತಕ ಬಿಡುಗಡೆ- ಪ್ರಶಸ್ತಿ ಸುದ್ದಿ ಅಂಕಣಗಳಲ್ಲಿ ವಿಷಯವನ್ನು ನೀಡಲಾಗುತ್ತಿದೆ. ಪುಸ್ತಕಗಳ ಬಗ್ಗೆ ಮಾಹಿತಿ ಪಡೆಯುವುದಕ್ಕೆ ಪುಸ್ತಕ ಮಾಹಿತಿ ಪತ್ರಿಕೆ ಒಂದು ಉಪಯುಕ್ತ ಪತ್ರಿಕೆಯಾಗಿದೆ.

ಇನ್ನೊಂದು ಪ್ರಮುಖ ಪ್ರಕಟಣೆ ನಮ್ಮ ಕನ್ನಡ ಮಾಸಿಕ. ಆಧುನಿಕ ಯುಗದಲ್ಲಿ ನಿತ್ಯ ಬದಲಾಗುತ್ತಿರುವ ಕನ್ನಡದ ರಚನೆ ಮತ್ತು ಬಳಕೆಗಳ ನೆಲೆಯಲ್ಲಿ ತೀವ್ರವಾದ ಪರಿವರ್ತನೆಗಳು ನಡೆಯುತ್ತಿವೆ. ಅವುಗಳ ಅಧ್ಯಯನ ಮಾಡುತ್ತ ಅವುಗಳನ್ನು ದಾಖಲಿಸುವುದು ಪತ್ರಿಕೆಯ ಉದ್ದೇಶ. ಭಾಷಾಯೋಜನೆ, ಪರಿಕರ ನಿರ್ಮಾಣ, ಕಲಿಕೆ, ಬೋಧನೆ ಇತ್ಯಾದಿ ಸಂದರ್ಭಗಳಲ್ಲಿ ಒದಗುವ ಸಮಸ್ಯೆಯನ್ನು ಇದರಲ್ಲಿ ಚರ್ಚಿಸುತ್ತಾರೆ.

ಕನ್ನಡ ಅಧ್ಯಯನ ಒಂದು ವಿದ್ವತ್ ಪತ್ರಿಕೆ. ಇದು ಕರ್ನಾಟಕದ ಅಧ್ಯಯನಕ್ಕೆ ಮೀಸಲಾದ ಪತ್ರಿಕೆ. ಕರ್ನಾಟಕದ ಜನತೆ, ಸಮಾಜ, ಭಾಷೆ, ಸಾಹಿತ್ಯ, ಸಂಸ್ಕೃತಿ, ಚರಿತ್ರೆ, ಧರ್ಮ, ಆರ್ಥಿಕತೆ, ರಾಜಕಾರಣ, ಪರಿಸರ, ಕಲೆ ಮುಂತಾದ ಕ್ಷೇತ್ರಗಳಲ್ಲಿ ನಡೆಯುವ ಚರ್ಚೆ, ಶೋಧಗಳು ಇಲ್ಲಿ ಮಂಡನೆಯಾಗುತ್ತವೆ. ''ಇದು ನಾಡಿನ ಗತದ ತಡಕಾಟವನ್ನು, ವರ್ತಮಾನದ ಮುಖಾಮುಖಿಯನ್ನು, ಭವಿಷ್ಯದ ಕನಸು ಕಟ್ಟುವಿಕೆಯನ್ನು ಏಕಕಾಲದಲ್ಲಿ ಮಾಡಬಯಸುತ್ತದೆ. ಈ ಮೂಲಕ ವಿದ್ವಾಂಸರಿಗೆ ಸಾಂಸ್ಕೃತಿಕ ವೇದಿಕೆಯಾಗಿಯೂ ಓದುಗರಿಗೆ ಬೌದ್ಧಿಕ ಸಂಗಾತಿಯಾಗಿಯೂ ಆಗಬೇಕೆಂಬ ಹಂಬಲವಾಗಿದೆ.'' ಎಂದು ವಿಶ್ವವಿದ್ಯಾಲಯ ಹೇಳಿಕೊಂಡಿದೆ. ಈ ಸಂಚಿಕೆಗಳಲ್ಲಿ ಬಂದಿರುವ ಲೇಖನಗಳನ್ನು, ನಡೆದ ಸಂವಾದ, ವಾಗ್ವಾದಗಳನ್ನು ಗಮನಿಸಿದಾಗ ಆಶಯ ಈಡೇರಿದೆ ಎಂದೇ ಹೇಳಬೇಕು.

ಉಳಿದ ವಿಶ್ವವಿದ್ಯಾನಿಲಯಗಳ ಸಾಹಿತ್ಯ ಪತ್ರಿಕೆ ಸೊರಗುವುದಕ್ಕೆ ಕಾರಣ ಅಧ್ಯಯನದ ಹಸಿವು ಕಡಿಮೆಯಾಗಿರುವುದು ಎಂದೇ ಹೇಳಬೇಕು. ನಾಡು ನುಡಿಯ ಬಗ್ಗೆ ನಾಡಿಗರ ಸಮಸ್ಯೆಯ ಬಗ್ಗೆ ಯಾವುದಾದರೂ ಸಮಸ್ಯೆ ತಲೆದೋರಿದರೆ ಆ ಸಮಸ್ಯೆ ದಿನಪತ್ರಿಕೆಗಳಲ್ಲಿ ಚರ್ಚೆಗೆ ಗ್ರಾಸವಾಗುತ್ತದೆ. ಸಾಹಿತ್ಯ ಪತ್ರಿಕೆಗಳಲ್ಲಿ ಲೇಖಕನೊಬ್ಬ ತನ್ನ ಅಭಿಪ್ರಾಯವನ್ನು ಮಂಡಿಸುವುದಕ್ಕೆ ಕಾಯುತ್ತ ಕುಳಿತುಕೊಂಡರೆ ಅದು ಪ್ರಕಟವಾಗುವ ವೇಳೆಗೆ ವಿವಾದವೇ ಬಗೆಹರಿದಿರುತ್ತದೆ. ಸಾಹಿತ್ಯ ಪತ್ರಿಕೆಗಳ ಪ್ರಸರಣ ಸಂಖ್ಯೆ ಕಡಿಮೆ ಇರುವ ಕಾರಣ ಅದು ಅದರಲ್ಲಿ ಪ್ರಕಟವಾದರೂ ಗಮನಕ್ಕೆ ಬಾರದೇ ಹೋಗಬಹುದು. ಇಂದು ವಿದ್ಯುನ್ಮಾನ ಮಾಧ್ಯಮಗಳೂ ಯಾವುದೇ ಸಮಸ್ಯೆ ಬರಲಿ ಅದಕ್ಕೆ ವೇದಿಕೆಯನ್ನು ಒದಗಿಸುತ್ತಿವೆ. ಟೀವಿಯಲ್ಲಿ ಒಮ್ಮೆ ಮುಖ ತೋರಿಸಿ ನಾಲ್ಕು ಮಾತು ಆಡಿ ಬಂದರೆ ತಮ್ಮ ಜನ್ಮ ಸಾರ್ಥಕವಾಯಿತು ಎಂದುಕೊಂಡು ಬರೆಯುವುದನ್ನೇ ಮರೆತುಬಿಡುತ್ತಾರೆ.

ಇಂಥ ಸನ್ನಿವೇಶ ಇದ್ದಾಗ ಸಾಹಿತ್ಯ ಪತ್ರಿಕೆಗಳು ಲೇಖನಗಳ ಅಭಾವವನ್ನು ಅನುಭವಿಸುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ಅದು ವಿಶ್ವವಿದ್ಯಾನಿಲಯಗಳು ನಡೆಸುವ ಪತ್ರಿಕೆಯೇ ಇರಬಹುದು, ವ್ಯಕ್ತಿಗಳೇ ನಡೆಸುವ ಪತ್ರಿಕೆ ಇರಬಹುದು.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯಗಳು ಆತ್ಮಾವಲೋಕನ ಮಾಡಿಕೊಂಡು ತಮ್ಮ ನಿಯತಕಾಲಿಕೆಗಳ ಆದ್ಯತೆ ಏನಿರಬೇಕು ಎಂಬುದರ ಬಗ್ಗೆ ಮರುಚಿಂತನೆ ನಡೆಸಬೇಕಾಗಿದೆ. ಈ ಹಿಂದೆ ಕೂಡ ಸಾಹಿತ್ಯ ಪತ್ರಿಕೆಗಳನ್ನು ನಡೆಸುವುದು ಸುಲಭವಾಗಿರಲಿಲ್ಲ. ಎ.ಆರ್.ಕೃಷ್ಣಶಾಸ್ತ್ರಿಗಳು, ಟಿ.ಎಸ್.ವೆಂಕಣ್ಣಯ್ಯನಂಥವರು ಪ್ರಬುದ್ಧ ಕರ್ನಾಟಕವನ್ನು ಹೇಗೆ ಬೆಳೆಸಿದರು ಎಂಬುದನ್ನು ನೆನೆಸಿಕೊಂಡರೆ ಅದೇ ಒಂದು ಪಾಠ.

ಹಾಗೆ ನೋಡಿದರೆ ಪ್ರಬುದ್ಧ ಕರ್ನಾಟಕವನ್ನು ಮೊದಲು ಆರಂಭ ಮಾಡಿದ್ದು ಮೈಸೂರು ವಿಶ್ವವಿದ್ಯಾನಿಲಯವೇನಲ್ಲ. ಇದು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಪತ್ರಿಕೆಯಾಗಿ ಹುಟ್ಟಿತು. ಒಂದು ನೂರು ವಿದ್ಯಾರ್ಥಿಗಳಿಂದ ತಲಾ ಒಂದೊಂದು ರುಪಾಯಿ ಸಂಗ್ರಹಿಸಿ ಎ.ಆರ್. ಕೃಷ್ಣಶಾಸ್ತ್ರಿಗಳು ಇದನ್ನು ಆರಂಭಿಸಿದರು. 'ಪ್ರಬುದ್ಧ ಕರ್ನಾಟಕ'ವು ಶುದ್ಧ ಸಾಹಿತ್ಯ ಪತ್ರಿಕೆಯಾಗಿ ೧೯೧೯ರ ಸಿದ್ಧಾರ್ಥಿ ಸಂವತ್ಸರದ ಯುಗಾದಿಯಂದು ಆರಂಭವಾಯಿತು. ಮುಂದೆ ಬಿ.ಎಂ.ಶ್ರೀಯವರ ಪ್ರಯತ್ನದ ಫಲವಾಗಿ ೧೯೩೨ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಇದನ್ನು ವಹಿಸಿಕೊಂಡಿತು. ಕರ್ನಾಟಕ ಭಾರತಿ, ಸಾಧನೆ, ಕನ್ನಡ ಅಧ್ಯಯನ ಮೊದಲಾದವುಗಳಿಗೆಲ್ಲ ಇದೇ ಮಾದರಿ.

'ಪ್ರಬುದ್ಧ ಕರ್ನಾಟಕ' ಎಂಬ ಹೆಸರನ್ನು ಸೂಚಿಸಿದವರು ಬೆಂಗಳೂರಿನ ರಾಮಕೃಷ್ಣಾಶ್ರಮದ ಅಧ್ಯಕ್ಷರಾದ ಶ್ರೀ ನಿರ್ಮಲಾನಂದ ಸ್ವಾಮೀಜಿ. ಈ ಹೆಸರಿನ ಧಾರ್ಮಿಕ ಪತ್ರಿಕೆಯೊಂದನ್ನು ಹೊರಡಿಸುವಂತೆ ಅವರು ಕೃಷ್ಣಶಾಸ್ತ್ರಿಗಳು ಮತ್ತು ಟಿ.ಎಸ್.ವೆಂಕಣ್ಣಯ್ಯನವರಿಗೆ ಸೂಚಿಸಿದ್ದರು. 'ಪ್ರಬುದ್ಧ ಭಾರತ' ಎಂಬ ಪತ್ರಿಕೆ ಇಂಗ್ಲಿಷಿನಲ್ಲಿತ್ತು. 'ಪ್ರಬುದ್ಧ ಕೇರಳಂ' ಎಂಬ ಪತ್ರಿಕೆಯೂ ಇತ್ತು. ಧಾರ್ಮಿಕ ವಿಚಾರಗಳನ್ನು ಪ್ರಾಂತೀಯ ಭಾಷೆಯಲ್ಲಿ ತಿಳಿಸಬೇಕು ಎನ್ನುವುದು ಅವರ ಉದ್ದೇಶವಾಗಿತ್ತು. ಆದರೆ ಪ್ರಬುದ್ಧ ಕರ್ನಾಟಕ ಸೆಂಟ್ರಲ್ ಕಾಲೇಜಿನ ಸಾಹಿತ್ಯ ಪತ್ರಿಕೆಯ ಹೆಸರಾಯಿತು.

''ಹೊಸ ಸಾಹಿತ್ಯದ ನೆಲೆಯೇನು, ಗುರಿಯೇನು, ಅದರ ಸೂತ್ರವೇನು, ಗಮನವೇನು ಎಂಬ ವಿಷಯವನ್ನೇ ಹೇಳುತ್ತಿರಬೇಕಾಗುತ್ತದೆ. ಸಾವಿರದ ಒಂಬೈನೂರ ಇಪ್ಪತ್ತರ ವೇಳೆಗೆ ಕನ್ನಡದಲ್ಲಿ ಈ ಕೆಲಸ ತೀರಾ ಅವಶ್ಯಕವಾಗಿ ಬಿಟ್ಟಿತ್ತು. ಆ ಸಮಯದಲ್ಲಿ ಮೈಸೂರು ಪ್ರಾಂತ್ಯದಲ್ಲಿ ಈ ಕೆಲಸವನ್ನು ಇಬ್ಬರು ಮಹನೀಯರು ಕೈಗೊಂಡರು. ಇದಕ್ಕಾಗಿ ಒಂದು ತ್ರೈಮಾಸಿಕವನ್ನು ಆರಂಭಿಸಿದರು. ಆ ಮಹನೀಯರು ಶ್ರೀ ತಳುಕಿನ ವೆಂಕಣ್ಣಯ್ಯನವರು, ಶ್ರೀ ಅಂಬಳೆ ಕೃಷ್ಣಶಾಸ್ತ್ರಿಗಳು: ಆ ತ್ರೈಮಾಸಿಕದ ಹೆಸರು ಪ್ರಬುದ್ಧ

ಕರ್ನಾಟಕ'' ಎಂದು ಮಾಸ್ತಿಯವರು ಹೇಳಿದ್ದಾರೆ. ಎಸ್.ಅನಂತನಾರಾಯಣ ಅವರು ಈ ಇಬ್ಬರನ್ನು 'ನಮ್ಮ ಹೊಸ ಸಾಹಿತ್ಯದ ಅಶ್ವಿನೀ ದೇವತೆಗಳು' ಎಂದು ಕರೆದಿದ್ದಾರೆ. ಈ ಪತ್ರಿಕೆಗೆ ಐವತ್ತು ವರ್ಷಗಳು ತುಂಬಿದ ಸಂದರ್ಭದಲ್ಲಿ ಕನ್ನಡಪ್ರಭ ಪತ್ರಿಕೆಯಲ್ಲಿ ತಮ್ಮ ಸಾಹಿತ್ಯ ಸಲ್ಲಾಪ ಅಂಕಣದಲ್ಲಿ ಹಾ.ಮಾ.ನಾಯಕರು, ''ಈ ಐವತ್ತು ವರ್ಷಗಳೆಂದರೆ ಕರ್ನಾಟಕದ ನವೋದಯದ ೫೦ ವರ್ಷಗಳು; ಕನ್ನಡಿಗರ ಜಾಗೃತಿಯ ಐದು ದಶಕಗಳು; ಕನ್ನಡ ಸಾಹಿತ್ಯದ ಆಧುನಿಕತೆಯ ಅರ್ಧ ಶತಮಾನ'' ಎಂದು ಬರೆದರು.

'ಪ್ರಬುದ್ಧ ಕರ್ನಾಟಕ'ದಲ್ಲಿ ಮೊದಲು ಕೃಷ್ಣಶಾಸ್ತ್ರಿಗಳು, ಅವರ ಶಿಷ್ಯರ ಲೇಖನಗಳು, ಕರ್ನಾಟಕ ಸಂಘದ ಆರಂಭ ಉಪಸಂಹಾರ ಭಾಷಣಗಳ ಲೇಖನ ರೂಪವು ಪ್ರಕಟಗೊಳ್ಳುತ್ತಿದ್ದವು. ೧೯೩೯ರಲ್ಲಿ ವೆಂಕಣ್ಣಯ್ಯನವರು ಗತಿಸಿದ ಬಳಿಕ ಉಪಕುಲಪತಿ ಎನ್.ಎಸ್. ಸುಬ್ಬರಾಯರು 'ಪ್ರಬುದ್ಧ ಕರ್ನಾಟಕ'ದಲ್ಲಿ ಸಾಹಿತ್ಯ ಮಾತ್ರವಲ್ಲದೆ ಶಾಸ್ತ್ರ ವಿಚಾರಗಳನ್ನೂ ಪ್ರಕಟಿಸಬೇಕೆಂದೂ, ಮೈಸೂರಿನ ಹೊರಗಿನ ಕರ್ನಾಟಕದ ಸಹಾಯ ಸಹಾನುಭೂತಿಗಳನ್ನು ಪಡೆಯಬೇಕೆಂದೂ ಸೂಚಿಸಿದರಂತೆ. ಇದಕ್ಕೆ ಅಗತ್ಯವಾದ ಹಣಕಾಸಿನ ಸಹಾಯವನ್ನು ಒದಗಿಸಲು ಅವರು ಮುಂದಾದರು. ಆ ಬಳಿಕ ಪ್ರಬುದ್ಧ ಕರ್ನಾಟಕದ ಸ್ವರೂಪ ಮತ್ತು ವ್ಯಾಪ್ತಿ ವಿಶಾಲವಾಯಿತು. ಇಪ್ಪತ್ತನೆ ಶತಮಾನದ ಮೊದಲ ಮತ್ತು ಎರಡನೆಯ ತಲೆಮಾರಿನ ಪ್ರಮುಖ ಸಾಹಿತಿಗಳ ಲೇಖನಗಳು ಅದರಲ್ಲಿ ಬೆಳಕುಕಂಡಿವೆ. ಹೊಸಗನ್ನಡದ ಗದ್ಯವನ್ನು ರೂಪಿಸುವುದರಲ್ಲಿ, ವಿಜ್ಞಾನದ ಪರಿಭಾಷೆಯನ್ನು ಹುಟ್ಟುಹಾಕುವುದರಲ್ಲಿ ಪ್ರಬುದ್ಧ ಕರ್ನಾಟಕದ ಕೊಡುಗೆ ಅಪಾರ.

''ಪ್ರಬುದ್ಧ ಕರ್ನಾಟಕವು ಸಾಹಿತ್ಯ ವಿಮರ್ಶೆ, ಸಂಶೋಧನೆಗಳಲ್ಲಿ ದೊಡ್ಡ ಆದರ್ಶಗಳನ್ನು ಪಾಲಿಸಿಕೊಂಡು ಬಂದಿತೇ ಹೊರತು ಅದು ಯಾವತ್ತೂ ಪಂಥ, ಗುಂಪುಗಳಿಗೆ ಆಸ್ಪದ ಕೊಡಲಿಲ್ಲ. ವಿಶ್ವವಿದ್ಯಾನಿಲಯದ ಆಶ್ರಯದಲ್ಲಿದ್ದರೂ ಕನ್ನಡದ ಹಿತರಕ್ಷಣೆಗೆ ಸಂಬಂಧಿಸಿದಂತೆ ತನ್ನ ದೃಢವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಎಂದೂ ಹಿಂಜರಿಯಲಿಲ್ಲ'' ಎಂಬ ಹಾಮಾನಾ ಮಾತು ಅಕ್ಷರಶಃ ಸತ್ಯ.

ಇದನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರರ ಮಾತೊಂದನ್ನು ಉಲ್ಲೇಖಿಸಿ ಪುಷ್ಟೀಕರಿಸಬಹುದು. ''..... ಶ್ರೀಮಾನ್ ಕೃಷ್ಣಶಾಸ್ತ್ರಿಗಳು, ಕವಿವರ್ಯ ಕೆ.ವಿ.ಪುಟ್ಟಪ್ಪನವರ (ಡಾಕ್ಟರ್, ಪದ್ಮವಿಭೂಷಣ) ಒಂದು ಕೃತಿಯ ವಿಷಯದಲ್ಲಿ ವ್ಯಕ್ತಪಡಿಸಿದ ಪ್ರಶಂಸೆ ಮೆಚ್ಚಿಕೆ, ಅತಿಶಯೋಕ್ತಿ ಅತ್ಯುಕ್ತಿಯೆಂದೂ, ಇದರಿಂದ ಆಧುನಿಕ ಬರಹಗಾರರ ತಲೆ ತಿರುಗಿಹೋಗುವುದೆಂದೂ ಒಬ್ಬ ವಿದ್ವಾಂಸರು (ಅವರೂ ಆಧುನಿಕರೇ) ಶ್ರೀಮಾನ್ ಡಿ.ವಿ.ಗುಂಡಪ್ಪನವರೊಂದಿಗೆ ದೂರಿದರು. ಅದಕ್ಕೆ ಡಿ.ವಿ.ಜಿಯವರು 'ಶ್ರೀಮಾನ್ ಕೃಷ್ಣಶಾಸ್ತ್ರಿಗಳು ಹಾಗೆ ಹೇಳಿದರೆ, ಅದಕ್ಕೆ ಗ್ರಂಥ ಅರ್ಹವಾದದ್ದಾಗಿರಬೇಕು. . (He has a sure taste. He never is swayed by any prejudice in his judgment) ಎಂದು ಉತ್ತರವಿತ್ತರು. ಪ್ರಬುದ್ಧ ಕರ್ನಾಟಕದ ವಿಮರ್ಶೆ ಹೀಗೆ ನಿರ್ದುಷ್ಟವಾಗಿದ್ದುದರಿಂದಲೇ ಅದರಲ್ಲಿ ಬರುತ್ತಿದ್ದ ಅಭಿಪ್ರಾಯಗಳಿಗೂ ಲೇಖನಗಳಿಗೂ ವಿಮರ್ಶನಗಳಿಗೂ ಕನ್ನಡ ನಾಡಿನಲ್ಲಿ ಅಂತಹ ಬೆಲೆ ಇತ್ತು.

ಪ್ರಬುದ್ಧ ಕರ್ನಾಟಕದ ತಮ್ಮ ಮೊದಲನೆಯ ಲೇಖನದ ಕೊನೆಯಲ್ಲಿ ಎ.ಆರ್.ಕೃ. 'ನಮ್ಮಲ್ಲಿ ಬೆಳ್ಳಿಯಿಲ್ಲ ಬಂಗಾರವಿಲ್ಲ. ಯಾವುದು ಇದೆಯೋ ಅದನ್ನು ನಿರ್ವಂಚನೆಯಾಗಿ ಕೊಡುತ್ತೇವೆ. ನಾವು ಮಾಡತಕ್ಕ ಕೆಲಸವನ್ನು ದೃಢದಿಂದಲೂ ನಿರ್ವಂಚನೆಯಿಂದ ಮಾಡಿದರೆ ಸರಸ್ವತಿಯೂ ಲಕ್ಷ್ಮಿಯೂ ತಾವಾಗಿ ಸಹಾಯಕ್ಕೆ ಬಂದು ನಿಲ್ಲುವರೆಂದು ನಮಗೆ ಧೈರ್ಯವಿದೆ' ಎಂದು ಹೇಳಿದ್ದು ಆ ಮೇಲೆ ಸತ್ಯವಾಯಿತು.

ಕೃಷ್ಣಶಾಸ್ತ್ರಿಗಳ ಸಂಪಾದಕತ್ವ ಅನೇಕ ಲೇಖಕರ ಬರೆಹಗಳಿಗೆ ಹೊಸ ಹೊಳಪನ್ನು ನೀಡಿದೆ. '.... ಕಿರಿಯರ ಪ್ರಬಂಧಕ್ಕೆ ಕತ್ತರಿಯ ಪ್ರಯೋಗವನ್ನು ಮಾಡುವಂತೆಯೇ ಹಿರಿಯರ ಲೇಖನಕ್ಕೂ ಉಳಿಯ ಪೆಟ್ಟನ್ನು ಕೊಟ್ಟಿದ್ದಾರೆ' ಎಂಬ ಎನ್.ಅನಂತರಂಗಾಚಾರ್ ಅವರ ಮಾತು ಶಾಸ್ತ್ರಿಗಳ ಪ್ರಭುತ್ವವನ್ನು ತೋರಿಸುವುದು.

ಕನ್ನಡ ಉಪಾಧ್ಯಾಯರಿಂದ ಪ್ರಬುದ್ಧ ಕರ್ನಾಟಕಕ್ಕೆ ನಾನು ಪ್ರತಿ ವರ್ಷವೂ ನಿರೀಕ್ಷಿಸುವುದು ಒಂದು ಲೇಖನ ಮತ್ತು ಒಂದು ವಿಮರ್ಶೆ ಎಂದು ಶಾಸ್ತ್ರಿಯವರು ಪ್ರಕಟಿಸಿದರು.

''ಕಾವ್ಯಗಳನ್ನು ನಮ್ಮದು ತಮ್ಮದು ಎಂಬ ಸುಳ್ಳು ಅಭಿಮಾನವನ್ನಾಗಲಿ, 'ಕನ್ನಡ ಕಾಡು ಭಾಷೆ' ಎಂಬ ಒಂದು ಕೀಳು ಬುದ್ಧಿಯನ್ನಾಗಲಿ ಇಟ್ಟುಕೊಳ್ಳದೆ ನಿರ್ದಾಕ್ಷಿಣ್ಯವಾಗಿಯೂ ನಿಷ್ಪಕ್ಷಪಾತವಾಗಿಯೂ ವಿಚಾರ ಮಾಡಿ, ದೋಷಗಳನ್ನು ಕಿತ್ತು ಒಗೆದು, ಗುಣಗಳನ್ನು ಗ್ರಹಿಸಿ ಒಂದುಕಡೆ ವಿಮರ್ಶೆಯನ್ನೂ ಮತ್ತೊಂದು ಕಡೆ ರಚನೆಯನ್ನೂ ಮಾಡಬೇಕೆಂಬುದು ನಮ್ಮ ಉದ್ದೇಶ'' ಎಂದು ಕೃಷ್ಣಶಾಸ್ತ್ರಿಗಳು ವ್ಯಕ್ತಪಡಿಸಿದ ಉದ್ದೇಶಕ್ಕೆ ಅನುಗುಣವಾಗಿಯೇ ನಡೆದುಕೊಂಡರು. ಪ್ರಬುದ್ಧ ಕರ್ನಾಟಕ ಸಾಹಿತಿಗಳನ್ನು ತಿದ್ದಿ ಬೆಳೆಸುವಲ್ಲಿ ಒಂದು ಕಮ್ಮಟದ ರೀತಿಯಲ್ಲಿ ಕಾರ್ಯ ಮಾಡಿತು.

ಕರ್ನಾಟಕ ಭಾರತಿ ಮತ್ತು ಸಾಧನೆ ಇದೇ ದಾರಿಯಲ್ಲಿ ಹೆಜ್ಜೆ ಇಟ್ಟವು. ಆದರೆ ಅನಿಯಮಿತವಾದವು. ಕನ್ನಡ ವಿಶ್ವವಿದ್ಯಾನಿಯದ 'ಕನ್ನಡ ಅಧ್ಯಯನ' ಸದ್ಯ ನಿಯಮಿತವಾಗಿ ಬರುತ್ತಿದೆ. ಪ್ರಬುದ್ಧ ಕರ್ನಾಟಕದ ರೀತಿಯಲ್ಲಿ ಈ ವಿಶ್ವವಿದ್ಯಾಲಯದ ಸಾಹಿತ್ಯ ಪತ್ರಿಕೆಗಳು ಹೊಸ ಬರೆಹಗಾರರನ್ನು ತಿದ್ದಿ ಬೆಳೆಸಿ ಪ್ರಚಾರ ನೀಡಿ ಅವರಲ್ಲಿ ಆತ್ಮ ವಿಶ್ವಾಸವನ್ನು ತುಂಬುವ ಕೆಲಸ ಮಾಡಬಹುದು. ಸಾಹಿತ್ಯಕ ಸಂವಾದ ವಾಗ್ವಾದಗಳಿಗೆ ವೇದಿಕೆಯಾಗುವ ಆ ಮೂಲಕ ಸಾಂಸ್ಕೃತಿಕ ಇತಿಹಾಸಕ್ಕೆ ಮೂಲ ಧಾತುವಾಗುವ ಅವಕಾಶ ಇಂಥ ಪತ್ರಿಕೆಗಳಿಗೆ ಇದೆ. ಎಲ್ಲ ವಿವಿಗಳ ವಿದ್ವಾಂಸರು ಇತ್ತ ಗಮನ ನೀಡಬೇಕು.

(ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಪತ್ರಿಕೆಗಳ ಪಾತ್ರ- ಎಂಬ ನನ್ನ ಪಿಎಚ್.ಡಿ ಮಹಾಪ್ರಬಂಧವನ್ನೂ ನೋಡಬಹುದು.)

ಸಹಾಯಕ ಸಂಪಾದಕ (ಜೂ.)
ಕನ್ನಡಪ್ರಭ, ಬೆಂಗಳೂರು
ಮೊ: ೯೪೪೮೦೧೪೪೪೪೩

ಕನ್ನಡ ಸಾಹಿತ್ಯ ಪತ್ರಿಕೆಗಳು

ಪತ್ರಿಕೆಯ ಹೆಸರು	ನಿಯತತೆ	ಕಾಲ	ಸಂಪಾದಕರು/ಪ್ರಕಾಶಕರು/ವೈಶಿಷ್ಟ್ಯ
ಅರುಹು ಕುರುಹು	ತ್ರೈ	೨೦೦೯	ಲಿಂಗದೇವರು ಹಳೇಮನೆ
ಅಂಕಣ	-	೧೯೭೯-೮೯	ಚಿ.ಶ್ರೀನಿವಾಸರಾಜು /ಎ.ಆರ್.ನಿರುಪಮಾ
ಅಕಾವ್ಯ	ಮಾ	೧೯೭೩	ಚಂದ್ರಶೇಖರ ಕಂಬಾರ / ಸಿಂಹ ಕೊಳ್ಳೇಗಾಲ/ ದೊಡ್ಡರಂಗೇಗೌಡ
ಅನ್ವೇಷಣೆ	ದ್ವೈ	೧೯೮೪	ಆರ್.ಜಿ.ಹಳ್ಳಿ ನಾಗರಾಜ್
ಅರಿವು-ಬರಹ	ದ್ವೈ	೧೯೯೧	ಅರಿವು ಬರಹ ಟ್ರಸ್ಟ್
ಅನಿಕೇತನ	ತ್ರೈ	೧೯೮೪ ೧೯೮೮	ಚಂದನ ಕರ್ನಾಟಕ ಸಾಹಿತ್ಯ ಅಕಾಡೆಮಿ (ಅನುವಾದ ಸಾಹಿತ್ಯ) ಈ ಹಿಂದೆ 'ಚಂದನ' ಆಗಿತ್ತು
ಅಜಂತ	ಮಾ	೧೯೬೬	ಎಂ.ವ್ಯಾಸ, ಶುಭಾಕರ ಶಾನುಭೋಗ
ಅವಕಾಶ ತೋಷಿಣಿ	ಮಾ	೧೯೦೬-೨೫	ಬಿ.ವೆಂಕಟಾಚಾರ್ಯ
ಆನಂದ	ಮಾ	೧೯೫೬	ಎಂ.ಎನ್.ಕಾಮತ್ (ದ.ಕ)
ಆನಂದ	ಮಾ	೧೯೬೬	ಸಿ.ವಿ.ಕೃಷ್ಣಸ್ವಾಮಿ (ಬೆಂಗಳೂರು)
ಆರ್ಯಧರ್ಮ ಸಂಗ್ರಹ (ಚಾಮರಾಜನಗರ)	ಮಾ	೧೯೩೭	ಸಿ.ವೆಂಕಟರಮಣಶಾಸ್ತ್ರಿ
ಆಶಾಜ್ಯೋತಿ	ಮಾ	೧೯೫೪	ಎಂ.ಎನ್.ಕಾಮತ್
ಒಡನಾಡಿ	ದ್ವೈ	೧೯೭೫	ಬಿ.ದಾಮೋದರರಾವ್, ವಿಕಾಸ ಪ್ರಕಾಶನ (ಸಾಮಾಜಿಕ ಚಿಂತನೆಗೆ ಮೀಸಲಾಗಿತ್ತು)

ಪತ್ರಿಕೆಯ ಹೆಸರು	ನಿಯತತೆ	ಕಾಲ	ಸಂಪಾದಕರು/ಪ್ರಕಾಶಕರು/ವೈಶಿಷ್ಟ್ಯ
ಒಡಲಾಳ	ಮಾ	೧೯೬೦	ಕೃಷ್ಣಮೂರ್ತಿ ಬಿಳಿಗೆರೆ (ತಿಪಟೂರು)
ಕರ್ನಾಟಕ ಕೇಸರೀ	ಮಾ	೧೯೨೯	ಮಂಜೇಶ್ವರ ಅನಂತರಾವ್
ಕರ್ನಾಟಕ ಭಾಷಾ ಸೇವಕ	ಮಾ	೧೮೯೧	ಶೇಷಗಿರಿರಾವ್ ಕೊಣ್ಣೂರ
ಕರ್ನಾಟಕ ವಾಣೀ ವಿಲಾಸ	ದ್ವೈ	೧೮೮೮	ಲಕ್ಕೂರ ಸುಬ್ಬರಾಯರು
ಕತೆಗಾರ	ಮಾ	೧೯೩೩-೫೪	ಎಂ.ಎನ್.ಗೋಪಾಲರಾವ್
ಕಥಾಂಜಲಿ	ಮಾ	೧೯೨೯-೩೦	ಅ.ನ. ಕೃಷ್ಣರಾಯರು (ಕಥಾ ಸಾಹಿತ್ಯಕ್ಕೆ ಮೀಸಲಾಗಿತ್ತು)
ಕಥಾಕುಂಜ	ಮಾ	೧೯೩೪-೩೬	ಪ್ಯಾಟ ಶಾಮರಾಯರು
ಕಥಾಚಂದ್ರಿಕೆ	ಮಾ	೧೯೪೨-೪೩	ಜಿ.ಎಸ್.ಕೃಷ್ಣರಾವ್
ಕಥಾವಳಿ	ಮಾ	೧೯೩೮-೫೬	ವಿ.ಗುಪ್ತ
ಕಥಾಸಂಗ್ರಹ	ಮಾ	೧೯೫೩-೫೬	ವಾಮನ ಅನಂತ ಹೊದಿಕೆ
ಕನಕ	ಮಾ	-	ಹೊಯ್ಸಳ (ಶಿಶು ಕಥೆಗಳ ಪತ್ರಿಕೆ)
ಕನಕಾಂಬರ	ದ್ವೈ		ಕಡಿದಾಳು ಮಂಜಪ್ಪ (ಒಂದೇ ಸಂಚಿಕೆ ಪ್ರಕಟವಾದದ್ದು)
ಕನ್ನಡ ಕಂದ	ಮಾ	೧೯೩೭	ಮರವೀರ ಮಮ್ಮಿಗಟ್ಟಿ (ಮೇವುಂಡಿ ಮಲ್ಲಾರಿ)
ಕನ್ನಡ ಕೋಕಿಲೆ	ಮಾ	೧೯೨೮	ಶ್ರೀ ಗುರುಪಾದ ಮಠ
ಕನ್ನಡ ನುಡಿ	ಮಾ	೧೯೩೮	ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆ ಮೊದಲ ಸಂಪಾದಕ : ಮೊ.ಕ. ಸುಬ್ರಹ್ಮಣ್ಯ ಶಾಸ್ತ್ರಿ
ಕನ್ನಡ ನುಡಿ	ಮಾ	೧೯೨೪	ಜಿ.ಸುಬ್ರಹ್ಮಣ್ಯಂ, ಆರ್.ಬೆಳ್ಳಾವೆ (ಮುಂಬಯಿ)
ಕನ್ನಡ ನುಡಿಗನ್ನಡಿ	ಮಾ	೧೯೦೭	ತುಲಸೀರಾಮದಾಸ್ (ವೈಚಾರಿಕ ಪತ್ರಿಕೆ) (ಮದರಾಸು)
ಕನ್ನಡ ಕುಸುಮಾವಲಿ	ಮಾ	೧೯೩೮	ಸಿ.ಎನ್.ಕುಲಕರ್ಣಿ
ಕರ್ನಾಟಕ ಭಾರತಿ	ಅರ್ಧ ವಾರ್ಷಿಕ	೧೯೭೨	ಧಾರವಾಡ ವಿ.ವಿ. ಪ್ರಸಾರಾಂಗ
ಕಾವ್ಯಕಲ್ಪದ್ರುಮ	-	೧೮೯೭	ಕೊ.ಶ್ರೀ. ಅಯ್ಯಂಗಾರ್
ಕರ್ನಾಟಕ ಜ್ಞಾನಮಂಜರಿ	ಮಾ	೧೯೭೫	ಭಿಕಾಜ ಹರಿಸಾಮಂತ

ಪತ್ರಿಕೆಯ ಹೆಸರು	ನಿಯತತೆ	ಕಾಲ	ಸಂಪಾದಕರು/ಪ್ರಕಾಶಕರು/ವೈಶಿಷ್ಟ್ಯ
ಕವಿಮಾರ್ಗ	ತ್ರೈ	೧೯೮೭	ಡಾ।ವೀರಣ್ಣ ದಂಡೆ/ಜಯಶ್ರೀ ದಂಡೆ
ಕರ್ನಾಟಕ ಜೀವನ	ವಾರ	೧೯೧೬	ಡಿ.ವಿ.ಗುಂಡಪ್ಪ
ಕವಿತಾ	ತ್ರೈ	೧೯೬೬-೭೯	ಕೆ.ನಾ. ಬಾಲಕೃಷ್ಣ (ಕವಿತೆಗಳ ಕಾವ್ಯವಿಚಾರಕ್ಕೆ ಮೀಸಲಾಗಿತ್ತು)
ಕವಿಮಾರ್ಗ	ತ್ರೈ	೧೯೮೭	ಡಾ।ವೀರಣ್ಣ ದಂಡೆ- ಮೊದಲು 'ವಿಮರ್ಶೆ'
			ಎಂಬ ಹೆಸರಿನಲ್ಲಿ ಪ್ರಕಟಗೊಳ್ಳುತ್ತಿತ್ತು
ಕಾಲಗತಿ	ತ್ರೈ	೧೯೭೭	ಶ್ರೀಜ್ಯೋತಿ ಹುಣಸೂರ (ಸಂಶೋಧನೆಗಾಗಿ ಮೀಸಲಾಗಿತ್ತು)
ಕಾವ್ಯಶ್ರೀ	ತ್ರೈ	೧೯೭೭	ರಾಜೇಂದ್ರ ಪಾಟೀಲ
ಕಾದಂಬರಿ	ಮಾ	೧೯೭೭	ಎಸ್.ರಾಮಸ್ವಾಮಿ/ಜಿ.ಎಸ್.ರಾಮರಾವ್
ಕಾದಂಬರಿ ಸಂಗ್ರಹ	ಮಾ	೧೯೧೪-೩೮	ಸಿ.ವೆಂಕಟರಮಣಶಾಸ್ತ್ರಿ ಲಕ್ಷ್ಮಣರಾವ್
ಕಾವ್ಯಾಂಬುಧಿ	ಮಾ	೧೮೯೪-೯೫	ಬಿ.ಪದ್ಮರಾಜ ಪಂಡಿತ /ಎನ್.ಕರೀಬಸವಯ್ಯ
ಕಾವೇರಿ	ಮಾ	೧೯೬೪	ಎ.ಆರ್.ಆಚಾರ್ಯ
ಕೊರವಂಜಿ	ಮಾ	೧೯೪೨-೬೭	ರಾ.ಶಿ.(ಡಾ।ಶಿವರಾಂ) (ಹಾಸ್ಯ ಸಾಹಿತ್ಯದ ಮುಖ್ಯ ಪತ್ರಿಕೆ)
ಕೊರವಂಜ	ಮಾ	೧೯೭೩-೭೮	ಡಿ.ಜೆ.ರವಿಕುಮಾರ್, ಟಿ.ಕೆ.ಜನಾರ್ಧನ
ಕಲಾ	ಮಾ	೧೯೩೦	ಕಲಾಮಂದಿರಂ(ಕನ್ನಡದ ಮೊದಲ ಕಲೆಯ
			ಬಗೆಗಿನ ಪತ್ರಿಕೆ) ಅ.ನಾ.ಸುಬ್ಬರಾಯರು
ಕಲಾವಿಕಾಸ	ಮಾ	೧೯೭೯	ಅ.ಲ.ನರಸಿಂಹನ್ (ಶಿಲ್ಪ ಮತ್ತು ಚಿತ್ರಕಲೆಗಳ ಪತ್ರಿಕೆ)
ಕ್ಯಾನ್ವಾಸ್	ಮಾ	-	ಎಂ.ಎಸ್.ಮೂರ್ತಿ (ಕಲೆಗಾಗಿ ಈಗಿನ ಪತ್ರಿಕೆ)
ಗ್ರಂಥಲೋಕ	ಮಾ	೧೯೭೮	ಆರ್.ಎಲ್.ಅನಂತರಾಮಯ್ಯ (ಹಿಂದೆ ಪುಸ್ತಕ ಪುರವಣಿ ಎಂಬ ಹೆಸರಲ್ಲಿ ಪ್ರಕಟವಾಗುತ್ತಿತ್ತು)
ಗರಿಕೆ	ಮಾ	೧೯೩೫	ಎಸ್.ಎಲ್.ಶ್ರೀಕಂಠಯ್ಯ
ಚಾತುರ್ಯ	ಮಾ	೧೯೦೯	ಜಿ.ಜನಾರ್ಧನ ರಾವ್
ಚಿಂತನ ಬಯಲು	ತ್ರೈ	೨೦೧೨	ರೇಷ್ಮಾ ಜಿ. ಭಟ್

ಕನ್ನಡ ಸಾಹಿತ್ಯ ಪತ್ರಿಕೆಗಳು

ಪತ್ರಿಕೆಯ ಹೆಸರು	ನಿಯತತೆ	ಕಾಲ	ಸಂಪಾದಕರು/ಪ್ರಕಾಶಕರು/ವೈಶಿಷ್ಟ್ಯ
ಗಾಂಧಿಬಜಾರ್	ಮಾ	೧೯೮೬	ಬಾ.ಕಿ.ನಾ
ಜನತಾ	ಮಾ	೧೯೪೧	ಎ.ಕೇಶವ್
ಜನಪದ ವಿಚಾರ	ಮಾ	೧೯೭೮	ಎಸ್. ಪಟ್ಟಾಭಿರಾಮನ್
ಜಯಂತಿ	ಮಾ/ವಾರ	೧೯೩೮-೭೭	ಬೆಟಗೇರಿ ಕೃಷ್ಣಶರ್ಮ/ ಬಸವರಾಜ ಹೊರೋಡಿ
ಜಯಕರ್ನಾಟಕ	ಮಾ/ವಾರ	೧೯೨೩-೫೧	ಆಲೂರ ವೆಂಕಟರಾಯರು
ಜಾನಪದ	ತ್ರೈ	೧೯೭೫	ಹಾ.ಮಾ.ನಾಯಕ (ಕರ್ನಾಟಕ ಜಾನಪದ ಪರಿಷತ್ತು)
ಜ್ಞಾನಭಾರತಿ	ಮಾ	೧೯೬೫-೬೭	ಮಳಗಿ ಮಾಂತೇಶ್ವರ
ಜ್ಞಾನಸುಧಾ	ತ್ರೈ	೧೯೬೭-೭೦	ದೇವುಡು ಸದಾಶಿವ
ಜ್ಞಾನಾಂಜನ	ಮಾ	೧೯೦೮	ಆನಂದ ಚಂದ್ರಿಕೆ ಕಾರ್ಯಾಲಯ
ಜೀವನ	ಮಾ	೧೯೪೦-೭೭	ಮಾಸ್ತಿ ವೆಂಕಟೇಶ ಅಯ್ಯಂಗಾರ್/ ದ.ರಾ.ಬೇಂದ್ರೆ
ತರಳಬಾಳು ಥಿಯೇಟರ್	ತ್ರೈ	೧೯೭೬	ನಾ.ಲೋಕೇಶ ಒಡೆಯರ್, ರಾಜಶೇಖರ ಹನುಮಲಿ, ಡಿ.ಶಂಕರಪ್ಪ (ರಂಗಭೂಮಿ ಕುರಿತು)
ದಲಿತ	ದ್ವೈ	೧೯೭೪	ಬುದ್ಧಣ್ಣ ಹಿಂಗಮಿರೆ/ಪ್ರಶಾಂತ ಪ್ರಕಾಶನ
ದಲಿತ ಬಂಧು	ಮಾ/ಪ	೧೯೫೨	ಎಸ್.ಗೋಪಾಲ ಸಾಲೆನ್ನ
		೧೯೫೬	ಕೆ.ಗುರುದತ್ತ
ದೇವಭೂಜ	ತ್ರೈ/ಮಾ	೧೯೨೭-೨೯	ಎಸ್.ಸಿ.ಸಾಲಿಮಠ
ದೇಶಕಾಲ	ತ್ರೈ	೨೦೦೬	ವಿವೇಕ ಶಾನುಭಾಗ
ನಮ್ಮ ಪುಸ್ತಕ	ಮಾ	೧೯೩೬-೪೮	ದೇವುಡು ನರಸಿಂಹಶಾಸ್ತ್ರಿ
ನಟನ	ತ್ರೈ	೧೯೭೦	ಬಿ.ವಿ.ಕಾರಂತ (ರಂಗಭೂಮಿ ಕುರಿತದ್ದು)
ಶಕ್ತಿ	ಮಾ	೧೯೩೮	ಬನ್ನಂಜೆ ರಾಮಾಚಾರ್ಯ ಪಿ.ಎಸ್
ನೀತಿ	ತ್ರೈ	೧೯೭೩	ರಾಮಚಂದ್ರದೇವ
ನಿಷಾಧ	ಮಾ	೧೯೭೨	ರವೀಶ್ ಕಾಸರವಳ್ಳಿ (ಕಲೆಯ ಪತ್ರಿಕೆ)
ನಾಟ್ಯ ಭಾರತಿ	ದ್ವೈ	೧೯೬೯	ಅಸೋಸಿಯೇಷನ್ ಅಮೆಚೂರ್ ಆರ್ಟಿಸ್ಟ್
ಪಂಚಮ	ಪಕ್ಷ	೧೯೭೬-೭೭	ರಾಮದೇವ ರಾ.ಕೆ/ ಎನ್.ಗೋವಿಂದಯ್ಯ

ಪತ್ರಿಕೆಯ ಹೆಸರು	ನಿಯತತೆ	ಕಾಲ	ಸಂಪಾದಕರು/ಪ್ರಕಾಶಕರು/ವೈಶಿಷ್ಟ್ಯ
ಪಂಡಿತ ಮಂಡಲ	ಮಾ	೧೯೪೦	ಕೆ.ಪಟ್ಟಾಭಿರಾಮ
ಪರಾಗ	ಮಾ/ಪ	೧೯೫೮	ಎಸ್.ಪದ್ಮನಾಭ ನಾಯರ್
ಪರಿಚಯ	ಮಾ	೧೯೮೩	ಸೊಸ್ವಾರ ಕಿಶನರಾವ್/ ಕೆ.ವಿ.ತಿರುಮಲೇಶ್/ಸಾಹಿತ್ಯ ಮಂದಿರ
ಪ್ರಜ್ಞೆ	ದ್ವೈ	೧೯೬೮	ಮಾಧವ ಕುಲಕರ್ಣಿ/ಶ್ರೀನಿವಾಸ ಜೋಷಿ
ಪ್ರಜ್ಞೆ	ಮಾ	೧೯೯೩	ರಾಜಪ್ಪ ದಳವಾಯಿ
ಪ್ರತಿಭಾ	ಮಾ	೧೯೪೦	ಬಾಲಚಂದ್ರ ಫಾಣೇಕರ
ಪ್ರತಿಭಾ	ಪ	೧೯೭೮	ಬಾಲಚಂದ್ರ ಫಾಣೇಕರ
ಪ್ರತೀಕ	ತ್ರೈ	೧೯೬೯	ಜಯತೀರ್ಥ ರಾಜಪುರೋಹಿತ
ಪ್ರಬುದ್ಧ ಕರ್ನಾಟಕ	ತ್ರೈ	೧೯೧೯	ಟಿ.ಎಸ್.ವೆಂಕಣ್ಣಯ್ಯ/ಮೈಸೂರು ವಿ.ವಿ.
ಪ್ರಾಚೀನ ಕರ್ನಾಟಕ	ಷಟ್ಮಾಸಿಕ	೧೯೩೨	ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ (ಸಂಶೋಧನೆಗಾಗಿ)
ಪ್ರವಾಸ	ಮಾ	೧೯೩೫	ಕುಟ್ಟಿ ವಾಸುದೇವ ಶೆಣೈ (ಲಲಿತ ಪ್ರಬಂಧ)
ಪುಸ್ತಕ ಪ್ರಪಂಚ	ಮಾ	೧೯೪೩	ರಾಜ್ಯ ವಯಸ್ಕರ ಶಿಕ್ಷಣ ಸಮಿತಿ/ಮೈಸೂರು
ಪುಸ್ತಕ ಮನೆ	ಮಾ	೨೦೦೬-೨೦೧೧	ಹರಿಹರಪ್ರಿಯ ಆರಂಭದಲ್ಲಿ ಈ ಪತ್ರಿಕೆಯ ಹೆಸರು 'ಪ್ರಜಾ ಸಾಹಿತ್ಯ' ಎಂದಿತ್ತು.
ಬದುಕು	ದ್ವೈ	೧೯೭೭	ಮಂಗ್ಳೂರು ವಿಜಯ
ಬಿಂದು	ಮಾ	೧೯೬೯	ಟಿ.ರಾಘವನ್
ಬೀದಿ	ಮಾ	೧೯೮೧	ಕಲಾಮಂದಿರ ಬೆಂಗಳೂರು (ನಾಟಕ ಕುರಿತ ಪತ್ರಿಕೆ)
ಭಾರತ ನಂದಿನಿ	ಮಾ	೧೯೨೨	ನಂಜನಗೂಡು ತಿರುಮಲಾಂಬಾ (ವೈಚಾರಿಕ-ಮಹಿಳಾ ಕಾಳಜಿಯ ಪತ್ರಿಕೆ)
ಮನ್ವಂತರ	ವಾರ್ಷಿಕ	೧೯೬೨-೭೨	ಜೆ.ಬಿ.ಜೋಷಿ/ ಮನ್ವಂತರ ಪ್ರಕಾಶನ ಮಾನವಿಕ
ಕರ್ನಾಟಕ	ತ್ರೈ	೧೯೭೧	ಹಾಮಾನಾ/ಮೈಸೂರು ವಿ.ವಿ.
ಮಧುರವಾಣಿ	ವಾ	೧೯೧೧-೧೮	ಹನುಮಾನ್
ಮನುಕುಲ	ತ್ರೈ	೧೯೬೭	-

ಪತ್ರಿಕೆಯ ಹೆಸರು	ನಿಯತತೆ	ಕಾಲ	ಸಂಪಾದಕರು/ಪ್ರಕಾಶಕರು/ವೈಶಿಷ್ಟ್ಯ
ಮಾತುಕತೆ	-	-	ಯಶವಂತ ಜಾಧವ್/ನೀನಾಸಂ ಹೆಗ್ಗೋಡು
ಮಣ್ಣಿನ ಬದುಕು	ಅ.ಕಾಲಿಕ	೧೯೭೪	ವಸಂತ ರಾಜಪ್ಪ
ರಂಗಭೂಮಿ	ಮಾ	೧೯೨೬-೩೬	ದ.ಕೃ.ಭರದ್ವಾಜ
ರಂಗಮಂಟಪ	ತ್ರೈ	೧೯೭೨	ಜಿ.ಕೃಷ್ಣಪ್ರ : ರಂಗಮಂಟಪ
ಮುಕ್ತ	ಮಾ	೧೯೭೨	ಟಿ.ಎನ್. ಸೀತಾರಾಂ (ರಂಗಭೂಮಿ ಕುರಿತು)
ರುಜುವಾತು	ತ್ರೈ	೧೯೮೧	ಡಾ।ಯು.ಆರ್. ಅನಂತಮೂರ್ತಿ
ಲೇಖಕ	ಮಾ	೧೯೫೪	ಶಾ.ಬಾಲೂರಾವ್, ಕರ್ನಾಟಕ ಲೇಖಕರ ಸಂಘ
ಲಹರಿ	ಮಾ	೧೯೮೦	ಕೃಷ್ಣಭಟ್
ಲೋಕರಹಸ್ಯ	ಮಾ	೧೯೨೬-೩೩	ಕೆ.ನಾರಾಯಣರಾಯರು
ಲೋಚನ	ಷಣ್ಮಾಸಿಕ	೧೯೮೩	ಪ್ರೊ.ಜಿ.ವೆಂಕಟಸುಬ್ಬಯ್ಯ ಬಿ.ಎಂ.ಶ್ರೀ. ಪ್ರತಿಷ್ಠಾನ
ವರ್ತಮಾನ	ದ್ವೈ	೧೯೭೩-೭೪	ಜಿ.ಎಸ್. ಅವಧಾನಿ
ವಸಂತ	ಮಾ/ಪ	೧೯೨೩-೩೦	ಭಂಡಾರಕರ/ಶಿವರಾಮ ಕಾರಂತ (ವೈಚಾರಿಕ)
ವಾಗ್ಭೂಷಣ	ಮಾ	೧೮೯೬-೧೯೭೧	ಬೆನಗಲ್ ಶಾಮರಾಯರು/ ವಿದ್ಯಾವರ್ಧಕ ಸಂಘ
ವೀಣಾ	ಮಾ	೧೯೫೦	ಶಂಕರನಾರಾಯಣರಾಯ
ವಿಚಾರಗುಚ್ಛ	ಮಾ	೧೯೭೨	ಎಸ್.ಪಟ್ಟಾಭಿರಾಮನ್ ಜನಪದ ಸೇವಾ ಟ್ರಸ್ಟ್
ವಿಚಾರವಾಣಿ	ವಾರ	೧೯೫೦	ಎಂ.ಜನಾರ್ಧನ ಪ್ರ: ರಾಮಕೃಷ್ಣ ಕಾರಂ
ವಿಜಯ	ಮಾ	೧೯೫೧	ವಿ.ಧರ್ಮಪಾಲ
ವಿಚಾರವಾಹಿನಿ	ಮಾ	೧೯೩೯-೪೨	ಕೂಡಲ ಚಿದಂಬರಂ
ವಿನೋದ	ಮಾ	೧೯೫೧ರಿಂದ	ಜಿ.ನಾರಾಯಣ (ಹಾಸ್ಯ ಬರಹಗಳ ಪತ್ರಿಕೆ)
ವಿಮರ್ಶಕ	ಮಾ/ಪ	೧೯೫೦-೫೧	ನಂದಳಿಗೆ ವಿಠಲದಾಸ
ವೀರಕನ್ನಡಿಗ	ತ್ರೈ	೧೯೬೭	-
ವಿಮೋಚನಾ ವಾರ್ತಾಪತ್ರ	-	೧೯೯೦	ರಾಜೇಶ್ವರಿ ಹೆಚ್.ಎಸ್
ವೀಕ್ಷಕ	ವಾರ	೧೯೭೩	ಸದಾಶಿವ ಎಣ್ಣೆಹೊಳೆ

ಪತ್ರಿಕೆಯ ಹೆಸರು	ನಿಯತತೆ	ಕಾಲ	ಸಂಪಾದಕರು/ಪ್ರಕಾಶಕರು/ವೈಶಿಷ್ಟ್ಯ
ಶಕ್ತಿ	ಮಾ	೧೯೨೬-೨೭	ಕೆ.ಪಿ.ಕಾಮತ್
ಶರಣ ಸಾಹಿತ್ಯ	ಮಾ	೧೯೩೯-೭೨	ಬಿ.ಶಿವಮೂರ್ತಿ ಶಾಸ್ತ್ರಿ
ಶೂದ್ರ	ಮಾ	೧೯೭೫	ಶೂದ್ರ ಶ್ರೀನಿವಾಸ
ಶೋಭಾ	ತ್ರೈ	೧೯೫೦-೫೫	ಎಸ್.ಪಿ.ಭಟ್
ಶೋಷಿತ	ವಾರ	೧೯೭೫	ಇಂದೂಧರ ಹೊನ್ನಾಪುರ/ ಎಚ್.ಗೋವಿಂದಯ್ಯ
ಸಂಕಲನ	ದ್ವೈ	೨೦೦೪ ರಿಂದ	ಸಿದ್ಧಲಿಂಗ ಪಟ್ಟಣಶೆಟ್ಟಿ
ಸಂಕ್ರಮಣ	ಮಾ	೧೯೬೫	ಚಂದ್ರಶೇಖರ ಪಾಟೀಲ/ ನೀಲಾ ಪಾಟೀಲ
ಸಂಕೀರ್ಣ	ದ್ವೈ	೧೯೭೨	ಸಂಕೀರ್ಣ ಪ್ರಕಾಶನ
ಸದ್ಬೋಧ ಚಂದ್ರಿಕೆ	ಮಾ	೧೯೦೪	ಕುಲಕರ್ಣಿ/ಚಿದಂಬರ ಮೂರ್ತಿ
ಸಂಚಯ	ದ್ವೈ	೧೯೮೦	ಸುರೇಂದ್ರ ರಾಮನ್/ದಾಂಡೇಲಿ
ಸಂಚಯ	ದ್ವೈ	೧೯೮೭	ಸಂಚಯ ಬಳಗ ಬೆಂಗಳೂರು
ಸಮನ್ವಯ	ತ್ರೈ	೧೯೬೮	ಡಾ| ವಿ.ಕೃ.ಗೋಕಾಕ್/ ಡಾ|ಜಿ.ಎಸ್.ಶಿವರುದ್ರಪ್ಪ
ಸಮಾಜ	ಮಾ	೧೯೩೬-೪೯	ಬಾಲಚಂದ್ರ ಘಾಣೇಕರ/ ಹರ್ಡೀಕರ ಮಂಜಪ್ಪ/ ಬಸವರಾಜ ಕಟ್ಟೀಮನಿ
ಸಮುದಾಯ ವಾರ್ತಾಪತ್ರ	ಮಾ	೧೯೭೯	ಎಸ್.ಮಾಲತಿ/ಸಮುದಾಯ
ಸಾಂಗತ್ಯ	ತ್ರೈ	೨೦೧೧	ಪರಮೇಶ್ವರ ಗುರುಸ್ವಾಮಿ
ಸ್ಥಿತಿಗತಿ	ತ್ರೈ	೨೦೧೧	ಎನ್. ಭಾಸ್ಕರ ಆಚಾರ್ಯ
ಸ್ವಧರ್ಮ	ಮಾ	೧೯೨೪-೩೦	ಹೊಸಕೆರೆ ಚಿದಂಬರಯ್ಯ/ದ.ರಾ.ಬೇಂದ್ರೆ
ಸೃಜನವೇದಿ	ಚಾತುರ್ಮಾಸ	೧೯೮೩	ಡಾ| ಹೇಮಂತ ಕುಲಕರ್ಣಿ
ಸಂಶೋಧನಾ ವ್ಯಾಸಂಗ	ಮಾ	೧೯೮೮	ಡಾ| ಸಂಗಮೇಶ ಸವದತ್ತಿಮಠ
ಸಿರಿಗನ್ನಡ	ಷಣ್ಮಾಸಿಕ	-	ಹಂಪಿ ಕನ್ನಡ ವಿಶ್ವವಿದ್ಯಾಲಯ
ಸಾಹಿತ್ಯ ಪ್ರಗತಿ	ಮಾ	೧೯೫೩	ಆರ್.ಬಸವರಾಜ್
ಸಾಹಿತ್ಯ ಸಂಗಮ	ಪ	-	ವಿಜಯ ಕುಮಾರ ಅತ್ರಿ
ಸಾಹಿತ್ಯ ಸಂಗಾತಿ	ತ್ರೈ	೧೯೮೯	ಅರವಿಂದ ಮಾಲಗತ್ತಿ
ಸಾಧನೆ	ತ್ರೈ	೧೯೭೨	ಡಾ|ಜಿ.ಎಸ್.ಶಿವರುದ್ರಪ್ಪ/ ಬೆಂ.ವಿ.ವಿ

ಪತ್ರಿಕೆಯ ಹೆಸರು	ನಿಯತತೆ	ಕಾಲ	ಸಂಪಾದಕರು/ಪ್ರಕಾಶಕರು/ವೈಶಿಷ್ಟ್ಯ
ಸಂವಾದ	ಮಾ	೧೯೮೬	ರಾಘವೇಂದ್ರ ಪಾಟೀಲ/ ಡಿ.ಎಸ್.ನಾಗಭೂಷಣ/ ಸ.ಉಷ (ಸಂವಾದ ಪ್ರಕಾಶನ)
ಸಾಕ್ಷಿ	ತ್ರೈ	೧೯೬೭-೭೯	ಪ್ರೊ।ಎಂ.ಗೋಪಾಲಕೃಷ್ಣ ಅಡಿಗ
ಸುಬೋಧ	ಮಾ	೧೯೨೬-೭೧	ಎಂ.ರಾಮರಾಯರು
ಸೂತ್ರಧಾರ	ಮಾ	೧೯೭೯	ನಾರಾಯಣ ರಾಯಚೂರ್
ಹೊಂಬೆಳಗು	ಮಾ	೧೯೬೧	ಕೊ.ಶ್ರೀ. ಅಯ್ಯಂಗಾರ್

ಆಧಾರ : **ಡಾ। ಶ್ರೀನಿವಾಸ ಹಾವನೂರರ ಪಟ್ಟಿ**

ಕೃಪೆ : ಪತ್ರಿಕಾ ಅಕಾಡೆಮಿ

★ ಈ ಪಟ್ಟಿಯು ಅಪೂರ್ಣವಾಗಿದ್ದು, ಬಿಟ್ಟು ಹೋಗಿರುವ ಪತ್ರಿಕೆಗಳ ವಿವರ ಉದ್ದೇಶಪೂರ್ವಕವಾಗಿ ಆಗಿರುವುದಲ್ಲ.

ಸಂಚಯ

ವಿಶೇಷ ಸಂಚಿಕೆಗಳು

1.	ಗಾಂಧಿ ಒಂದು ಮರುಚಿಂತನೆ	–	ಸೆಪ್ಟೆಂಬರ್ 1990
2.	ಮಹಿಳಾ ವಿಶೇಷ ಸಂಚಿಕೆ	–	ಮಾರ್ಚ್–ಏಪ್ರಿಲ್ 1993
3.	ಎ.ಕೆ.ರಾಮಾನುಜನ್ ಹೆಜ್ಜೆಗುರುತು	–	ಡಿಸೆಂಬರ್ 1993
4.	ಕನ್ನಡದ ಸಣ್ಣ ಕತೆಗಳು	–	ಅಕ್ಟೋಬರ್ 1994
5.	ಗ್ರಾಫಿಕ್, ವಿಶೇಷ ಸಂಚಿಕೆ	–	ಮಾರ್ಚ್–ಏಪ್ರಿಲ್ 1995
6.	ಸು.ರಂ. ಎಕ್ಕುಂಡಿ ಸ್ಮರಣೆ	–	ಅಕ್ಟೋಬರ್–ನವೆಂಬರ್ 1995
7.	ಚಲನಚಿತ್ರ ವಿಶೇಷಾಂಕ	–	ಜನವರಿ–1997
8.	ಚೌಕಟ್ಟು–ದೃಶ್ಯಕಲೆ ವಿಶೇಷಾಂಕ	–	ಏಪ್ರಿಲ್–ಮೇ–1997
9.	ಬೆಸಗರಹಳ್ಳಿ ರಾಮಣ್ಣನ ನೆನಪು	–	ನವೆಂಬರ್ 1998
10.	ಎ.ಎನ್.ಮೂರ್ತಿರಾವ್ ಸಂಚಿಕೆ	–	ಜುಲೈ 1999
11.	ಶಾಂತಿನಾಥ ದೇಸಾಯಿ ನೆನಪಿನ ಸಂಚಿಕೆ	–	ಡಿಸೆಂಬರ್ 2001
12.	ಮಾಹಿತಿ ತಂತ್ರಜ್ಞಾನ ಮತ್ತು ಕನ್ನಡ ಸಂಸ್ಕೃತಿ	–	ಸೆಪ್ಟೆಂಬರ್ 2001
13.	ಪೂರ್ಣಚಂದ್ರ ತೇಜಸ್ವಿ ವಿಶೇಷಾಂಕ	–	ಜೂನ್ 2002
14.	ಬಿ.ಸಿ. ರಾಮಚಂದ್ರ ಶರ್ಮ ನೆನಪಿನ ಸಂಚಿಕೆ	–	ಏಪ್ರಿಲ್–2005
15.	ಡಾ.ರಾಜಕುಮಾರ್ ವಿಶೇಷಾಂಕ	–	ಜುಲೈ 2006
16.	ಕಾವ್ಯಸಂಭ್ರಮ 75	-	ಅಕ್ಟೋಬರ್ 2007
17.	ನೂರರ ಹಿಂದ್ ಸ್ವರಾಜ್ (81)	–	ಜುಲೈ–ಆಗಸ್ಟ್ 2009
18.	ಈ ಹೊತ್ತಿನ ಕವಿತೆಗಳು (84)	–	ಜನವರಿ 2010
19.	ಕಿ.ರಂ. ನೆನಪಿಗೆ (88–89)	–	ಡಿಸೆಂಬರ್ 2010
20.	ಟಾಗೋರ್ ವಿಶೇಷಾಂಕ (94)	–	ಅಕ್ಟೋಬರ್ 2011



SANCHAYA (Bi-Monthly), MAG(2) PRB-DECL : 309/94-95

Edited, Printed & Published by
D.V. PRAHLAD,
No. 100, 2nd Main, 6th Block
3rd Stage, 3rd Phase, Banashankari,
Bangalore - 560 085, Ph : 080-2679 1925

ಬೆಳ್ಳಿಹಬ್ಬ